ಯಾಕಂದರೆ:—ಒಂದು ಕಲ್ಲನ್ನು ಅಥವಾ ಮಣ್ಣಿನ ಹೆಂಚಿಯನ್ನು ಕೈಯಲ್ಲಿ ಬಿಟ್ಟುಕೊಂಡು; ಅದನ್ನೇ ನಿರೀಕ್ಷಿಸುತ್ತಾ ಕೂತರೆ: ಅದರ ವಿಲಕ್ಷಣ ಸ್ವರೂಪದಿಂದಲೂ, ವಿಕೃತ ಲಕ್ಷಣದಿಂದಲೂ, ವಿಧವಿಧ ಬಣ್ಣಗಳಿಂದಲೂ, ಅದು ಎರಡನೇ ಪದಾರ್ಥದಿಂದ ಸಮ್ಮಿಶ್ರಗೊಂಡದೆಂದು ಆಗಲೇ ತೋರಿ ಬರುವದು. ಅದರಂತೆ ಶುದ್ಧವಾದ ನೀರಿನಿಂದ ಮಾತ್ರ ಆಭ್ರಾಂತಿಯು ಎಂದಿಗೂ ಹುಟ್ಟುವದಿಲ್ಲ. ಇದರ ಪ್ರತ್ಯಯವನ್ನು ನೋಡಬೇಕಾದರೆ ಒಂದು ನಿರ್ಮಲ ಕಾಚಿನ ಪಾತ್ರೆಯಲ್ಲಿ ಇದನ್ನು ತುಂಬಿಟ್ಟರೆ, ಸಹಜವೇ ದೃಷ್ಟಾಂತವಾಗುವದು. ನೋಡುವವರು ಅದರಲ್ಲಿ ಬಣ್ಣವನ್ನೂ, ಆಕಾರವನ್ನೂ, ಕಾಣಲಾರರು. ವಿಶೇಷವೇನು? ಅದರ ವಾಸನೆಯನ್ನು, ಸಹಾ ತಿಳಿದುಕೊಳ್ಳರು, ಆಂದವೇಲೆ ನೀರಿಗೆ ರಂಗ ರೂಪ ಮತ್ತು ವಾಸನೆ ಸಹ ಇಲ್ಲವೆಂದು ಹೇಳಿದಂತಾಯಿತು. ಇದು ಎರಡು ಪದಾರ್ಥಗಳ ಸಂಯೋಗದಿಂದ, ಉಂಟಾಗಿದೆಂದು ಹೇಳಿದರೆ, ಜನರು ಸರ್ವಥಾ ಬಡಂಬಡರು. ಅವೆರಡು ಪದಾರ್ಥಗಳು ಗಾಳಿರೂಪವಾಗಿದ್ದು ಅದರಿಂದ ನೀರುಂಟಾಗಿದೆಂದು ಹೇಳಿದರಂತೂ, ಕೇಳುವ ಬುದ್ಧಿವಿಹೀನರು, ಹೇಳುವ ಆ ಪುರುಷನನ್ನು, ನಿಂದಿಸದೇ ಇರಲಿಕ್ಕಿಲ್ಲ. ಯಾಕಂದರೆ, ತಮ್ಮ ದೃಷ್ಟಿಗೆ ಕಾಣಿಸುವ ವಸ್ತುಗಳ ಮೂಲ ರೂಪವು ಅದೇ ಹೊರತು, ಅದಕ್ಕೆ ಕಪಟ ಜನರ

ಬುದ್ಧಿಯಂತೆ, ಬಳಗೊಂದು ಹೊರಗೊಂದು ಅವಸ್ಥೆ ಇಲ್ಲವೆಂದು ಅವರು ನಿಶ್ಚಯವಾಗಿ ಪ್ರತಿಪಾದಿಸುವರು. ಆದರೆ ವಿಚಾರಿಗಳಾದವರ ವಿಚಾರವೇ ಬೇರೆಯು. ಅವರು ಇಂಥಾ ದೃಗಿಂದ್ರಿಯದ ಭಾಸದ ಮೇಲೆ ತಮ್ಮ ಸುಜ್ಞಾನವನ್ನು ಹೇರುವದಿಲ್ಲ. ಪ್ರತಿ ಒಂದು ಪದಾರ್ಥದ ಬೀಜವನ್ನೇ ಹುಡುಕಿತೆಗದು; ಅದರಲ್ಲಿ ತಮ್ಮ ಜ್ಞಾನದೃಷ್ಟಿಯನ್ನು ಹೊಗಿಸುವರು. ಪದಾರ್ಥದ ಸತ್ಯಸ್ವರೂಪವನ್ನು ತಿಳಿದು; ಅದರಲ್ಲಿಯ ಚಮತ್ಕಾರ ನಿರ್ಮಾಣಕ್ಕಾಗಿ ಸೃಷ್ಟಿಕರ್ತನಿಗೆ ತಗಲಿದ ಶ್ರಮವನ್ನರಿಯುವವರೇ ಶೋಧಕರೂ, ಬುದ್ಧಿವಂತರೂ, ಆಗಿರುವರು.

ಈ ನಮ್ಮ ಕಣ್ಣಿಗೆ ನಿತ್ಯದಲ್ಲಿಯೂ ಕಾಣಿಸುವ ಭೂವಿ, ಪರ್ವತ, ನದಿ, ಮಂದಿರಗಳು, ಕಂದರ, ಕಣಿವೆಗಳು ಇವೇ ಮುಂತಾದವುಗಳೆಲ್ಲವೂ, ದಿನಂಪ್ರತಿಯಲ್ಲಿಯೂ ಆಕಾಶ ಮಾರ್ಗದಲ್ಲಿ ತಿರುಗುತ್ತವೆಂದು ಹೇಳಿದರೆ, ಜನರು ಒಡಂಬಡುವರೇ ? ಬೆಂಕಿಯು, ತಂಪಾಗಿದೆಂದು ಹೇಳಿದರೆ ಹ್ಯಾಗೆ ಒಡಂಬಡರೋ ಹಾಗೆ, ಮೇಲಿನ ಮಾತನ್ನಾದರೂ ಒಡಂಬಡರು. ಇದರ ಕಾರಣವಾದರೂ ಸ್ಪಷ್ಟವೇ ಇರುವದು. ಯಾಕಂದರೆ, ತಾವು ಆ ಭೂವಿಯ ಮೇಲೆ ಇರುತ್ತಿರಲು, ಅದು ತಿರುಗಿದಂತೆ ತಮಗೆ ಕಾಣುವದಿಲ್ಲ. ಹೀಗಿರುತ್ತಾ ಅನೇಜನರ ಬರೇ ಮಾತಿನ ಮೇಲೆ ವಿಶ್ವಾಸವು ಹ್ಯಾಗೆ ಆದೀತು? ಅವರೇ ಮನಸ್ಸಿಟ್ಟು ಭೂಗೋಲ ಶಾಸ್ತ್ರವನ್ನು ಅಧ್ಯಯನ ಮಾಡಿದರೆ, ಈ ಚಮತ್ಕಾರತೆಯ ಜ್ಞಾನವು ಆಗದಿರದು. ತಾತ್ಪರ್ಯವೇನೆಂದರೆ:— ಯಾವದೊಂದು ವಸ್ತುವೇ ಆಗಲೀ ತನ್ನ ಬಾಹ್ಯ ಸ್ಥಿತಿಯಂತೆ ಅಂತರಂಗದಲ್ಲಿಯೂ ಉಂಟೆಂದು ಯಾರೂ ತಿಳಿಯಬಾರದು. ಒಬ್ಬ ಮನುಷ್ಯನ ಮುಖ ಚರ್ಯೆಯು ಸಿಟ್ಟುಳ್ಳದ್ದಾಗಿ ಕಾಣಿಸುತ್ತದೆ. ಪರಂತು ಪರೀಕ್ಷಿಸಿ ನೋಡಿದರೆ, ಆ ತಿಳುವಳಿಕೆಯು ವಿರುದ್ಧವಾಗಿ; ಅವನ ಸ್ವಭಾವವಿರುತ್ತದೆ. ಇದರಂತೆ ಪ್ರತ್ಯಕ್ಷನಮ್ಮ ಜ್ಞಾನೇಂದ್ರಿಯಕ್ಕೆ ದೃಷ್ಟಿಗೋಚರವಾದ ನೀರಿನ ಅಂತರಂಗ ವಿಚಾರವಾದರೂ, ಬೇರೆಯೇ ಇರುತ್ತದೆ. ನೀರನ್ನು ನಾವು ನಿತ್ಯದಲ್ಲಿಯೂ ಉಪಯೋಗಿಸುತ್ತೇವೆ. ಅದೇನು ಬೆಲೆಯುಳ್ಳ ಪದಾರ್ಥವಲ್ಲ. ಅದರಿಂದ ಅದರ ವಿಷಯವಾಗಿ ವಿಚಾರ ಮಾಡತಕ್ಕದ್ದೇನೆಂದು ಯಾರೂ ನೆನಸಬಾರದು. "ಬಳಗಿನ ಮಾತು ದೇವರೇ ಬಲ್ಲ" ಎಂದು ಜನರು ಹೇಳುತ್ತಿರುವದನ್ನು ನಮ್ಮಲ್ಲಿ ಎಷ್ಟೋ ಜನರು ಕೇಳಿರಬಹುದು. ಅದರ ತಾತ್ಪರ್ಯವೇನೆಂದರೆ:- ಅನೇಕ ವಸ್ತುಗಳು ಕಣ್ಣಿಗೆ ಕಾಣುವ ಸ್ವರೂಪಕ್ಕಿಂತಲೂ ಅದರ ಅಂತರ್ವಿಚಾರವು ಪ್ರಥಗ್ರೂಪವಾಗಿದ್ದು, ಅದು ಶೋಧರೂಪದಿಂದ ತಿಳಿಯುವದಾಗಿದೆ ಎಂಬದಿಷ್ಟೇ.

ಸೃಷ್ಟಿಯಲ್ಲಿ ನೀರು ವಿುತಿಯಿಲ್ಲದಷ್ಟು ದೊರೆಯುತ್ತದೆ. ಕೆರೆ ಭಾವಿ ಗಳಲ್ಲಿಯೂ, ನದಿಗಳಲ್ಲಿಯೂ, ಸರೋವರಗಳಲ್ಲಿಯೂ, ನೀರಿನ ಸಂಚಯವು ವಿಪುಲವಿರುತ್ತದೆ. ಸಮುದ್ರವಂತೂ ನೀರಿನ ತೌರಮನೆಯೇ ಆಗಿದೆ. ಅದಕ್ಕಾಗಿಯೇ ಅದಕ್ಕೆ "ಜಲನಿಧಿ" ಎಂಬ ಹೆಸರುಂಟಾಗಿದೆ. ಮಳೆಗಾಲದಲ್ಲಿ ನೀರು, ಪರ್ಜನ್ಯ ರೂಪದಿಂದ ನೆಲದ ಮೇಲೆ ಬೀಳುತ್ತದೆ. ಅದರಿಂದ ಭೂವಿುಯಲ್ಲಿ ಫಲಪುಷ್ಪ ವೃದ್ಧಿಯಾಗಿ; ನಮಗೆ ಹಣ್ಣು ಕಾಯಿಗಳೂ, ದವಸ ಧಾನ್ಯಗಳೂ, ಪ್ರಾಪ್ತವಾಗುತ್ತವೆ. ಮತ್ತು ಕೆರೆ, ಕಟ್ಟೆ, ಕಾಲುವೆಗಳು ತುಂಬಿ; ಪಶು, ಪಕ್ಷಿ, ಮನುಷ್ಯರಿಗೆ ಬೇಕಾದಾಗ ವಿಪುಲ ನೀರು ದೊರೆಯುತ್ತದೆ. ಇಷ್ಟೇ ಅಲ್ಲ. ಸಂಸಾರದಲ್ಲಿ ಮನುಷ್ಯನಿಗೆ ನೀರು ಇಲ್ಲದೆ, ಒಂದು ದಿವಸವಾದರೂ ಕಳಿಯದು. ಇದು ಸಂಸಾರ ಶಕಟವನ್ನು ನಡಿಸುವ ಚಕ್ರವೆಂದರೂ ಅಡ್ಡಿ ಇಲ್ಲ. ನಾವು ನೀರಿನಿಂದ ಬಾಯಾರಿಕೆಯನ್ನು ನೀಗಿಕೊಳ್ಳುತ್ತೇವೆ. ಮತ್ತು ನಮ್ಮ ವೈಯನ್ನು ನೀರಿನಿಂದಲೇ ತೊಳೆದುಕೊಳ್ಳುವದಲ್ಲದೆ, ಹೊಲಸು ಬಟ್ಟೆಗಳನ್ನು ಅದರಿಂದಲೇ ನಿರ್ಮಲ ಪಡಿಸಿಕೊಳ್ಳುತ್ತೇವೆ. ನಮ್ಮ ಪಾತ್ರೆ ಪಡಗಗಳನ್ನು ತಿಕ್ಕಿ, ಉಜ್ಜಳಿಸಲಿಕ್ಕೆ ನೀರಿನ ಹೊರ್ತು ಇತರ ವಸ್ತಗಳಿಲ್ಲ. ಭಂಗಾರವು, ಶರೀರವನ್ನು ಅಲಂಕರಿಸುತ್ತದೆ. ಪರಂತು ನೀರಿನಂತೆ ಮನವನ್ನೂ ಶರೀರವನ್ನೂ ನಿರ್ಮಲ ಪಡಿಸುವದಿಲ್ಲ. ಸೂರ್ಯನ ತಾಪವನ್ನೂ, ಹಾದಿಕಾರರ ಪಥಶ್ರಮವನ್ನೂ, ಹೋಗಿಸುವಲ್ಲಿ ಇದಕ್ಕೆ ಸರಿಯಾದ ವಸ್ತುವು ಇನ್ನೊಂದಿಲ್ಲ. ಒಬ್ಬ ಪಂಡಿತನು, ಒಳ್ಳೇ ಮಧ್ಯಾನ್ಹ ಕಾಲದಲ್ಲಿ ತನಗೆ ಅತಿತರವಾದ ನೀರಡಿಕೆಯನ್ನು ಇದರಿಂದ ನೀಗಿಕೊಳ್ಳುವಾಗ, ಆನಂದಚೇತಸನಾಗಿ, ಇದಕ್ಕೆ "ಅಮೃತ" ವೆಂದು ಹೆಸರಿಟ್ಟನು. ಸಾಧಾರಣವಾಗಿ ಜನರು, ಅತಿ ರುಚಿಕರವಾದ ರಸಪದಾರ್ಥಗಳಿಗೆ "ಅಮೃತ" ವೆಂದು ಸಂಬೋಧಿಸುವದನ್ನು ಎಲ್ಲರೂ ಬಲ್ಲರು. ಅದರಂತೆ ತೃಷಾದಿ ಅನೇಕ ಕಾಲಗಳಲ್ಲಿ ಮನಸ್ಸನ್ನು ಶಾಂತಪಡಿಸುವ ಈ ವಸ್ತುವಿಗೆ "ಅಮೃತ" ವೆಂದು ಹೆಸರಿಟ್ಟದ್ದು ಅಯುಕ್ತವಲ್ಲ. ಇದು ಅಲ್ಲದೆ ಎಲ್ಲಾ ಚರಾಚರ ವಸ್ತುಗಳಿಗೆ ಮರಣವು ತಪ್ಪದು. ಆದರೆ ಈ ಶ್ರೇಷ್ಠ ಪದಾರ್ಥಕ್ಕೆ ಮಾತ್ರ ಮರಣವಿಲ್ಲದರಿಂದ ಆ ಅನ್ವರ್ಥಕನಾಮವು, ಇದಕ್ಕೆ ವಿಶೇಷ ರಮಣೀಯವಾಗಿದೆ.

ಸಂಣ ಸಂಣ ಹಳ್ಳಿ ಪಳ್ಳಿಗಳಂತೂ, ಸರಿಯಷ್ಟೇ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಒಂದೊಂದು ವೇಳೆ ವಿಶೇಷವಾಗಿ ಹೇವುಂತ ಶಿಶಿರ ಕಾಲಗಳಲ್ಲಿ ಬೆಂಕಿಯಿಂದ ಬಹು ಅನಾಹುತಗಳು, ಉಂಟಾಗುತ್ತವೆ. ಜನರು ಲಕ್ಷಾವಧೀ ಹಣ ವ್ಯಯಮಾಡಿ; ದೊರಕಿಸಿದಂಥಾ ತಮ್ಮ ಸುಂದರವಾದ ಮಂದಿರಗಳನ್ನೂ, ಸರಕು ಸವದಿಗಳನ್ನೂ, ಜೀವನಿರ್ವಾಹಕ ಅಸಂಖ್ಯ ಜಂಡವಾಳವನ್ನೂ, ಈ ಸರ್ವ

ಭಕ್ಷಕ ತೇಜೋಮೂರ್ತಿಗೆ ಬವ್ಮೊಮ್ಮೆ ಬಲಿಯಾಗಿ ಬಿಪ್ಪಿಸುತ್ತಾರಲ್ಲದೆ, ಅನೇಕ ಸರ್ತಿ ತಮ್ಮ ಪ್ರಾಣಕ್ಕೂ, ತಮ್ಮ ಪ್ರಾಣಕ್ಕಿಂತಲೂ, ಪ್ರಿಯರಾದ ಹೆಂಡತಿ ಮಕ್ಕಳ ಜೀವಕ್ಕೂ ಸಹಾ ಎರವಾಗುತ್ತಾರೆ. ಬವ್ಮೊಮ್ಮೆ ಈ ಬೆಂಕಿಯು, ನಗರ ಪಟ್ಟಣಗಳನ್ನೇ ಉಧ್ವಸ್ತ ಮಾಡುತ್ತದೆ. ಇಂಥಾ ಭಯಂಕರ ಅನುತಾಪದ ವೇಳೆಯಲ್ಲಿ ಬಹು ಆಯಾಸಪಟ್ಟು; ಸಂಗ್ರಹಿಸಿದ ನಮ್ಮ ಚಿನ್ನವೂ, ನಮ್ಮ ಬೆಳ್ಳಿಯೂ, ಆ ನಮ್ಮ ಹಣವೂ, ಇಲ್ಲವೇ ನಮ್ಮ ಇತರ ಸಕಲ ಸಂಪತ್ತಿಯೂ, ಇವುಗಳಲ್ಲಿ ಯಾವದಾದರೊಂದು ಉಪಯೋಗವಾದೀತೇ ? ಅವೆಲ್ಲವನ್ನು ಮೂಲೆಗೆ ಒತ್ತಿ; ಪ್ರಾಣ ವಿತ್ರನಂತೆ ಸಮಯ ತಿಳಿದು; ಉಪಯೋಗ ಬೀಳುವ ವಸ್ತುವು "ನೀರು ನೀರು ನೀರು" ಅದೊಂದಿಲ್ಲದಿದ್ದರೆ, ನಮ್ಮ ಸೌಭಾಗ್ಯ ವೃದ್ಧಿಯು ಹ್ಯಾಗಾಗುತ್ತಿತ್ತು ? ಇಂಥಾ ಅತ್ಯುಪಯುಕ್ತ ವಸ್ತುವಿನ ಉಪಯೋಗವು, ಇಂತಿಷ್ಟೇ ಉಂಟೆಂದು ಹೇಳಲಾಗದು. ತಾತ್ಪರ್ಯವೇನಂದರೆ:—ಪ್ರಾಣಧಾರಣಕ್ಕೆ ಅವಶ್ಯಕವಾದ ಇತರ ಮೂರು ನಾಲ್ಕು ಪದಾರ್ಥಗಳಂತೆ, ಇದು ಬಂಗು ಜಗತ್ತಿಗೆ ಬಹು ಭೂಷಣವಾಗಿದೆ.

ಸೃಷ್ಟಿಯ ಉತ್ಪತ್ತ್ಯಾರಂಭದಿಂದಲೂ, ನೀರಿನ ಉಪಯೋಗವನ್ನು ಎಲ್ಲರೂ ಮಾಡುತ್ತಿರುತ್ತಾರೆ. ಪ್ರಯುಕ್ತ ಇದರ ವಿಷಯವಾದ ಕೆಲವು ಜ್ಞಾನವನ್ನು ಎಲ್ಲರೂ ಬಲ್ಲಾಗಿರಬಹುದು. ಪರಂತು ದಿನರಾತ್ರಿಯಲ್ಲಿಯೂ, ನನ್ನ ಕಣ್ಣುಮುಂದೇ ಹೊಳೆಯುತ್ತಿರುವ ನೀರೆಂಬುವ ಪದಾರ್ಥದ ನಿರ್ಮಲತೆಯ ವಿಷಯವಾಗಿ ಅಜ್ಞಾನ ಜನರಂತೂ ಬತ್ತಿಟ್ಟರಲಿ, ಸಜ್ಞಾನರು ಸಹಾ ಬಹಳ ಅಜಾಗ್ರತೆಯಿಂದ ವರ್ತಿಸುತ್ತಾರೆ. ಇದಕ್ಕಾಗಿ ನಾವು ವ್ಯಸನಪಡುತ್ತೇನೆ.

ನೀರಿನ ಉತ್ಪತ್ತಿಯು—ಜಗತ್ತಿನಲ್ಲಿರುವ ಯಾವದಾದರೊಂದು ಪದಾರ್ಥದ ವರ್ಣನೆಯನ್ನು ಮಾಡುವಾಗ ಅದರ ಉತ್ಪತ್ತಿಯನ್ನು ಮೊದಲು ಹೇಳುವದು ಸುಬೋಧವು. ಭೂಗೋಲವನ್ನು ಕಲಿತು; ದೇಶಗಳ ಪಠಗಳನ್ನು ನೋಡುವವನು, ಮೊದಲು ತಾನಿರುವ ಮತ್ತು ತಾನು ನಿಂತಿರುವ ಸ್ಥಳದಿಂದ ತಿಳುವಳಿಕೆಯನ್ನು ಮಾಡಿಕೊಳ್ಳುತ್ತಾ ಎಲ್ಲಾ ದೇಶಗಳನ್ನೂ, ದಿಕ್ಕುಗಳನ್ನೂ, ಅದರಲ್ಲಿ ನೋಡಿ ಕಲಿತರೆ; ಆ ವಿಷಯವು ಹೃದಯದಲ್ಲಿ ಚನ್ನಾಗಿ ಬಿಂಬಿಸಿ; ಗಿಳಿಗಳಂತೆ ಪಾಠ ಮಾಡುವ ಅಗತ್ಯವು ಬಹುತರ ಇಲ್ಲವಾಗುವದು. ಅದರಂತೆ ಬೇರೆ ಅನೇಕ ವಿಷಯಗಳ ವಿಚಾರವಾದರೂ ಹಾಗೇ. ಪರಂತು ನೀರಿನ ಉತ್ಪತ್ತಿಯನ್ನು ತಿಳುಕೊಳ್ಳುವದು ಮಾತ್ರ ಕಠಿಣವು. ಈ ವಿಚಾರವನ್ನು ತರ್ಕಿಸುತ್ತಾ ಹೋದ ಹೋದ ಹಾಗೆ ಮೊದಲು ದಿವಸವೋ, ರಾತ್ರಿಯೋ, ಅಥವಾ ಗಿಡದಿಂದ ಬೀಜವೋ, ಬೀಜದಿಂದ ಗಿಡವೋ, ಎಂಬ ವಿಚಾ

ರವು ನಿಶ್ಚಯವಾಗದಂತೆ, ಇದರ ವಿಚಾರವನ್ನಾದರೂ ನಿಷ್ಕರ್ಷೆಯಿಂದ ನಿಶ್ಚಯಿಸಲಾಗದು.

ವರ್ಷಾಕಾಲದಲ್ಲಿಯ ಒಂದಾನೊಂದು ಸಾಯಂಕಾಲ ಸಮಯದಲ್ಲಿ ಸೂರ್ಯನು, ಅಸ್ತಂಗತನಾದರೂ ಆತನ ಅರುಣರುಚಿರ ಕಾಂತಿಯು, ಮಾತಾ ವರಣದ ಯೋಗದಿಂದ ಕಿರಣ ಪರಾವರ್ತನವಾಗಿರಲು; ಪಶ್ಚಿಮದಿಶೆಯು ಹಸರು; ಕೆಂಪು, ಹಳದಿ, ವರ್ಣವುಳ್ಳದ್ದಾಗಿ ಕಾಣಿಸುವದು. ಆಶ್ಚರ್ಯಭರಿತರಾಗಿ ಜನರು, ಅದನ್ನು ನೋಡುತ್ತಿರುವಷ್ಟರಲ್ಲಿಯೇ "ಎಲ್ಲಾ ಬಣ್ಣವನ್ನು ಮಶಿನುಂಗಿತೆಂಬಂತೆ" ಅಂಧಕಾರದಿಂದ ಎಲ್ಲಾ ಆಕಾಶಮಂಡಲವು, ತುಂಬಿ ಹೋಗುತ್ತದೆ. ಸಂಧಿಪ್ರಕಾಶವು ನಾಶವಾಗಿ ಎಲ್ಲಾ ಪೃಥ್ವಿಯು, ಮೇಘಾಚ್ಛಾದನದಿಂದ ತುಂಬಿ ಹೋಗುತ್ತದೆ. ಗಾಳಿಯು, ಅತಿವೇಗದಿಂದ ಸುಳಿಯು ಹತ್ತಿ; ಮಾರ್ಗದೊಳಗಿನ ಸಣ್ಣ ದೊಡ್ಡ ಅಣುಗಳು, ಜನರ ಕಣ್ಣನ್ನು ಮುಸುಕಿಕೊಳ್ಳುವವು. ಒಂದು ದಿಕ್ಕಿನಿಂದ ಮೇಘ ಗರ್ಜನೆಯೂ, ಇನ್ನೊಂದು ಬದಿಯಿಂದ ವಿಂಚಿನ ಕಾಂತಿಯೂ, ಮತ್ತೊಂದು ಕಡೆಯಿಂದ ಸಿಡಿಲ ಧ್ವನಿಯೂ, ಏಕಕಾಲದಲ್ಲಿ ಪ್ರಾರಂಭವಾಗಿ, ಮಾರ್ಗಸ್ಥರ ಹೌ ಹಾರಿಸುವವು. ಆ ಮೇಲೆ ಒಳ್ಳೇ ವೇಗದಿಂದ ದೊಡ್ಡ ದೊಡ್ಡ ಮಳೇ ಹನಿಗಳು ಬೀಳಲಾರಂಭಿಸಿ; ನಂತರ ಜಡಿಮಳೆಯು ಸುರುವು ಹತ್ತುವದು. ಆ ಸಮಯದ ಸೌಂದರ್ಯವೇನೆಂದು ವರ್ಣಿಸಬೇಕು? ಒಂದು ತಾವಿನಲ್ಯಾದರೂ ಮೃಗ ಪಶುಗಳು, ಸಂಚರಿಸುವದಿಲ್ಲ. ಕಾಗೆ ಕೋಗಿಲೆ ಮೊದಲಾದ ಯಾವ ಪಕ್ಷಿಗಳು, ತಮ್ಮ ಗೂಡುಗಳನ್ನು ಬಿಟ್ಟು; ಹೊರಹೊರಡುವದಿಲ್ಲ. ಎಲ್ಲಿ ನೋಡಿದರಲ್ಲಿ ನುಳೆಯ "ಭೋ" ರೆಂಬ ಭೀಕರ ಶಬ್ದವೂ, ಸಕಲ ದಿಕ್ಕುಗಳಲ್ಲಿ ಸಂತತ ಜಲಧಾರೆಯೂ, ಕಾಣಹತ್ತುತ್ತವೆ. ವಸ್ತುತಃ ವಿಚಾರಮಾಡಲು; ಪೃಥ್ವಿಯು, ಪ್ರದೋಷ ಪೂಜನಾರ್ಥವಾಗಿ ಮಾಡುವ ಸ್ನಾನ ನಿಮಿತ್ತಕ ಜಲವೋ ಎಂಬಂತೆ ಆ ಮಳೆಯು ಜನರಿಂದ ತರ್ಕಿಸಲ್ಪಡುವದು. ಹೀಗೆ ವೃಷ್ಟಿಯು ವರ್ಷಿಸುತ್ತಾ ಇರಲು; ಮುದುಕನು ದಾರಿಯನ್ನು ನಡೆನಡೆದು ಸೋಲುವಂತೆ, ಮಳೆಯುಸೋತು ಹೊಳುಪಾಗುತ್ತದೆ.

ಪರ್ಜನ್ಯ.ವೃಷ್ಟಿಯು ನಿಂತನಂತರ ಪ್ರಾತಃಕಾಲದ ಆ ಚಮತ್ಕಾರವು ನೋಡಲಿಕ್ಕೆ ಬಹು ಮನೋಹರವಾದದ್ದು. ಅದನ್ನು ನೋಡುವ ಪ್ರತ್ಯೇಕ ಮನುಷ್ಯನಿಗೆ ಆನಂದವೂ, ಆಶ್ಚರ್ಯವೂ ಆಗದೇ ಇರಲಿಕ್ಕಿಲ್ಲ.

ಮೂರನೇ ದಿವಸ ಪ್ರಾತಃಕಾಲದಲ್ಲಿ ಆ ಚಮತ್ಕಾರವನ್ನು ನೋಡ ನೋಡುತ್ತ ಹೋದ ಹೋದ ಹಾಗೆ, ಸಣ್ಣ ಸಣ್ಣ ಗಿಡಗಂಟಿಗಳು, "ಮುರಿದು ಬಿದ್ದ ನ್ನೂ, ನೀರಿನ ಪ್ರವಾಹದೊಂದಿಗೆ ಹರಿದು ಹೋಗುವ ಎಲೆ, ಕಾಷ್ಠ ಮುಂ

ತಾದ ರಾತ್ರಿಗಳನ್ನೂ, ನೋಡಬಹುದು. ಇದರಂತೆ ಗಾಳಿಗೆ ಮುರಿದು ಬಿದ್ದ ಮರಗಳನ್ನೂ, ಮರಗಳ ಟೊಂಗೆಗಳನ್ನೂ ಕಾಣಬಹದು. ಕಸಕಡ್ಡಿಗಳು, ಒಂದಾಗಿ ನೀರಿನ ಪ್ರವಾಹದೊಡನೆ ಹೋಗುತ್ತ ಕೆಲವು ಗಿಡಗಳಡಕಿನಿಂದ ನಿಂತದ್ದನ್ನೂ, ಕೆಲವು ನೆಲಕ್ಕೆ ಬರಿಯುತ್ತ ಹೋದದ್ದನ್ನೂ, ಕಾಣಬಹುದು. ಹಾಗೇ ಮುಂದೆ ಹೋಗಿ; ಒಂದು ಎತ್ತರವಾದ ಪ್ರದೇಶವನ್ನು ಹತ್ತಿ ನೋಡಲು; ಉನ್ನತ ಪ್ರದೇಶದಿಂದ ಕೆಳಗೆ ಬೀಳುವ ನೀರಿನ ಪ್ರವಾಹವನ್ನು, ನೋಡಬಹುದು. ಇದಲ್ಲದೆ ಎಷ್ಟೋ ಚಿಕ್ಕ ಚಿಕ್ಕ ಹಳ್ಳಕೊಳಗಳೂ, ದೊಡ್ಡ ದೊಡ್ಡ ಹೊಳೆಹಳ್ಳಗಳಿಗೆ ಕೂಡಿ, ಅವೆಲ್ಲವುಗಳು ಆ ಗುಡ್ಡ ಬೆಟ್ಟಗಳ ಬುಡಭಾಗಕ್ಕಿಳಿದು; ಬೈಲಿನಲ್ಲಿ ಹರಿಯುವದರಿಂದ, ಪೃಥ್ವಿಯು ಜಲಮಯವಾಯಿತೇ ಎಂಬ ತರ್ಕವಾಗುವದು. ಕೆಲವು ಪ್ರವಾಹಗಳು, ಆ ಅಡವಿಯಲ್ಲಿ ಬೆಳೆದ ದೊಡ್ಡ ದೊಡ್ಡ ಮರಗಳ ಬೇರುಗಳಿಂದ ಪ್ರತಿಬಂಧಿತವಾಗಿ ಅಲ್ಲೀ ಇಂಗಿ ಹೋಗುವವು. ಕೆಲವುಗಳು, ಆ ಉನ್ನತ ಪ್ರದೇಶದ ವಿವರಗಳಲ್ಯಾಗಲೀ ಅಥವಾ ಇತರ ಭೂವಿಯ ಬಿರುಕುಗಳಲ್ಯಾಗಲೀ ಜಿಗ್ರನೆ ಹರಿಯುವವು. ಆಗಿನ ಅದರ "ಜುಳುಜುಳು" ಎಂಬ ಮಂಜುಳ ಸ್ವರವು, ಬಹು ಕರ್ಣಾನಂದಕರವಾದದ್ದು. ತರ್ಕದಲ್ಲಿ ಮುಳುಗಿದ ಪರಿಶೋಧಕರು, ಆ ಮಂಜುಳ ಧ್ವನಿಯಕಿಂತಲೂ, ಇತರ ವೀಣಾವಾದ್ಯದಂಗಾದಿ ರವಗಳಲ್ಲಿ ಮನಸ್ಸಿಡರು. ಈ ಸೃಷ್ಟಿವ್ಯಾಪಾರದಲ್ಲಿ ಮೇಲಿಂದ ಮೇಲೆ ದೃಷ್ಟಿಗೋಚರವಾಗುವ ಅನೇಕ ಚಮತ್ಕೃತಿ ವಸ್ತುಗಳಂತೆ ಇದಾದರೂ ಏನು, ಇದರ ಫಲಿತಾರ್ಥವೇನು? ಎಂಬ ಆಶಂಕೆಯಲ್ಲಿಯೇ ಅವರ ಚಿತ್ತ ರವಿಸುವದು. "ಪಾಖಿಗಳ ಸಂಪರ್ಕವಾಗ ಬಾರದೆಂದೂ; ಇಲ್ಲವೇ ಅವರ ನೋಟಕ್ಕೆ ತಾನು ಎಡೆಯಾಗ ಬಾರದೆಂದೂ, ಆಪ್ರವಾಹವು, ಗುಪ್ತಗಾಮಿನಿಯೂಯಿತು" ಎಂಬ ವಿಥ್ಯಾತರ್ಕವನ್ನು ಅವರು ಅವಲಂಬಿಸುವದಿಲ್ಲ. ಈ ವಿವರಗಳಲ್ಲಿ ಅಥವಾ ಬಿರುಕುಗಳಲ್ಲಿ ಹೋಗುವ ನೀರಿನ ಗತಿಯು, ಮುಂದೇನಾಗುವದೆನ್ನುವದನ್ನು ಅವರು ತಮ್ಮ ವಿಚಾರ ಮೂರ್ಗದಿಂದ ತಿಳಿದು ಕೊಳ್ಳುವರು. ಅಷ್ಟು ತಿಳುಕೊಳ್ಳಲಿಕ್ಕೆ ಸಾಮರ್ಥ್ಯವಿಲ್ಲದವರು, ತಮ್ಮ ಬುದ್ಧಿ ಶಕ್ತಿಯಿಂದಲೂ, ಅತಿ ತರ ಪ್ರಯತ್ನದಿಂದಲೂ, ಒಕೆದಿಟ್ಟ ಗ್ರಂಥಗಳ ಮೇಲಿಂದಲಾದರೂ, ತಮ್ಮ ಮನಸ್ಸಿಗೆ ಸಮಾಧಾನವನ್ನು ಮಾಡುವರು. ತಾನುತಿಳಿಯದದನ್ನು ತನ್ನ ಕಲ್ಪನೆಯಿಂದ ತಿಳಿದು ಕೊಳ್ಳ ಬೇಕು. ಇಲ್ಲವೇ ತಿಳಿದವರಿಂದ ಕೇಳಿ; ಕಲಿತು ಕೊಳ್ಳ ಬೇಕು. ಅಥವಾ ಅವರು ಬಹು ಪರಿಶ್ರಮದಿಂದ ಬರೆದ ಗ್ರಂಥಾವಲೋಕನೆಯನ್ನು ಮಾಡಿ ಸಮಾಧಾನ ಮಾಡಿ ಕೊಳ್ಳ ಬೇಕು. ಅಲ್ಲದೆ ಸ್ಪಷ್ಟವಾಗಿ ಕಾಣುವ ಚರಾಚರ ವಸ್ತುಗಳ ಗುಣಾವಗುಣಗಳನ್ನು ಕಂಡು ಹೇಳುವದರಲ್ಲಿ ಏನೂ ಅರ್ಥವಿಲ್ಲ. (ಸಶೇಷ)

ಸಾಕ್ರೆತೀಸನ ಚರಿತ್ರವು.

(ಹಿಂದಿನ ಅಂಕದಿಂದ ಮುಂದೆ ಸಾಗಿಸಿದ್ದು.)

ಸೋಫಿಸ್ತ ಎಂಬ ಹೆಸರಿನ ಪಂಡಿತರು ಆ ಕಾಲದಲ್ಲಿ ಅಲ್ಲಿ ವಾಸಿಸುತ್ತಿದ್ದರು. ತಾವು ರಾಜನೀತಿಯಲ್ಲಿ ನಿಪುಣರಾದಂಥ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತೇವೆಂತ ಅವರಿಗೆ ಬಹಳ ಹೆಮ್ಮೆ ಇರುತ್ತಿತ್ತು. ಇಂಥ ಪಂಡಿತರ ಕೈಕೆಳಗೆ ವಿದ್ಯಾಭ್ಯಾಸವನ್ನು ನೂಡಿದ ಕಾರಣ, ಅಥೆನ್ಸ ಶಹರದಲ್ಲಿಯ ತರುಣ ಗೃಹಸ್ಥರ ಮನಸ್ಸಿನಲ್ಲಿ ಒಳ್ಳೇ ಹೆಸರನ್ನೂ ಮತ್ತು ಬಹುಮಾನವನ್ನೂ ಪಡೆಯಬೇಕೆಂಬ ಇಚ್ಛೆಯು ಬಹಳವಾಗಿ ಉತ್ಪನ್ನವಾಗುತ್ತಿತ್ತು. ಈ ಕಾರಣದಿಂದಲೂ ಹಾಗೂ ಥೆವಿಸ್ತಕ್ಲೀಸ, ಸೈಮೆನ್ಯನ, ಮತ್ತು ಪೆರಿಕ್ಲೀಸ ಈ ಪ್ರಸಿದ್ಧ ಸೇನಾಧಿಪತಿಗಳ ಕೀರ್ತಿಯನ್ನು ಕೇಳಿ ತಾವು ಸಹ; ಅವರಂತೆಯೇ ಹೆಸರು ಪಡೆಯಬೇಕೆಂಬಿ ಇಚ್ಛೆಯು ಅವರಲ್ಲಿ ಉಂಟಾಗಿರುತ್ತಿದ್ದ ಕಾರಣದಿಂದಲೂ, ಬೇಕಾದಂಥ ಕೆಲಸಗಳನ್ನು ಮಾಡಲಿಕ್ಕೆ ತಾವು ಯೋಗ್ಯರಾಗಿದ್ದೇವೆಂತ ಅನರಿಗೆ ತೋರುತ್ತಿತ್ತು. ಮತ್ತು ರಾಜ್ಯದಲ್ಲಿಯ ದೊಡ್ಡ ದೊಡ್ಡ ಅಧಿಕಾರಗಳು ತಮಗೆ ದೊರಿಯಬೇಕೆಂತ ಅವರು ಇಚ್ಛಿಸುತ್ತಿದ್ದರು. ಪ್ಲೇತೋ ಇವನ ಇಪ್ಪತ್ತು ವರುಷದ ವಯಸ್ಸಿನ ಒಬ್ಬ ತಮ್ಮನು, ಆ ತರುಣ ಗೃಹಸ್ಥರಲ್ಲಿ ಒಬ್ಬನಾಗಿದ್ದನು. ಅವನ ಹೆಸರು ಗ್ಲಾಕೋ. ಅವನ ವಯಸ್ಸು ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವದಕ್ಕೆ ಸಾಕಷ್ಟು ಇದ್ದಿಲ್ಲ. ಹಾಗೂ ಅವನಲ್ಲಿ ಜ್ಞಾನವೂ ಮತ್ತು ಉದ್ಯೋಗವೂ ಎಳ್ಳಷ್ಟು ಸಹ ವಾಸಿಸುತ್ತಿರಲಿಲ್ಲ. ಹೀಗಿದ್ದರೂ ತಾನು ಸರಕಾರದಲ್ಲಿ ದೊಡ್ಡ ಅಧಿಕಾರ ಪಡಿಯಬೇಕೆಂಬಿ ಹುಚ್ಚು ಅವನ ತಲೆಯಲ್ಲಿ ಬಹಳವಾಗಿ ಬಲಗೊಂಡಿತ್ತು. ಅವನ ಮನಸ್ಸನ್ನು ಇದರಿಂದ ತಿರುಗಿಸ ಬೇಕೆಂತ ಅವನ ಗೆಳೆಯರೂ, ನೆಂಟರಿಷ್ಟರೂ ಮತ್ತು ಮನೆಯ ಜನರೂ ಸಹ ಮಾಡಿದ ಎಲ್ಲ ಪ್ರಯತ್ನಗಳೂ ನ್ಯರ್ಥವಾಗಿ ಹೋದವು. ಅವನು ಪ್ಲೇತೋ ಇವನ ತಮ್ಮನಾದದರಿಂದ ಅವನ ಮೇಲೆ ಸಾಕ್ರೆತೀಸನ ಪ್ರೀತಿಯು ಬಹಳವಾಗಿರುತ್ತಿತ್ತು. ಕಡೆಗೆ ಸಾಕ್ರೆತೀಸನು ಅವನ ಮನಸ್ಸನ್ನು ತಿರುಗಿಸಿ ಯಾರ ಕಡೆಯಿಂದಲೂ ಬಿಡಿಸಲಿಕ್ಕಾಗದಿದ್ದ ಅವನ ಹುಚ್ಚನ್ನು ಬಿಡಿಸಿಬಿಟ್ಟನು. ಅದು ಹ್ಯಾಗಂದರೆ:—

ಒಂದು ದಿವಸ ಅವನು ಸಾಕ್ರೆತೀಸನಿಗೆ ಸಿಕ್ಕಿದನು. ಆಗ ಸಾಕ್ರೆತೀಸನು ಬಹಳ ಚಾತುರ್ಯದಿಂದ ಅವನ ಸಂಗಡ ಮಾತಾಡಲು, ಆ ಮಾತಿನ ಸವಿಯನ್ನು ಸೇವಿಸದೆ ಬಿಟ್ಟು ಹೋಗುವದು ಗ್ಲಾಕೋ ಇವನಿಂದಾಗಲಿಲ್ಲ. ಹೀಗಾಗಿ ಅವನು ಸಾಕ್ರೆತೀಸನ ಮಾತನ್ನು ಕೇಳಲಿಕ್ಕೆಂತ ಅಲ್ಲಿಯೇ ನಿಂತು

ಕೊಂಡನು. ಇಷ್ಟಾದದ್ದೇ ಬಹಳ ಹೆಚ್ಚಿನದು. ಯಾಕಂದರೆ, ಮೊದಲು ಅವನು ಸಾಕ್ರೆತೀಸನ ಮಾತಿನ ಕಡಿಗೆ ಎಂದೂ ಲಕ್ಷ್ಯಕೊಟ್ಟದ್ದಿಲ್ಲ. ಈ ಪ್ರಸಂಗವು ಒಳ್ಳೇ ರೀತಿಯಿಂದ ಒದಗಿರುತ್ತದೆಂತ ತಿಳಿದು ಸಾಕ್ರೆತೀಸನು, ಅವನ ಸಂಗಡವಾದ ಮಾಡಲಿಕ್ಕೆ ಪ್ರಾರಂಭಿಸಿದನು. ಸಾಕ್ರೆತೀಸನ ಯೋಗ್ಯವಾದ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಕೊಡುವದು, ಗ್ಲಾಕೋ ಇವನಿಂದಾಗಲಿಲ್ಲ. ಕಡೆಗೆ ತನ್ನಲ್ಲಿ ಇನ್ನೂ ಬೇಕಷ್ಟು ಜ್ಞಾನವಿಲ್ಲವೆಂತ ಅವನು ಒಪ್ಪಿಕೊಂಡನು. ಹೀಗಾದದರಿಂದ ಗ್ಲಾಕೋ ಇವನ ಗರ್ವವು ಕಡಿಮೆಯಾಗಿ, ಮುಂದೆ ಅವನು ಸಾಕ್ರೆತೀಸನ ಉಪದೇಶವನ್ನು ಕೇಳಲಿಕ್ಕೆ ಹತ್ತಿದನು. ಆ ಉಪದೇಶದ ಯೋಗದಿಂದ ಸ್ವಲ್ಪ ದಿವಸಗಳಲ್ಲಿಯೇ ಅವನು ಚತುರನಾಗಿ ಬೇಕಾದ ಕೆಲಸಗಳನ್ನು ತೂಗಿಸಲಿಕ್ಕೆ ಯೋಗ್ಯನಾದನು. ಸಾಕ್ರೆತೀಸನು ಗ್ಲಾಕೋ ಇವನಿಗೆ ಮಾಡಿದ ಉಪದೇಶವು ಎಲ್ಲರಿಗೂ, ಎಲ್ಲ ಕಾಲದಲ್ಲಿಯೂ ಉಪಯೋಗಕ್ಕೆ ಬೀಳುವಹಾಗಿದೆ. ಅದರ ಮುಖ್ಯ ಸಾರಾಂಶವೇನೆಂದರೆ:— ಜನರ ಉಪಯೋಗಕ್ಕೆ ಬೀಳುವಷ್ಟು ಯೋಗ್ಯವಾದ ಗುಣಗಳು ತಮ್ಮಲ್ಲಿರದೆ, ತಮ್ಮ ಕೀರ್ತಿಯು ಹೆಚ್ಚಬೇಕೆಂತಲೂ, ತಮಗೆ ದೊಡ್ಡ ದೊಡ್ಡ ಅಧಿಕಾರಗಳು ಪ್ರಾಪ್ತವಾಗಬೇಕೆತಂಲೂ, ಬಲವಾದ ಆಶೆಹಿಡಿದು ಬೇಕೆ ಏನೂ ವಿಚಾರವಾಡದೆ ರಾಜ್ಯ ಕಾರಭಾರದಲ್ಲಿ ಪ್ರವೇಶಿಸುವ ಜನರು ಹಾಸ್ಯಕ್ಕೆ ಮಾತ್ರ ಗುರಿಯಾಗುತ್ತಾರೆ.

ಚಿಕ್ಕ ಪ್ರಾಯದಲ್ಲಿ ಸರಕಾರದ ಉದ್ಯೋಗವನ್ನು ಮಾಡಬೇಕೆಂತ ಸಾಕ್ರೆತೀಸನು ತನ್ನ ಮಿತ್ರರಿಗೆ ಎಂದೂ ಹೇಳುತ್ತಿದ್ದಿಲ್ಲ. ಆದರೆ ಅಂಥ ಉದ್ಯೋಗವನ್ನು ಒಳ್ಳೇ ರೀತಿಯಿಂದ ನಡಿಸುವದಕ್ಕೆ ಅವಶ್ಯವಾಗಿರುವ ಜ್ಞಾನವನ್ನು ಮೊದಲು ಸಂಪಾದಿಸಿಕೊಳ್ಳಬೇಕೆಂತಲೂ, ಮತ್ತು ಅದಕ್ಕೋಸ್ಕರ ಬಹಳ ಶ್ರಮಪಡಬೇಕೆಂತಲೂ, ಅವನು ಯಾವಾಗಲೂ ಅವರಿಗೆ ಉಪದೇಶಮಾಡುತ್ತಿದ್ದನು. ಅವನು ಏನು ಅನ್ನುತ್ತಿದ್ದನೆಂದರೆ:—ಗುರುವಿನ ಸಹಾಯವಿಲ್ಲದೆ, ಶಿಲ್ಪಕಲೆಯ ಏನಾದರೊಂದು ಅಂಶವು ಸಹ ತಿಳಿಯುವದಿಲ್ಲ. ಹೀಗಿದ್ದು ಮನುಷ್ಯರಿಗೆ ಬೇಕಾಗಿರುವ ಎಲ್ಲ ತರದ ಜ್ಞಾನಗಳಲ್ಲಿ ಶ್ರೇಷ್ಠವಾದ ರಾಜ್ಯದ ಸೂತ್ರವನ್ನು ನಡಿಸುವ ಜ್ಞಾನವು ಪ್ರಾಪ್ತವಾಗಲಿಕ್ಕೆ; ಮೊದಲು ಏನೇನೂ ಶ್ರಮ ಮಾಡುವದು ಅವಶ್ಯವಿಲ್ಲವೆಂತ ತಿಳಿಯುವ ಜನರು ಎಷ್ಟು ಮೂರ್ಖರಾಗಿರಬೇಕು! ಸರಕಾರದ ಕೆಲಸಗಳನ್ನು ಮಾಡಲಿಕ್ಕೆ ಇಚ್ಛಿಸುವವರ ಎಲ್ಲ ತರದ ಕೃತ್ಯಗಳು ಯೋಗ್ಯವಾದವುಗಳಾಗಿಯೂ ಮತ್ತು ಪ್ರಮಾಣಿಕ ತರದವುಗಳಾಗಿಯೂ ಇರಬೇಕೆಂಬದನ್ನು ಜನರ ಮನಸ್ಸಿನಲ್ಲಿ ಚೆನ್ನಾಗಿ ಸ್ಥಿರಪಡಿಸುವದಕ್ಕೋಸ್ಕರ; ಅವನು ಬಹಳ ಪ್ರಯತ್ನ ಮಾಡುತ್ತಿದ್ದನು. ಹಾಗೂ ತನ್ನ ಸ್ವಂತ ದೇಶದ ವಿಷ

ಯುನಾದ ಪ್ರೀತಿ, ಪರೋಪಕಾರ ಮಾಡುವ ಬಲವಾದ ಇಚ್ಛೆ, ಮತ್ತು ದೇವತೆಗಳು ಪೂರ್ಣ ದಯಾಳುಗಳೂ ಹಾಗೂ ಪೂರ್ಣ ಸಮರ್ಥರೂ ಇದ್ದಾರೆಂಬ ನಿಜವಾದ ಭಕ್ತಿ, ಇವುಗಳನ್ನು ಅವರ ಹೃದಯದಲ್ಲಿ ಚನ್ನಾಗಿ ಸ್ಥಿರಪಡಿಸುವದಕ್ಕೆ ಅವನು ಅಂತಃಕರಣ ಪೂರ್ವಕವಾಗಿ ಪ್ರಯತ್ನ ಮಾಡುತ್ತಿದ್ದನು. ಯಾಕಂದರೆ; ಮೇಲೆ ಹೇಳಿದ ಗುಣಗಳು ಮನುಷ್ಯನಲ್ಲಿ ಇಲ್ಲದಿದ್ದರೆ, ಬೇರೆ ಬೇರೆ ತರದ ಗುಣಗಳು ಅವನಲ್ಲಿ ಶೇರಿದ ಹಾಗೆ ಅವನು ಹೆಚ್ಚು ಹೆಚ್ಚು ದುಷ್ಟನಾಗುತ್ತ ಬರುತ್ತಾನೆಂತ ಸಾಕ್ರೆತೀಸನು ಯಾವಾಗಲೂ ತಿಳಿಯುತ್ತಿದ್ದನು. ಈ ಜಗತ್ತು ಸರಿಯಾಗಿ ನಡಿಯಬೇಕೆಂತ ದೇವರು ಮಾಡಿಟ್ಟ ವ್ಯವಸ್ಥೆಯನ್ನು ಕುರಿತು, ಒಂದುಸರ್ತಿ ಸಾಕ್ರೆತೀಸನಿಗೂ ಮತ್ತು ಯುಥಿದೀಮಸ ಎಂಬವನಿಗೂ ಸಂವಾದವಾಯಿತು. ಅದು ಮುಂದಿನ ಜನರಿಗೆ ತಿಳಿಯಬೇಕೆಂತ ಜಾನೋಫನ್ನನು ಅದನ್ನು ಬರೆದಿಟ್ಟಿರುತ್ತಾನೆ. ಪೂರ್ವಕಾಲದ ಅತ್ಯುತ್ತಮ ಗ್ರಂಥಗಳಲ್ಲಿ ಈ ಸಂವಾದದ ಗಣನೆಯನ್ನು ವಿದ್ವಾಂಸರು ಮಾಡುತ್ತಾರೆ. ಆ ಸಂವಾದವು ಕೆಳಗೆ ಕೊಡಲ್ಪಟ್ಟಿದೆ.

ಸಾಕ್ರೆತೀಸ್:—ಯಾವ ವಸ್ತುಗಳಿಲ್ಲದೆ ಮನುಷ್ಯರದು ನಡಿಯುವದಿಲ್ಲವೋ, ಅಂಥ ವಸ್ತುಗಳ ವಿಷಯವಾಗಿ ದೇವರು ಬಹಳ ಯೋಚನೆಯಿಂದ ವ್ಯವಸ್ಥೆ ನಾಡಿಟ್ಟದ್ದಾನೆಂಬದನ್ನು ಕುರಿತು ನೀವು ಮೊದಲು ಎಂದಾದರೂ ವಿಚಾರ ನಾಡಿದ್ದೀರೋ?

ಯುಥಿದೀಮಸ:—ಇಲ್ಲ. ನಾನೆಂದೂ ಮಾಡಲಿಲ್ಲ.

ಸಾಕ್ರೆತೀಸ್:—ಬೆಳಕು ಮನುಷ್ಯರಿಗೆ ಎಷ್ಟು ಉಪಯೋಗದ್ದದೆ ನೋಡಿರಿ! ಈಶ್ವರನಿಂದ ನಮಗೆ ಕೊಡೋಣಾದ ಈ ವಸ್ತುವು ಎಷ್ಟು ಬೆಲೆಯುಳ್ಳದ್ದು ?

ಯುಥಿದೀಮಸ:—ಬೆಳಕು ಇಲ್ಲದಿದ್ದರೆ ನಮಗೆ ಕಣ್ಣುಗಳಿದ್ದೂ ಇಲ್ಲದಂತೆಯೇ ಆಗುತ್ತಿತ್ತು. ಮತ್ತು ಈ ಎಲ್ಲ ಜಗತ್ತು, ಇದ್ದೂ ಇಲ್ಲದಂತಾಗುತ್ತಿತ್ತು. ನಮಗೆ ಆಗಾಗ್ಯೆ ವಿಶ್ರಾಂತಿ ಬೇಕೆಂತ ದೇವರು ರಾತ್ರಿಯನ್ನು ಉಂಟು ಮಾಡಿದ್ದಾನೆ.

ಸಾಕ್ರೆತೀಸ್:—ನೀವು ಅನ್ನುವದು ನಿಜವು. ಆದದರಿಂದಲೇ ನಾವು ಅವನನ್ನು ಸ್ತುತಿಸಬೇಕು. ಮತ್ತು ಅವನ ಉಪಕಾರ ನೆನೆಸಬೇಕು. ಅವನು ತೇಜಃ ಪುಂಜನಾದ ಸೂರ್ಯನನ್ನು ನಿರ್ಮಿಸಿದ್ದಾನೆ. ಅವನ ಯೋಗದಿಂದಲೇ ಹಗಲು ಆಗುತ್ತದೆ. ದಿವಸದ ಬೇರೆ ಬೇರೆ ಭಾಗಗಳು ನನಗೆತಿಳಿಯುತ್ತವೆ. ಮತ್ತು ದೇವರು ನಿಯಮ ನಾಡಿಟ್ಟದ್ದೇನೆಂದರೆ:—ಸೂರ್ಯನ ಪ್ರಕಾಶದಿಂದ

ಸೃಷ್ಟಿಯಲ್ಲಿರುವ ಎಲ್ಲ ಪದಾರ್ಥಗಳ ಸಂಬಂಧವಾದ ಚಮತ್ಕಾರವು ಪ್ರಾಣಿಗಳ ಕಣ್ಣಿಗೆ ಬೀಳಬೇಕು. ಮತ್ತು ಅವನ ಯೋಗದಿಂದಲೇ ಪ್ರಾಣಿಗಳಿಗೆ ಉಷ್ಣತೆಯು ದೊರಕಿ ಅವುಗಳ ಜೀವದ ಸಂರಕ್ಷಣೆಯೂ ಆಗಬೇಕು. ಅವನ ಆಜ್ಞೆಯಿಂದಲೇ ಸ್ವಂತ ತೇಜವಿಲ್ಲದ ಚಂದ್ರನೂ, ಮತ್ತು ಎಲ್ಲ ನಕ್ಷತ್ರಗಳೂ ರಾತ್ರೆ ಹೊತ್ತಿನಲ್ಲಿ ಪ್ರಕಾಶಿಸುತ್ತವೆ.

ನೋಡಿರಿ! ಹಗಲು, ರಾತ್ರೆ; ಬೆಳಕು, ಕತ್ತಲೆ, ಶ್ರಮ, ವಿಶ್ರಾಂತಿ, ಮುಂತಾದ ಒಂದಕ್ಕೊಂದು ವಿರುದ್ಧವಾದ ವಸ್ತುಗಳನ್ನು ನಿರ್ಮಿಸಿ ಈ ಸೃಷ್ಟಿಯ ರಚನೆಯಲ್ಲಿ ಅವನು ಮಾಡಿಟ್ಟ ಚಮತ್ಕಾರಕ್ಕಿಂತಲೂ, ಹೆಚ್ಚಿನ ವಿಚಿತ್ರವಾದದ್ದು ಬೇರೆ ಯಾವದುಂಟು? ಈ ಎಲ್ಲ ವಸ್ತುಗಳು ಮನುಷ್ಯರ ಹಿತದ ಸಲುವಾಗಿಯೂ, ಮತ್ತು ಅವರ ಸುಖದ ಸಲುವಾಗಿಯೂ, ನಿರ್ಮಿಸಲ್ಪಟ್ಟಿದ್ದಾವೆ.

ಇಷ್ಟಾದ ಮೇಲೆ ಬೆಂಕಿ ಮತ್ತು ನೀರು ಇವುಗಳ ಯೋಗದಿಂದ ಸಂಸಾರದಲ್ಲಿ ಆಗುತ್ತವ ಲೆಕ್ಕವಿಲ್ಲದ ಎಷ್ಟು ಕೆಲಸಗಳು ಸಹಜವಾಗಿ ಆಗುತ್ತವೆ; ಎಂಬದನ್ನು ಸಾಕ್ರೆತೀಸನು ಯುಥಿದೀಮಸನಿಗೆ ತಿಳಿಸಿ ಹೇಳಿದನು. ಮತ್ತು ಮನುಷ್ಯನಿಗೆ ಸಂಬಂಧವಿರುವ ಎಲ್ಲ ಸಂಗತಿಗಳಲ್ಲಿಯೂ, ಅವನಿಗೆ ಸುಖವಾಗಬೇಕೆಂತ ದೇವರು ಎಷ್ಟು ಸೂಕ್ಷ್ಮ ರೀತಿಯಿಂದ ಲಕ್ಷ ಕೊಡುತ್ತಾನೆ; ಎಂಬ ವಿಷಯವನ್ನು ಕುರಿತು, ಅವನು ಯುಥಿದೀಮಸನ ಸಂಗಡ ಕೆಳಗೆ ಬರೆದಂತೆ, ಸಂಭಾಷಣೆ ಮಾಡಿದನು.

ಸಾಕ್ರೆತೀಸ:—ಛಳಿಗಾಲದ ನಂತರ ಸೂರ್ಯನು ಉತ್ತರ ದಿಕ್ಕಿಗೆ ಬರುತ್ತಾನೆ. ಮತ್ತು ಕಳೆದ ಋತುವಿನ ಹಣ್ಣುಹಂಪಲಗಳು ಒಣಗಿ ಹಾಗೂ ಕೊಳೆದು ಹಾಳಾಗಿ ಹೋಗಿರುತ್ತವಾದ್ದರಿಂದ ಅವುಗಳ ಬದಲಾಗಿ ಹೊಸ ಫಲಗಳನ್ನು ಬೆಳೆಸುತ್ತಾನೆ. ಈ ಕೆಲಸ ಮಾಡಿದ ಮೇಲೆ ತಾನು ಹಾಗೇ ಉತ್ತರದ ಕಡೆಗೆ ಉಳಿದರೆ ತನ್ನ ಉಷ್ಣತೆಯಿಂದ ನಮಗೆ ತೊಂದರೆಯೂದೀತೆಂತ ತಿಳಿದು; ಅವನು ತಿರುಗಿ ದಕ್ಷಿಣದ ಕಡೆಗೆ ಬರುತ್ತಾನೆ. ಆದರೆ ದಕ್ಷಿಣ ದಿಕ್ಕಿನಲ್ಲಿ ಬಂದು ಗಡಿಯುಂಟು. ಆ ಗಡಿಯನ್ನು ದಾಟಿ ಅವನು ಹೋದನೆಂದರೆ ಉತ್ತರದ ಕಡೆಗಿರುವ ನಾವು; ಛಳಿಯಿಂದ ಸತ್ತು ಹೋದೇವು. ಆದರೆ ಹಾಗಾಗ ಬಾರದೆಂತ, ಆ ಗಡಿಯ ವರೆಗೆ ಮಾತ್ರ ಹೋಗಿ ಮುಟ್ಟಿದ ಕೂಡಲೇ ಅವನು ಉತ್ತರ ದಿಕ್ಕಿಗೆ ತಿರುಗುತ್ತಾನೆ. ಹೀಗೆ ಅವನ ಯೋಗದಿಂದ ನಮ್ಮ ಜೀವಕ್ಕೆ ಸಂಕಟ ಬಾರದಂತೆ, ಆಯಾಯ ಕಾಲಮಾನಕ್ಕೆ ಸರಿಯಾಗಿ ಅವನು ತಿರುಗುತ್ತಿರುತ್ತಾನೆ. ಈ ಎಲ್ಲ ಮಾತುಗಳಿಂದ ದೇವರು ಬಹಳ ಕೃಪೆಯುಳ್ಳವನೆಂತ ನಿಮಗೆ ತೋರುವದಿಲ್ಲವೋ? ಇನ್ನೊಂದು ಕಾರಣವೇನೆಂದರೆ:—ನಾವು ಒಂದೇ ಸರ್ತಿ ಷಂಡಿ

ಯಿಂದ ಉಷ್ಣತೆಯ ಮತ್ತು ಉಷ್ಣತೆಯಿಂದ ಥಂಡಿಯ ಸ್ಥಿತಿಯಲ್ಲಿ ಶೇರಿದರೆ; ನಮಗೆ ಅವುಗಳೊಳಗೆ ಒಂದಾದರೂ ಸಹಿಸದೆ, ನಮ್ಮ ಆರೋಗ್ಯಕ್ಕೆ ಹಾನಿ ಸಂಭವಿಸೀತು. ಇದನ್ನು ಲಕ್ಷದಲ್ಲಿ ತಂದು, ನಮ್ಮ ಬಳಿಗೆ ಬರುವಾಗ ಮತ್ತು ನಮ್ಮ ಕಡೆಯಿಂದ ಹೋಗುವಾಗ ಸೂರ್ಯನು ಬಹಳ ಎತ್ತರದಿಂದಲೂ, ಮತ್ತು ಸಾವಕಾಶದಿಂದಲೂ, ನಡೆಯುತ್ತಾನೆ. ಆದದರಿಂದ ಅಷ್ಟಷ್ಟಾಗಿ ಬಹಳ ಶೆಖೆಯಾದರೂ, ಅಥವಾ ಬಹಳ ಥಳಿಯಾದರೂ, ಅದು ನಮಗೆ ಬಾಧಿಸದಿಲ್ಲ. [ಮುಂದೆ ಸಾಗುವದು.]

ದೊಡ್ಡಸ್ತಿಕೆಯು.

ಸೃಷ್ಟಿಕರ್ತನು, ಮನುಷ್ಯರಿಗಾಗಿ ನಿರ್ಮಿಸಿದ ಗುಣಗಳಲ್ಲಿ ದೊಡ್ಡಸ್ತಿನವೆಂಬದು ಹೆಚ್ಚಿನದು. ಎಲ್ಲರೂ ಆ ಗುಣವನ್ನು ತಾವು ವಹಿಸಬಹುದೆಂದು ಆಲೋಚಿಸಿದರೆ ಸಾಧ್ಯವಾಗದು. ಪ್ರಯತ್ನಾಂತ್ಯದಿಂದ ಅದರ ಕೆಲವು ಅಂಶವನ್ನು ಸಂಪಾದಿಸಬಹುದಲ್ಲದೆ, ಹುಟ್ಟ ಗುಣೀಪುರುಷನಂತೆ ಎಂದಿಗೂ ಆ ಸದ್ಗುಣಯುಕ್ತರಾಗಿ ಎಲ್ಲರೂ ಆಗರು. ಕೆಲವು ಪಂಡಿತರು, ಅನೇಕ ವಿಧ ವಿದ್ಯಾವಿಭೂಷಿತರಾಗಿ ತಾವು ಸಭ್ಯಗುಣಿಗಳೆಂದು ಬಣ ಹೆಮ್ಮೆಯನ್ನು ಮೆರಿಸ್ಯಾರು. ಆದರೆ ಅವರು ಸಭ್ಯಗುಣವನ್ನು ತಮ್ಮ ಸರಿಯೋಗ್ಯತೆಯುಳ್ಳವರಲ್ಲಿ ಮಾತ್ರ ಮೆರಿಸುವರಲ್ಲದೆ ತಮಗಿಂತ ಕಡಿಮೇ ಯೋಗ್ಯತೆಯವರಲ್ಲಿ ಮೆರಿಸರು. ಅಣುತ್ಕ್ಷಣಗಳನ್ನು ಮೊದಲು ಮಾಡಿಕೊಂಡು; ಸಾರ್ವಭೌಮನವರಿಗೂ ಒಂದೇ ರೀತಿಯಾಗಿರುವ ನಯೂಚರಣವುಳ್ಳವನೇ ದೊಡ್ಡ ಗುಣಿಗಳಲ್ಲದೆ, ವಿನುಗಳು ತನ್ನಾಧೀನವಾಗುವವರಿಗೂ ಹೊಂಚಿಹಾಕಿದ್ದು; ಓವ್ಯಿಗೇ ಅವುಗಳನ್ನು ಭಕ್ಷಿಸುವ ಬಕಪಕ್ಷಿಯಂತೆ ತಮ್ಮ ಸ್ವಾರ್ಥಕ್ಕಾಗಿ ಜನರನ್ನು ಓಲೈಸುತ್ತಾ ಹಿಂದಿನಿಂದ ಇನ್ನೊಂದು ಆಚರಣೆಯನ್ನು ಕೈಕೊಳ್ಳುವವರು, ಈ ಗುಣದ ವರ್ಗದಲ್ಲಿ ಸೇರರು. ಮೆತ್ತಗಾದ ಮಾತುಗಳನ್ನು ಆಡಿ; ನಗಿಮೊಗದಿಂದಿದ್ದು; ಕಂಡ ಕಂಡವರಲ್ಲಿ ನ್ಯಥಾನಮ್ರತ್ವವನ್ನು ತೋರಿ; ಯೋಗ್ಯವಲ್ಲದಂಥಾ ಗುಣಗಳಿಂದ ಹೊಗಳಿ; ಸಮಯ ಬಂದಾಗ ನಮ್ಮ ಪೆಟ್ಟಿಗೆಗೆ ಮಾತ್ರ ಕೈ ಹಾಕಬೇಡಿರೆಂಬ ಬಗೆಯವರು, ಉದಾರ ಗುಣಿಗಳಲ್ಲ. ಸಂಕಟದಲ್ಲಿಯೂ ಸುಖದಲ್ಲಿಯೂ, ಒಂದೇ ಮನಸ್ಸಿನಿಂದ ಯುಕ್ತರಾಗಿ ತಮ್ಮ ಕಿರಿ ಸಂಸಾರದಲ್ಲಿಯ ಜಿಕ್ಕ ವಸ್ತುಗಳಿಂದ ಧ್ಯಾನಿಸುತ್ತಾ ಸಕಲರನ್ನೂ ತಮ್ಮಂತೇ ತಿಳಿಯುವವನೇ ಈ ಗುಣಕ್ಕೆ ಪಾತ್ರರು.

ದೀನರಾದಂಥಾ ಶತ್ರುಗಳಲ್ಲಿ ದಯವಾಡುವಷ್ಟು ದೊಡ್ಡ ಗುಣವು,

ಇನ್ಯಾವದೂ ಇಲ್ಲವೆಂದು; ತಿಳಿದವರು ಪದೇ ಪದೇ ಹೇಳುತ್ತಿರುತ್ತಾರೆ. ಆ ಉಕ್ತಿಯನ್ನು ನೆನಪಿನಲ್ಲಿಟ್ಟು ವರ್ತಿಸುವವರೇ ಮಹಾದಾರ್ಯಿಗಳು. ಈ ಪ್ರಸಂಗದಲ್ಲಿ ಬಂದು ಉದಾಹರಣೆಯನ್ನು ಕೊಡುವದರಿಂದ ಈ ವಿಷಯವು ಮನಸ್ಸಿನಲ್ಲಿ ಹೆಚ್ಚು ಬಿಂಬಿಸುವದಲ್ಲದೆ, ಬರೇ ಉಪದೇಶದಿಂದ ನಮ್ಮ ಆಶಯವು ಕೊನೆಗಾಣಲಿಕ್ಕಿಲ್ಲೆಂದು ನಂಬುತ್ತೇವೆ.

ಇಂಗ್ಲಂಡ ದೇಶದ ಅರಸನಾದ ಮೂರನೇ ಎಡ್ವರ್ಡನು, ಫ್ರಾನ್ಸ ದೇಶವನ್ನು ತನ್ನ ವಶ ಮಾಡಿ ಕೊಳ್ಳುವ ಸಲುವಾಗಿ, ಅದರ ಉತ್ತರ ದಿಕ್ಕಿಗಿರುವ ಕ್ಯಾಲೇ ಎಂಬ ಬಹು ಭದ್ರವಾದ ಪಟ್ಟಣವನ್ನು ಮುತ್ತಿದನು. ಅವನ ಮುತ್ತಿಗೆಯಿಂದ ತಮ್ಮನ್ನು ಸಂರಕ್ಷಿಸಿ ಕೊಳ್ಳುವ ಬಗ್ಗೆ ಅದರೊಳಗಿನ ಫ್ರೆಂಚ ಜನರು ಮಿತಿಮೀರಿ ಸಾಹಸ ಬಟ್ಟರು. ಪರಂತು ಅವರ ಯತ್ನವು ಕಡೆಗಾಣಲಿಲ್ಲ. ಕೊನೆಗೆ ಅವರು ಬಹು ಜರ್ಜರರಾಗಿ "ನಮ್ಮನ್ನು ನಮ್ಮ ವಸ್ತು ಬಡವೆಗಳೊಡನೆ ಬಿಟ್ಟು ಕೊಟ್ಟರೆ ನಮ್ಮ ಈ ಎಲ್ಲಾ ಪಟ್ಟಣವನ್ನು ನಿಮಗೆ ನಿಶ್ಚಯವಾಗಿಯೂ ಬಿಟ್ಟು ಕೊಡುತ್ತೇವೆ" ಎಂದು ಎಡ್ವರ್ಡ ರಾಜನಿಗೆ ಹೇಳಿ ಕಳುಹಿಸಿದರು. ಆ ಮಾತನ್ನು ಕೇಳಿ ಅವನು ಹೇಳಿದ್ದೇನಂದರೆ:—"ನಿಮ್ಮೊಳಗಿನವರಾದ ಮುಖ್ಯ ಆರು ಜನ ಬಲಿಷ್ಠ ಸರದಾರರನ್ನು ನಮ್ಮ ಕಡಿಗೆ ಕಳುಹಿಸಿದರೆ, ನಾವು ನಿಮ್ಮ ಅರಿಕೆಯನ್ನು ಮಾನ್ಯ ಮಾಡುವೆವು" ಎಂದು ಹೇಳಿದನು. ಈ ಮಾತನ್ನು ಕೇಳಿ; ಅವರೊಳಗಿನ ಮುಖ್ಯನಾದ ಯುಸ್ಟಸ ಸೇಂಟಪೀಯರನೆಂಬ ಸೇನಾಧಿಪತಿಯು, ಬಹಳ ಚಿಂತಾಕ್ರಾಂತನಾಗಿ ತನ್ನ ಪರಿವಾರದವರೊಡನೆ ಅಂದದ್ದೇನಂದರೆ—ಪ್ರಿಯ ಮಿತ್ರರುಗಳಿರಾ! ಈ ಸಮಯವು ಬಹು ದುಸ್ತರವಾಗಿದೆ. ಯಾವದಾದರೊಂದು ಬಗೆಯಿಂದ ನಮ್ಮ ದೇಶದವರ ಕಲ್ಯಾಣವನ್ನಾದರೂ ಚಿಂತಿಸ ಬೇಕು. ಇಲ್ಲವೇ ನಮ್ಮನ್ನು ಮುತ್ತಿದ ಈ ದುಷ್ಟ ಸೈನ್ಯದ ನಿರ್ಬಂಧನೆಗಾದರೂ ನಾವು ಬಳಗಾಗಿ, ನಮ್ಮ ತಾಯಿ ತಂದೆ ಹೆಂಡರು ಮಕ್ಕಳ ಅಮೋಲ್ಯ ಪ್ರಾಣಗಳನ್ನಾದರೂ ಕಷ್ಟದಲ್ಲಿ ಹಾಕಬೇಕು. ಈ ಎರಡು ಉಪಾಯಗಳಲ್ಲಿ ನೀವು ಯಾವದನ್ನು ಅಂಗೀಕರಿಸುವಿರಿ? ನಾನಂತೂ ನಿಶ್ಚಯಿಸಿರುವದೇನಂದರೆ—ಈ ಭೂವಿಯಲ್ಲಿ ಜನ್ಮಿಸಿದ ಪ್ರತ್ಯೇಕ ಪ್ರಾಣಿಯು, ಮರಣದ ಗಂಟನ್ನು ಹೊತ್ತುಕೊಂಡು ಬಂದೇ ಇರುತ್ತಾನಾದದರಿಂದ, ಅವನಿಗೆ ಅದು ಎಂದಿಗೂ ತಪ್ಪದು. ಘೋರ ತರವಾದ ರೋಗಾದಿ ಪೀಡಣೆಯೊಳಗೆ ಸಿಕ್ಕು; ಅನ್ಯರಿಗೆ ಉಪಹತಿ ಕೊಡುತ್ತಾ ಸಾಯುವದಕ್ಕಿಂತಲೂ, ಸ್ವಜನ ಕಲ್ಯಾಣಾರ್ಥವಾಗಿ ಮರಣ ಪಡುವದು ಲೇಸಾಗಿದೆ. ಇದರಿಂದ ನಮಗೆ ಇಹದಲ್ಲಿ ಕೀರ್ತಿಯೂ ಪರದಲ್ಲಿ ಸೌಖ್ಯವೂ ಉಂಟಾಗುವದರಿಂದ; ಈ ಮಾರ್ಗವೂ ಮತ್ತು ಈ ಸಮಯವೂ ಕೂಡ ನಮಗೆ ಕೀರ್ತಿ ಪ್ರದವಾಗಿದೆ. ಇದರಲ್ಲಿ ನಿಮ್ಮ ಅಭಿಪ್ರಾ

ಯವ್ರು ಏನು ಎಂದು ಕೇಳಲು; ಎಲ್ಲರೂ ಆ ಮಾತಿಗೆ ಒಡಂಬಟ್ಟು; ತಮ್ಮ ತ ಮ್ಮೊಳಗೆ ಆಲೋಚಿಸಿ, ಅವನಂಥ ಯೋಗ್ಯತೆಯವರೇ ಬೇರೆ ಐದು ಮಂದಿ ಮರಣಕ್ಕೆ ಸಿದ್ಧರಾಗಿ, ಆ ಆರೂ ಜನರು ದೀನ ಮುಖದಿಂದ ಎಡ್ಡರ್ಡನೆಡೆಗೆ ಕಳುಹಿಸಲ್ಪಟ್ಟರು. ಅವರನ್ನು ನೋಡಿದಕ್ಷಣವೇ ಅವನ ಕಡೆಯ ಜನರು, ದ್ವೇಷಾತಿಶಯದಿಂದ ಅವರ ಮೇಲೆ ಬಿದ್ದರು. ಅದರಲ್ಲಿ ಕೆಲವರು, ಇವರನ್ನು ಗಲ್ಲಿಗೆ ಹಾಕ ಬೇಕೆಂತಲೂ, ಕೆಲವರು ಖರಂಗಿಯ ಬಾಯಿಯಲ್ಲಿ ಇವರನ್ನುಕೊಟ್ಟು ಇವರ ಎಲುಬು ಚರ್ಮಗಳು ಸಹಾ ಕಾಣದಂತೆ ಹಾರಿಸ ಬೇಕಾಗಿಯೂ, ಮಾತ ನಾಡಿದರು. ಬೇರೆ ಕೆಲವರು, ಇವರನ್ನು ನುಚ್ಚು ನುರಿಯಾಗಿ ಕಡಿದು ಹಾಕ ಬೇಕೆಂದು ಹೇಳಿದರು. ಈ ಪ್ರಕಾರ ಹಲವರು, ತಮ್ಮ ಮನಸ್ಸಿಗೆ ಕಂಡ ಕಂಡಂತೆ ಬೊಗಳಿಕೊಂಡರು. ಇವರ ವಿಷಯವಾಗಿ ರಾಜನಿಗಾದರೂ, ಬಹಳ ದ್ವೇಷವಿದ್ದುದರಿಂದ ಒಬ್ಬಿಗೇ ಇವರ ತಲೆಗಳನ್ನು ಹಾರಿಸ ಬೇಕೆಂದು ಅಪ್ಪಣೆ ಇತ್ತು, ಅದರಂತೆ ಎಲ್ಲಾ ಸಿದ್ಧ ಮಾಡಿಸಿದನು.

ಪರಂತು ಸಂರಕ್ಷಣೇ ಮಾಡುವನನ ಮುಂದೆ ಕೊಲ್ಲುವವನ ಆಟವೇನೂ ಸಾಗುವದಿಲ್ಲವೆಂಬ ಮಾತು ಸರ್ವಥಾ ಸತ್ಯವಾದದ್ದು. ಅಂದಿಗೆ ಆ ಆರು ಜನರ ವಿಧಿಬರಹವು ತೀರಿದ್ದಿಲ್ಲ. ಈಶ್ವರನಲ್ಲಿ ಅಸತ್ಯವು ಎಂದಿಗೂ ನಡೆಯುವದಿಲ್ಲ. ಆ ಆರು ಜನರ ತಲೆಯನ್ನು ಹಾರಿಸಲಿಕ್ಕಾಗಿ ಅವರನ್ನು ಮರಣ ಭೂವಿಗೆ ವೈದು; ಕೊಲೆಗಡಿಕನು ತತ್ತೆ ಹೊಡಿಯಲು ಸಿದ್ಧನಾಗುವಷ್ಟರಲ್ಲಿ, ಆ ರಾಜನ ಪೆಂಡತಿಯಾದ ಖಲೀಪಾ ಎಂಬ ಅವನ ರಾಣಿಯು ಅಲ್ಲಿ ಬಂದಳು. ಅವಳು ಬಹಳ ಸುಶೀಲಳೂ, ಕರುಣೆಯುಳ್ಳವಳೂ, ಮೇಲಾಗಿ ಪತಿಯ ಪಂಚ ಪ್ರಾಣಳೂ ಆಗಿದ್ದಳು. ಅವಳು, ಅವರಿಗಾದ ಅನ್ಯಾಯದ ಅಪ್ಪಣೆಯನ್ನು ಕೇಳಿ; ಮರ ಮರ ಮರುಗಿ ರಾಜನಿಗೆ ಹೇಳಿದ್ದೇನಂದರೆ.

"ಮಹಾರಾಯನೇ, ಇವರಾರೂ ಜನರು ಸಾಯುವರೆಂದು ನಾನು ಎಳ್ಳಷ್ಟಾದರೂ ದುಃಖಪಡುವದಿಲ್ಲ. ಪರಂತು ಇವರನ್ನು ಕೊಂದರೆ; ಜನರು ನಮ್ಮನ್ನು (ಇಂಗ್ಲಿಷರನ್ನು) ಎಷ್ಟು ನಿಲದಿಸುವರೋ, ತಮ್ಮ ಕೀರ್ತಿಲತೆಯನ್ನು ಹ್ಯಾಗೆ ಖಂಡಿಸುವರೋ ಎಂಬ ಬಗ್ಯಾಗಿ, ನಾನು ಬಹಳ ವ್ಯಾಕುಲವುಳ್ಳವಳಾಗಿರುತ್ತೇನೆ. ಪ್ರಿಯರೇ, ತಾವು ಇವರಿಗೆ ಮರಣದ ಶಿಕ್ಷೆಯನ್ನು ಕದಾಚಿತ್ ವಿಧಿಸಿರಬಹುದು. ಆದರೆ ಆ ಮರಣವು, ತಮ್ಮ ಅನುಜ್ಞೆಯಿಂದ ಇವರಿಗೆ ಉಂಟಾಗುತ್ತದೆಂದು ತಿಳಿಯ ಬಾರದು. ಯಾಕಂದರೆ ಈ ಸದ್‌ಗ್ರಹಸ್ಥರು, ತಾವಾಗಿಯೇ ತಮ್ಮ ದೇಶ ಕಲ್ಯಾಣಕ್ಕಾಗಿ ಮರಣವನ್ನು ಪ್ರೀತಿಸಿ ಬಂದಿರುತ್ತಾರಾದದರಿಂದ, ಇದರಲ್ಲಿ ತಾವು ತಮ್ಮ ಅಪ್ಪಣೆಯನ್ನು ಕೊನೆಗಾಣಿಸಿದಂತಾಗುವದಿ

ಲ್ಲ. ಕೃತಕಾರ್ಯರಾದ ಇವರು, ತಮ್ಮ ದೊಡ್ಡಸ್ತಿಕೆಯನ್ನು ತಮ್ಮ ದೇಶದಲ್ಲಿಯೂ, ನಮ್ಮ ರಾಜ್ಯದಲ್ಲಿಯೂ ಹರಹಿ; ಎಲ್ಲಾ ಬಹುಮಾನಗಳನ್ನೂ, ಕೀರ್ತಿಯನ್ನೂ ನಮ್ಮಿಂದ ಎತ್ತಿಕೊಳ್ಳುವರು. ನಮ್ಮ ಪಾಲಿಗಾಗಿ ಏನೂ ಬಿಡುವದಿಲ್ಲ. ಈ ಬಗ್ಗೆ ನಾನು ಬಹಳ ಪಶ್ಚಾತ್ತಾಪ ಪಡುತ್ತೇನೆ. ಇವರ ಶಿರಚ್ಛೇದನದಿಂದ ಇವರಾರೂ ಜನರ ಯಶೋ ವಿಸ್ತಾರವಾಗಿ, ತನ್ಮ ಯಶಸ್ಸು ಮಾತ್ರ ಬಹು ಕ್ಷೀಣ ಗತಿಯಲ್ಲಿ ಬರುವದು. ಇವರು, ತಾವು ಮರಣ ಹೊಂದಿ ಶ್ರೇಯಸ್ಸನ್ನು ದೊರಕಿಸ ಬೇಕೆಂದು ಬಂದಿರುವದರಿಂದ, ಇವರನ್ನು ತಾವು ಕೊಲ್ಲದೆ ಇವರ ಮನೋಭೀಷ್ಟವನ್ನು ಸಲ್ಲಿಸದೇ ಬಿಟ್ಟರೆ, ಇವರು ಆಶಾಭಗ್ನರಾಗಿ ತಿರುಗಿ ಹೋಗುವರು. ಮತ್ತು ತನ್ಮ ಸ್ತುತಿಯ ಬೆಳವಣಿಗೆಯು ಹೆಚ್ಚುವದು. ಇವರ ಆಶಾಭಗ್ನ ಮಾಡುವದೇ ಇವರಿಗೆ ಹೆಚ್ಚಿನ ಶಿಕ್ಷೆಯಲ್ಲದೆ, ಇನ್ನೂ ಹೆಚ್ಚಿನ ಶಿಕ್ಷೆಯು ಅಗತ್ಯವು ನನ್ನ ಅಲ್ಪಮತಿಗೆ ಕಾಣುವದಿಲ್ಲ" ಅಂದಳು.

ಈ ಮಾತನ್ನು ಕೇಳಿ; ಎಡ್ವರ್ಡ ರಾಜನಿಗೆ ಪೂರ್ಣ ಪಶ್ಚಾತ್ತಾಪವಾಯಿತು. ಮತ್ತು ಸಮಯದಲ್ಲಿ ಎಂಥಾ ಮನುಷ್ಯರಿಂದಾದರೂ, ಬುದ್ಧಿಯು ಮಾತನ್ನು ಕೇಳಿ ತಿಳಿದು ಕೊಳ್ಳುವದು ಮನುಷ್ಯ ಮಾತ್ರಕ್ಕೆ ಹಿತವಾದದ್ದೆಂದು, ಅವನು ಪೂರ್ಣ ತಿಳಿದಿದ್ದನು. ಇದೂ ಅಲ್ಲದೆ ತನ್ನ ಮೋಹದ ಹೆಂಡತಿಯ ಈ ದಯಾವಿಚಾರವು ಕೇವಲ ನಿರಪೇಕ್ಷವಾಗಿರುವದೆಂದು ತಿಳು ಕೊಂಡನು. ಮತ್ತು ಆ ಸಮಯದಲ್ಲಿ ಅವನ ಪ್ರಿಯಳು, ಬಸುರಿದ್ದಳು. ಇಷ್ಟೆಲ್ಲಾ ವಿಚಾರದಿಂದ ಅವನು ಆ ಆರು ಜನರನ್ನು ತನ್ನ ಬಳಿಗೆ ಕರೆದು; ಅವರ ಶಿಕ್ಷೆಯನ್ನು ಕ್ಷಮಿಸಿ; ವಸ್ತ್ರಾಭರಣಗಳಿಂದ ಅವರನ್ನು ಸತ್ಕರಿಸಿ ಅವರನ್ನು ಅವರ ದೇಶಕ್ಕೆ ಕಳುಹಿಸಿದನು. ಇದರಿಂದ ಖಲೀಪಾ ರಾಣಿಗೆ ಬಹಳ ಸಮಾಧಾನವಾಯಿತು.

ತಾತ್ಪರ್ಯವೇನೆಂದರೆ:—ಅಂತಃಕರಣದಿಂದುಂಟಾದ ದೊಡ್ಡಸ್ತಿಕೆಯಿಂದ ಸಮಾಧಾನವಾಗುವಷ್ಟು, ಮತ್ಯಾತರಿಂದಲೂ ಆಗುವದಿಲ್ಲ. ಅದು ಕಾರಣ ಹೆಮ್ಮೆಯಿಂದಲೂ, ಬಣ್ಣ ಜಂಭದಿಂದಲೂ ದೊಡ್ಡಸ್ತಿಕೆಯನ್ನು ಸಂಪಾದಿಸಲು ಆಶಿಸಬಾರದು. ಅದರಿಂದ ಇದ್ದ ಹೆಸರು ಹೋಗುವದಲ್ಲದೆ ವೃದ್ಧಿಯಾಗದು. ನಿಜವಾಗಿ ಕೀರ್ತಿಯನ್ನು ಸಂಪಾದಿಸ ಬೇಕಾದರೆ, ಕರಳಿನಲ್ಲಿಯ ನಿಜವಾದ ಅಂತಃಕರಣ ಪ್ರದರ್ಶನ ಮಾಡುವದರಿಂದ ಆಗುವದಲ್ಲದೆ, ಇತರ ಯಾವ ಉಪಾಯಗಳಿಂದಲೂ, ಆಗದು. ದೊಡ್ಡ ದೊಡ್ಡ ಪರೀಕ್ಷೆಗಳನ್ನು ಕೊಟ್ಟು; ಅನೇಕ ಸಭೆಗಳಲ್ಲಿ ಫ್ರೌಢ ಮಾತುಗನ್ನಾಡುವದರಿಂದ ಕೀರ್ತಿಯೂ, ಸಮಾಧಾನ ಗುಣವೂ, ದೊಡ್ಡಸ್ತಿಕೆಯೂ ಬರಲಾರವು.

ಅರ್ಥಶಾಸ್ತ್ರ

ಅರ್ಥಶಾಸ್ತ್ರದ ವಿವರಣೆ

(ಹಿಂದಿನಿಂದ ಮುಂದೆ ಸಾಗಿಸಿದ್ದು.)

ನಾವು ವಸ್ತುಗಳ ಉಪಯೋಗವನ್ನು ಮಾಡುವದಾದರೆ, ಅದು ನಮ್ಮ ಉದ್ದೇಶ ಕೃತ್ಯಕ್ಕೆ ಬರುವಂತೆ ಇದ್ದರೆ ಮಾತ್ರ, ಉಪಯೋಗಿಸುವದು ಉಚಿತವಾದ ಸಂಗತಿಯು.

ನಾವು ಯಾವದಾದರೊಂದು ವಸ್ತುವಿನಿಂದ, ಅದರಲ್ಲಿದ್ದ ಎಲ್ಲ ಗುಣಗಳಿಗಿಂತಲೂ, ಉತ್ತಮವಾದ ಗುಣಗಳನ್ನೇ ಹುಡುಕಿ ತೆಗದು ಕೊಳ್ಳುವದರಲ್ಲಿ ಪ್ರಯತ್ನಿಸಬೇಕು. ಯಾವದಾದರೊಂದು ವಸ್ತುವಿನ ಉಪಯೋಗವನ್ನು ಹೆಚ್ಚಾಗಿ ಮಾಡುವದರಿಂದ, ಹಾನಿಬರದ ಹಾಗಿದ್ದರೆ ಮಾತ್ರ, ಅದರಿಂದ ಹೆಚ್ಚು ಫಲ ದೊರೆಯುತ್ತದೆ. ಹ್ಯಾಗಂದರೆ:- ಪುಸ್ತಕಗಳನ್ನು ಓದೋಣ, ಕನ್ನಡಿಯಲ್ಲಿ ನೋಡಿ ಕೊಳ್ಳೋಣ, ಒಂದೇ ಪುಸ್ತಕವನ್ನು ಅನೇಕ ಜನರು ಒಬ್ಬರಿಂದೊಬ್ಬರು ತೆಗದುಕೊಂಡು ಓದೋಣ, ಮುಂತಾದ್ದರಿಂದ ಎಲ್ಲರಿಗೂ, ಫಲ ಪ್ರಾಪ್ತಿ ಒಂದೇ ತರದ್ದಾದರೂ, ಅದರ ಉಪಯೋಗವು ಅನೇಕರಿಗಾದಂತಾಗುತ್ತದೆ. ಇಂಥ ಸಾಧನಕ್ಕೆ ಉಪಯೋಗ (ಫಲ) ವರ್ಧನೆಯೆಂದೆನ್ನುತ್ತಾರೆ. ಉದಾಹರಣೆ:—ಪುಸ್ತಕಾಲಯ, ಚಿತ್ರಗಳು, ಪ್ರಾಣಿಗಳ ಸಂಗ್ರಹಾಲಯ, ವಸ್ತುಗಳ ಪ್ರದರ್ಶನಾಲಯ, ಇವುಗಳನ್ನು ಕಟ್ಟುವ ಖರ್ಚಿನಗಿಂತಲೂ, ಉಪಯೋಗವೇ ಹೆಚ್ಚಾಗುತ್ತದೆ.

ಯಾವದಾದರೊಂದು ವಸ್ತುವು ಬಂದಾವರ್ತಿ ಉಪಯೋಗಿಸಿದ ಮಾತ್ರದಿಂದ ಅದು ನಾಶಪಡತಕ್ಕದ್ದಿದ್ದರೆ, (ಅನ್ನ ಮುಂತಾದವುಗಳು) ಅಷ್ಟೇ ವಸ್ತುವಿನ ಉಪಯೋಗವು ಮತ್ತೊಬ್ಬನಿಗೆ ಅವನಷ್ಟೇ ಆಗುತ್ತದೆ. ಇದರಿಂದ ತಿಳಿಯತಕ್ಕದ್ದೇನೆಂದರೆ:—ಯಾವದನ್ನಾದರೂ, ಹೆಚ್ಚಿನ ಉಪಯೋಗದಲ್ಲಿಯೇ ಖರ್ಚಿಸಬೇಕು. ಒಬ್ಬನು ಅಡವಿಯಲ್ಲಿ ಮಾರ್ಗ ಭ್ರಷ್ಟನಾದಾಗ್ಯೆ ದೊರಕಿಸಿಕೊಂಡ ಸ್ವಲ್ಪ ಅನ್ನವನ್ನು ಒಬ್ಬಿಗೇನೇ ತಿಂದು ತೀರಿಸದೇ, ಅದನ್ನು ಮುಂದೆ ಬರುವ ಉಪವಾಸ ಭಯದಿಂದ ಕಾದಿಟ್ಟುಕೊಳ್ಳಬೇಕು. ಮತ್ತು ಆ ಅಡವಿಯಿಂದ ಪಾರಾಗುವ ವರೇಗೆ; ಮುಂದಿನ ದೃಷ್ಟಿಯನ್ನಿಟ್ಟು ಕೊಳ್ಳುತ್ತಾ, ಯೋಗ್ಯ ಪ್ರಮಾಣದಂತೆ ಖರ್ಚು ಮಾಡಬೇಕು. ಇದರಂತೆ ಕೂಲಿಕಷ್ಟದಿಂದ ಬೀವಿಸತಕ್ಕನರು, ಸಂಬಳಗಾರರು, ವ್ಯಾಪಾರ ಮುಂತಾದ ಉದ್ಯೋಗ ನಡಿಸತಕ್ಕವರು ಸಹ; ಬಳ್ಳೇ ದುಡಿತದ ಕಾಲದಲ್ಲಿ ಮುಂದಾದರೂ, ಇದರಂತೆ

ದೊರಕೀತೆಂಬ ಆಶೆಯಿಂದ; ಆ ಕಾಲಕ್ಕೆ ಎಲ್ಲ ಹಣವನ್ನು ಖರ್ಚಿಸದೇ, ಮುಂದೆ ಬರುವ ಕಷ್ಟಗಳನ್ನು ಕುರಿತು ವಿಚಾರಕ್ಕೆ ತಂದು, ಸಾಧ್ಯವಾಗುವ ಮಟ್ಟಿಗೆ ಕಾದಿಡಬೇಕು. ತಾರುಣ್ಯಾವಸ್ಥೆಯಲ್ಲಿ ಅಂದಚಂದದ ಡೌಲುದಾರಿಕೆಗೆ ಸಂಪಾದಿಸಿದ ಹಣವನ್ನು ಖರ್ಚಿಸದೇ ಸಂಗ್ರಹಿಸಿಟ್ಟರೆ, ಅದು ವೃದ್ಧಾಪ್ಯಕಾಲಕ್ಕೆ (ಅಶಕ್ತರಿದ್ದಾಗ್ಯೆ) ಬಹಳ ಉಪಯೋಗಕ್ಕೆ ಬರುವದು.

ಎಲ್ಲ ಧನವು ಖರ್ಚುಮಾಡುವ ಸಲುವಾಗಿಯೇ ದೊರಕಿಸಲ್ಪಡುತ್ತದೆ. (ದೊರಕಿಸುತ್ತದೆ.) ಆದರೆ ಅದನ್ನು ನಿಷ್ಪ್ರಯೋಜಕವಾದ ಕೆಲಸಗಳಲ್ಲಿ ಖರ್ಚುಮಾಡದೇ, ಅದರಿಂದ ತನಗೂ, ತನ್ನ ದೇಶದವರಿಗೂ, ಹಿತವಾಗತಕ್ಕಂಥ (ಲಾಭವಾಗತಕ್ಕಂಥ)ವ್ಯಾಪಾರ ಮೊದಲಾದ ಉದ್ಯೋಗಗಳ ಉತ್ತೇಜನದ ಸಲುವಾಗಿ, ಯಥೇಚ್ಛ ಖರ್ಚು ಮಾಡಬೇಕು. ಯಾಕಂದರೆ:—ಎಲ್ಲರೂ ಧನವನ್ನು ಖರ್ಚುಮಾಡದೆ ಬಚ್ಚಿಟ್ಟು ಕೊಂಡು ಬಿಟ್ಟರೆ, ವ್ಯಾಪಾರವೆಂಬ ಉದ್ಯೋಗಗಳು ಮುಳುಗಿ ಹೋಗುವವು! ಬಡ ಜನರು ಕೆಲಸವಿಲ್ಲದೆ ಉಪವಾಸ ಸಾಯುವರು! ಎಂದು ಕೆಲವರು ಹೇಳುತ್ತಾರೆ. "ಇದು ವಸ್ತ್ರ ಮಾರುವವನು ತನ್ನ ವಸ್ತ್ರ ಖರ್ಚಾಗುವ ಸಲುವಾಗಿ ಬಯಿಂದ ಬಡಾಯಿ ಕುಟ್ಟಿ, ಗಿರಾಕಿಗಳಿಗೆ ಹ್ಯಾಗೆ ತೆಗದುಕೊಳ್ಳುವದಕ್ಕೆ ಇಚ್ಛೆಯುಳ್ಳವನನ್ನ ನೋಡುತ್ತಾನೋ? ಅದರಿಂದ ಗಿರಾಕಿಗಳಾದವರು ತಮಗೆ ಹೊಸ ವಸ್ತ್ರವಾಯಿತೆಂದು ಹ್ಯಾಗೆ ಆನಂದಪಡುತ್ತಾರೋ? ಅಂಥವರು ಮಾತ್ರ, ಈ ವಿಚಾರವು ಯೋಗ್ಯವೆಂದು ತಿಳಿಯುತ್ತಾರೆ." ಶ್ರೀಮಂತರಾದವರು ಒಂದಲ್ಲ ಬಂದು ವಿಧದಿಂದ, ಜನ ಸಹಾಯಕರೆಂದು ಹೆಳಬೇಕು. ಹ್ಯಾಗಂದರೆ:—ಹಣವುಳ್ಳವರು ತಮ್ಮ ಹಣವನ್ನು ಮುತ್ತಿಷ್ಟು ಹೆಚ್ಚಿಸುವದರಲ್ಲಿ, ಅಹೋರಾತ್ರಿ ಕಳವಳ ಪಡುತ್ತಿರುತ್ತಾರೆ. ಅವರು ತಾವುಸಳಿಸಿದ ಹಣವನ್ನು ಬಡ್ಡಿಯ ಆಶೆಗೋಸ್ಕರ, ದಸ್ತೈಜುಗಳ ಆಧಾರದ ಮೇಲೆ ಬಡಬಗ್ಗರಿಗೆ, ಸಾಲವನ್ನು ಕೊಡುತ್ತಾರೆ. ಸಾಲ ತೆಗದು ಕೊಂಡವರಾದರೂ ಆ ಹಣವನ್ನು ಬಚ್ಚಿಡುವದಿಲ್ಲ. ಅವರು ಅದನ್ನು ಒಂದಲ್ಲ ಒಂದು ತರದ ಉದ್ಯೋಗಗಳಲ್ಲಿ ಖರ್ಚು ಮಾಡಿ, ಅದರಿಂದ ಹೆಚ್ಚಿನ ಫಲ ದೊರಕಿಸಿಕೊಳ್ಳುವ ಪ್ರಯತ್ನ ನಡಿಸುತ್ತಾರೆ. ಇದಲ್ಲವಾದರೆ, ಶ್ರೀಮಂತರು ತಮ್ಮ ಹಣವನ್ನು ಬಡಿಗೋಸ್ಕರ ಬ್ಯಾಂಕ್‌ಗಳಲ್ಲಿಡುವರು. ಆದರೆ ಬ್ಯಾಂಕಿನವರು ಅದನ್ನು ಎಂದೂ ಬಚಿಡುವದಿಲ್ಲ. ಅವರು ಆ ಹಣವನ್ನು ಉದ್ಯೋಗ ಮಾಡುವಂಥ ಬಡಬಗ್ಗರಿಗೆ ಸಾಲವಾಗಿ ಕೊಡುತ್ತಾರೆ. ಅಥವಾ ದೊಡ್ಡಸ್ಥಿಕೆಯುಳ್ಳವರು, ತಮ್ಮ ಧನಕ್ಕೆ ಬದಲಾಗಿ ಬೆಳ್ಳಿ ಭಂಗಾರಗಳನ್ನು ಮಾಡಿ ಬಚ್ಚಿಡುವರು. ಹೀಗೆ ಮಾಡುವದರಿಂದ, ಅವರಿಗೆ ಯಾವ ತರದ ಲಾಭವಾಗದಿದ್ದರೂ, ಅವರು ಅದರ ಬೆಲೆಯನ್ನು ಹೆಚ್ಚುವಾಡಿದಂತಾಗುತ್ತದೆ. ಹೀಗೆ

ಅನೇಕರು ಮಾಡಿದರೆ, ಬೆಳ್ಳಿ ಭಂಗಾರದಗಣಿಗಳನ್ನು ಹುಡುಕಿ ತೆಗೆಯುವವರ ಸಂಖ್ಯೆಯು ಹೆಚ್ಚಾಗಿ; ಅದೊಂದು ಹೊಸ ಉದ್ಯೋಗವು ಜನರಿಗೆ ದೊರೆದಂತಾಗುವದು. ಇದರಿಂದ ತಿಳಿದು ಬರುವದೇನೆಂದರೆ:— ಯಾವನಾದರೂ, ಹಣವನ್ನು ಖರ್ಚು ಮಾಡುವದಕ್ಕೆ ಸಿದ್ಧನಾದರೆ, ಅವನು ಎಷ್ಟು ಜನರು ದುಡಿಯುತ್ತಾರೆಂಬದನ್ನು ನೋಡುವದಿಲ್ಲ. ಅವರು ಯಾವ ತರದ ಎಷ್ಟು ಕೆಲಸಗಳನ್ನು ಮಾಡುತ್ತಾರೆಂಬದನ್ನು ಯೋಚಿಸುತ್ತಾನೆ. ಇದರಂತೆ ಯಾವನಾದನಾರೊಬ್ಬನು, ಬಂದು ಸಂತರ್ಪಣೆ (ಮೇಜವಾನಿ) ಮಾಡ ಬೇಕೆಂದು ಆಶೆ ತೋರಿಸಿದರೆ, ಅದಕ್ಕೆ ಉಪಯೋಗವುಳ್ಳ ವಸ್ತುಗಳು ಯಾವ ಜನರ ಹತ್ತರ ಇರುತ್ತವೋ ? ಆ ಜನರ ಬೆಲೆ ಬೆಳೆಯುವದು. ಇದೇ ಪ್ರಕಾರ ಹೆಚ್ಚು ಜನರು ಈ ತರವಾದ ಸಂತರ್ಪಣೆಗಳನ್ನು ಮಾಡಿ; ಹಣ ಖರ್ಚು ಮಾಡ ಹತ್ತಿದರೆ, ಮೇಲೆ ಹೇಳಿದ ಜನರ ವ್ಯಾಪಾರಕ್ಕೆ ಒಳ್ಳೇ ಉತ್ತೇಜನ ಬಂದೀತು.

ಇದರಂತೆ, ಹೊಗೆಬಂಡಿಯ ಮಾರ್ಗಗಳನ್ನು ಮಾಡುವದಕ್ಕೆ ಹಣ ಖರ್ಚು ಮಾಡಿದರೆ, ಆ ಕೆಲಸದ ಸಲುವಾಗಿ ಎಷ್ಟೋ ಕೆಲಸ ಮಾಡತಕ್ಕವರು ಬೇಕಾಗುವರು. ಇದರಿಂದ ನೌಕರರ ಸಂಖ್ಯೆ ಬೆಳದೀತು. ಆದರೆ ಇದರ ಮೇಲಿಂದ ತಿಳಿಯುವದೇನೆಂದರೆ:—ನಾವು ಸಂತರ್ಪಣೆ ಮಾಡಿಸುವದಕ್ಕೆ ಹಣ ಖರ್ಚು ಮಾಡುವದರಿಂದ, ಹೆಚ್ಚು ಸುಖಿಗಳಾಗುವೆವೋ ? ಅಥವಾ ಹೊಗೆಬಂಡಿ ಮುಂತಾದವುಗಳಲ್ಲಿ ಹಣ ಖರ್ಚು ಮಾಡಿದರೆ, ಹೆಚ್ಚು ಸುಖಿಗಳಾಗುವೆವೋ? ಎಂಬ. ಈ ವಿಚಾರ ಮಾಡಿದರೆ, ಸಂತರ್ಪಣೆಯು ಖರ್ಚು ಕ್ಷಣಿಕ ಸೌಖ್ಯವಿರುತ್ತದೆ. ಆದರೆ ಹೊಗೆಬಂಡಿಗೋಸ್ಕರ ಖರ್ಚು ಮಾಡಿದರೆ ಅದು ಕ್ಷಣಿಕ ಸೌಖ್ಯವಾಗಲಾರದು. ಅಂದರೆ–ಸ್ವಲ್ಪ ಕಾಲದಲ್ಲಿ ಬಹಳ ದೂರದ ವರೆಗೆ ಪದಾರ್ಥಗಳನ್ನು ತರಕಳುಹಿಸುವದರಲ್ಲಿಯೂ, ಜನರನ್ನು ಮೇಲಿಂದ ಮೇಲೆ ಬೇಕಾದ ಸ್ಥಳಕ್ಕೆ ವೈದು ತರುವದರಲ್ಲಿಯೂ, ಸಹಾಯವಾಗುವದು.

ವ್ಯಾಪಾರಕ್ಕೆ ಉತ್ತೇಜನ ಕೊಡುವ ಸಲುವಾಗಿ ಹಣ ಖರ್ಚುಮಾಡ ಬೇಕೆನ್ನುವದು ತಪ್ಪಿನದಾಗಿರುತ್ತದೆ. ಹಣ ಖರ್ಚುಮಾಡುವ ಕಾಲಕ್ಕೆ ಅದರಿಂದ ನಮಗೂ, ಜನರಿಗೂ, ಲಾಭವಾದೀತೋ? ಇಲ್ಲವೋ? ಎಂಬದನ್ನು ಮುಂದಾಗಿ ವಿಚಾರ ಮಾಡಬೇಕು.

ಕೆಲವರು ಹಣವನ್ನು ಎಂದಿಗೂ ಖರ್ಚುಮಾಡ ಕೂಡದೆಂದು ಅನ್ನುತ್ತಾರೆ. ಅವರು ಹಣ ವೃದ್ಧಿಸುವ ಉಪಾಯವೆಂದರೆ, ಬಡ್ಡಿಗೆ ಕೊಡೋಣ, ಅಥವಾ ಬಚ್ಚಿಡೋಣ, ಇವೇ ಮುಂತಾದವುಗಳೆಂತಲೂ, ಇದರಿಂದ ಮನುಷ್ಯರು ಜಿಪುಣರಾಗಿ ಹೋಗುತ್ತಾರೆಂತಲೂ, ತಿಳಿಯುತ್ತಾರೆ. ಆದರೆ ಈ ತರದ ಮತವು

ಳ್ಳವರಿಂದ, ಯಾವ ತರಹದಿಂದಲಾದರೂ, ಜನರ ಹಾನಿಯಾಗದೇ ಅನೇಕರು ಸಂಪ ನ್ನರಾಗುತ್ತಾರೆ. ಮತ್ತು ಅದರಿಂದ ಕೆಲ ಕೆಲವು ಕಾಲದಲ್ಲಿ ಉಪಯೋಗ ಸಹ ಆಗುತ್ತದೆ. ಈ ತರದ ಜನರು ಅದೇ ಹಣವನ್ನು ಬ್ಯಾಂಕ್, ರೈಲ್ವೆ, ಮುಂತಾದವುಗಳಲ್ಲಿ ಖರ್ಚಿಸಿದರೆ, ಅವರಿಗೂ, ಜನರಿಗೂ, ಬಹಳೇ ಲಾಭವಾ ಗುತ್ತದೆನ್ನುವದು ನಿಜ; ಆದರೆ ಮೇಲೆ ಹೇಳಿದ ಅವರ ಕೃತಿಯಾದರೂ, ಅ ಯೋಗ್ಯವಾದದ್ದೆಂದು ಅನ್ನಕೂಡದು. ಹಲವರು ಡಾಮು ಡಾಲುಗಳಿಗೋ ಸ್ಕರವಾಗಿಯೂ, ಹೆಂಡ ಕುಡಿಯುವದರಲ್ಲಿಯೂ, ಶಿಕ್ಕಿದ ತೀನಿ ತಿನ್ನುವನ್ನು ವದರಲ್ಲಿಯೂ, ಹಣ ಖರ್ಚಿಸುತ್ತಾರೆ. ಆದರೆ, ಇದರಿಂದ ಬೇರೆ ತರದ ಫಲ ದಾಯಕ ವ್ಯಾಪಾರಕ್ಕೆ ಉದ್ಯೋಗಿಸ ತಕ್ಕಂಥವರ ಕೈ ಶೇರಿ, ಆ ಹಣವು ಸಹಾ ಉಪಯೋಗ ಆದಂತೆ ಆಗುವದು.

ನಾವು ಹಣವನ್ನು ಅನುಗಾಲ ಸಂಗ್ರಹಿಸ ಬೇಕೆಂಬ ಬರೇ ಈ ಆಶೆಯ ನ್ನು ತಾಳಿ, ಆನಂದವನ್ನುಂಟುಮಾಡುವ ವಸ್ತುಗಳಲ್ಲಿ ಹಣ ಖರ್ಚುಮಾಡುವ ದನ್ನು ಬಿಡಬಾರದು. ಯಾವ ವಸ್ತುಗಳನ್ನು ಉಪಯೋಗಿಸುವದಿಲ್ಲವೋ? ಯಾವ ವಸ್ತುಗಳಿಂದ ಸುಖವಾಗುವದಿಲ್ಲವೋ? ಅಂಥ ವಸ್ತುಗಳನ್ನು ಸಂಪತ್ತೆಂದು ಅನ್ನಕೂಡದು. ಯಾಕಂದರೆ, ಎಲ್ಲರೂ ತಮ್ಮ ತಮ್ಮ ಧನವ ನ್ನು, ರೈಲ್ವೆ ಕೆಲಸದಲ್ಲಿಯೇ ಖರ್ಚಿಸಿದರೆ, ಅವ್ವು ಹೆಚ್ಚಿನ ಉಪಯೋಗವುಳ್ಳ ದ್ದಾಗದೇ ಕಷ್ಟ ಸಂಭವಿಸುವದು. ಇದರಿಂದ ತುದಿಗೆ ಸಿದ್ಧವಾಗುದೇನೆಂದ ರೆ, ಹಣವನ್ನು ಒಂದಲ್ಲ ಒಂದು ತರದಿಂದ ಉಪಯೋಗ ಅಥವಾ ಖರ್ಚನ್ನು ಮಾಡಬೇಕು. ಆದರೆ ಅದರಲ್ಲಿ ವಿಚಾರ ಮಾಡ ತಕ್ಕದ್ದೇನೆಂದರೆ, ಹಾಗೆ ಮಾಡೋಣದರಿಂದ ನಮಗೂ, ನಮ್ಮನ್ನು ಹೊಂದಿದವರಿಗೂ, ಆನಂದ ಪ್ರಾ ಪ್ತಿಯಾಗ ಬೇಕಾದ್ದರಲ್ಲಿ ಮಾತ್ರ ಮಾಡಬೇಕು.

ಹಣದಿಂದಾಗುವ ಲಾಭ.

ಲಾಭವಾಗುವದಕ್ಕೆ ಅವಶ್ಯವಾದ ವಸ್ತುಗಳು:—ಉದ್ಯೋಗ ಮಾಡು ವದಕ್ಕಿಂತಲೂ, ನನಗೆಯಾವ ವಸ್ತು ಅಗತ್ಯವೆಂಬುದು ಮೊದಲಿಗೆ ನಿಶ್ಚೈಸ ಬೇಕು. ಅನಂತರ ಸ್ವಲ್ಪ ಶ್ರಮದಿಂದ ಅವುಗಳನ್ನು ಸಾಧ್ಯಮಾಡಿಕೊಳ್ಳುವದು ಹ್ಯಾಗೆಂಬದನ್ನು ತಿಳಿಯಬೇಕು. ಬಳಿಕ ಅವುಗಳನ್ನು ಯಾವರೀತಿಯಿಂದ ಮಾಡ ಬೇಕು? ಕಡಿಗೆ ಅವುಗಳನ್ನು ಉತ್ಪನ್ನ ಮಾಡುವ ಬಗ್ಯೆ ಯಾವ ತರದ ಸಾಧನೆ ಮಾಡ ಬೇಕು? ಇವೇ ಮುಂತಾದ ವಿಷಯಗಳನ್ನು ಕುರಿತು ಚನ್ನಾ ಗಿ ವಿಚಾರ ಮಾಡಬೇಕು. ಇವುಗಳನ್ನು ಮಾಡುವದೆಂದರೆ:—ಹಣ ಪ್ರಾಪ್ತಿ

ಮಾಡಿಕೊಳ್ಳುವದಕ್ಕೆ ಅವಶ್ಯವಾದ ಸಂಗತಿಗಳ್ಯಾವವು ಎಂಬದನ್ನು; ತಿಳುಕೊಳ್ಳುವದೇ ಲೆಗಿರುತ್ತವೆ.

ಹಣ ಪ್ರಾಪ್ತಿ ಮಾಡಿಕೊಳ್ಳುವದಕ್ಕೆ ೩ ಸಾಧನೆಗಳಿರುತ್ತವೆ. ಅವು ಯಾವವಂದರೆ:—ಭೂವಿ, ಶ್ರಮ, ಭಾಂಡವಲ, ಈ ಮೂರು ಸಹಾಯವು ಹಣ ಪ್ರಾಪ್ತಿಗೆ ಅತ್ಯಗತ್ಯ ಬೇಕಾಗುತ್ತದೆ. ಇವುಗಳಲ್ಲಿ ಭೂವಿಯೇ ಮುಖ್ಯವಾದದ್ದು. ಶ್ರಮವು ಭೂವಿಯನ್ನು ಹಸನಮಾಡುವದಕ್ಕೂ, ಭಾಂಡವಲವು, ಸಂಬಳಗಾರರಿಗೆ ಯೋಗ್ಯ ಸಂರಕ್ಷಣೆಗೆ ಕಾರಣೀ ಭೂತವಾಗಿಯೂ, ಇರುತ್ತವೆ. ಈ ಮೂರು ಸಾಧನೆಗಳ ಬಗ್ಯೆ ಬೇರೆ ಬೇರೆಯಾಗಿ ವಿಚಾರಿಸುವಾ—

ಭೂವಿ ಅಥವಾ ಸಾಮಾನುಗಳ ಶಲೆ.

ಉತ್ಪತ್ತಿ ಅಂದರೇನು? ಇದನ್ನು ಮೊದಲಿಗೆ ತಿಳಿದುಕೊಳ್ಳ ತಕ್ಕದ್ದು. (ಉತ್‌ಪತ್,) ಉತ್ ಅಂದರೆ ಮೇಲೆ, ಪತ್ ಅಂದರೆ ಬಿಳೋಣ, ಅಂದರೆ ನೂತನವಾಗಿ ದೊರೆಯುವದಕ್ಕೆ ಉತ್ಪತ್ತಿಯೆಂದು ಹೇಳುತ್ತಾರೆ. ಧನದೊರಕಿಸ ಬೇಕಾದರೆ, ಅದನ್ನು ಪಡಕೊಳ್ಳುವದಕ್ಕೆ ಸಾಧನೀ ಭೂತವಾದ ವಸ್ತುಗಳ ಪ್ರಾಪ್ತಿಯು ಸಲುವಾಗಿ; ಅಂದರೆ ವಿೂನು, ಭಂಗಾರ, ಬೆಳ್ಳಿ, ಮುಂತಾದವುಗಳನ್ನು ಸಮುದ್ರ, ಮತ್ತು ಖಣಿಗಳಿಂದ ಮೇಲಕ್ಕೆ ತಂದರೇನೇ ಅವುಗಳಿಂದ ನಮಗೆ ಹಣ ಪ್ರಾಪ್ತಿಯಾಗುವದು. ನಮಗೆ ದೊರೆಯುವ ವಸ್ತುಗಳು ಭೂವಿಯಿಂದಾಗಲೀ, ಸಮುದ್ರದಿಂದಾಗಲೀ, ಅಥವಾ ಬೇರೊಂದು ಅನ್ಯ ವಸ್ತುವಿನಿಂದಾಗಲೀ, ಉತ್ಪನ್ನವಾಗುತ್ತವೆ. ನಮ್ಮ ಶರೀರ ಪೋಷಣೆಗೆ ಬೇಕಾದ ಅನ್ನವು, ಬಹಳವಾಗಿ ಭೂವಿಯಿಂದಲೇ ಉತ್ಪನ್ನವಾಗುತ್ತದೆ. ವಸ್ತ್ರಗಳನ್ನು ಮಾಡುವ ಹತ್ತಿ ಸಹ ಭೂವಿಯಿಂದಲೇ ಬೆಳಿಯುತ್ತದೆ. ಅನೇಕ ತರದ ಧಾತುಗಳು ಸಹ ಖಣಿಗಳಿಂದಲೇ ಅಗಿಯಲ್ಪಡುತ್ತವೆ. ಇನ್ನು ಅನೇಕ ಉಪಯೋಗವುಳ್ಳ ವಸ್ತುಗಳು ಸಮುದ್ರದಿಂದಲೂ ದೊರೆಯುತ್ತವೆ.

ಸಾಮಾನುಗಳನ್ನು ಮಾಡಬೇಕಾದರೆ, ಯಾವದಾದರೊಂದು ವಸ್ತುವಿನ ಅಗತ್ಯವಿದ್ದೇ ಇರುತ್ತದೆ. ಬಂದುಸೂಜಿಯನ್ನು ಮಾಡಬೇಕಾದರೂ, ಅದಕ್ಕೆ ತಾಂಬ್ರ ಸೀಸ ಮುಂತಾದ ಪದಾರ್ಥಗಳ ಅಗತ್ಯವಿರುತ್ತದೆ. ಈಗ ನಾವು ನೋಡುವಂಥ ಪ್ರತಿ ಬಂದು ಸಾಮಾನಿಗೂ, ಬೇರೆ ಬೇರೆ ವಸ್ತುಗಳ ಅವಶ್ಯ ಉಂಟೇ ಉಂಟು; ಜನರು ತಮ್ಮ ಕೈ, ಕಾಲು, ಮುಂತಾದ ಅವಯವಗಳನ್ನು ಕಷ್ಟ ಪಡಿಸುವದಕ್ಕೆ ಇಚ್ಛಿಸುವದಿಲ್ಲ. ಆದರೆ ಅವುಗಳ ಬದಲಿಗೆ ಬೇರೆ ಸಾಧನೆಗಳ ಉಪಯೋಗ ಮಾಡುತ್ತಾರೆ.

ರುತ್ತದೆ. ಅದನ್ನಾದರೂ ಮಾಡುವದಕ್ಕೆ (ಭಾವಿ ಅಗಿಯುವದಕ್ಕೆ) ಮೊದಲಿಗೆ ಭಾಂಡವಲ ಬೇಕೇ ಬೇಕು. ಯಾವ ಪ್ರಕಾರವಾದರೂ ಸುಲಭರೀತಿಯಿಂದ ಹಣ ದೊರಕಿಸುವಾಗ, ಅದು ದೊರೆಯುವ ಕಾಲದ ವರೆಗೆ ಜೀವನ ಮಾಡುವ ದರ ಸಲುವಾಗಿ ಹಣ, ಅಥವಾ ಸಾಹಿತ್ಯಗಳು ಬೇಕಾಗುತ್ತವೆ. ಮುಂಗಡವಾಗಿರುವ ಹಣವಾಗಲೀ, ಅಥವಾ ಸಾಹಿತ್ಯವಾಗಲೀ, ಅರ್ಥ ಶಾಸ್ತ್ರ ಮರ್ಯಾದೆಯಿಂದ ಭಾಂಡವಲ ವೆಂದೆನ್ನಿಸಿಕೊಳ್ಳುವವು. ಭಾಂಡವಲ ಇಲ್ಲದಿದ್ದರೆ ಜನರಿಗೆ ಬಹಳಕಷ್ಟ, ಹಾಗೂ ತೊಂದರೆಗಳನ್ನನುಭವಿಸ ಬೇಕಾಗುತ್ತದೆ. ಅನ್ನವಿಲ್ಲದೆ ಉಪವಾಸ ಬೀಳುವ ಪ್ರಸಂಗ ಸಹ ಒದಗುತ್ತದೆ. ವಿಸ್. ವಾರ್ಟನ್, ಎಂಬ ಒಬ್ಬ ಪಾಶ್ಚಿಮಾತ್ಯ ಸ್ತ್ರೀಯಳು "ಕಾಡು ಜನರ ಸ್ಥಿತಿ" ಎಂಬ ಹೆಸರಿನ ಬಂದು ಪುಸ್ತಕವನ್ನು ಇಂಗ್ಲೀಷಿನಿಂದ ಬರೆದಿರುತ್ತಾಳೆ. ಅನಳು ಅರ್ಥ ಶಾಸ್ತ್ರವಿಷಯವನ್ನು ಬರೆಯುವ ಮೊದಲು, ಕೇಫ್‌ಪ್ ಆ ಗುಡ್ ಹೋಪ್ ದಲ್ಲಿದ್ದ ಜನರು, ಕಳ್ಳರಿಂದ ಸುಲಿಸಿಕೊಂಡಾಗ್ಯೆ, ಭಾಂಡವಲ ಇಲ್ಲದವರಾಗಿ ಯಾವ ಯಾವ ತರದ ದುಃಖಗಳನ್ನು ಅನುಭವಿಸಿದ್ದಾರೆಂಬುದನ್ನು; ವಿವಿಚ್ಯವಾಗಿ ಬರೆದಿರುತ್ತಾಳೆ. ಅದರಲ್ಲಿ ಅನ್ನ, ಅಥವಾ ಅದನ್ನು ದೊರಕಿಸುವ ಸಾಧನ, ಇವುಗಳನ್ನು ಪಡಕೊಳ್ಳ ಬೇಕಾದರೆ, ಎಷ್ಟು ಪ್ರಯಾಸಗಳು ನಿರರ್ಥಕವಾಗಿ ಕಳೆದು ಹೋಗುತ್ತವೆ ಎಂಬದನ್ನೂ, ಮತ್ತು ಅವರು ಭಾಂಡವಲ ಇಲ್ಲದ್ದರಿಂದ ಆ ಸಾಧನಗಳನ್ನು ಮಾಡುವದಕ್ಕೆ ಹೊತ್ತು ಶಿಗದೇ, (ಅನ್ನ ದೊರಕಿಸಿ ಕೊಳ್ಳುವದಕ್ಕೇನೇ ಅವರ ಎಲ್ಲಾ ಸಮಯಗಳೂ ಕಳೆಯುಹತ್ತಿದ್ದರಿಂದ) ನಿಕಾಶ್ರಿತರಾಗಿ ಅನೇಕ ಕಷ್ಟಗಳನ್ನು ಸಹಿಸಿದ ಸಂಗತಿಯನ್ನು ಸಹ ಚನ್ನಾಗಿ ವಿವರಿಸಿರುತ್ತಾಳೆ. ಆದರೆ ಭಾಂಡವಲವೆಂದರೇನು? ಮತ್ತು ಅದರ ಉಪಯೋಗವೆಂದರೇನು? ಇವುಗಳನ್ನು ತಿಳಿಯಲಿಚ್ಛಿಸುವವರು ಆ ಸ್ತ್ರೀಯಳು ಬರೆದ ಪುಸ್ತಕವನ್ನೂ, ಹಾಗೂ ಆನಂತರ ಅವಳಿಂದಲೇ ರಚಿಸಲ್ಪಟ್ಟ ಅರ್ಥಶಾಸ್ತ್ರ ವಿವರಣೆಯುಂಬ ಗ್ರಂಥವನ್ನು ಸಹಾ, ಓದಿಕೊಳ್ಳಬೇಕಾಗಿ ನಾವು ಮನಃಪೂರ್ವಕವಾದ ಪ್ರೀತಿಯಿಂದ ಹೇಳುತ್ತೇವೆ. ಯೂಕದಂರೆ:— ಈ ನಮ್ಮ ಚಿಕ್ಕ ಪುಸ್ತಕದಲ್ಲಿ ಆ ಪುಸ್ತಕದ ವಿಷಯವನ್ನು ಬರೆಯುವದೆಂದರೆ ಬಹು ಕಠಿಣ ಸಂಗತಿಯಾಗಿರುತ್ತದೆ. (ಮುಂದೆ ನಾಗುವದು.)

ಮಹಾರಾಜಶ್ರೀ ಕನ್ನಡ "ಹಿತೋಪದೇಶ" ಕರ್ತರವರ ಸನ್ನಿಧಾನಕ್ಕೆ.

ಶರಣ ಶರಣಾರ್ಥಿ, ವಿನಂತಿ ಬಿನ್ನಹಾ. ಪತ್ರ ಬರೆಯಲಿಕ್ಕೆ ಕಾರಣವೇನಂದರೆ:—ತಮ್ಮ ಕರಕಮಲದಲ್ಲಿ ಉದ್ಭವಿಸುವಂಥ ಹಿತೋಪದೇಶವೆಂಬ ಸುಂದರವಾದ ನೂಸಿಕ ಪುಸ್ತಕದ ಗನೇ ಹಾಗೂ, ಅನೇ ಸಂಚಿಕೆಯನ್ನು ಅತಿ ಆದರದಿಂದ ಕಳುಹಿಸಿದ್ದಕ್ಕೆ. ತುಂಬಾ ಕೃತಜ್ಞನಾಗಿರ್ದ್ಹೇನೆ. ಮತ್ತು ಚಂದಾದಾರನಾಗಲಿಕ್ಕೆ ಅತ್ಯಾಲ್ಹಾದದಿಂಗ ಒಡಂಬಡುತ್ತೇನೆ.

ಮತ್ತು ಸದರೀ ಪುಸ್ತಕದೊಳಗಿನ ಬಂಡೊಂದು ಸುವಿಷಯವನ್ನು ಎಷ್ಟು ಓದಿದರೂ, ನನ್ನ ಪ್ರೀತಿಯು ತೀರದು. ಇದರಿಂದ ಮುಂದೆ ಇದಕ್ಕೂ ಹೆಚ್ಚಿಗೆ ಸುವಿಷಯವು ಅದರೊಳಗೆ ಬಗಬಹುದೆಂದು ಕೋರುತ್ತೇನೆ.

ಇಂಥಾ ನೂಸಿಕ ಪುಸ್ತಕವು ಕನ್ನಡಿನಲ್ಲಿ ಇದು ವರೆಗೆ ಹೊರಟಿದ್ದಿಲ್ಲವೆಂದರೂ, ಚಿಂತೆ ಇಲ್ಲಾ. ಮತ್ತು ಪುಸ್ತಕದ ಕ್ರಯವಾದರೂ, ಸ್ವಲ್ಪದರದಲ್ಲಿದ್ದು; ಅದು ಜನರಿಗೆ ಅತಿ ಉಪಯೋಗವುಳ್ಳದ್ದಾದ್ದರಿಂದ, ಯಾವತ್ತೂ ಕನ್ನಡದೇಶ ಬಾಂಧವರು ಅದನ್ನು ಸಂಗ್ರಹಿಸ ತಕ್ಕ ಯತ್ನ ಮಾಡುವದು ಉಚಿತವೆಂದು ನನ್ನ ವಿನಯ ಪೂರ್ವಕ ಪ್ರಾರ್ಥನೆಯುದೆ.

ಇನ್ನು ನುಂದೆ ಹೊರಡುವ ಸಂಚಿಕೆಯಲ್ಲಿ ಬಂಡೊಂದು ಗಣಿತ ವಿಷಯ ಹಾಗೂ ನೀತಿ ಬೋಧಪರವಾದ ವಿಷಯಗಳನ್ನೂ ಅಲ್ಪ ಸ್ವಲ್ಪ ಭೂಗೋಳ.ವಿಷಯಗಳನ್ನೂ ಕೊಡುತ್ತಾ ಬಂದರೆ, ಬಹುಚನ್ನಾದೀತು. ಇಂತಿ ಬಿನ್ನಹ. ಪತ್ರವಿಸ್ತಾರಕ್ಕೆ ಕ್ಷಮೆ ಇರಬೇಕು.

ಬಿಲ್ಲಾ ಬೆಳಗಾಂವ ತಾ। ಚಿಕ್ಕೋಡಿ } ಮಲ್ಲಪ್ಪಾ ವಿರೂಪಾಕ್ಷಪ್ಪಾ ಅವಟಿ
ಎಡೂರ ತಾ. ೧೦-೩-೮೮. } ಕಲ್ಲೋಳಕರ ಅಶಿ. ಸ್ಕೂಲ್ ಮಾಸ್ತರ.

ಫೇಬ್ರುವರಿ ತಾ. ೧೫-೩-೮೮.

" ಹಿತೋಪದೇಶ " ಪತ್ರಿಕಾಕರ್ತರಿಗೆ ! ನೀವು ಮಾದರಿಗೋಸ್ಕರ ಕಳುಹಿಸಿದ ನಿಮ್ಮ ಅಮೂಲ್ಯವಾದ " ಹಿತೋಪದೇಶ " ವೆಂಬ ಮಾಸಿಕ ಪುಸ್ತಕವನ್ನು ಅತಿ ಆದರದಿಂದಲೂ, ಆನಂದದಿಂದಲೂ, ಸ್ವೀಕರಿಸಿದೆನು. ನಮ್ಮ ಕನ್ನಡ ಭಾಷೆಯು ಅತಿ ಹೀನಸ್ಥಿತಿಯಲ್ಲಿದ್ದು, ಇಂಥಾ " ಹಿತೋಪದೇಶಕರ"ವಾದ ಪುಸ್ತಕಗಳು ಬಹು ಅಪರೂಪವಾಗಿರುವದರಿಂದ, ನಿಮ್ಮ ಮೊದಲನೇ ಯತ್ನಕ್ಕೆ ನಿಮ್ಮನ್ನು ಬಹಳವಾಗಿಕೊಂಡಾಡಬೇಕಾಗಿದೆ. ಮುಖ್ಯವಾಗಿ ನಿಮ್ಮ ಚಿತ್ರಗಳು ಕೇವಲ ಆನಂದವನ್ನುಂಟು ಮಾಡುವದಲ್ಲದೆ, ನಿಜಸ್ಥಿತಿಯ ಸಂಗತಿಗಳನ್ನು ಚನ್ನಾಗಿ ಮನಸ್ಸಿಗೆ ಹತ್ತುವ ಹಾಗೆ ತೋರಿಸುತ್ತವೆ. ನೀವು

WORLD NEWS PAPER
MEGARA
Shimoga Dist, Karnataka State INDIA

ಸಮಾಚಾರ

ಮೂಸ ಮೂಸಕ್ಕ ಪ್ರಕಟವಾಗುವಂಥಾದ್ದು

Vol. XXII. SEPTEMBER 1889. No. 3.

ವರ್ಗಣಿಯ ಕ್ರಮ:

	ರೂ.	ಆ.
೧ ಪ್ರತಿಗೆ ಟಪ್ಪಾಲ್ ಹಾಸಲು ಬೀಳದ ಪಕ್ಷದಲ್ಲಿ	೦	೮
೧ ಪ್ರತಿಗೆ ಟಪ್ಪಾಲ್ ಹಾಸಲು ಬೀಳುವ ಪಕ್ಷವಲ್ಲಿ	೦	೧೪
೫ ಪ್ರತಿಗಳಿಗೆ ಒಂದೇ ವಿಳಾಸಕ್ಕೆ ರವಾನೆಯಾಗುವಲ್ಲಿ	೦	೧೨
೧೧ ಪ್ರತಿಗಳಿಗೆ ಒಂದೇ ವಿಳಾಸಕ್ಕೆ ರವಾನೆಯಾಗುವಲ್ಲಿ	೧	೮

	ಪುಟ.
ಅನ್ನದ ಹರಳುಗಳು	೨೨
ಪತ್ರವ್ಯವಹಾರವು	೨೪
ಉಪಕಾರಗಳನ್ನು ನೆನಸುವದರ ಫಲ	೨೬
ಮಹಾ ಧನಸಂಪಾದನೆಗೆ ಒಳ್ಳೇ ಪ್ರವೇಶಾಯ	೪೧
ಅದು ನನಗೆ ಸಂಘಟಿಸಿದ್ದು ಯಾಕೆ?	೪೩
ಹುಚ್ಚನ ಗಂಟು	೪೫
ವೃತ್ತಾಂತಮಂಜರಿ	೪೪

MANGALORE
BASEL MISSION BOOK & TRACT DEPOSITORY
1889

ಕ್ರೈಸ್ತ ಸಭಾ ಪತ್ರವು

ತಿಂಗಳು ತಿಂಗಳಿಗೆ ಪ್ರಕಟವಾಗುವಂಥಾದ್ದಾಗಿ, ಈಗ ೨೧ ವರುಷ ಗತಿಸಿದ್ದಾಗಿರುತ್ತದೆ. ಅದಕ್ಕೆ ಈ ವರೆಗೂ ಮಿತ್ರರಾಗಿದ್ದವರು ಇನ್ನು ಮೇಲೆಯೂ ಅದರ ಪರಿಣಾಮದ ಬಗ್ಗೆ ಮಿತ್ರಭಾವದಿಂದ ನೋಡಿ ಕೈಕೊಡುವವಾಗಲಿ!

ಚಂದಾದಾರರು ವರ್ಗಣಿಯ ಬಾಕಿ ಬಿಳಿಸದೆ, ತಕ್ಕ ಸಮಯಕ್ಕೆ ವರ್ಗಣಿಯ ಹಣವನ್ನು ಸಲ್ಲಿಸುವದು ನ್ಯಾಯವೆಂತ ಮನವರಿಕೆಯಾಗಿರಲಿ.

ಲಿಖಿತಗಳನ್ನು ಕ್ರೈಸ್ತಸಭಾಪತ್ರಕರ್ತರಿಗೆ, ವರ್ಗಣೀ ಹಣವನ್ನೂ ಪತ್ರವು ರವಾನೆಯಾಗುವಂತೆ ಬೇಡುವ ಯಾದಾಸ್ತುಗಳನ್ನೂ ಪುಸ್ತಕ ಖಾನೆಯ ಪಾರುಪತ್ಯದವರಿಗೆ ಮುಟ್ಟಿಸಿ ತಕ್ಕದು. ಅವರ ವಿಳಾಸ: "Rev. M. Th. Walz, Betigeri, Gadag."—ಇನ್ನೊಬ್ಬರದು "Basel Mission Book & Tract Depository, Mangalore."

ಬೆಳಗಾಂವಿನಲ್ಲಿರುವ ಚಂದಾದಾರರೊಬ್ಬರಿಂದಲೂ B. P. ಇವರ ಕೈಯಿಂದಲೂ ಲಿಖಿತವು ಮುಟ್ಟಿಮ್ಮ ಉಪಕಾರವಾಯಿತು.

ಕ್ರೈ. ಸ. ಕ

ಪ್ರಕಟಪತ್ರಿಕೆ.

ಜನನ, ಮರಣ, ವಿವಾಹ ಮುಂತಾದ ಕುಟುಂಬ ಸುಖದುಃಖ ಸಂಭವಗಳೂ, ಪ್ರಸಿದ್ಧವಾಗ ತಕ್ಕ ಇತರ ಪ್ರಸ್ತಾಪಗಳೂ ಇದರಲ್ಲಿ ಛಾಪೆಯಾಗ ಬಹುದು. ಛಾಪಿಸುವ ಖರ್ಚನ್ನು ಪಂಕ್ತಿಗೆ ಅರ್ಧ ಆಣೆಯ ಮೇರೆ ಸಲ್ಲಿಸ ಬೇಕು. ಅಪೂರ್ಣ ಪಂಕ್ತಿಯೂ ಪೂರ್ಣ ಪಂಕ್ತಿ ಎಂದು ಎಣಿಕೆಯಾಗುತ್ತದೆ.

ಮರಣ.

ಮುಲ್ಕಿ, ಕೆದ್ಕಿ.—ನಥನಯೇಲ್ ಕರ್ಕರನವರು ಇವೇ ಅಸೊಸ್ತು ತಿಂಗಳ ತಾರೀಕು ೧೩ನೇ ಮಂಗಳವಾರ ಬೆಳಿಗ್ಯೆ ೯ ಘಂಟೆಗೆ ಅತಿಸಾರವ ಕಾಯಿಲೆಯಿಂದ ದೈವಾಧೀನವಾದರೆಂಬ ದುಃಖಕರವಾರ್ತೆಯ ಅವರ ಬಂಧುಬಾಂಧವರಿಗೂ, ಪರಿಚಿತವುಳ್ಳವರೆಲ್ಲರಿಗೂ ತಿಳಿಯ ಪಡಿಸುವ

ಆ. ಯೆ. ಬಂಗೇರ.

ಪುಸ್ತಕ ೨೨. SEPTEMBER 1889. ಸಂಚಿಕೆ ೩.

ಚಿನ್ನದ ಹರಳುಗಳು.

೧. ಫ್ರಾಂಚ ದೇಶದಲ್ಲಿ ವೊಲ್ತಯಿರ್ ಎಂಬವನು ಬಹಳ ಹೆಸಗೊಂಡವನಾದನು. ಅವನು ವಿದ್ವಾಂಸ ಚೂಡಾಮಣಿ ಅನ್ನಿಸಿಕೊಂಡದಲ್ಲದೆ, ನಾಸ್ತಿಕ ಶಿರೋಮಣಿಯೂ ಆಗಿದ್ದನು. ಕ್ರಿಸ್ತನ ಹನ್ನೆರಡು ಮಂದಿ ಅಪೊಸ್ತಲರು ನೆಟ್ಟಂಥಾ ಕ್ರೈಸ್ತ ಮತಾಭಿಪ್ರಾಯಗಳೆಂಬ ಭ್ರಾಂತಿಲತೆಗಳನ್ನೆಲ್ಲಾ ತಾನು ಒಂದೇ ಕೈಯಿಂದ ಕಿತ್ತುಕೊಂಡು ಬಿಡುತ್ತೇನೆಂದು ಅವನು ಉಬ್ಬುಬ್ಬಿಕೊಂಡು ಹೇಳಿದನು. ತನ್ನ ನಾಸ್ತಿಕ್ಯರಸಮಿಳಿತವಾದ ಕೃತಿಗಳನ್ನು ಥಾಪೆ ಮಾಡಿಸಿ ಪ್ರಸಿದ್ಧ ಪಡಿಸುವದಕ್ಕಾಗಿ ಒಂದು ಮಾಸ ಥಾಪಖಾನೆಯನ್ನು ಸ್ಥಾಪಿಸಿದನು. ಅವನು ಕಾಲಾಧೀನನಾಗಿ ಹೋದನಂತರ ಕ್ರಿಸ್ತ ಭಕ್ತರು ಅವನ ಮುದ್ರಣಯಂತ್ರವನ್ನು ಕೊಂಡುಕೊಂಡು, ಅದರಲ್ಲಿ ಬೈಬಲುಗಳನ್ನೇ ಥಾಪೆ ಮಾಡಿಸುವರಾದರು. "ಆಕಾಶವೂ ಭೂಮಿಯೂ ಗತಿಸಿ (ಅಳಿದು) ಹೋಗುವವು; ಆದರೆ ನನ್ನ ನುಡಿಗಳು ಅಳಿದು ಹೋಗವು" ಎಂಬೀ ಕ್ರಿಸ್ತೋಕ್ತಿಯ ನಿಜಕ್ಕೆ ವೊಲ್ತಯಿರನ ಪೂರ್ವೋತ್ತರಗಳಾದರೂ ಒಂದು ದರ್ಶನವಾಗಿರುತ್ತವೆ.

೨. ಶ್ವೀಜರ್ಲಂದದಲ್ಲಿ ಒಬ್ಬ ಕ್ರೈಸ್ತ ಉಪಾಧ್ಯಾಯನ ಶಾಲೆಗೆ ಕೆಲವು ಮಂದಿ ಯೆಹೂದ್ಯ ಹುಡುಗರೂ ಬರುತ್ತಿದ್ದರು. ಇವರೂ ಕ್ರೈಸ್ತ ಧರ್ಮ ಬೋಧನೆಯ ಪಾಠಕ್ಕೆ ಹಾಜರಿರುತ್ತಿದ್ದರು. ಮೈ ಆ ಶಾಲೆಯಲ್ಲಿ ಯೇಸು ಕ್ರಿಸ್ತನ ಶ್ರಮಚರಿತ್ರವು ವಿವರಣೆಯಾಗುತ್ತಿರುವಾಗ್ಯೆ, ಗೆತ್ಸೇಮನೆಯಲ್ಲಿ ಒಬ್ಬ ದೇವದೂತನು ಬಂದು, ಯೇಸುವನ್ನು ಬಲ ಪಡಿಸಿದ ಮಾತು ಬಂದಲ್ಲಿ ಆ ಉಪಾಧ್ಯಾಯನು ಪ್ರಶ್ನೆ ಹಾಕಿ, "ಬಂದ ದೂತನು ಏನು ಮಾಡಿ, ಅಥವಾ ಕೊಟ್ಟು, ಯೇಸುವನ್ನು ಬಲ ಪಡಿಸಿದ್ದಾನು?" ಎಂದು ಕೇಳಿದ್ದಕ್ಕೆ ಕ್ರೈಸ್ತ ಹುಡುಗರು ಉತ್ತರ ಕೊಡದೆ ಹೋದಾಗ್ಯೆ, ಒಬ್ಬ ಯೆಹೂದ್ಯ ಹುಡುಗಿ ಉತ್ತರ ಕೊಟ್ಟು, "ಯೇಸು ತನ್ನ ಶ್ರಮ ಮರಣಗಳಿಂದ ಕೊಂಡುಕೊಳ್ಳಕ್ಕಿದ್ದ ಮಂದಿಯನ್ನು ದೂತನು ಆತನಿಗೆ ತೋರಿಸಿ, ಆತನನ್ನು ಬಲ ಪಡಿಸಿದ್ದಾನು" ಅಂದಳು. ಉತ್ತರವು ಬಹು ಚಲೋದಾಯಿತಲ್ಲವೇ? ಅದಕ್ಕಿಂತ ಚಲೋದಾದ್ದು ಯಾರಿಗೂ ಗೊತ್ತಿಲ್ಲಕ್ಕಿಲ್ಲಾ.

೩. ತಾಪತ್ರಯಕ್ಕೆ ಗುರಿಯಾಗಿ ದುಃಖಾತ್ಮನಾದವನು ದುಃಖಶಮನವನ್ನು ಹೊಂದಿ, ದಿವ್ಯ ಸಾಧಾನವನ್ನನುಭವಿಸ ತಕ್ಕವನಾಗ ಬೇಕಾದರೆ, ಶಮದಿಂದಲಿರುವದು (ಅಂದರೆ ಸುಮ್ಮನಿರುವದು, ಸುಗುಟ್ಟದೆ ಮೌನವಾಗಿರುವದು) ಅವಶ್ಯಕವಾಗುತ್ತದೆ. ತಾನೂ ದೇವರೂ ಇಷ್ಟೇ ಮಂದಿಯು ಮತ್ತಾರೂ ಮತ್ತೈನೂ ಇಲ್ಲ ಎಂಬುವ ಹಾಗೆ ತನ್ನನ್ನು ಎಣಿಸುವೂ ಸರ್ವ ಪ್ರಭುವೂ ಆಗಿ

ರುವ ದೇವರ ಸನ್ನಿಧಿಯಲ್ಲೂ ಕೈಯಲ್ಲೂ ಇರಿಸಿಕೊಂಡವನ ಮನದಲ್ಲಿ ದೇವರ ನಮೂಧಾನವು ವ್ಯಾಪ್ತವಾಗಿ, ದುಃಖಶಮನವೇ ಆಗುತ್ತದೆ. ಈ ಪ್ರಕಾರವಾಗಿ ನಡೆಯುವಲ್ಲಿ ಮರಣವೇ ಜೀವೋದಯಾಸ್ಪದವು, ಖೇದ ಕ್ಲೇಷ ಶೋಕಾದಿಗಳೇ ಆನಂದ ಕಾರಣವು ಆಗುತ್ತವೆ.

೪. ಮೋಕ್ಷಪದವಿಗೆ ಪರಮ ಭಾಗ್ಯವೆಂತಲೂ ಕೈವಲ್ಯವೆಂತಲೂ ಮಹಿಮೆಯೆಂತಲೂ ಹೆಸರು ಸಲ್ಲುತ್ತದೆ. ಮಹಿಮೆಯಂದರೇನೆಂದು ಊಹೆ ಕಟ್ಟಲಿಕ್ಕಾದರೂ ನಮ್ಮಿಂದ ಕೂಡದು; ಆದರೂ ಉಪಮೆಗಳನ್ನೂ ಸಾದೃಶ್ಯಗಳನ್ನೂ ನೋಡಿ ನಾವು ಮಹಿಮೆಯಂದರೇನೆಂದು ಅಲ್ಪ ಸ್ವಲ್ಪವಾಗಿ ಊಹಿಸಿಕೊಂಡು ತಿಳಿದುಕೊಳ್ಳಲಾಗುತ್ತದೆ. ಬರೇ ಕಸವೆಂತಲೂ ಹುಳ ವಿಷ್ಠಿಸಿ ಬಿಟ್ಟದು ಅಂತಲೂ ಕಾಣಿಸಿಕೊಳ್ಳುವ ಒಂದು ಬೀಜದಿಂದ ಗಿಡವು ಬೆಳದು, ಅತಿ ಸುಂದರವೂ ಸುಗಂಧಯುಕ್ತವೂ ಆಗಿದ್ದು, ಘ್ರಾಣ ನೇತ್ರಗಳಿಗೆ ಬಹು ಆನಂದಕಾರಕವಾಗಿ, ಕೇವಲ ಮನೋರಂಜಕವಾದ ಸುಪುಷ್ಪವು ಹುಟ್ಟುವಂಥಾದ್ದು ಮಹಿಮೆಯಲ್ಲವೇ? ನಮ್ಮ ಐಹಿಕ ಅವಸ್ಥೆಗೆ ಬೀಜವೇ ಸಾದೃಶ್ಯ, ಸ್ವರ್ಗನಿವಾಸದ ಸ್ಥಿತಿಗೆ ಸುಪುಷ್ಪವೇ ಸಾದೃಶ್ಯ. ಆದರೆ ಬೀಜ ಪುಷ್ಪಗಳ ಉಪಮೆಯಾದರೂ ಕೈವಲ್ಯಸಂಪನ್ನರಾದವರ ಪರಿಣಾಮವನ್ನು ಪೂರ್ಣವಾಗಿ ತಿಳಿಯ ಪಡಿಸಲಿಕ್ಕೆ ಆಗದೇ ಸಾಲದ್ದಾಗಿದೆ. ನಾವು ಸ್ವರ್ಗದ ಮಹಿಮೆಯಲ್ಲಿ ಶೇರುವದು ಅಂದರೆ ಶಾಶ್ವತ ಜೀವಪದವಿಯನ್ನೂ ದಿವ್ಯ ತೇಜ ಪ್ರಭೆ ಶ್ರೇಯಸ್ಸುಗಳನ್ನೂ ದೇವರ ಸಾರೂಪ್ಯವನ್ನೂ ಹೊಂದುವದೇ.

೫. ಹೃದಯಶುದ್ಧಿ ಪ್ರಾಪ್ತಿಯು ಬಗೆ ಹ್ಯಾಗೆ?—ಒಬ್ಬ ಫಕೀರನು ಒಮ್ಮೆ ಒಬ್ಬ ಮಿಶ್ಯನೇರಿಗೆ ಗಂಟು ಬಿದ್ದು ಹೇಳಿದ್ದೇನಂದರೆ: "ಕಾಲಿನಿಂದ ಪಾಪ ಮಾಡಿದವನು ಪಾಪಪರಿಹಾರಾರ್ಥವಾಗಿ ಪುಣ್ಯಯಾತ್ರೆಗೆ ಹೋಗಿ ಬರಬೇಕು; ಕೈಯಿಂದ ಪಾಪ ಮಾಡಿದವರು ಕೈನೀಡಿ, ದಾನಧರ್ಮ ಮಾಡಿ, ಪಾಪವನ್ನು ಪರಿಹರಿಸಿಕೊಳ್ಳ ಬೇಕು; ಬಾಯಿಯಿಂದ ಪಾಪ ಮಾಡಿದವನು ಶುದ್ಧೀಕರಣಕ್ಕಾಗಿ ಜಪ ಮಾಡಿ, ದೇವರ ನಾಮೋಚ್ಚಾರಣೆ (ನಾಮಸ್ಮರಣೆ) ಮಾಡ ಬೇಕು." ಆ ಮಿಶ್ಯನೇರಿ ಅವನಿಗೆ—"ಆದರೆ ತನ್ನ ಹೃದಯದಿಂದ ಪಾಪ ಮಾಡಿದವನು ಹೃಚ್ಛುದ್ಧೀಕರಣದ ಬಗ್ಯೆ ಏನು ಮಾಡ ತಕ್ಕದ್ದು?" ಎಂದು ಪ್ರಶ್ನೆ ಹಾಕಿ ಕೇಳಿದ್ದಕ್ಕೆ ಫಕೀರನು "ನನಗೆ ಗೊತ್ತಿಲ್ಲ!" ಅಂದನು. ಸಭಾ ಪತ್ರವಾಚಕರಲ್ಲಿ ಈ ಪ್ರಶ್ನೆಗೆ ಉತ್ತರ ಕೊಡಲಾರದವರು ಯಾರಿಲ್ಲೇನೋ?

ಪತ್ರವ್ಯವಹಾರವು.

ಒಂದೇ ಪಾನಿನಲ್ಲಿ ಛಾಪೆಯಾದ ಪತ್ರಿಕೆಯಲ್ಲಿ "ಉತ್ತರಕ್ಕೆ ಕಾದಿರುವವನೊಬ್ಬ" ಹಾಕಿದ ಪ್ರಶ್ನೆಗೆ ಬೇರೊಬ್ಬರ ಕಡೆಯಿಂದ ಉತ್ತರ ಬಾರದಿರಲಾಗಿ, ನಾನು ಉತ್ತರವಾಗಿ ಬರಕೊಳ್ಳುವದೇನಂದರೆ:

ಪರದಲ್ಲಿ ಮಾತ್ರವೇ ದೇವರು ನ್ಯಾಯವಿಚಾರಣೆ ನಡಿಸಿ, ಕರ್ಮಫಲವನ್ನು ತಿನ್ನಿಸುವಾತನಾಗಿರುತ್ತಾನೆಂಬದಾಗಿ ಯಾರಾದರೂ ಹೇಳಿದರೆ, ತಾನು ಸರ್ವೇಪದಜ್ಞಾನಶೂನ್ಯನೆಂದು ವ್ಯಕ್ತಗೊಳಿಸುವ ಹಾಗೆಯೂ ಬರೇ ಅಲ್ಲದ್ದನ್ನು ಪದರಾಡಿದ ಹಾಗೆಯೂ ಆದೀತು. ದೇವರು ಸಧ್ಯಃಕಾಲವಲ್ಲಾ, ಇನ್ನು ಮುಂದೆ ಪರದಲ್ಲಿ ಮಾತ್ರ ಲೋಕಪರಿಪಾಲನೆ ಮಾಡುವವನು ಅಂತ ಯಾವ ನ್ಯಾಯದಿಂದ ಹೇಳಲಿಕ್ಕೆ ಕೂಡೀತೋ, ಅದೇ ನ್ಯಾಯದಿಂದ ದೇವರು ಪರದಲ್ಲಿ ಮಾತ್ರ ನ್ಯಾಯತೀರಿಸಿ, ಕರ್ಮಫಲದಾಯಕನಾಗುತ್ತಾನೆಂದು ಅನ್ನಲಿಕ್ಕೆ ಬಂದೀತು. ದೇವರಿಂದಲೇ ಮನುಷ್ಯರ ಸಂರಕ್ಷಣೆಯಾಗುತ್ತದೆಂಬದು ಕೋಡಗನ ಕಣ್ಣಿಗೆ ಕಾಣುವದೆ, ಊಟ, ಹಸು, ಮರ, ಭೂಮಿಗಳಿಂದ ನೀರು, ಹಾಲು, ಹಣ್ಣು ಧಾನ್ಯಗಳನ್ನು ದೊರಕಿಸಿಕೊಂಡು, ಮನುಷ್ಯರು ಜೀವಿಸುತ್ತಾರೆಂದು ಕಾಣುವದಷ್ಟೇ. ಹಾಗೆಯೇ ಅನುವಾಸತ್ತುಗಳೂ ಲಾಭನಷ್ಟಗಳೂ ವೃದ್ಧಿ ಹಾನಿಗಳೂ ದೇವರಿಂದಲ್ಲಾ, ಬರೇ ನೈಸರ್ಗಿಕ ಕಾರಣಗಳಿಂದ ಆಗುವಂಥಾದ್ದೆಂದು ಮೂಢಾತ್ಮನಿಗೆ ತೋಚುತ್ತದೆ; ಆದರೆ ವಿವೇಕ ವೈಭವಂತ ಮನುಷ್ಯನು ಈ ಕಾರಣಗಳ ಸೊತ್ತಿಗೆ ತೃಪ್ತನಾಗದೆ, ಈ ಕಾರಣಗಳ ಕಾರಣವನ್ನೂ ವಿಚಾರಿಸಿ ಅರಿತುಕೊಂ

ಡಾನು. ದೇವರು ಭೂಪರಲೋಕಗಳಲ್ಲಿ ಆಳಿ, ನ್ಯಾಯತೀರಿಸಿ, ಕರ್ಮಫಲದಾಯಕನಾಗಿರುತ್ತಾನೆ. ಇಲ್ಲಿ ತೀರದ ನ್ಯಾಯವು ಪರದಲ್ಲಿ ತೀರುವದು; ಇಲ್ಲಿ ಬಂದೊದಗದೆ ಹೋಗುವಷ್ಟು ಕರ್ಮಫಲಾಂಶಗಳು ತಪ್ಪದೆ ಪರದಲ್ಲಿ ಬಂದೊದಗುವವೆಂಬುವದು ನಿಶ್ಚಯವೇ. ಆದರೆ ಇಹದಲ್ಲಿಯೂ ಬಹಳ ಬಹಳ ಕರ್ಮಫಲಪ್ರದಾನವು ಆಗುತ್ತದೆ. ಅದು ಬಹುಶಃ ನಮ್ಮ ಸೊತ್ತು ಸೋಚರಗಳನ್ನು ಮಾರಿ, ಮನವರಿಕೆಯಾಗದೆ ಹೋಗುವದಕ್ಕೆ ಅಜ್ಞಾನವೂ ಅವಿಚಾರವೂ ಕಾರಣವಾಗಿರುತ್ತದಷ್ಟೇ. ದೇವಭಕ್ತರಿಗೆ ಬಹುಶಃ ಎಲ್ಲವು ವಿಪರೀತವಾಗಿ ನಡೆದು ಕೇವಲ ಪ್ರತಿಕೂಲಗಳೇ ಅನುಭವವಾಗುತ್ತಿರುವಾಗ್ಯೆ, ಭಕ್ತಿಹೀನರಿಗೆ ಎಲ್ಲವೂ ಅನುಕೂಲವಾಗಿದ್ದು, ಇಷ್ಟಾನುಸಾರವಾಗಿ ನಡೆದು, ಮನೋರಥಸಿದ್ಧಿಯಾಗುತ್ತಾ ಬರುವ ಹಾಗೆ ಕಾಣುವದುಂಟು ನಿಜ; ಆದರೂ ದೇವಭಕ್ತರ ಹಿತಕ್ಕೆನೇ ಹಾಗೆ ನಡಿಯುತ್ತದೆ. ಹಸಿಕೆಕೆಗಳನ್ನು ತಡೆದು ಹಣ್ಣುಹಂಪಲು ಪರಿಸಕ್ವವಾಗಿ, ಸವಿಯಾಗ ಬೇಕು. ನೊಣಗಳು ಮಧುವಿನಲ್ಲಿ ಬಿದ್ದು, ಮುಳುಗಿ, ಸಾಯುತ್ತವೆ. ಈ ವಿಪರೀತವಾದ ಪ್ರಸಕ್ತಿಯಿಂದ ದೇವಭಕ್ತರು ವಿಷಯವಿರಕ್ತರೂ ಪರೀಕ್ಷಿತರೂ ಆಗುತ್ತ ಬರುತ್ತಿರುವಾಗ, ಪ್ರಪಂಚಾಸಕ್ತರು ಭಕ್ತಿಯ ವಿಚಾರಕ್ಕೆ ವಿಕಲ್ಪಗೊಂಡು, ಭಕ್ತಿಶೂನ್ಯರಾಗಿ, ವಿಷಯಾನುಭೋಗದಿಂದ ಟಗರುಗಳ ಹಾಗೆ ಉಬ್ಬುಬ್ಬಿ, ಕೊಬ್ಬಿ ಕೊಬ್ಬಿ, ಕೊಲೆಯ ದಿನಕ್ಕೆ ಸಿದ್ಧರಾಗುತ್ತಾರೆ. ಇದರ ವಿಷಯವಾಗಿ ಬಹಳ ಬಹಳ ಪ್ರಸ್ತಾಪಗಳನ್ನು ಮಾಡಿ, ಹೆಚ್ಚು ವಿವರಿಸಿ ತಿಳಿಸ ಬಹುದಿತ್ತು; ಆದರೆ ಸದ್ಯೋದದಲ್ಲಿ (ಯೋಸೇಫ, ಯೋಬ, ದಾವೀದ, ನೆಬುಕದ್ನೇಚರ ಮೊದಲಾದವರ ಪೂರ್ವೋತ್ತರಗಳಲ್ಲಿ) ವೃತ್ತಾಂತರೂಪವಾಗಿಯೂ (ಕೀರ್ತನೆ ೫೭. ೭೩ ಮೊದಲಾದ ವೇದೋಕ್ತಿಗಳಲ್ಲಿ) ಉಪದೇಶರೂಪವಾಗಿಯೂ ಯಥೇಷ್ಟವೇ ತಿಳಿಸಿ ಬೋಧಿಸಿಯದೆ. ಹೆಚ್ಚು ತಿಳಿಯಲಪೇಕ್ಷಿಸುವವರು ಈ ಸದ್ಯೋವೃದಿಕ ವೃತ್ತಾಂತಾದಿಗಳನ್ನು ಓದಿ ಪರಾಂಬರಿಸಿಕೊಳ್ಳಲಿ.*

ಕೊನೆಯಲ್ಲಿ ಸದ್ದೇವಭಕ್ತನೊಬ್ಬನ ಗೀತವು ಹೊಳೆಯಲಿ, ಯಾವದಂದರೆ:

ಓ ಕರ್ತ, ವಿಪರೀತ ಮಾರ್ಗದಿಂದ
ಸ್ವಜನರಂ ಪರೀಕ್ಷೆ ಮಾಡುತ್ತೀ!
ತ್ಯಾಗಾದರೂ ಸಂಪೂರ್ಣ ಪ್ರೀತಿಯಿಂದ
ಸ್ವಪ್ರಜೆಯನ್ನು ಕಾಯುತ್ತಿರುವಿ.
ನಿನ್ನನ್ನು ನಂಬುವಂಥಾ ದಾಸಗೆ
ಡೊಂಕಾದ ಮಾರ್ಗ ನೆಟ್ಟಗಹುದು;
ಆರಂಭದಲ್ಲಿ ಕತ್ತಲಿದ್ದರೂ,
ಕಡೇಲಿ ಎಲ್ಲಾ ಬೆಳಕಾಗುತೆ.

ಮನುಷ್ಯ ಬುದ್ಧಿಕಲ್ಪಿತಂಗಳನ್ನು
ಅನೇಕ ಸಾರಿ ಹೀನ ಮಾಡುವಿ.
ನಮ್ಮಿಂದಲಾಗದಂಥಾ ಕೃತ್ಯವನ್ನು
ನೀನೊಂದು ಕ್ಷಣದಲ್ಲಿ ತೀರ್ಚುತ್ತೀ.
ಮಣ್ಣಾದ ನೀಚರನ್ನು ಏಳಿಸಿ,
ಭೂರಾಜರಲ್ಲಿ ಕೂಪ್ರ ಮಾಡಲು,
ಗರ್ವಿಷ್ಠನನ್ನು ಬೇಗ ಹಿಡಿದು,
ಸ್ವಪೀಠದಿಂದ ತಳ್ಳಿ ಬಿಡುತ್ತಿ.

ಕೃ. ಸ. ಕ.

ಕೆಳಗೆ ಬರುವ ಕಾಗದ ಪತ್ರಗಳು ಹದಿನಾರನೇ ಶತಮಾನದ ಅಂತ್ಯದಲ್ಲಿ ಬಿಂದು ಮಾದ್ರಿ ಮತದ ಅಬ್ಬೆ ಅಂದರೆ ಸನ್ಯಾಸಿನಿಗಳ ಮಠದ ಮುಖ್ಯಸ್ಥಳು ಮತ್ತು ಪ್ರಖ್ಯಾತಿ ಪಟ್ಟ ಒಬ್ಬ ಚಿತ್ರಗಾರ, ಈ ಇಬ್ಬರೊಳಗೆ ನಡದವುಗಳಾಗಿವೆ. ಅವುಗಳನ್ನು ನಪೊಲಿಯೊನ್ ರೌನೆಲ್ ಎಂಬವನು ಭಾಷಾಂತರ ಮಾಡಿ, ೧೮೭೧ನೇ ವರುಷದ ಜೂನ್ ತಿಂಗಳಿನಲ್ಲಿ ಪ್ರಕಟಿಸಿದ "ದಿ ಟ್ರೂ ಕಥೋಲಿಕ್" ಎಂಬ ವರ್ತಮಾನ ಪತ್ರದಲ್ಲಿ ಪ್ರಸಿದ್ಧ ಪಡಿಸಿದ್ದಾಯಿತು. *R. Sch.* ಇವರ ಕಡೆಯಿಂದ ಈ ಭಾಷಾಂತರವು ತಯಾರಾಗಿ ಹಸ್ತಗತವಾಯಿತು.

ಸನ್ಯಾಸಿನಿಗಳ ಮಠದ ಅಬ್ಬೆ ಚಿತ್ರಗಾರನಿಗೆ ಬರದದ್ದು.

ಸಂತ ಮರೀಯಳ ಸನ್ಯಾಸಿನಿಗಳ ಮಠ. ೧೫ನೇ ಅಗೊಸ್ತು ೧೫೭೪.

ಸಹೋದರನೇ! ಹೌದು ಸಹೋದರನು ಎಂತಲೇ ನಾನೀಗ ನಿಮಗೆ ಹೇಳ ತಕ್ಕದ್ದು. ನಾನು ಸನ್ಯಾಸಿನಿಗಳ ಮಠದ ಶಿರೋಮಣಿ (ಮುಖ್ಯಸ್ಥಳು) ಆಗಿ ಇಲ್ಲಿರುತ್ತೇನೆ. ಪ್ರಪಂಚವನ್ನು ತ್ಯಾಗ ಮಾಡಿದ್ದಕ್ಕಾಗಿ

---

*"ನೀತಿಸಾರವು" ಎಂಬುವ ನಾಮಯುಕ್ತ ಗ್ರಂಥಮಣಿಯನ್ನೂ ಈ ವಿಷಯದಲ್ಲಿ ಓದಿ ಪರಾಂಬರಿಸಿದರಾತೀತು. ಅದು ಮಂಗಳೂರ ಮಿಶ್ಶನ್ ಪುಸ್ತಕ ಖಾನೆಯಲ್ಲಿ ೬ ಪೈಗೆ ವಣ್ಯವಾಗಿರುತ್ತದೆ. ಅದರ ಬುಡದಲ್ಲೇ ಅನುಭವಮಣಿಗಳಾಗಿರುವ ಗಾದೆಗಳು ಶೋಭಿಸುತ್ತವೆ, ಯಾವವಂದರೆ: ಪಾಪಾತ್ಮನನ್ನು ವರಮಾತ್ಮ ತಿಳಿಯೆನೇ?—ಕಳ್ಳನ ಹೆಂಡತಿ ಎಂದಿದ್ದರೂ ಮುಂಡೆ—ಪಾಪದಲ್ಲಿ ತಾವ ತಪ್ಪದು—ಪಾಪಿ ಳಿಸಿದ್ದು ಪರರ ಪಾಲು—ಪಾಪಿಯನ್ನು ಕೆಡಿಸಿದವರಿಲ್ಲಾ: ನೀತಿವಂತನನ್ನು ಬದುಕಿಸಿದವರಿಲ್ಲಾ—ನೀತಿಯುಳ್ಳವನು ಖ್ಯಾತಿ ಪಟ್ಟಾನು—ನೀತಿವಂತರ ದೀವವು ಆರಿ ಹೋಗದು—ಪಾಪಾತ್ಮರು ಸದ್ಗತರಾಗರು; ನೀತಿವಂತರು ದುರ್ಗತರಾಗರು ಎಂಬುವ ಮಾತು ಈ ಗಾದೆಗಳ ಸಾರಾಂಶವಾಗಿದ್ದು, ಕೇವಲ ಅನುಭವ ಸಿದ್ಧಾಂತವೇ ಆಗಿರುತ್ತದೆ.

ನಾನು ದುಃಖ ಮಾಡುವದಿಲ್ಲ; ಆದರೂ ಇಲ್ಲಿಯ ಮ್ಯುಸೇವಿಕೆಯನ್ನು ಸುಲಭ ರೀತಿಯಿಂದ ಕಳೆಯುವ ಹಾಗೆ ಮುಂಚೆ ನಾನು ಅನುಭೋಗಿಸಿದ ಸುಖ ಸಂತೋಷಗಳಲ್ಲಿ ನಿರ್ದೋಷವಾದ ಕೆಲವು ನನಗೆ ಅವಶ್ಯವೆಂತ ತೋರುತ್ತದೆ. ನನ್ನ ಕೋಣೆಯನ್ನು ಅಲಂಕರಿಸುವದಕ್ಕಾಗಿ ನನ್ನಿಂದಾದಷ್ಟು ಪೇಚಾಡಿದ್ದೇನೆ, ಆದರೆ ಈ ಕೆಲ ಸಕ್ಕೆ ನನಗೆ ಅತ್ಯಗತ್ಯವಾಗಿರುವಂಥಾದ್ದು ನನ್ನ ಮುದ್ದು ಸಂರಕ್ಷಕಳ ಚಿತ್ರವೇ.

ಜೊತೆಗಳಲ್ಲಿ ಉತ್ತಮವಾದವರಲ್ಲಿ ಮೊದಲನೇದು ಪ್ರಾಣ, ಎರಡನೇದು ಒಂದು ಚಿತ್ರ, ಆದರಿಂದ ಒಂದು ಚಿತ್ರಕ್ಕಿಂತ, ವಿಶೇಷವಾಗಿ ನಿಮ್ಮಿಂದ ಬರಿಯಲಿಕ್ಕಾಗುವಂಥ ಒಂದು ಚಿತ್ರಕ್ಕಿಂತ, ಉತ್ತಮ ಜೊತೆಯು ನನಗೆ ಬೇರೊಂದಿಲ್ಲಾ. ಆದರಿಂದ ಅತ್ಯಂತ ಪರಿಶುದ್ಧ ಕನ್ನಿಕೆಯ ಒಂದು ಚಿತ್ರವನ್ನು ನನಗಾಗಿ ಬರಿಯ ಬೇಕೆಂತ ಈಗ ನಿಮಗೆ ತಾಕೀದು ಮಾಡುತ್ತೇನೆ. ಅದು ಆದಷ್ಟು ಆಕೆಯ ನಿಜ ರೂಪವೇ ಆಗ ಬೇಕು. ಅದರ ಕ್ರಯವು ಎಷ್ಟಾದರೂ ಚಿಂತಿಲ್ಲಾ. ನಿಮ್ಮ ಸ್ವಂತ ಮನಸ್ಸಿನಿಂದ ಹುಟ್ಟಿಸಿ ಬರಬಂಧಾದ್ದು ಅಲ್ಲ, ಆಕೆಯ ನಿಜ ರೂಪವೇ ನನಗೆ ಬೇಕೆಂಬದು ನಿಮಗೆ ತಿಳಿದಿರಲಿ.

ನಿಧಾನದಿಂದ ಮಾಡಿರಿ. ಮುಂದೆ ಆ ಕೆಲಸಕ್ಕೆ ನನ್ನಿಂದ ನಿಮಗೆ ಏನೇನು ಬೇಕೋ ಅದನ್ನು ನೀವೇ ಹೇ ಳಿರಿ. ಇಷ್ಟು ವಿಶೇಷವಾದ ಪರಮ ಒಡವೆಯನ್ನು ಘಳಿಸಿಕೊಳ್ಳುವದಕ್ಕಾಗಿ ನಾನು ಯಾವ ಖರ್ಚಿಗಾದರೂ ಸಾಮಾನಕ್ಕಾದರೂ ಹಿಂದೆ ಸರಿಯೆನು. ಯಾಕಂದರೆ ಮರೀಯಳನ್ನು ಈಗ ಪರಲೋಕದಲ್ಲಿ ಇದ್ದಂತೆಯೇ ತೋರಿಸುವ ಒಂದು ಚಿತ್ರವು ನನಗೆ ಇದ್ದದಾದರೆ ನಾನು ಮತ್ತಷ್ಟೂ ಲೌಸಕ್ತಿಯಿಂದ ಆಕೆಗೆ ಪ್ರಾರ್ಥಿಸ ಶಕ್ತ ಳಾದೇನೆಂತ ನನಗೆ ತೋರುತ್ತದೆ.

ಇಷ್ಟರಲ್ಲಿ ತೀರಿಸಿ ನಿಮ್ಮ ಪ್ರತ್ಯುತ್ತರವ ದಾರಿ ನೋಡುತ್ತಿರುವ ದೀನಳೂ, ಈಗಲೇ ನಿಮ್ಮ ಕೆಲಸಕ್ಕಾಗಿ ನಿಮಗೆ ಕೃತಜ್ಞಳೂ ಆಗಿರುವ ನಿಮ್ಮ ತಂಗಿ

ಮರಿಯ, ದೆ. ಸಂತ ರೋಮನ್.

ಚಿತ್ರಗಾರನು ಮಠದ ಅಬ್ಬಿಗೆ ಬರದದ್ದು:

ಎಸ್ಸಂಶನ್ ಕೋಣೆ. ೩೦ನೇ ಸಪ್ಟಂಬರ ೧೫೬೪.

ತಂಗಿ! ನಿನ್ನಂತೆಯೇ ನಾನೂ ಪ್ರಪಂಚವನ್ನು ಬಿಟ್ಟಿರುತ್ತೇನೆ ಎಂಬದು ಈ ಕಾಗದ ಬರಿಯೋಣಾದ ಸ್ಥಳ ದಿಂದಲೇ ನಿನಗೆ ಸೊತ್ತಾಗುವದು; ಆದಾಗ್ಯೂ ಚಿತ್ರ ಬರಿಯುವ ಕಸಬನ್ನು ನಾನು ಬಿಟ್ಟು ಬಿಡಲಿಲ್ಲ.

ಆದರಿಂದ ಮರೀಯಳ ಚಿತ್ರ ಬರದುಕೊಡ ಬೇಕೆಂತ ನೀನು ತಾಕೀತು ಮಾಡಿದ್ದು ನನ್ನ ಏಕಾಂತವಾ ಸದಲ್ಲಿ ನನಗೆ ಬಹಳ ಸಂತೋಷ ಕೊಟ್ಟಿತು. ಹ್ಯಾಗಾದರೂ ಇಂದಿನಿಂದ ನನ್ನ ಕಸಬಿಗೆ ಬಂದು ಬಿಳ್ಳೇ ವಿಷ ಯ ಇರುವದು; ಮತ್ತು ಆ ಚಿತ್ರವು ಬಹು ಕಾಲ ಉಳಿಯುವಂಥಾದ್ದಾಗುವ ಹಾಗೆ ನನ್ನಿಂದಾದಷ್ಟು ಪ್ರಯ ತ್ನ ಮಾಡುವೆನು.

ನನ್ನ ಮನಸ್ಸಿನ ಮೇರೆಗೆ, ನಾನು ಆ ರೂಪವನ್ನು ಕುರಿತು ವಿಶೇಷ ಲಕ್ಷ್ಯ ವಿಡುವೆನು. ಇದನ್ನು ಖಂಡಿತ ವಾಗಿ ಸೊತ್ತು ಮಾಡಿಕೊಳ್ಳುವದಕ್ಕೆ ನಾನು ಕೆಳಗೆ ಬರಿಯುವಂಥಾದ್ದು ಉತ್ತಮ ಉಪಾಯ ಎಂತ ನೆನಸುತ್ತೇನೆ. ಆದರೆ ಈ ವಿಷಯದಲ್ಲಿಯೂ ನಿನ್ನ ಅಭಿಪ್ರಾಯ ಏನೆಂಬದನ್ನು ತಿಳಿಯುವದಕ್ಕೆ ಹಾದಿ ನೋಡುತ್ತಿರುವೆನು.

ಮೊದಲಾಗಿ, ಇಷ್ಟುವರೆಗೆ ಬರದಿರುವ ಯಾವದಾದರು ಒಂದು ಚಿತ್ರದ ನಕಲು ತೆಗೆಯುವದಕ್ಕೆ ನನಗೆ ಮನಸ್ಸಿಲ್ಲ. ಅವುಗಳು ಮರೀಯಳ ಚಿತ್ರವಲ್ಲ, ಚಿತ್ರಗಾರರು ಕಂಡ ಅತ್ಯಂತ ಸುಂದರಿಗಳಾದ ಸ್ತ್ರೀಯರ ಚಿತ್ರಗಳೆಂತ ನಿನಗೆ ಸೊತ್ತೇ ಉಂಟು. ಅಯ್ಯೋ! ಅವುಗಳಲ್ಲಿ ಅನೇಕವು ಪರಿಶುದ್ಧ ಕನ್ನಿಕೆಗೆ ಸ್ವಲ್ಪವಾದರೂ ಸರಿ ಬೀಳುವದಿಲ್ಲ. ಅದಲ್ಲದೆ ಆಕೆ ಸತ್ತು ನೂವಿರ ವರುಷಗಳಾದ ನಂತರ ಬರಿಯೋಣಾದ ತರ ತರವ ದಂತ ಕಥೆಗಳಿಂದಾಗಲೀ ಆಕೆಯ ಅಸಂಖ್ಯ ಜೀವಚರಿತ್ರೆಗಳಿಂದಾಗಲೀ ಆಲೋಚನೆ ತಕ್ಕೊಳ್ಳೆನು, ಹಾಗೆ ಮಾಡದೆ ನಾನು ಮೂಲಬುಗ್ಗೆಯಿಂದ ಅಂದರೆ ಪವಿತ್ರ ಬರಹಗಳಿಂದಲೇ ಮರೀಯಳ ವಿಷಯವಾದ ವಿವರವನ್ನು ತಕ್ಕೊಳ್ಳುವೆನು, ಅವು ಚಿತ್ರ ಬರಿಯುವಾಗ ನನ್ನ ಕೈಯನ್ನು ಸರಿಯಾಗಿ ನಡಿಸುವವು.

ಈ ಕೆಲಸದಲ್ಲಿ ಅವಸರದಿಂದಾಗಲೀ ಅವಿಚಾರದಿಂದಾಗಲೀ ನಾನೇನೂ ಮಾಡೆನು ಎಂತಲೂ ನನ್ನ ಸ್ವಂತ ಕಲ್ಪನೆಯಿಂದ ಆ ಚಿತ್ರವನ್ನು ಬರಿಯಲಿಕ್ಕಿಲ್ಲ ಎಂತಲೂ ಈ ಕೆಲಸದಲ್ಲಿ ನಾನು ಹಲವು ವರುಷ ಕಳಿಯ ಬೇಕಾದರೂ ಚಿಂತಿಲ್ಲ, ಪವಿತ್ರ ಬರಹವನ್ನೇ ಬಹು ಜಾಗ್ರತೆಯಿಂದ ವಿಚಾರ ಮಾಡುವೆನು ಎಂತಲೂ ನಿನಗೆ ಮಾತು ಕೊಡುತ್ತೇನೆ.

ಆದರೆ ಈ ಕೆಲಸಕ್ಕೆ ಸಣ್ಣದೊಂದು ಅಡ್ಡಿ ಉಂಟು. ಅದೇನಂದರೆ: ಬೈಬಲ್ ಪುಸ್ತಕ ನನ್ನ ಕೈಯಲ್ಲಿ ಇಲ್ಲದಿರುವದೇ. ನಮ್ಮ ಮಠದ ಗ್ರಂಥಸಂಗ್ರಹದೊಳಗೆ ಅದರದೊಂದು ಪ್ರತಿ ಶಿಕ್ಕೀತೆಂತ ಹುಡುಕಿದೆ, ಆದರೆ ಅದು ಶಿಕ್ಕಲೇ ಇಲ್ಲ. ನೀನು ನಿಮ್ಮವರಲ್ಲಿ ಹುಡುಕಿದರೆ ಶಿಕ್ಕೀತು ಎಂತಲೂ ಅದನ್ನು ನನಗೆ ಕಳುಹಿಸಿಕೊಡುವಿ ಎಂತಲೂ ನಂಬಿ ಬರಕೊಂಡಿದ್ದೇನೆ.

ಇಂತಿ ದೀನನೂ ನಿನಗೆ ವಿಧೇಯನೂ ಆಗಿರುವ

ಯೋಸೆಫ್, ದೆ. ಸಂತ ಪೆರ್ರೆ.

ಮಠದ ಅಬ್ಬೆ ಚಿತ್ರಗಾರನಿಗೆ ಬರದದ್ದು.

ಸಂತ ಮರೀಯಳ ಸನ್ಯಾಸಿನಿಗಳ ಮಠ. ೧೯ನೇ ದಶಂಬರ ೧೫೭೪.

ಸಹೋದರನೇ! ನೀವು ಮಾಡಿದ ಯೋಚನೆಯನ್ನು ನೋಡಿ ನನಗೆ ಸಂತೋಷವಾಯಿತು. ನಿಮಗೆ ಅಗತ್ಯ ಇದ್ದ ಪುಸ್ತಕವನ್ನು ಹುಡುಕುವದಕ್ಕೆ ನಾನು ಕೂಡಲೇ ತೊಡಗಿದೆನು; ಆದರೆ ಅದು ನಿಮ್ಮಲ್ಲಿ ಹ್ಯಾಗೋ ಹಾಗೆಯೇ ನಮ್ಮ ಮಠದಲ್ಲಿಯೂ ಇರುವದಿಲ್ಲ; ಆದರೆ ಸಂತ ಪೇತ್ರನ ಗ್ರಂಥಸಂಗ್ರಹದೊಳಗಿಂದ ನನಗೆ ಒಂದು ಪ್ರತಿ ದೊರಕಿಸಿಕೊಡ ಬೇಕೆಂತ ರೋಮಪುರಕ್ಕೆ ಕಾಗದ ಬರೆದೆ. ಈ ಉಪಕಾರ ಅವರು ನನಗೆ ಮಾಡಿದರು. ಹೀಗಾಗಿ ಆ ಪವಿತ್ರ ಗ್ರಂಥವನ್ನು ಈ ಕಾಗದದ ಕೂಡಾ ನಿಮಗೆ ಕಳುಹಿಸಿದ್ದೇನೆ.

ಈಗ ಧೈರ್ಯದಿಂದ ಈ ಕೆಲಸ ನಡಿಸಿರಿ; ಮತ್ತು ಮರೀಯಳು ನಿಮ್ಮ ಕೈಯನ್ನು ಈ ಕೆಲಸದಲ್ಲಿ ನಡಿಸಲಿ ಎಂತ ನಾನು ಆಕೆಗೆ ಬೇಡಿಕೊಳ್ಳುವೆನು. ಸ್ವಲ್ಪ ಸಮಯದ ಮೇಲೆ ಆ ಉತ್ತಮ ಚಿತ್ರವನ್ನು ನೀವು ನನಗೆ ಕಳುಹಿಸಿಕೊಡುವಿರಿ ಎಂತಲೂ ನೀವು ಅದನ್ನು ಮಾಡಿ ತೀರಿಸಿದ್ದರಲ್ಲಿ ಎಷ್ಟು ಹಿಗ್ಗಿಕೊಳ್ಳುವಿರೋ ಅಷ್ಟೇ ಉಲ್ಲಾಸ ಅದು ನನ್ನ ಕೈಗೆ ಬರುವದರಿಂದ ನನಗಾದೀತು ಎಂತಲೂ ನಿರೀಕ್ಷಿಸುತ್ತೇನೆ; ಇನ್ನೊಮ್ಮೆ ಹೇಳುತ್ತೇನೆ; ನಿಧಾನದಿಂದ ಈ ಕೆಲಸ ಮಾಡಿರಿ; ಆ ಚಿತ್ರವು ಏನೇನೂ ಕುಂದು ಇಲ್ಲದೆ ಸಂಪೂರ್ಣವಾಗುವ ವರೆಗೆ ಅದನ್ನು ನನಗೆ ಕಳುಹಿಸಿಕೊಡ ಬೇಡಿರಿ.

ಇಂತಿ ದೀನಳೂ ಈಗಲೇ ನಿಮಗೆ ಕೃತಜ್ಞಳೂ ಆಗಿರುವ ನಿಮ್ಮ ತಂಗಿ

ಮರೀಯ, ದೆ. ಸಂತ ರೋಮನ್.

ಹದಿಮೂರು ತಿಂಗಳು ಕಳದನಂತರ ಇವರೊಳಗೆ ಕಾಗದ ಪತ್ರಗಳು ಪುನಹ ನಡಿಯಲಿಕ್ಕೆ ಆರಂಭವಾಯಿತು.

ಚಿತ್ರಗಾರನು ಮಠದ ಅಬ್ಬೆಗೆ ಬರದದ್ದು.

ಎಸ್ಸಂತನ್ ಕೋಟೆ. ೪ನೇ ಜನವರಿ ೧೫೭೬.

ತಂಗೀ! ಈಗ ಆ ಕೆಲಸ ತೀರಿತು. ನಾನು ಈ ಕೆಲಸವನ್ನು ಎಷ್ಟು ನಂಬಿಕೆಯಿಂದಲೂ ಆಸಕ್ತಿಯಿಂದಲೂ ಮಾಡಿದೆನೋ ಅದಕ್ಕಿಂತ ಹೆಚ್ಚು ನಂಬಿಕೆಯಿಂದಲೂ ಆಸಕ್ತಿಯಿಂದಲೂ ಯಾರ್ಯಾರೂ ಒಂದು ಕೆಲಸವನ್ನು ಮಾಡಿರಲಿಕ್ಕಿಲ್ಲ. ಆದರೆ ನಾನು ಹೀಗೆ ಖಂಡಿತವಾಗಿ ಹೇಳಿ ಬಿಡುವದು ಸಾಲದು. ಅದನ್ನು ಸಿದ್ಧ (ರುಜು) ಮಾಡಿಕೊಡುವದು ಅವಶ್ಯ; ಯಾಕಂದರೆ ಪರಲೋಕದಲ್ಲಿರುವ ಮರೀಯಳ ಈಗಿನ ರೂಪವನ್ನು ತೋರಿಸುವದಕ್ಕಾಗಿ ಇಂದಿನ ವರೆಗೆ ಬರಿಯೋಣಾದ ಎಲ್ಲಾ ಚಿತ್ರಗಳಿಗಿಂತಲೂ ಹೆಚ್ಚು ನಿಜವಾದ ಈ ಚಿತ್ರವನ್ನು ಬರಿಯಲಿಕ್ಕೆ ನನಗಿದ್ದ ಆಧಾರವನ್ನು ವಿವರವಾಗಿ ನಿನಗೆ ತಿಳಿಸದೆ ಇದ್ದರೆ ನಿನಗೆ ನಾನು ಕಳುಹಿಸಿದ ಚಿತ್ರವನ್ನು ನೋಡುವಾಗ್ಯೆ ಅದು ಮರೀಯಳ ನಿಜ ರೂಪವೋ ಏನೋ ಎಂಬ ಅನುಮಾನ ನಿನ್ನಲ್ಲಿ ಹುಟ್ಟ ಬಹುದು.

ಯಾರೊಬ್ಬರ ಚಿತ್ರವನ್ನು ಬರಿಯ ಜೇಕಾದರೆ ಅವರ ವಾಯ ತಿಳಕೊಳ್ಳುವದು ಅತಿ ವಿಶೇಷವಾದ ಸಂಗತಿಯಾಗಿದೆ; ಆದರಿಂದ ಬೈಬಲ್ ನನಗೆ ಮುಟ್ಟಿದ ಕೂಡಲೇ ಮರೀಯಳ ವಾಯ ಎಷ್ಟೆಂಬದನ್ನು ಅದರಲ್ಲಿ ವಿಚಾರಿಸಿ ನಿಶ್ಚಯಿಸುವದು ನನ್ನ ಮೊದಲನೇ ಕೆಲಸವಾಯಿತು: ಅದಕ್ಕಾಗಿ ನಾನು ಸಂತ ಲೂಕನ ಸುವಾರ್ತೆಯನ್ನು ತೆರದಾಗ ಅದರ ಮೊದಲನೇ ಪಾನಿನಲ್ಲಿಯೇ ಕಂಡದ್ದೇನಂದರೆ: ಮರೀಯಳಿಗಿಂತ ಆರು ತಿಂಗಳು ಮೊದಲು ಬಸುರಿಯಾದ ಎಲೀಸಬೇತಳು ಆಗ್ಯೆ ದಿನ ಗತಿಸಿದವಳಾಗಿದ್ದಳು. ಹಾಗಾದರೆ ಮರೀಯಳ ಚಿಕ್ಕಪ್ಪ ಅಥವಾ ದೊಡ್ಡಪ್ಪನ ಮಗಳೊ ಚಿಕ್ಕವ್ವ ಅಥವಾ ದೊಡ್ಡವ್ವನ ಮಗಳೋ ಆಗಿದ್ದ ಎಲೀಸಬೇತಳು ಬಹಳ ಮುದಿಕೆಯಾಗಿರುವಾಗ್ಯೆ ಅವಳ ದಾಯಾದಿಯಾದ ಮರೀಯಳು ಬಹಳ ಕಡಿಮೆ ವಾಯದವಳಾಗಿರ ಕೂಡದು

ಎಂತ ಕೂಡಲೇ ನನಗೆ ಅನುಮಾನವಾಯಿತು. ಆದ್ರೆ ಈ ಅನುಮಾನವನ್ನು ನಾನು ಅಷ್ಟು ವಿಶೇಷ ಮಾಡುವದಿಲ್ಲ; ಯಾಕಂದರೆ ಎಲೀಸಬೇತಳೂ ಮರೀಯಳೂ ವಾಯದಲ್ಲಿ ಬಹಳ ತಾರತಮ್ಯ ಇರುವ ಇಬ್ಬರು ಸಹೋದರರ ಅಥವಾ ಸಹೋದರಿಗಳ ಮಕ್ಕಳಾಗಿದ್ದರೂ ಇರ ಬಹುದು. ಹ್ಯಾಗೂ ಗಾಬ್ರಿಯೇಲ್ ದೂತನು ಪರಿಶುದ್ಧ ಕನ್ನಿಕೆಯನ್ನು ಸಂಗರ್ಶಿಸುವದಕ್ಕಿಂತ ಆರು ತಿಂಗಳು ಮೊದಲು ಆ ಮರೀಯಳ ದಾಯಾದಿಯು ಬಹಳ ಮುದಿಕಿಯಾಗಿದ್ದಳು ಎಂತ ಕಂಡೆನು ಅಷ್ಟೇ.

ಮರೀಯಳ ವಾಯ ನಿರ್ಣೈಸುವದರಲ್ಲಿ ನನಗೆ ಸಹಾಯ ಮಾಡಿದಂಥಾ ಎರಡನೇ ಸಂಗತಿ ಯಾವದಂದರೆ: ಆಕೆಯು ಆಶ್ಚರ್ಯ ರೀತಿಯಾಗಿ ಗರ್ಭ ಧರಿಸುವ ಮೊದಲೇ ಆಕೆಯನ್ನು ಮದುವೆಗೆ ನಿಶ್ಚಯ ಮಾಡೋಣಾದದ್ದೇ. ಆಗ ಆಕೆಗೆ ಮದುವೆಯಾಗ ತಕ್ಕ ವಾಯ ಇತ್ತೆಂಬದು ಈ ಸಂಗತಿಯಿಂದ ನನಗೆ ತಿಳಿಯಿತು. ಆಕೆಯ ವಾಯ ನಿರ್ಣಯಿಸುವ ಕೆಲಸವನ್ನು ನಾವು ಇಲ್ಲಿ ತೊಡಗುವದು ಅತ್ಯಗತ್ಯವಾಗಿದೆ. ಯಾಕಂದರೆ ಆಕೆಯು ಎಲೀಸಬೇತಳ ದಾಯಾದಿ ಎಂಬದನ್ನು ಮನಸ್ಸಿನಲ್ಲಿಟ್ಟುಕೊಂಡು, ಆಕೆಗೆ ೨೦ ವರುಷ ವಾಯ ವಿತ್ತೆಂದು ಭಾವಿಸಿದರೆ ನಿಜಕ್ಕೆ ಬಹಳ ತಪ್ಪಿ ಬೀಳುವ ಮಾತಾಗಲಿಕ್ಕಿಲ್ಲ. ಇದನ್ನು ಬುಡವೇ ಎಂತ ಹಿಡುಕೊಂಡು ಆಕೆಯ ವಾಯ ಲೆಖ್ಖ ಮಾಡ ತೊಡಗುವಾ.

ಹಾಗಾದರೆ ಮರೀಯಳಿಗೆ ೨೦ನೇ ವಾಯದಲ್ಲಿ ಮದುವೆಗೆ ನೇಮಕವಾಯಿತು. ಮದುವೆಗೆ ನಿಶ್ಚಯವಾದ ಮೇಲೆ ಆಕೆ ಗರ್ಭಿಣಿ ಎಂತ ಯೋಸೇಫನಿಗೆ ತಿಳಿದು ಬಂತು. ಹಾಗಾದರೆ ಮರೀಯಳು ಮಗನನ್ನು ಹಡದಾಗ್ಗೆ ಅವಳಿಗೆ ಇಪ್ಪತ್ತೋ ಇಪ್ಪತ್ತೊಂದೋ ವರುಷ ವಾಯವಾಗಿದ್ದೀತು. ಅನಂತರ ನಾನು ಸಾಂತ ಲೂಕನ ಎರಡನೇ ಸಂಧಿ ಓದಲಾಗಿ ಯೇಸು ಯೆರೂಸಲೇಮಿನ ದೇವಾಲಯದಲ್ಲಿ ಇದ್ದಾಗ್ಗೆ ೧೨ ವರುಷ ವಾಯದವನಾಗಿದ್ದನೆಂತಲೂ ಆಗ್ಗೆ ಮರೀಯಳು ಇನ್ನೂ ಜೀವದಿಂದ ಇದ್ದಳೆಂತಲೂ ನನಗೆ ತಿಳಿಯಿತು. ಹಾಗಾದರೆ ಆ ಕಾಲದಲ್ಲಿ ಮರೀಯಳಿಗೆ ಮೂವತ್ತೆರಡು ಆಗಲಿ ಮೂವತ್ತು ಮೂರು ಆಗಲಿ ವರುಷ ವಾಯವಿತ್ತೆಂತ ನಿರ್ಣಯಿಸುತ್ತೇನೆ. ಯೇಸುವು ಯೋಹಾನನಿಂದ ಸ್ನಾನ ಹೊಂದಿ ೩೦ ವರುಷದವನಾಗಿ ತನ್ನ ಉದ್ಯೋಗವನ್ನು ಆರಂಭಿಸಿದನೆಂತ ಮೂರನೇ ಸಂಧಿಯಿಂದ ತಿಳುಕೊಂಡೆನು. ಮರೀಯಳು ಆಗ ಇನ್ನೂ ಜೀವದಿಂದ ಇದ್ದಳಲ್ಲ? ಯೇಸುವು ಸತ್ತನಂತರವೂ ಆಕೆಯು ಇನ್ನೂ ಜೀವದಿಂದ ಇದ್ದಳೆಂತ ಮುಂದೆ ನಮಗೆ ಕಂಡು ಬರುತ್ತದೆ. ಹಾಗಾದರೆ ಮರೀಯಳಿಗೆ ಮಗನು ಹುಟ್ಟಿದಾಗ್ಗೆ ಇಪ್ಪತ್ತೋ ಇಪ್ಪತ್ತೊಂದೋ ವರುಷ ವಾಯವಿದ್ದದ್ದಾದರೆ, ಮಗನು ಮೂವತ್ತು ವರುಷದವನಾದಾಗ್ಗೆ ಆಕೆಯು ೫೦ನೇ ವರ್ಷ ವಾಯಕ್ಕೆ ಮುಟ್ಟಿರಬೇಕೆಂಬದುಸ್ಪಷ್ಟವೇ. (ಸಶೇಷ.)

ಅಯ್ಯಾ ವಂದನೆ.

ನನ್ನನ್ನು ಹಗೆ ಮಾಡುವವರಲ್ಲಿ ತಂದೆಗಳ ಅಕ್ರಮವನ್ನು ಮಕ್ಕಳ ಮೇಲೆ ಮೂರನೇ ನಾಲ್ಕನೇ ತಲಾಂತರದ ವರಿಗೂ ವಿಚಾರಿಸುತ್ತೇನೆ ಎಂದು ಭಗವಂತನು ಆದ ಸರ್ವಶಕ್ತಿಯುಳ್ಳ ದೇವರು ಹೇಳುತ್ತಾನೆಂಬದಾಗಿ ಕ್ರೈಸ್ತ ಸುಬೋಧಿಗಳು ಹೀಗೆ ಪ್ರಸಂಗಿಸುತ್ತಾರೆ. ಈಗ ನಾವು ಲೋಕದಲ್ಲಿ ನೋಡುತ್ತಿರಲಾಗಿ ಒಬ್ಬನು ಸರಕಾರದವರ ಆಜ್ಞೆಯನ್ನು ಮೀರಿ ಒಂದು ಖೂನಿ ಕೆಲಸ ನಡಿಸಿದ್ದಾದರೆ ಸರಕಾರದವರು ತಪ್ಪು ಮಾಡಿದವನನ್ನೇ ಹಿಡಿದು ಶಿಕ್ಷೆ ಕೊಡುವರೇ ಹೊರ್ತು ಅವನ ಶಿಕ್ಷೆಯನ್ನು ತಕ್ಕೊಂಡು ಅವನ ಮಗನಿಗೆ ಕೊಡಲಾರರು. ಹಾಗಾದರೆ ಸರ್ವ ಶಕ್ತಿಯುಳ್ಳ ದೇವರು ತಂದೆಗಳ ಅಕ್ರಮವನ್ನು ಮೂರನೇ ನಾಲ್ಕನೇ ತಲಾಂತರದ ವರಿಗೂ ಮಕ್ಕಳ ಮೇಲೆ ವಿಚಾರಿಸುತ್ತೇನೆ ಎಂದು ಹೇಳುವದು ಹ್ಯಾಗೆ? ತಮ್ಮ ಸಭಾಪತ್ರದ ಮುಂಮಾತ್ರ ಉತ್ತರ ಅನುಗ್ರಹಿಸ ಬೇಕು. ಉತ್ತರಕ್ಕೆ ಕಾದಿರುವವನೊಬ್ಬ.

೨೪ನೇ ಜುಲಾಯಿ ೧೯೨೯.

ಉಪಕಾರಗಳನ್ನು ನೆನಸುವದರ ಫಲ.

(೨೬ನೇ ಅಂಕೆ ಪಾನು ೨೭ರಿಂದ ಮುಂದೆ.)

ಮರುದಿನ ಎರಡು ಘಂಟೆಗೆ ಹತ್ತು ಮಂದಿ ಹುಡುಗಿಯರು ಧೊರೆಸಾನಿಯವರ ಮನೆಗೆ ಬಂದರು. ಧೊರೆಸಾನಿಯವರು ಬಹಳ ಸಂತೋಷ ಪಟ್ಟು ಹುಡುಗಿಯರಿಗೆ ಹೇಳಿದ್ದೇನಂದರೆ:

ನಾನು ಸ್ಥಾಪಿಸುವದಕ್ಕಿರುವ ಕೂಟಕ್ಕೆ ಮುಖ್ಯ ೩ ಗುರಿಗಳು ಇರಬೇಕು; ಮೊದಲನೇದು: ಈ ಕೂಟಕ್ಕೆ ಶೇರುವವರೆಲ್ಲರು ಸಾಧ್ಯವಾದಷ್ಟು ಮಿಶನ್ ವರ್ತಮಾನಗಳನ್ನು ಓದ ಬೇಕು; ಎರಡನೇದು: ಈ ಕೂಟಕ್ಕೆ ಶೇರುವವರೆಲ್ಲರು ವಿಗ್ರಹಾರಾಧಕರಿಗೋಸ್ಕರವೂ, ಅವರಿಗೆ ಸುವಾರ್ತೆಯನ್ನು ಸಾರು ವವರಿಗೋಸ್ಕರವೂ, ದಿನಾಲು ಪ್ರಾರ್ಥನೆ ಮಾಡ ಬೇಕು; ಮೂರನೇದು: ಈ ಕೂಟಕ್ಕೆ ಶೇರುವವ ರೆಲ್ಲರು ಹಣವನ್ನು ಸಂಪಾದಿಸಿ, ಮಿಶನ್ ಕೆಲಸಕ್ಕೆ ಕೊಡ ಬೇಕು. ಈ ಮೂರು ಗುರಿಗಳು ನಮ್ಮ ಕೂಟಕ್ಕೆ ಇರಲಿ. ನಮ್ಮ ಕೂಟಕ್ಕೆ ನಾವು ದೇವರ ಉಪಕಾರಗಳನ್ನು ನೆನಸುವ ಕೂಟ ಎಂಬ ಹೆಸ ರಿಡುತ್ತೇವೆ, ಯಾಕಂದರೆ ದೇವರು ನಮಗೆ ಎಷ್ಟು ಸಾರಿ ಒಂದು ವಿಶೇಷ ಉಪಕಾರ ಮಾಡು ತ್ತಾನೋ, ಅಷ್ಟು ಸಾರಿ ನಾವು ಸ್ವಲ್ಪವಾದರೆ ಒಂದು ಪೈ, ಪ್ರತ್ಯೇಕ ಪೆಟ್ಟಿಗೆಯಲ್ಲಿ ಹಾಕ ಬೇಕು. ತಂದೆ ತಾಯಿಗಳು ಸಹ ಆಗಿಂದಾಗ್ಗೆ ಸ್ವಲ್ಪ ಹಣ ಅದರಲ್ಲಿ ಹಾಕಿದರೆ ಚಿಂತಿಲ್ಲ, ಆದರೆ ಮುಖ್ಯ ವಾಗಿ ನಾವು ಸಂಪಾದಿಸಿದ ಹಣವನ್ನು ಆ ಮಿಶನ್ ಪೆಟ್ಟಿಗೆಯಲ್ಲಿ ಹಾಕ ಬೇಕು.

ಕೂಡಿ ಬಂದ ಹುಡುಗಿಯರು ಇದನ್ನೆಲ್ಲ ಕೇಳಿ ಬಹಳ ಸಂತೋಷದಿಂದ ಮನೆಗೆ ಹೋಗಿ, ನಾವು ಹ್ಯಾಗೆ ಸ್ವಲ್ಪ ಹಣ ಸಂಪಾದಿಸ ಬಹುದು ಎಂಬದಾಗಿ ಆಲೋಚನೆ ಮಾಡುತ್ತಿದ್ದರು. ಬಹಳ ಮಂದಿ ಈ ಒಂದೇ ಚಿಂತೆಯಿಂದ ತಮ್ಮ ಕೂಟದ ಉಳಿದ ಎರಡು ಗುರಿಗಳನ್ನು ಮರೆತು ಬಿಟ್ಟರು. ಆದರೆ ಶಾಲೆಯ ಧೊರೆಸಾನಿ ಅವುಗಳನ್ನು ಮರೆತು ಬಿಡದೆ, ಹುಡಿಗಿಯರಿಗೆ ಮಿಶನ್ ವರ್ತಮಾನ ಪತ್ರಗಳನ್ನು ಕಳುಹಿಸಿ, ದಿನಾಲು ಪ್ರಾರ್ಥನೆ ಮಾಡಿದರು.

ಲೀನ ಶಾಲೆಯನ್ನು ಬಿಟ್ಟು ಮನೆಗೆ ಬಂದಾಗ ತಂದೆ ಬೆಂಕಿಯ ಹತ್ತರ ಕೂತುಕೊಂಡು ಛಳಿ ಕಾಸಿಕೊಳ್ಳುತ್ತಿದ್ದರು; ಯಾಕಂದರೆ ಛಳಿಯಲ್ಲಿ ಬಹಳ ನಡೆದು ದಣುವಾಗಿದ್ದರು. ಆದಾಗ್ಯೂ ಶಾಲೆಯ ಧೊರೆಸಾನಿ ಸ್ಥಾಪಿಸಿದ ಕೂಟದ ಎಲ್ಲ ವರ್ತಮಾನ ಲೀನ ಹೇಳಬೇಕಾಯಿತು. ಲೀನ ಎಲ್ಲ ಹೇಳಿದ ಮೇಲೆ ತಂದೆ ಆಕೆಯನ್ನು ಆದರೆ ಹಣ ನಿನಗೆ ಎಲ್ಲಿಂದ ಶಿಕ್ಕುತ್ತದೆ? ಎಂದು ಕೇಳಲು ಹುಡುಗಿ: ನನಗೆ ಬಹಳ ಹಣ ಉಂಟೆಂಬದು ನಿಮಗೆ ಗೊತ್ತಿಲ್ಲವೊ? ಅಂತ ಹೇಳಿದ್ದಕ್ಕೆ ತಂದೆ ಗೊತ್ತದೆ, ಆದರೆ ನಿಜ ಕೂದಲೂ, ಮುಚ್ಚಿ ತೆರೆಯುವ ಕಣ್ಣುಗಳೂ ಇರುವ ಗೊಂಬೆಯನ್ನು ಕೊಂಡುಕೊಳ್ಳ ಲಿಕ್ಕೆ ಆ ಹಣವನ್ನು ಕೂಡಿಸಿದಿಯಲ್ಲ! ಎಂದು ಹೇಳಿದಾಗ ಆ ಗೊಂಬೆ ಮಗಳ ನೆನಪಿಗೆ ಬಂತು. ಏನು ಮಾಡಲಿ, ನನ್ನ ಹಣವನ್ನು ಗೊಂಬೆಗಾಗಿ ಕೊಡ ಬೇಕೋ? ಮಿಶನ್ ಕೆಲಸಕ್ಕೆ ಕೊಡ ಬೇಕೋ? ಅಂತ ಸ್ವಲ್ಪ ಹೊತ್ತು ಆಲೋಚನೆ ಮಾಡಿದ ಮೇಲೆ ತಂದೆಗೆ ಹೇಳಿದ್ದು: ಅಪ್ಪಾ, ಸಾಧಾರಣ ಗೊಂಬೆ ನನಗೆ ಸಾಕು, ನಿಜ ಕೂದಲು ಇಲ್ಲದಿದ್ದರೂ ಚಿಂತಿಲ್ಲ; ಸಾಧಾರಣ ಗೊಂಬೆ ಸಹ ಆಟಕ್ಕೆ ಬರುತ್ತ ದಲ್ಲ! ಸಾಧಾರಣ ಗೊಂಬೆ ಕೊಂಡುಕೊಂಡರೆ, ಮಿಶನ್ ಕೆಲಸಕ್ಕೆ ಹಣ ಉಳಿಯುತ್ತದೆ; ಇದಲ್ಲದೆ ನೀವು ದೇವರ ಒಂದು ಉಪಕಾರ ನೆನಸುವಾಗ ನೀವು ಸಹ ಏನಾದರೂ ನನ್ನ ಮಿಶನ್ ಪೆಟ್ಟಿಗೆಯಲ್ಲಿ ಹಾಕ ಬಹುದು.

ಈ ಮಾತು ತಂದೆಯ ಮನಸ್ಸಿಗೆ ತಾಗಿತು, ಆದರೆ ಮಗಳ ಮುಂದೆ ತನ್ನ ಮನಸ್ಸನ್ನು ಬಿಗಿ ಮಾಡಿ, ಆಕೆಗೆ ನೀನು ಎಂಥ ಯುಕ್ತಿಯುಳ್ಳವಳು, ನಿನ್ನ ಮಿಶನ್ ಪೆಟ್ಟಿಗೆಯಲ್ಲಿ ಹಣ ಹಾಕ ಲಿಕ್ಕೆ ನೀನು ನನಗೆ ಅಪ್ಪಣೆ ಕೊಟ್ಟದರಿಂದ ನಾನು ನಿನ್ನ ದಯ ನೆನಸ ಬೇಕಲ್ಲ! ನಿನ್ನ ಪೆಟ್ಟಿಗೆ ಯನ್ನು ತಕ್ಕೊಂಡು ಬಾ, ಈಗಲೇ ಏನಾದರೂ ಅದರಲ್ಲಿ ಹಾಕುತ್ತೇನೆ ಎಂದ್ಹೇಳಿ ನಕ್ಕರು. ಮಗಳು ಕುಣಿದು ಓಡಿ ಸಣ್ಣ ಪೆಟ್ಟಿಗೆಯನ್ನು ತಕ್ಕೊಂಡು ಬಂದು, ಅಪ್ಪನವರಿಗೆ ತೋರಿಸಿದಾಗ ಅವರು ಒಂದು ಪಾವಲಿ ಅದರಲ್ಲಿ ಹಾಕಿದರು. ಹುಡಿಗಿ ಇದನ್ನು ನೋಡಿ ಬಹಳ ಸಂತೋಷದಿಂದ ಅಪ್ಪಾ, ದೇವರ ಯಾವ ಉಪಕಾರ ನೆನಸಿ ಈ ಪಾವಲಿ ಕೊಟ್ಟಿರಿ? ಎಂದು ಕೇಳಿದ್ದಕ್ಕೆ ತಂದೆ ದೇವರು ನನಗೆ

ಇಂಥ ಒಳ್ಳೆ ಮಗಳನ್ನು ಕೊಟ್ಟದ್ದನ್ನು ನೆನಸಿ ಒಂದ್ಸಾವಲಿ ಕೊಟ್ಟೆನು, ಎಂದು ಹೇಳಿ ಮಗಳನ್ನು ಅಪ್ಪಿಕೊಂಡು ಮುದ್ದಿಟ್ಟರು. ತನ್ನ ಮಗಳನ್ನು ಸಂತೋಷ ಪಡಿಸುವದಕ್ಕೆ ಡಾಕ್ಟರ್ ಸಾಹೇಬರು ಅಂದಿನಿಂದ ಹೆಚ್ಚು ಕಡಿಮೆ ಪ್ರತಿದಿನ ಸ್ವಲ್ಪ ಹಣವನ್ನು ಆಕೆಯ ಮಿಶನ್ ಪೆಟ್ಟಿಗೆಯಲ್ಲಿ ಹಾಕಿದರು. ಸಂತೋಷದಿಂದ ಪ್ರಕಾಶಿಸುವಂಥ ತನ್ನ ಮಗಳ ಮುಖವನ್ನು ನೋಡುವದಕ್ಕಿಂತ ಡಾಕ್ಟರ್ ಸಾಹೇಬರಿಗೆ ದೊಡ್ಡ ಸುಖ ಇದ್ದಿಲ್ಲ.

ಕೆಲವು ದಿವಸಗಳಾದ ಮೇಲೆ ಸಂಜೆ ವೇಳೆಯಲ್ಲಿ ಲೀನ ಮಿಶನ್ ವರ್ತಮಾನಪತ್ರವನ್ನು ಓದುತ್ತಿದ್ದಾಗ ತಂದೆ ಒಳಗೆ ಬಂದರು. ಮುಂಚೆ ಅವರು ಮಿಶನ್ ವರ್ತಮಾನಪತ್ರಗಳನ್ನು ಓದ ಲಿಲ್ಲ, ಆದರೆ ತನ್ನ ಮಗಳನ್ನು ಸಂತೋಷ ಪಡಿಸುವದಕ್ಕೆ ಅವರು ಆಕೆಯನ್ನು ತನ್ನ ತೊಡೆಯ ಮೇಲೆ ಕುಂಡ್ರಿಸಿ ಆ ಮಿಶನ್ ವರ್ತಮಾನಪತ್ರವನ್ನು ಓದಿ ಹೇಳ ಹತ್ತಿದರು. ಆದರಿಂದ ಅವರಿಬ್ಬರಿಗೆ ಸಂತೋಷವಾಯಿತು. ಮತ್ತು ಅಂದಿನಿಂದ ಡಾಕ್ಟರ್ ಸಾಹೇಬರು ತನ್ನ ಮಗಳಿಗೆ ಕ್ರಮವಾಗಿ ಮಿಶನ್ ವರ್ತಮಾನಪತ್ರಗಳನ್ನು ಓದಿ ಹೇಳುತ್ತಾ ಬಂದರು. ಅಷ್ಟರಲ್ಲಿ ಮಗಳ ಮಿಶನ್ ಪೆಟ್ಟಿಗೆ ಹೆಚ್ಚು ಹೆಚ್ಚಾಗಿ ತುಂಬುತ್ತಾ ಬಂತು. ದೇವರ ಉಪಕಾರಗಳನ್ನು ನೆನಸುವದಕ್ಕಲ್ಲ, ತನ್ನ ಮಗ ಳನ್ನು ಸಂತೋಷ ಪಡಿಸುವದಕ್ಕೆ ಡಾಕ್ಟರ್ ಸಾಹೇಬರು ಹಣವನ್ನು ಆಕೆಯ ಪೆಟ್ಟಿಗೆಯಲ್ಲಿ ಹಾಕಿ, ಆಕೆಗೆ ಮಿಶನ್ ವರ್ತಮಾನಪತ್ರಗಳನ್ನು ಓದಿ ಹೇಳುತ್ತಾ ಬಂದರು. ಆದರೆ ಹಣವನ್ನು ಆಕೆಯ ಮಿಶನ್ ಪೆಟ್ಟಿಗೆಯಲ್ಲಿ ಹಾಕಿದಾಗ ಅವರಿಗೆ ಅನೇಕ ಸಾರಿ ಆ ಪತ್ರಗಳಲ್ಲಿ ಓದಿದ ಸಂಗತಿಗಳು ನೆನಪಿಗೆ ಬಂದವು. ಒಂದಾನೊಂದು ದಿವಸ ಒಬ್ಬ ರೋಗಿಯನ್ನು ನೋಡುವದಕ್ಕೆ ಊರಿಗೆ ಹೋದಾಗ ಅವರಿಗೆ ದಾರಿಯಲ್ಲಿ ಒಂದು ಆಲೋಚನೆ ಬಂತು, ಯಾವದಂದರೆ: ತಮ್ಮನ್ನು ಕ್ರೈಸ್ತರನ್ನಿಸಿಕೊಳ್ಳು ವವರು ದೇವರನ್ನು ತಿಳಿಯದಂಥ ವಿಗ್ರಹಾರಾಧಕರಿಗೆ ಸಹಾಯ ಮಾಡ ತಕ್ಕದ್ದು; ಕ್ರೈಸ್ತ ಎಂಬ ಹೆಸರು ನನಗೆ ಸಹ ಉಂಟು, ಆದರೆ ನಾನು ಸತ್ಕ್ರೈಸ್ತನೋ? ಹೀಗೆ ಡಾಕ್ಟರ್ ಸಾಹೇಬರು ದಾರಿ ಯಲ್ಲಿ ಆಲೋಚನೆ ಮಾಡುವವರಾದರು.

ಮುಂದಿನ ಆದಿತ್ಯವಾರದಲ್ಲಿ ಲೀನ ನಿತ್ಯದಂತೆ ಪ್ರಾರ್ಥನೆಗೆ ಹೋಗಲಿಕ್ಕೆ ತನ್ನನ್ನು ತಯಾರು ಮಾಡಿಕೊಂಡಳು. ಡಾಕ್ಟರ್ ಸಾಹೇಬರು ಸಹ ತನ್ನನ್ನು ತಯಾರು ಮಾಡಿಕೊಂಡರು, ಆದರೆ ಅವರು ಅನೇಕ ವರುಷಗಳಿಂದ ಪ್ರಾರ್ಥನೆಗೆ ಬಾರದೆ ಇದ್ದದರಿಂದ ಲೀನ ಏನು ನೆನಸಿದಳು? ಅಪ್ಪನವರು ಒಬ್ಬ ರೋಗಿಯನ್ನು ನೋಡುವದಕ್ಕೆ ಹೋಗುತ್ತಾರೆ. ಆದಕಾರಣ ತಂದೆ ನಾನು ನಿನ್ನ ಸಂಗಡ ಪ್ರಾರ್ಥನೆಗೆ ಹೋದರೆ ಹ್ಯಾಗೆ? ಎಂದು ಕೇಳಿದಾಗ ಹುಡಿಗಿಗೆ ಬಹಳ ಸಂತೋಷವಾಯಿತು. ಇದು ಎಷ್ಟು ಚಲೋದು! ಯಾವಾಗಲೂ ಒಬ್ಬಾಕೆಯಾಗಿ ಪ್ರಾರ್ಥನೆಗೆ ಹೋಗುವದು ಚಲೋದಲ್ಲ, ನೀವು ನನ್ನ ಸಂಗಡ ಬಂದರೆ ನನಗೆ ಬಹಳ ಸಂತೋಷ, ನಮ್ಮ ತಾಯಿ ಇನ್ನು ನಮ್ಮ ಸಂಗಡ ಇದ್ದರೆ ಅವರಿಗೆ ಸಹ ಈಗ ಬಹಳ ಸಂತೋಷ ಆಗುತ್ತಿತ್ತು, ಎಂದು ತಂದೆಗೆ ಹೇಳಿದಳು. ಅವರಿಗೆ ಕಣ್ಣೀರು ಬಂತು, ಮತ್ತು ಮಗಳಿಗೆ ಇಂದಿನಿಂದ ನಾನು ಪ್ರತಿ ಆದಿತ್ಯವಾರ ನಿನ್ನ ಸಂಗಡ ಪ್ರಾರ್ಥ ನೆಗೆ ಹೋಗುತ್ತೇನೆ ಎಂದು ಮಾತು ಕೊಟ್ಟರು.

ಡಾಕ್ಟರ್ ಸಾಹೇಬರು ತನ್ನ ಮಗಳ ಸಂಗಡ ದೇವಾಲಯಕ್ಕೆ ಬಂದಾಗ ಜನರೆಲ್ಲರು ಬಹಳ ಸಂತೋಷ ಪಟ್ಟರು. ಆದರೆ ಎಲ್ಲರಿಗಿಂತ ಲೀನಳಿಗೆನೇ ಹೆಚ್ಚು ಸಂತೋಷವಾಯಿತು. ತಿರಿಗಿ ಮನೆಗೆ ಬಂದಾಗ ಆಕೆ ತಂದೆಗೆ ಈಗ ನಾನು ನನ್ನ ಎಲ್ಲ ಹಣವನ್ನು ಮಿಶನ್ ಪೆಟ್ಟಿಗೆಯಲ್ಲಿ ಹಾಕ ಬೇಕು, ಇಷ್ಟು ಸಂತೋಷ ಈ ಹೊತ್ತು ನನಗಾಯಿತು ಎಂದು ಹೇಳಿದಳು. ತಂದೆ ಅಡ್ಡಿ ಮಾಡ ಲಿಲ್ಲ. ಪೆಟ್ಟಿಗೆ ಪೂರ್ಣವಾಗಿ ತುಂಬಿತು. ಕೆಲವು ದಿವಸಗಳಾದ ಮೇಲೆ ಶಾಲೆಯ ಧೊರೆಸಾ

ನಿಯು ಹುಡಿಗಿಯರಿಗೆ, ನಾಳೆ ನಿಮ್ಮ ನಿಮ್ಮ್ಯಾ[illegible]ಶನ್ ಪಟ್ಟಗಗಳನ್ನು ತಕ್ಕೊಂಡು ಬರ್ರಿ, ಆದರಲ್ಲಿ ಕೂಡಿಸಿದ ಹಣವನ್ನು ಈಗ ಮಿಶನ್ ಕೆಲಸ [illegible]ವವರಿಗೆ ಕಳುಹಿಸ ಬೇಕು ಎಂದು ಹೇಳಿದರು. ಡಾಕ್ತರ್ ಸಾಹೇಬರು ತನ್ನ ಮಗಳ ಸಂಗಡ ಶಾಲೆಯ ಧೊರೆಸಾನಿಯವರ ಮನೆಗೆ ಹೋದರು. ತನ್ನ ಮಗಳ ಪೆಟ್ಟಿಗೆಯನ್ನು ತೆರೆದಾಗ ಅದರಲ್ಲಿ ೨೦ ರೂಪಾಯಿ ಇದ್ದವು. ಇದಕ್ಕೆ ಧೊರೆಸಾನಿಯವರು ಉಳಿದ ಹುಡಿಗಿಯರೂ ಬಹಳ ಆಶ್ಚರ್ಯ ಪಟ್ಟರು. ಆದರೆ ಡಾಕ್ತರ್ ಸಾಹೇಬರು ಅವರಿಗೆ ಎಲ್ಲ ವಿವರಿಸಿ ಹೇಳಿದ್ದೇನಂದರೆ: ನನ್ನ ಪ್ರಿಯ ಮಗಳು ಈ ಮಿಶನ್ ಕೂಟಕ್ಕೆ ಶೇರಿದದರಿಂದ ನನಗೆ ಬಹಳ ಹಿತವಾಯಿತು. ಮೊದಲು ನಾನು ದೇವರನ್ನು ಆತನ ವಾಕ್ಯವನ್ನು ಪ್ರೀತಿ ಮಾಡಲಿಲ್ಲ, ನಾನು ರಕ್ಷಣೆ ಹುಡಕಲಿಲ್ಲ, ಆದರೆ ನನ್ನ ಮಗಳು ದೇವರ ಉಪಕಾರಗಳನ್ನು ನೆನಸುವ ಕೂಟಕ್ಕೆ ಶೇರಿದಂದಿನಿಂದ ನನ್ನ ಮನಸ್ಸು ಬೇರೆಯಾಯಿತು; ಈಗ ನಾನು ದೇವರನ್ನೂ ಆತನ ವಾಕ್ಯವನ್ನೂ ಪ್ರೀತಿ ಮಾಡುತ್ತೇನೆ; ಯೇಸು ಕ್ರಿಸ್ತನಿಂದ ನನಗೆ ರಕ್ಷಣೆ ಉಂಟಾಯಿತು; ದೇವರ ಈ ದೊಡ್ಡ ಉಪಕಾರವನ್ನು ನೆನಸಿ ನಾನು ಸಹ ನಿಮ್ಮ ಕೂಟಕ್ಕೆ ಶೇರುತ್ತೇನೆ. *(D. Berli.)*

ಮಹಾ ಧನಸಂಪಾದನೆಗೆ ಒಳ್ಳೇ ಪ್ರಮೇಯ.

ಅಧಿಕ ಹಣವನ್ನು ಸಂಪಾದಿಸಿಕೊಂಡು, ಧನಲಕ್ಷ್ಮೀವಂತರಾಗಲಿಕ್ಕೆ ರೋಮನ್ ಕಥೋಲಿಕರಿಗೆ ಒಳ್ಳೇ ಸಂದರ್ಭಾನುಕೂಲವಾಯಿತು, ಹ್ಯಾಗಂದರೆ:

ಬಹಳ ಧನಾಢ್ಯನಾದ ಗೃಹಸ್ಥನೊಬ್ಬನು ಸ್ಕೊಟ್ಲಂಡದಲ್ಲಿ ಇಸ್ತಿಹಾರನಾಮಾ ದ್ವಾರವಾಗಿ ಪ್ರಕಟ ಮಾಡಿದ್ದೇನಂದರೆ: ೧. ಕನ್ಯೆ ಮರೀಯಳಿಗೆ ಪ್ರಾರ್ಥನೆ ಮಾಡ ಬೇಕೆಂಬದಕ್ಕೆ; ೨. ರಾತ್ರಿ ಭೋಜನದಲ್ಲಿ ಆಚಾರ್ಯರು (ವೈದಿಕರು) ಮಾತ್ರವೇ ದ್ರಾಕ್ಷಾರಸವನ್ನು ಸೇವಿಸ ತಕ್ಕವರು ಎಂಬದಕ್ಕೆ; ೩. ಪೇತ್ರ ಅಪೊಸ್ತಲನು ವಿವಾಹ ಮಾಡಿ ಕೊಂಡಿದ್ದಿಲ್ಲಾ ಎಂಬದಕ್ಕೆ; ೪. ಆಚಾರ್ಯರು ವಿವಾಹ ಮಾಡಿಕೊಳ್ಳ ಬಾರದು ಎಂಬದಕ್ಕೆ; ೫. ಸತ್ತು ಹೋದವರಿಗೆ ಹಾಗೂ ಸತ್ತು ಹೋದವರಿಗೋಸ್ಕರವಾಗಿ ಪ್ರಾರ್ಥನೆ ಮಾಡ ಬೇಕು ಎಂಬದಕ್ಕೆ; ೬. ದೇವರಿಗೂ ಮನುಷ್ಯರಿಗೂ ಯೇಸು ಕ್ರಿಸ್ತನು ಅಲ್ಲದೆ ಬೇರೆ ಮಂದಿ ಮಧ್ಯಸ್ಥರೂ ಇರುತ್ತಾರೆಂಬದಕ್ಕೆ; ೭. ಪೇತ್ರನು ರೋಮ ಪಟ್ಣದ ಸಭೆಯ ಅಧ್ಯಕ್ಷನಾಗಿದ್ದನೆಂಬದಕ್ಕೆ; ೮. ಕನ್ಯೆ ಮರೀಯಳಿಂದ ಸದ್ಗತಿ ಸಂಪ್ರಾಪ್ತಿಸ ಬಹುದು ಎಂಬದಕ್ಕೆ; ೯. ಪಾಪಸ್ವಾಮಿ ಕ್ರಿಸ್ತನ ಪ್ರತಿನಿಧಿಯೂ ಪೇತ್ರ ಅಪೊಸ್ತಲನ ಉತ್ತರಾಧಿಕಾರಿಯೂ ಎಂಬದಕ್ಕೆ ಸದ್ವೇದೋಕ್ತ ಪ್ರಮಾಣವನ್ನು (ಅಂದರೆ ಬೈಬಲಿನದೊಂದು ವಚನದ ಆಧಾರವನ್ನು ತೋರಿಸಿ) ಕೊಡುವಂಥಾ ರೋಮನ್ ಕಥೋಲಿಕ ಸಭೆಯವನಿಗೆ ಒಂದೊಂದು ಪ್ರಮಾಣಕ್ಕೆ ೯೦,೦೦೦ ಶಿಲ್ಲಿಂಗ್, ಹಾಗಾದರೆ ಒಂಭತ್ತು ಪ್ರಮಾಣಗಳಿಗೆ ಒಟ್ಟಿಗೆ ೮,೧೦,೦೦೦ ಶಿಲ್ಲಿಂಗ್ ಬಹುಮಾನವನ್ನು ಕೊಡುತ್ತೇನೆಂದು ವಚನವನ್ನು ಕೊಟ್ಟಿರುತ್ತಾನೆ.

ಅಂಥಾ ಮಹಾ ಧನಸಂಪಾದನೆಗೆ ರೋಮನ್ ಕಥೋಲಿಕರಿಗೆ ಮಾತ್ರವೇ ಅನುಕೂಲವಿರುವದರಿಂದ ಅವರು ಪ್ರೊಟಿಸ್ಟಾಂಟರಿಗಿಂತ ದೊಡ್ಡ ಅದೃಷ್ಟಶಾಲಿಗಳೆಂತ ನಿರ್ವಾಹವಿಲ್ಲದೆ ಒಡಂಬಟ್ಟು ಆರಿಕೆ ಮಾಡ ಬೇಕಾಗುತ್ತದೆ.

ಆ ಸ್ಕೊಟ್ಲಂಡದವನು ಈ ವಚನವನ್ನು ಇಸ್ತಿಹಾರನಾಮಾ ದ್ವಾರವಾಗಿ ಕೊಟ್ಟದು ಈಗ ಮೂರು ವರುಷವಾಗುತ್ತದೆ; ಆದರೆ ವಾಗ್ದತ್ತವಾದ ಬಹುಮಾನವನ್ನು ಇನ್ನು ಯಾರೂ ಪಡಕೊಳ್ಳಲಿಲ್ಲಾ. ಯಾಕೆ?

ಅದು ನನಗೆ ಸಂಘಟಿಸಿದ್ದು ಯಾಕೆ?

ಜರ್ಮನರಿಗೂ ಫ್ರೆಂಚರಿಗೂ ೧೮೭೦ನೇ ಇಸ್ವಿಯಲ್ಲಿ ಲೋಕಪ್ರಸಿದ್ಧವಾದ ಯುದ್ಧಸಂಬಂಧವು ಉಂಟಾಗಿ ನಡೆದಲ್ಲಿ ಫ್ರೆಂಚರು ಸೋತು ಹೋಗಿ, ಜರ್ಮನರು ಬಹಳ ಜಯಗೊಂಡರಲ್ಲಾ! ಯುದ್ಧ ತೀರಿ, ವಿಲ್ಹೆಲ್ಮ್ ಕೈಸರವರು ರಾಜಧಾನಿಯಾದ ಬೆರ್ಲೀನ್ ಪಟ್ಟಣಕ್ಕೆ ಮರಳಿ ಬಂದನಂತರ ಒಂದಾನೊಂದು ದಿವಸ ಕೆಲವು ಮಂದಿ ರಣವೀರರನ್ನು ಸನ್ಮಾನಾರ್ಥವಾಗಿ ಅರಮನೆಯ ಭೋಜನಕ್ಕೆ ಕರಿಸಿ, ಅವರ ಸಂಗಡ ಒಳ್ಳೇ ದಯಾದಾಕ್ಷಿಣ್ಯದಿಂದ ಸಲ್ಲಾಪಿಸುತ್ತಾ ನಡೆದಿದ್ದ ಯುದ್ಧದ ಪ್ರಸ್ತಾಪವನ್ನೂ ತೆಗೆದಲ್ಲಿ ಆ ಮಂದಿಯಲ್ಲಿ ಅವರ ನಂಬಿಕೆಗೂ ಪ್ರೇಮಕ್ಕೂ ವಿಶೇಷ ಪಾತ್ರರಾಗಿದ್ದ ಸೇನಾಧಿಪರೊಬ್ಬರನ್ನು ಅವರು ಮಾತಾಡಿಸಿ, "ಅಂಥಾ ಮಹತ್ತರವಾದ ಜಯಗಳು ನನಗೆ ಸಂಘಟಿಸಿದ್ದು ಯಾಕೆ? ಕಾರಣ ತಿಳಿಯ ಬೇಕೆಂದಿದ್ದೇನೆ; ಅದು ನಿಮಗೆ ತಿಳಿದಿದ್ದರೆ, ಹೇಳಿರಿ; ಅಷ್ಟು ಮುಪ್ಪಿನಲ್ಲಿ ನನಗೆ ರಾಜಪಟ್ಟವಲ್ಲದೆ ಅಂಥಾ ಜಯಗತಿಯೂ ಸಂಘಟಿಸುವದೆಂತ ನಾನು ಕನಸಿನಲ್ಲಾ್ಯದರೂ ನೆನಸಲಿಲ್ಲಾ" ಎಂದ್ಹೇಳಿ ಪ್ರಶ್ನೇ ಹಾಕಿದ್ದಕ್ಕೆ ಆ ಸೇನಾಧಿಪರು ಆತ್ಯಾದರಗೊಂಡು, "ಸ್ವಾಮಿನಾ! ಆದರ ಕಾರಣ ತಿಳಿಯುವದು ಬಹು ಸುಲಭ"ವೆಂದು ಹೇಳಲಾಗಿ, ವಿಲ್ಹೆಲ್ಮ್ ಕೈಸರವರು "ಅದು ಸುಲಭವೆಂದ್ಹೇಳುತ್ತೀರೋ? ಹ್ಯಾಗೆ? ಅದರ ಕಾರಣ ನಿಮಗೆ ತಿಳಿದಿದ್ದರೆ, ನನಗೆ ಹೇಳ ಬಾರದೇ?" ಅನ್ನಲು, ಸೇನಾಧಿಪರು—"ಸ್ವಾಮಿನಾ! ಒಂದು ಮಾತ್ರವಲ್ಲಾ, ಮೂರು ಕಾರಣ ಹೇಳುತ್ತೇನೆ" ಅನ್ನಲಾಗಿ, ಕೈಸರವರು ಆಶ್ಚರ್ಯ ಭರಿತರಾಗಿ "ನನಗೆ ಒಂದಾದರೂ ತಿಳಿಯುವದು ದುಸ್ತರವಾಗಿರುವಲ್ಲಿ ನಿಮಗೆ ಮೂರು ಗೊತ್ತಿರುವದು ಹ್ಯಾಗೆ? ಹೇಳಿರಿ!" ಎಂದು ಹೇಳಿಕೊಳ್ಳಲಾಗಿ ಸೇನಾಧಿಪರು ಅಂದದು:

ಒಂದನೇದಾಗಿ: ಖಾವಂದರು ಒಳ್ಳೇ ದೇವಭಕ್ತಿವಂತ ಮಾತಾಪಿತೃಗಳ ಕುಮಾರರಾಗಿದ್ದು, ಅವರು ಹೊಂದಿದ್ದ ದೇವಾನುಗ್ರಹಕ್ಕೆ ಬಾಧ್ಯಸ್ಥರಾಗಿರುತ್ತಾರೆ, ಯಾಕಂದರೆ "ತಂದೆಗಳ ಆಶೀರ್ವಾದ ಮಕ್ಕಳಿಗೆ ಮನೆ ಕಟ್ಟಿಸಿಕೊಡುತ್ತದೆ".

ಎರಡನೇದಾಗಿ: ಲಕ್ಷಾಂತರ ಭಕ್ತಿವಂತ ಪ್ರಜೆಗಳು ಖಾವಂದರನ್ನೂ ಖಾವಂದರ ರಾಣುವೆಯವರನ್ನೂ ದೇವರ ಸನ್ನಿಧಿಯಲ್ಲಿ ನೆನಸಿಕೊಂಡು ಪ್ರಾರ್ಥಿಸುತ್ತಾ ವಿಜ್ಞಾಪನೆ ಮಾಡಿ ದೇವರ ಬೆನ್ನಾಸರೆಯನ್ನು ಬೇಡಿಕೊಂಡು ದೊರಕಿಸಿದರು; ಯಾಕಂದರೆ: "ನೀತಿವಂತನ ಪ್ರಾರ್ಥನೆ ಚುರುಕಾಗಿದ್ದು, ಬಹು ಶಕ್ತಿಯುಳ್ಳದಾಗಿದೆ."

ಮೂರನೇದಾಗಿ: ಜಯವು ಭುಜಬಲಪರಾಕ್ರಮಕ್ಕೆ ಒದಗಿದ್ದಿಂತ ಖಾವಂದರು ನಂಬದೆ, ಉಬ್ಬಿಕೊಳ್ಳದೆ, ದೇವರೇ ಜಯಗತಿಯನ್ನು ಅನುಗ್ರಹಿಸಿದನೆಂತ ಅಂತರುಹಿ, ಆತನ ದಯೆಯನ್ನು ನೆನಸಿಕೊಳ್ಳುವವರಾಗಿದ್ದೀರಿ. ಹೀಗಿರಲಾಗಿ "ದೇವರು ಗರ್ವಿಷ್ಠರಿಗೆ ಎದುರಾಳಿ, ದೀನರಿಗೆ ದಯಾಳು" ಎಂಬುವ ವೇದೋಕ್ತಿ ನಿಜವಾಯಿತು.

ಕೈಸರವರು ಈ ಮೂರು ಕಾರಣಗಳ ವಿವರತನ್ನು ಕೇಳಿ, ಬಹಳ ಸಂತುಷ್ಟರಾಗಿ, "ನೀವು ಹೇಳಿದ್ದು ಖರೆ; ನನ್ನ ಮಗನಿಗೂ ಈ ಮಾತು ಶ್ರುತವಾಗ ಬೇಕು" ಎಂದ್ಹೇಳಿ, ಕ್ರೌನ್‌ಪ್ರಿನ್ಸ್ ಫ್ರೀಡ್ರಿಕ್ ಯುವರಾಜರನ್ನು "ಫ್ರಿತ್ಸ್!" ಎಂದು ಕರೆದು, "ಈ ಸಾಹೇಬರು ನನಗೆ ಈಗಲೇ ತಿಳಿಸಿದ ಮಾತು ನಿನಗೂ ಶ್ರುತವಾಗಿ, ತಿಳಿದು ಬರತಕ್ಕದು; ಆದರಿಂದ ನಿನಗೂ ಒಳ್ಳೇ ಉಪಯೋಗವಾಗ ಬಹುದು" ಎಂದ್ಹೇಳಿ, ಜಯಗತಿಯ ಆ ಮೂರು ಕಾರಣಗಳನ್ನು ಮಗನ ಮುಂದೆ ಇನ್ನೊಮ್ಮೆ ಹೇಳಿಸಿದರು.

ಮಹಾ ಜಯಶಾಲಿಯೂ ಸುದೈವಶಾಲಿಯೂ ಅನ್ನಿಸಿಕೊಳ್ಳುತ್ತಿದ್ದ ವಿಲ್ಹೆಲ್ಮ್ ಕೈಸರವರು

ತಮ್ಮ ಸೇನಾಧಿಪರು ಉದಾಹರಣೆ ಹೇಳಿದ ಮೂರು ಸದ್ವೇದವಚನಗಳನ್ನು ನಿಜವೆಂತ ಒಡಂಬಟ್ಟು, ಅವುಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳುವದು ಬಹಳ ಉಪಯುಕ್ತವೆಂದು ಅರಿಕೆ ಮಾಡಿದ ಮೇಲೆ ಕ್ರೈಸ್ತ ಸಭಾಪತ್ರವಾಚಕರೂ ಅವುಗಳನ್ನೂ ಮಿಕ್ಕಾದ ಸದ್ವೇದವಚನಗಳನ್ನೂ ಲಕ್ಷ್ಯಕ್ಕೆ ತಂದು ಕೊಳ್ಳ ಬಾರದೇ?

ಹುಚ್ಚನ ಗಂಟು.

ಕೆಲವು ವರುಷಗಳ ಹಿಂದೆ ಜರ್ಮನ್ ದೇಶದ್ದೊಂದು ಊರಿನಲ್ಲಿ ಒಬ್ಬ ಹುಚ್ಚನಿದ್ದನು. ಮನ ಸ್ಸಿನಲ್ಲಿ ಬಹಳ ಹಳಾಹಳಿಯಾಗಿ, ಭಯಾಕ್ರಾಂತ ಮುಖನಾಗಿ ಅವನು ದಿನಂಪ್ರತಿಯಲ್ಲಿ ಮನೆ ಮನೆಗೆ ತಿರುಗಿ, ತೊಳಲಿ ಬಳಲಿ, ತಿರಿದ ಕೂಳು ತಿಂದು, ದಿನ ಕಳೆಯುತ್ತಿದ್ದನು. ಭಯ ಪೀಡಿತನಾದ ಅವನ ಬಾಡಿದ ಮೊಗವನ್ನು ಒಮ್ಮೆಯಾದರೂ ನೋಡಿದವರಿಗೆ ಎಂದಿಗಾದರೂ ಅವನ ನೆಪ್ಪು ಆರದೆ ಇರುವಂಥಾದ್ದಾಯಿತು. ಮುಖ್ಯವಾಗಿ ಅವನು ಯಾವಾಗಲೂ ಹೊತ್ತುಕೊಂಡಿದ್ದ ಹೊರೆಯನ್ನು ನೋಡಿದವರಿಗೆ ಅವನ ಮೇಲೆ ಬಹಳ ಕರುಣ ಹುಟ್ಟಿ, ನೆಪ್ಪು ಆರದ್ದಾಯಿತು. ಶತತಃ ಅನುತಾಪಗೊಂಡು ಜನರು ಆ ಹೊರೆಯನ್ನು ತಪ್ಪಿಸ ನೋಡಿದ್ದಾದರೂ, ಅವನು ಅದನ್ನು ಬಿಟ್ಟುಕೊಡದೆ, ಹುಚ್ಚು ಕೋಪ ತಾಳಿ, ಕಪಿ ಮುಷ್ಟಿ ಮಾಡಿಕೊಂಡು, ಅದನ್ನು ತಬ್ಬಿಕೊಂಡು ಎದೆಗೆ ಒತ್ತಿಕೊಂಡು, ಬಿಗಿ ಹಿಡಿದುಕೊಂಡು ಹುಚ್ಚೋಟ ಓಡಿ ತಪ್ಪಿಸಿಕೊಳ್ಳುತ್ತಿದ್ದನು. ಅವನು ಅಷ್ಟು ಹುಚ್ಚು ಪ್ರೀತಿ ಮಾಡಿದ ಗಂಟಿನಲ್ಲಿ ಏನೇನೂ ಬಹು ಬೆಲೆಯುಳ್ಳ ಸಾಮಾನು ಇದ್ದಿದ್ದೀತು ಅಂತ ನೆನಸ ಬೇಡಿರಿ! ಆ ಹುಚ್ಚನು ಹೋದ ಹೋದಲ್ಲಿ ಕಂಡ ಕಂಡ ಕಡ್ಡಿ ಕಲ್ಲುಗಳನ್ನೂ, ಒಣ ಮೂಳೆಗಳನ್ನೂ, ಹರಕು ಬಟ್ಟೆಗಳನ್ನೂ, ಹಳೇ ಮೊಜ್ಜೆಗಳನ್ನೂ ಹೆಕ್ಕಿಕೊಂಡು, ದುಪ್ಪಟಿಯಲ್ಲಿ ಹಾಕಿ, ಗಂಟು ಕಟ್ಟಿ, ಹೊತ್ತುಕೊಂಡು ಹೋಗುತ್ತಿದ್ದನು. ಅಂಥಾ ಹೊಲಸಿನ ಗಂಟು ಅವನ ಅರ್ಧಾಂಗಿಯಂತಾಗಿತ್ತು. ರಾತ್ರಿಯಲ್ಲಿ ಮಲಗಿಕೊಂಡಿರುವಾಗಲಾದರೂ ಅದನ್ನು ಬಿಡದೆ ತಬ್ಬಿಕೊಂಡಿರುತ್ತಿದ್ದನು.

ಹಿಮಕಾಲದಲ್ಲಿ ಒಂದಾನೊಂದು ದಿನ ಸಾಯಂಕಾಲಕ್ಕೆ ಆ ಹುಚ್ಚು ಮುದುಕನು ತನ್ನ ಗಂಟನ್ನು ಹೊತ್ತುಕೊಂಡು, ದಾರಿ ತಪ್ಪಿ, ಒಂದು ಜಬ್ಬುಲಲ್ಲಿ (ಕೊಳಚೀನೀರಿನ ಜಾಗದಲ್ಲಿ) ಬಿದ್ದು, ಮೊಣಕಾಲ ಮುಟ್ಟ ಮುಳುಗಿ ಹೋದ್ದಾಯಿತು. ಛಳಿ ಒದ್ದೆಗಳಿಂದ ಪ್ರಾಣಹಾನಿಗೊಳ್ಳುವ ಹಾಗೆ ಆಗಲಾಗಿ, ಒಂದು ದೀಪವನ್ನು ಕಂಡು, ಭಗೀರಥಯತ್ನ ಮಾಡಿ ಮುಂದಡಿಯಿಟ್ಟು ಆ ಜಬ್ಬುಲಿಂದ ಹೊರಟನು. ಆ ದೀಪವನ್ನು ಗುರಿ ನೋಡಿ ಸ್ವಲ್ಪ ಹೊತ್ತು ನಡೆದು, ಆ ದೀಪವಿದ್ದ ಮನೆಯ ಬಾಗಲಾಗೆ ಬಂದು ತಟ್ಟಿದನು. ಮನೆಯವರು ಬಾಗಲನ್ನು ತೆರೆದು, ಯಾರೆಂದು ನೋಡಲಾಗಿ, ಆ ಹುಚ್ಚನು ಬಂದದನ್ನು ಕಂಡರು. ಅವನು ಛಳಿ ಒದ್ದೆಗಳಿಂದಲೂ ಹೊತ್ತ ಹೊರೆಯು ದೆಶೆಯಿಂದಲೂ ಬಹು ವಿರೂಪವಾಗಿ ಕಾಣಿಸಿಕೊಂಡದಕ್ಕೆ ಅಂಜಿಕೊಂಡರು; ಆದರೆ ಬೇಗನೇ ಅವರಿಗೆ ಅಂಜಿಕೆ ಹೋಗಿ ಅವನ ಮೇಲೆ ಕನಿಕರ ಹುಟ್ಟಲಾಗಿ, ಕನಿಕರಪೂರ್ವಕವಾಗಿ ಬಾ! ಒಳಗೆ ಬಾ! ಎಂದು ಕರೆದು ಅವನನ್ನು ಶೇರಿಸಿಕೊಳ್ಳ ನೋಡಿದರು. ಅವನೂ ಬಾಗಲಲ್ಲಿ ಶೇರ ಮನಸ್ಸಾದನು; ಆದರೆ ಬಾಗಲು ಸಣ್ಣದಾದ್ದರಿಂದ ಹೆಗಲ ಮೇಲಿನ ಹೊರೆಯ ಕಾರಣದಿಂದ ಶೇರಲಿಕ್ಕೆ ಕೂಡದೆ ಹೋಯಿತು. ಗಂಟು ಸಹಿತವಾಗಿ ಒಳಗೆ ನುಗ್ಗಿಕೊಳ್ಳಲಿಕ್ಕೆ ಅವನು ಶತಪ್ರಯತ್ನ ಮಾಡಿ, ಬಗೆ ಬಗೆಯಾಗಿ ಗಂಟನ್ನು ತೂರಿಸ ನೋಡಿದರೂ, ಕೂಡದೆ ಹೋಗಲಾಗಿ, ಮನೆಯವರು ಗಂಟನ್ನಿಳಿಸಿ ಬಿಟ್ಟು ಒಳಬಾ! ಅಂತ ಎಷ್ಟೋ ವಿಧವಾಗಿಯೂ ಪ್ರೀತಿಯಿಂದಲೂ ಹೇಳಿದರೂ, ಹುಚ್ಚನು ಕೇಳದೆ, ಮತ್ತೂ ಮತ್ತೂ ಗಂಟು ಸಹಿತವಾಗಿ ಒಳನುಗ್ಗಿಕೊಳ್ಳಲಿಕ್ಕೆ ಸೇಚಾಡುವವನಾದನು. ಏನೂ

"The Patna Case" ಎಂಬುವ ಹೆಸರಿಂದ ಲೋಕಪ್ರಸಿದ್ಧವಾದ **ಲಕ್ಷ್ಮಿಯ ಮೊಕದ್ದಮೆ** ಪರಿಣಮಿಸುವ ಸಂಭವವು ಇತ್ತಲಾಗೆ ನಡೆಯಿತು. ಅದರ ಪೂರ್ವಾಪರ ಇನ್ನು ಮುಂದೆ ತಿಳಿಸೋಣವಾಗುವದು. "ಯೆ ಹೋವ ನಾಳು ತ್ತಾನೆ ಭೂಪರಲೋಕದಿ" ಎಂಬ ಮಾತಿಗೆ ಈ ಮೊಕದ್ದಮೆಯಿಂದಲೂ ನಿದರ್ಶನವಾಗುವದಕ್ಕೆ ಸಂದೇಹವಿಲ್ಲಾ.

ಬಂಗಾಳ ಅಧಿಪತ್ಯಕ್ಕೆ ಶೇರಿದ **ಒಡ್ರದೇಶದ** ಪಶ್ಚಿಮ ದಿಕ್ಕಿನಲ್ಲಿಯ ಗುಡ್ಡ ಬೆಟ್ಟಗಳಲ್ಲಿ ಕೋಲರೆಂಬ ಮಲೆಯವರು ವಾಸವಾಗಿರುತ್ತಾರೆ. ಇವ ರೊಳಗೆ ಒಂದು ಜರ್ಮನ್ ಮಿಶ್ಯನ್ ನೆಲೆಯಾಗಿ, ಕ್ರಿ.ಶ.೧೮೩೦ ಜನರನ್ನು ಪಾಮರತನದ ಪಾಮ ಮಾರ್ಗಕ್ಕೆ ತಪ್ಪಿಸಿ, ಕ್ರೈಸ್ತ ಧರ್ಮದ ಸನ್ಮಾರ್ಗಕ್ಕೆ ತಂದು ಶೇರಿಸಿದ್ದಾಗಿದೆ. ನೊಟ್ಟ್ರೊಟ್ಟ್ ಎಂಬ ಮಿಶ್ಯನೇರಿಯ ರಿಪೋರ್ಟಿನಲ್ಲಿ ಪ್ರಸಿದ್ಧವಾದ ವೃತ್ತಾಂತ ಒಂದು ಬಹು ಆಶ್ಚರ್ಯದ್ದಾಗಿ, ಪಠನಾರ್ಹವಾಗಿರುತ್ತದೆ, ಏನಂದರೆ: ಅವರ ಸಭೆಗೆ ಶೇರಿದ ೨ ಜನ ಹೆಣ್ಣು ಮಕ್ಕಳು ಒಂದು ಮಲೆಯಲ್ಲಿರುವ ಹೊಲದ ಕೆಲಸಕ್ಕೆ ಹೋಗಿದ್ದಾಗ್ಯೆ, ಹೊಲವನ್ನು ಕಾಯುವದಕ್ಕೆ ಬಂಬುಗಳ ಮೇಲೆ ಕಟ್ಟಿದ ಅಟ್ಟವನ್ನು ಒಬ್ಬಳು ಹತ್ತಿಕೊಂಡು, ಎರಡನೇಯವಳು ಇನ್ನು ಅದರ ಬಳಿಯಲ್ಲಿ ಕೆಲಸ ಮಾಡುತ್ತಿರುವಾಗಲೇ ಒಂದು ಹುಲಿ ಬಂದು, ಈಕೆಯನ್ನು ಹಿಡಿದುಕೊಳ್ಳುವಂಥಾದಾಯಿತು. ತತ್ಕ್ಷಣವೇ ಅಟ್ಟವನ್ನೇರಿದ್ದಾಕೆ ಕೆಳಗೆ ಹಾರಿ, ಅಡಿಯಲ್ಲಿ ಬಿದ್ದಿದ್ದ ಒಂದು ಬದಿಗೆಯನ್ನು ಎತ್ತಿಕೊಂಡು, ಹುಲಿಯ ತಲೆಗೆ ಬಡಿದಳು. ಬಡಿತವು ನೆತ್ತಿಗೆ ಚನ್ನಾಗಿ ತಗಲಿದ್ದರಿಂದ ಹುಲಿ ನೆತ್ತಿ ಒಡದು ಸತ್ತು ಹೋಯಿತು. ಹುಲಿಯನ್ನು ಕೊಂದಾಕೆಯ ಧೈರ್ಯವು ದೊಡ್ಡದೋ? ಭುಜಬಲ ಪರಾಕ್ರಮವು ದೊಡ್ಡದೋ? ಎರಡು ದೊಡ್ಡದಾಗಿ, ಕೀರ್ತಿಗೆ ಯೋಗ್ಯವಾಗಿರುತ್ತವೆ. ಆದರೆ ದೇವಾನುಗ್ರಹವು ಆಕೆಯ ಕಾಯುಬಲಕ್ಕಿಂತಲೂ ಧೈರ್ಯಕ್ಕಿಂತಲೂ ದೊಡ್ಡದಾಯಿತು. ಅದರಿಂದಲೇ ಇಬ್ಬರು ಬದುಕಿದ್ದಾಯಿತು. ಈ ದೇವಾನುಗ್ರಹವು ಕೀರ್ತಿ ಹೊಂದ ತಕ್ಕದಾಗಿದೆ.

ಕಳೆದ ೨೦ ವರುಷಗಳೊಳಗೆ **ಹಿಂದೂಸ್ಥಾನದ ಸರಕಾರಿ ಸೈನ್ಯಕ್ಕಾಗಿ** ೫೦೫ ಕೋಟಿ ರೂಪಾಯಿ ಖರ್ಚು ವೆಚ್ಚವಾಯಿತು. ಯುದ್ಧ ಸಂಬಂಧವಾಗಿ ಇನ್ನು ಬೇರೆ ಅತಿರಿಕ್ತ ದ್ರವ್ಯವು ವ್ಯಯವಾಯಿತು. ಅಷ್ಟು ಮಹಾ ದ್ರವ್ಯವು ರಸ್ತೆ, ಕೆರೆ, ಕಾಲಿವೆ, ಆಸ್ಪತ್ರೆ ಮುಂತಾದ್ದನ್ನು ಕಟ್ಟಿಸುವ ಬಗ್ಗೆ ಖರ್ಚು ಮಾಡಿದ್ದಾದರೆ, ಎಷ್ಟೋ ಲೋಕೋಪಕಾರ ಕಾರ್ಯಗಳು ನಾರ್ಥಕವಾಗಬಹುದಿತ್ತು.

ಹಿಂದೂ ಜನರಲ್ಲಿ ಯಾರಾದರೂ ಕ್ರೈಸ್ತ ಮತವನ್ನು ಶೇರುವದು ಹಿಂದೂ ಮತಸ್ಥರಿಗೆ ಬಹಳ ಅಸಹ್ಯವಾಗಿರುವದರಿಂದ ಮಿಶ್ಯನೇರಿಗಳು ಇನ್ನು ಪೇಟೆ ಬೀದಿಗಳಲ್ಲಿ ಕ್ರೈಸ್ತಶಾಸ್ತ್ರವನ್ನು ಸಾರಿ ಹೇಳದೆ, ಶಾಲೆಗಳನ್ನು ಸ್ಥಾಪಿಸಿ, ಜನರಿಗೆ ವಿದ್ಯಾಭ್ಯಾಸ ಮಾತ್ರವೇ ಮಾಡಿಸುತ್ತಾ ಬರುವ ವರಾದರೆ ಮಹೋಪಕಾರಿಗಳು ಆದಾರು ಎಂಬುವ ಮಾತು ನೇಟೀವ ಪತ್ರಿಕೆಗಳಲ್ಲಿ ಆಗಿಂದಾಗ್ಯೆ ಶ್ರುತವಾಗುತ್ತದೆ. ಹಾಗಾದರೆ ಹಿಂದೂ ಜನರು ಪಾದ್ರಿಗಳ ಶಾಲೆಗಳಿಗೆ ಹೆದರದೆ, ಅವರ ಪ್ರಸಂಗಕ್ಕೆ ಹೆದರುತ್ತಾರೆಂದು ವಿದಿತವಾಗುತ್ತದೆ.

೨೦೦ ವರುಷಗಳ ಹಿಂದೆ **ಫಾರ್ಮೋಸವೆಂ**ಬ ದ್ವೀಪದಲ್ಲಿ ಮಿಶ್ಯನೇರಿಗಳು ಇದ್ದು, ಸುವಾರ್ತೆಗಳನ್ನು ಆ ದ್ವೀಪಸ್ಥರ ಭಾಷೆಯಲ್ಲಿ ತಯಾರು ಮಾಡಲ್ಪತ್ತಿ, ಹಿಂಸೆಗೆ ಗುರಿಯಾಗಿ, ಓಡಿ ಹೋಗ ಬೇಕಾಯಿತು. ಅವರ ಅಂದಿನ ಭಾಷಾಂತರವು ಇತ್ತಲಾಗೆ ಛಾಪೆಯಾಗಿ ಆ ದ್ವೀಪದಲ್ಲಿ ಪ್ರಸಿದ್ಧವಾಗಲಾರಂಭವಾಯಿತು.

ತಂಬಾಕು (ಹೊಗೇಸೊಪ್ಪು) ತೇದುವದರಿಂದ ವಿಶೇಷವಾಗಿ ತರುಣರ ದೇಹಕ್ಲೇಶಕ್ಕೆ ನಾನಾ ಬಗೆಯಾಗಿ ಕುಂದು ಹತ್ತಿ ಕೇಡು ಬಂದು ಒದಗುತ್ತದೆಂತ ಹೆಚ್ಚಿಚ್ಚು ಜನ ವೈದ್ಯರು ಅರಿತರುಹುತ್ತಾ ಬರುತ್ತಾರೆ.

ಘಾಜೀಪುರದಲ್ಲಿ H. Lorbeer ಎಂಬ ಜರ್ಮನ್ ಮಿಶ್ಯನೇರಿಗಳು ಇರುತ್ತಾರೆ. ಇವರು ಹಾವುಗಳ ವಿಷವನ್ನು, ನಾಗರ ಹಾವಿನ ದನ್ನಾದರೂ, ಪ್ರತಿಕೂಲಿಸಿ ಪರಿಹಾರ ಮಾಡಿ ಬಿಡುವಂಥಾ ಔಷಧವನ್ನು (ಧೃತಿಯನ್ನು)

ಶೋಧಿಸಿ ತೆಗೆದು ಇದ್ದಾರಂತೆ. ಅಂಥಾ ಹರುವಿ
ಮೊದಲು ಶಿಕ್ಕಿದ್ದಿಲ್ಲಾ; ಇವರಿಂದ
ವಾದರೆ, ದೊಡ್ಡ ಲೋ
ದ ಹಾಗಾದೀತು.

ಇದಲ್ಲಿ ಕ್ರೈಸ್ತರ ದೇವಾಲಯ
ದ ಮೇಲ್ಛಾವಣಿ (ಮಾಳಿಗೆ) ಗೆಜ್ಜಲು ಹುಳಿಗಳ
(ಗೆದ್ದಲೆಗಳ) ಪರಾಕ್ರಮದಿಂದ ಮುರಿದು, ಬಹು
ಸಪ್ಪಳದೊಡನೆ ಕೆಳಗೆ ಬಿತ್ತು. ಈ ಅಪಾಯವು
ಸಂಭವಿಸುವದಕ್ಕಿಂತ ಸ್ವಲ್ಪ ಹೊತ್ತು ಮುಂಚೆ
ಅಲ್ಲಿ ವಾಸವಾಗಿದ್ದ ಪಾದ್ರಿ ಸಾಹೇಬರು ಹೊರ
ಗೆ ಹೋಗಿ, ದೈವವಶಾತ್ತು ತಪ್ಪಿಸಿಕೊಂಡರು.

ಚೀನ ದೇಶದಲ್ಲಿ ಕ್ಷಾಮವು ಬಹಳ ಅತಿರಿ
ಕ್ತವಾದ ಪ್ರದೇಶಗಳಲ್ಲಿ ನರಮಾಂಸಭಕ್ಷಣೆ
ಬಹು ವಾಡಿಕೆಯಾಗುತ್ತದಂತೆ.

ಜಪಾನ ದೇಶದಲ್ಲಿ ರಾಕ್ಷಸಾಕೃತಿಯುಳ್ಳ
ತರುಣಿಯೊಬ್ಬಳು ಇರುತ್ತಾಳೆ. ಆಕೆಯ ವಯ್ರಿ
ಯವು ೧೫ ವರುಷ ಮಾತ್ರವಾದರೂ, ಆಕೆಯ
ಉದ್ದವು ೪ ಅಡಿಗಳು, ಆಕೆಯ ತೂಕವು ೫೦೦
ರಾತಲು ಆಗಿರುವದು. **ರುಷ್ಯದಲ್ಲಿಯೂ** ಅಂ
ಥಾ ತರಳೆಯಿರುತ್ತಾಳಂತೆ. ಈಕೆಯ ವಯ್ರಿಯ
ವು ೧೫ ವರುಷ, ಉದ್ದವು ೬ ಅಡಿಗಿಂತ ಹೆಚ್ಚು.
ತೂಕವು ೨೫೦ ರಾತಲು ಅಂತ ವರ್ತಮಾನ
ಪತ್ರಗಳಿಂದ ತಿಳಿದು ಬರುತ್ತದೆ.

ಚೀನ ದೇಶದಲ್ಲಿ ಬೈಬಲ್ ವಿಕ್ರಯಿ ಆದಂ
ಥಾ ವಿ. ಮರ್ಕೇ ಎಂಬ ಸ್ಕೊತರು ಕುರುಡರೇ
ತಡವ್ಯಾಡಿ ಓದಿ ಕೊಳ್ಳಲಿಕ್ಕೆ ಬರುವ ಬರಹದ
ಯುಕ್ತಿಯನ್ನು ತೆಗೆದದರಿಂದ ಕುರುಡ ಚೀನಿಯ
ವರು ಈಗ ಸ್ವಭಾಷೆಯಲ್ಲಿ ಬೈಬಲನ್ನು ಓದಿ
ಕೊಳ್ಳಲಿಕ್ಕೆ ಅನುಕೂಲ ಹೊಂದಿರುತ್ತಾರೆ. ೫೧೬
ಭಾಷೆಗಳಲ್ಲಿ ಪ್ರಸಿದ್ಧವಾಗಿ, ಕುರುಡರಿಗಾದರೂ
ಓದಿಕೊಳ್ಳಲಿಕ್ಕೆ ಬರುವ ಬೈಬಲಿಗೆ ಈಡಾಗುವ
ಶಾಸ್ತ್ರಗಳು ಎಲ್ಲಿ? ಯಾವವು?

ಪರೀಸು ಪಟ್ಟಣದಲ್ಲಿಯ ಸರ್ವಪದಾರ್ಥ ಪ್ರದ
ರ್ಶನದ ಸಂಬಂಧದಲ್ಲಿ ಬೈಡಿಲಾವೆಂಬ ನಾಸ್ತಿಕನ
ಸಹೋದರನು ನಾಸ್ತಿಕ್ಯವನ್ನು ಖಂಡಿಸಿ ಥೇದಿ
ಸುವ ಪಹಿಗಳನ್ನು ಪ್ರಸರಣ ಮಾಡುತ್ತಿದ್ದಾನೆ.

ಬಂಗಾಳಕ್ಕೆ ಶೇರಿದ **ಮಂತಿಗಂಜಿಯಲ್ಲಿ**
ಮೊನ್ನೆ ಅತಿ ಭಯೋತ್ಪಾದಕವಾದ ತುಫಾನು
ಎದ್ದು, ೫,೪೯೨ ಮನೆಗಳನ್ನು ಹಾರಿಸಿ ಬಿಟ್ಟಿತಂತೆ
ನಿದ್ರೆ ತಕ್ಕಂತೆ ಬಾರದ ಜನರು ಬಿಸಿ ನೀರು
ಕುಡಿಯುತ್ತಾ ಬರುವದರಿಂದ ಬಹಳ ಉಪಕಾರ
ಹೊಂದುತ್ತಾರಂತೆ. ಕೆಲವು ತಿಂಗಳು ಕ್ರಮವಾಗಿ
ಬಿಸಿ ನೀರು ಕುಡಿಯುವವರ ನಿದ್ದೆ ತಕ್ಕಮ್ಟು ಪಾ
ಟು ಆಗುವದಂತೆ.

ಗತ ವರುಷದಲ್ಲಿ ೪೪೬ ಮೈಲು ಹೊಸ ರೇ
ಲ್ವೇಕಟ್ಟಿ ಸೋಣಾಗಿ, ಹಿಂದೂಸ್ಥಾನದಲ್ಲಿ ರೇಲ್ವೇ
ಎಲ್ಲಾ ೧೫,೪೪೬ ಮೈಲಿನಷ್ಟಾಯಿತು. ಈ ರೇ
ಲ್ವೇಯಿಂದ ೧,೯೭೬ ಲಕ್ಷ ರೂಪಾಯಿ ಹುಟ್ಟು
ವಳಿಯಾಗಿ ಖರ್ಚುವೆಚ್ಚವೆಲ್ಲಾ ಹೋಗಿ, ೫೪೯
ಲಕ್ಷ ರೂಪಾಯಿ ಶುದ್ಧ ಉತ್ಪನ್ನವಾಯಿತಂತೆ.
ಅಷ್ಟು ಲಾಭವು ಈ ರೇಲ್ವೇ ಕಂಪಣಿಗಳ ಭಂ
ಡಾರಕ್ಕೆ ಶೇರಿದ್ದಾಯಿತು. ಈ ಕಂಪಣಿಗಳವರು
ಅನ್ಯ ದೇಶದವರಾದರೆ, ಅಷ್ಟು ದ್ರವ್ಯವು ಹಿಂದೂ
ಸ್ಥಾನದಿಂದ ಅನ್ಯದೇಶಕ್ಕೆ ಹೋದ ಹಾಗಾಯಿತು.

ಪುಣೆಯಲ್ಲಿ ಪ್ರಸಿದ್ಧವಾಗುವ ಒಂದು ನೇ
ಟೀವ ಪತ್ರದಲ್ಲಿ ಬಾಲ್ಯವಿವಾಹವು ವಿಹಿತವಾಗಿ
ದ್ದು, ನಡೆಯ ತಕ್ಕಂಥಾ ಕಾರ್ಯವಾಗಿರುತ್ತದೆಂ
ಬುವ ವಾದಕ್ಕೆ ಆಧಾರವಾಗಿ ವಿಲಾಯತಿಯಲ್ಲಿ
ಹನ್ನೆರಡು ವರುಷದ ಹುಡುಗಿಯರು ಮದುವೆ
ಯಾಗುತ್ತಾರೆಂದು ಹೇಳಿದ್ದಾಯಿತು. ಈ ಮಾ
ತು ನಿಜವಾಗಿರದೆ, ದೊಡ್ಡ ಸುಳ್ಳೆಂಬದು ಸಕಲ
ರಿಗೆ ಗೊತ್ತಿರುವಂತೆ ಆ ಪತ್ರಕರ್ತರಿಗೂ ಗೊತ್ತಿ
ರುವದು; ಆದರೂ ತಮ್ಮ ದುರಭಿಪ್ರಾಯವನ್ನು
ಸಾಧಿಸುವ ಬಗ್ಯೆ ಶತ ಸುಳ್ಳಾಡಲಿಕ್ಕೆ ನಾಚಿಕೊ
ಳ್ಳದೆ ಎದೆ ಹೂಡಿದರು. ಆ ಪತ್ರಕರ್ತರೂ
"ಹಿಂದೂ ಮತಾಭಿಮಾನಿಗಳೇ." ಈ
ಹಿಂದೂ ಮತಾಭಿಮಾನಿಗಳು "ಹುಸಿಯಾದ
ರೂ ಪಸನಾಗಿ ಹೇಳು" ಎಂಬುವ ಕುಸೂ
ತ್ರವನ್ನು ಜನ್ಮಾಗಿ ಕೈಕೊಳ್ಳುವವರು. ಅನೃತ
ವೂ (ಸುಳ್ಳು) ಸತ್ಯದ್ವೇಷವೂ ಸದ್ಧರ್ಮ ವಿರೋ
ಧವೂ ಅವರ ವಯ್ರಮುಖ್ಯ ಬಲವೆಂತ ತೋರುತ್ತ
ವೆ. ಆದರೆ ಸುಳ್ಳಿನಿಂದ ಸತ್ಯಕ್ಕೆ ಹಾನಿಯೇ
ನೂ ಇತ್ತದು. ಸುಳ್ಳಿನಿಗೆನೇ ಹಾನಿ. ಸುಳ್ಳಾಟ
ವು ಸುಳ್ಳರಿಗೆ ಅನರ್ಥಕಾರಕ ಗುದ್ಯಾಟವೇ.

ಬೆಂಗಳೂರಲ್ಲಿ ಒಬ್ಬ ಕ್ರೈಸ್ತ ಹುಡುಗನು ನೀರು ಕೇದಿ ಮನೆಗೆ ತರಲಿಕ್ಕೆ ಹೋದಾಗ್ಯೆ ಕಾಲು ಜಾರಿ ಕೊಳ್ಳದೊಳ್ಳಗೆ ಬಿದ್ದಲ್ಲಿ ಒಬ್ಬ ಮಹಮ್ಮದೀಯನು ಈ ಅಪಾಯದ ಸುದ್ದಿಯನ್ನು ಕೇಳಿ. ಓಡಿ ಬಂದು, ನೀರಿನಲ್ಲಿ ಧುಮುಕ್ಕಿ. ಆ ಕ್ರೈಸ್ತ ಹುಡುಗನನ್ನು ಪ್ರಜ್ಞೆ ತಪ್ಪಿ ಇದ್ದ ಅವಸ್ಥೆಯಲ್ಲಿ ಹಿಡಿದು ಎತ್ತಿಕೊಂಡು ಬಂದನು. ವರ್ಣ ಮತ ಭೇದಗಳನ್ನು ಎಣಿಸದೆ, ಮುಳುಗಿ ಹೋಗಿದ್ದವನ ಪ್ರಾಣಕ್ಕೆ ತನ್ನ ಪ್ರಾಣವನ್ನು ಕೊಡುವದಕ್ಕೆ ಸಿದ್ಧವಾದ ಮಹಮ್ಮದೀಯನನ್ನು ಎಷ್ಟು ಕೊಂಡಾಡಿದರೂ ಸಾಲಲಿಕ್ಕಿಲ್ಲ. ಈತನ ಸುಕೃತ್ಯಕ್ಕೆ ಸರಕಾರದಿಂದಲೂ ತಕ್ಕ ಬಹುಮಾನವು ಕೊಡಿಸೋಣಾಗ ತಕ್ಕದ್ದು.

ತೆಲೆಫೊನ್ ಯಂತ್ರದ ಪ್ರಯೋಗದಿಂದ ನೆಲ ಹಿಡಿದ ಅಸ್ವಸ್ಥದವರಿಗೆ ದೇವಾಲಯದಲ್ಲಿ ಆಗುವ ಪ್ರಸಂಗಗಳನ್ನು ಶ್ರುತಗೊಳಿಸುವ ಚಮತ್ಕಾರವು ಇತ್ತ್ಲಾಗೆ ಹರುವು ಮಾಡಲಾಯಿತು. ತೆಲೆಫೊನೆಂದರೆ ದೂರಶ್ರಾವಕ ಅಂದರೆ ಸ್ವರಗಳನ್ನು ದೂರಕ್ಕೆ ಹೈದು ಕೇಳಿಸುವ ಯಂತ್ರ.

ಆಚಾರನಿರತಿ (Ritualism) ಹಿಂದೂಸ್ಥಾನದ ಕ್ರೈಸ್ತ ಸಭೆಗಳಲ್ಲಿ ಇಲ್ಲಿ ಅಲ್ಲಿ ಹಬ್ಬಿ ನೆಲೆಗೊಳ್ಳುತ್ತಾ ಬರುತ್ತದಂತೆ. ಹಿಂದೂಸ್ಥಾನದಲ್ಲಿ ಆಚಾರನಿರತ ಕ್ರೈಸ್ತರು ಹೆಚ್ಚುತ್ತಾ ವಿಚಾರಶೀಲ ಕ್ರೈಸ್ತರು ಕಡಿಮೆಯಾಗುತ್ತಾ ಬರುವದಾದರೆ, ವಿಲಾಯತಿಯಲ್ಲಿ ಒನೇ ಶತಮಾನದ ಈಚೆಯಲ್ಲಿ ರೋಮನ್ ಕಥೋಲಿಕ ಮತವು ಹೆಚ್ಚಿ, ಸದ್ವೇದ ಜ್ಞಾನವನ್ನು ಮುಳುಗಿಸಿ ಬಿಟ್ಟ ಅನರ್ಥಕ್ಕೆ ಜೋಡಾಗುವ ಅನರ್ಥವು ಈ ದೇಶೀಯ ಕ್ರೈಸ್ತ ಸಭೆಗೆ ಸಂಭವಿಸುವದಕ್ಕೆ ಸಂದೇಹವಿಲ್ಲಾ.

ಬ್ರಹ್ಮ (ಬರ್ಮ) ದೇಶದಲ್ಲಿ ೨೪೧ ಕಲ್ಲೆಸ್ಕೂಲುಗಳು ಇರುತ್ತವಂತೆ.

ಅಬಕಾರಿಯಿಂದ (ಸಾರಾಯಿ ಮೊದಲಾದ್ದರಿಂದ) ಸರಕಾರಕ್ಕೆ ೧೪೪೬೭೬೦ ಇಸ್ವಿಯಲ್ಲಿ ಆದ್ದಕ್ಕಿಂತಲೂ ೧೪೪೬೪೯೦ ಇಸ್ವಿಯಲ್ಲಿ ಬಹು ಹೆಚ್ಚು ಉತ್ಪನ್ನವಾಯಿತು. ಎಷ್ಟು ಹೆಚ್ಚು ಅಂದರೆ: ಮುಂಬೈ ಪಟ್ಣದಲ್ಲಿ ೫೧,೭೪೪ ರೂ. ಪಾಯಿ, ಪುಣೆಯಲ್ಲಿ ೯೦,೪೫೫ ರೂ. ಧಾರವಾಡ ಜಿಲ್ಲೆಯಲ್ಲಿ ೬೬,೪೪೪ ರೂ. ಬೆಳಗಾಂ ಜಿಲ್ಲೆಯಲ್ಲಿ ೬೫,೨೦೪ ರೂ. ಸರಕಾರದ್ದು ಈ ತರಹದ ಆದಾಯವು ಬಹಳ ಹೆಚ್ಚುತ್ತಾ ಬರುವದಾದರೆ, ಕಲ್ಯಾಣವಲ್ಲವೇ? ಕೋಳಿಯತಕ್ತಿ ಮಾತ್ರವಲ್ಲಾ ಅದರ ಮಾಂಸ ಸುಧಾ ಭಕ್ಷಣೆಯಾಗುವ ಸಂಭ್ರಮವೇ ಇದು.

"ಹಿಂದೂ ಮತಾಭಿಮಾನಿ," "ಹವ್ಯಕ ಸುಬೋಧ" ಎಂಬೀ ಮೊದಲಾದ ಹಿಂದೂ ಮತಾಭಿಮಾನ ಪ್ರಸಾರಕ ಪತ್ರಗಳ ಕೃತಿಭರ್ತರಿಗೂ ಪತಕರಿಗೂ ಬೈಬಲಿಂದ ಬಹಳ ಬಹಳ ಉಪಪತ್ತಿಯಾಗುವದುಂಟು. ಬೇರೆ ಪ್ರಸ್ತಾಪಗಳು ಇಲ್ಲದ ಸಮಯದಲ್ಲಿ ಅಂಥಾ ನೇಟೀವ್ ಪತ್ರರಚಕರು ಬೈಬಲಿನ ವೃತ್ತಾಂತಗಳನ್ನು ಮೂಲಕುಹಾಕಿ, ಹಾಸ್ಯಕ್ಕೆ ಗುರಿಯಿಟ್ಟು, ಗೇಲಿಬ್ಬಿಸುವದು ಸಾಂಪ್ರತದಲ್ಲಿ ಬಹು ವಾಡಿಕೆಯಾಗಿದೆ. ಬೈಬಲಿಲ್ಲದಿದ್ದರೆ ಅಂಥಾ ಪತ್ರಗಳು ಬಹುಶಃ ನಸಿಪುಡಿಯಿಲ್ಲದ ಬುರುಡೆಯಂತಾಗಿ ಹೋದಾವು. ಈ ಕಾರಣದಿಂದಲಾದರೂ ಈ ನೇಟೀವ ಪತ್ರಗಳ ರಚಕರೂ ವಾಚಕರೂ ಬೈಬಲಿಗೆ ಉಪಕಾರಬದ್ಧರಾಗಿರುತ್ತಾರೆ.

ಪ್ರಿನ್ಸ್ ಆಫ್ ವೇಲ್ಸ್ ಎಂಬ ಯುವರಾಜರ ಹಿರೀ ಮಗಂದ್ಯಾರು **ಪ್ರಿನ್ಸ್ ಆಲ್ಬರ್ಟ್ ವಿಕ್ಟರವರು** ನವಂಬರ ತಿಂಗಳಲ್ಲಿ ಹಿಂದೂಸ್ಥಾನಕ್ಕೆ ದಯ ಮಾಡಿಸಿ, ನಾಲ್ಕೈದು ತಿಂಗಳ್ದು, ಆರ್ಯಭೂಮಿಯೆನ್ನು ಸಂಚರಿಸಿ ಹೋಗುವರಂತೆ. ನೇಟೀವ ದೊಡ್ಡ ದೊಡ್ಡ ಮನುಷ್ಯರು ತಕ್ಕಂತೆ ಸತ್ಕಾರ ಮಾಡಿ, ಉಚಿತಾರ್ಥಗಳನ್ನು ಕೊಟ್ಟು, ಅವರನ್ನು ಕಳುಹಿಸ ತಕ್ಕವರಾಗಿರುತ್ತಾರೆ. ಆರ್ಯ ಪುಣ್ಯಾ ಮೂರ್ತಿಗಳ ದ್ರವ್ಯವು ವ್ಯಯವಾಗಿ ಹೋಗುವದಕ್ಕೆ ನಾನಾ ಮಾರ್ಗಗಳು ಪ್ರಸಕ್ತಿಸುವ ಸಂಭವಗಳಿಗೆ ತತ್ವಾರವಿಲ್ಲಾ.

ಅಮೇರಿಕದಲ್ಲಿ ಪ್ರಾಣಾಜ್ಞೆಗೆ ಗುರಿಯಾದವರನ್ನು ತೂಗುಮರವನ್ನು ಹತ್ತಿಸಿ ಪರಗತಿಗೆ ಹೊರಡಿಸುವ ಪದ್ಧತಿ ನಿಂತು ಹೋಗಿ, ವಿದ್ಯುಚ್ಛಕ್ತಿಯೆನ್ನು ಪ್ರಯೋಗಿಸಿ, ಯಮಪುರದ ದಾರಿಯನ್ನು ಕಾಣಿಸಿ ಮೆಟ್ಟಿಸುವ ಏರ್ಪಾಟು ಇತ್ತ್ಲಾಗೆ ಮಾಡಲಾಯಿತಂತೆ.

Printed at the Basel Mission Press, Mangalore.

ತನ್ನ ವಶಕ್ಕಿರಲಿ

ಕನ್ನಡ ಪುಸ್ತಕ

ಸಂಪುಟ ೪.] ಆಗಸ್ಟ್, ೧೮೪೯. [ಸಂಚಿಕೆ ೧೧.

ಆವಳ ಕೈವಿಡಿದಾರಾ । ಜೀವಭವಂ ನಿಖಿಲ ಲೋಕ ನಿರ್ಮಾಣಕಲಾ ॥
ಕೋವಿದನೆನಿಸಿದನಾವಾ । ಗ್ದೇವತೆ ಸನ್ಮತಿಯನಿತ್ತು ಸಲಹಲಿ ಜಗವಂ ॥

ವಿ ಷ ಯ ಸೂ ಚಿ ಕೆ .

				ಪುಟ.
೨	ವ್ಯವಸಾಯ	ಕೆ. ಶಾಮಯ್ಯಂಗಾರ್	..	೪೯೬
೩	ಶಾರೀರಧರ್ಮಶಾಸ್ತ್ರ ..	ಎಮ್. ರಂಗಾಚಾರ್, ಎಮ್. ಎ.	..	೪೦೦
೪	ಸ್ತ್ರೀಯರಿಗೆ ಇರತಕ್ಕ ಹಕ್ಕುಗಳು.	...	..	೪೦೬
೫	ಭೂಕಂಪವೂ ಅಗ್ನಿಪರ್ವತಗಳೂ.	ಎಮ್. ಶಾಮರಾವ್, ಎಮ್. ಎ.	..	೪೧೯
೫	ಶಾಸ್ತ್ರಪ್ರವೇಶದಾಯಿನಿ ..	ಕೆ. ವೆಂಕಟಸಾಮಿ, ಬಿ. ಎ.,	..	೪೧೫
೬	ಫರೂಕಬಾದಿನ ಆರ್ಯ ಸಮಾಜ ..	ಎಮ್. ಗಣೇಶಶರ್ಮಾ	..	೪೨೪
	ಕ್ಷೇಮೇಂದ್ರಕವಿ	ಆ. ಆಸಂದಾಳ್ವಾರ್ ..	..	೪೩೦
೮	ಶ್ರೀಮಹಾಕವಿ ಭಾಣಭಟ್ಟ ...	,,	...	೪೩೧
೯	ಜ್ಯೋತಿಷ	ಕೆ. ವೆಂಕಟಸಾಮಿ, ಬಿ. ಎ.	..	೪೩೪
೧೦	ಪಾಕಶಾಸ್ತ್ರ	ಎಮ್. ನಾರಾಯಣರಾವ್.	..	೪೩೪
೧೧	ಗಣಿತ	ಎಚ್. ಕೃಷ್ಣರಾವ್ ..	..	೪೩೧
೧೨	ವೃತ್ತಾಂತಸಂಗ್ರಹ ..			೪೩೧
೧೩	ಬಳ್ಳಾರಿಯ ವೃತ್ತಾಂತ ಸಂಗ್ರಹ.			೪೩೩

ಮೈಸೂರು :

ಅರಮನೆಯ ಜಗನ್ಮೋಹನ ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟಿತು,

೧೮೪೯.

ಅಹಂಕಾರಕ್ಕೆ ಉದಾಸೀನವೇ ಮದ್ದು.



ವಿಕ್ರಯಕ್ಕೆ ಸಿದ್ಧವಾಗಿದೆ!!!

ಶ್ರೀಮನ್ಮಹಾರಾಜ ಚಾಮರಾಜೇಂದ್ರ ಬಹದೂರರವರ ಆಜ್ಞಾನುಸಾರವಾಗಿ, ಹಿತಬೋಧಿನೀ ಚಂದಾದಾರರ ಉಪಯೋಗಕ್ಕೋಸ್ಕರ, ಸಪ್ಲಿಮೆಂಟಾಗಿ ಮುದ್ರಿಸುತ್ತಿದ್ದ ವಂಕರತ್ನಾಕರವು ಮುಗಿದು ಇದೆ. ಇನ್ನು ಮೇಲೆ ಈ ಪುಸ್ತಕವನ್ನು ಅಪೇಕ್ಷಿಸುವವರು ಈ ಕೆಳಗೆ ಕಂಡ ದರದಂತೆ ಕಳುಹಿಸಿದರೆ ಪ್ರತಿಯನ್ನು ಕಳುಹಿಸುತ್ತೇವೆ. ರೂ. ಆ.

ಬೈಂಡು ಮಾಡಿದ ಸಣ್ಣ ಕಾಗದದ ಪ್ರತಿ ಒಂದ್ಕೆ ಅಂಚೆ ಹಾಸಲು ಸಹಿತ ೦—೧೨

„ ದಪ್ಪ ಕಾಗದದ ಪ್ರತಿ ಒಂದ್ಕೆ „ „ .. ೨—೪

ಹೊಬಲ್ಗಗು ಕಳುಹಿಸುವವರು ಮನಿಯಾರ್ಡರ್ ಕರ್ಕಸಿ ನೋಟುಗಳ ಮೂಲಕವಾಗಿ ಕಳುಹಿಸಬೇಕು. ಅಂಚೆ ಲೇಬಿಲ್‌ಗಳನ್ನು ರಸೀದಿ ಲೇಬಿಲ್‌ಗಳನ್ನೂ ಕಳುಹಿಸಿದರೆ, ರೂಪಾಯಿ ಒಂದ್ಕೆ ೧ ಆಣೆಯನ್ನು ಹೆಚ್ಚಾಗಿ ಕಳುಹಿಸಬೇಕು. ಹೊಬಲಗು ಕಳುಹಿಸಿದ ಹೊರತು ಪುಸ್ತಕವನ್ನು ರವಾನಿಸುವದಿಲ್ಲ.

ಎಂ. ವೆಂಕಟಕೃಷ್ಣಯ್ಯ,
ಹಿತಬೋಧಿನೀ ಎಡಿಟರ್, ಮೈಸೂರ್

ಯಂತ್ರಬೋಧಿನಿ

ಸಂಚಿಕೆ ೪] ಆಗಸ್ಟ್ ೧೮೭೩. [ಸಂಪುಟ ೧೧.

೧. ವ್ಯವಸಾಯ.

ಚಿಕಿತ್ಸೆ ಮಾಡಬೆ ಇರಕೂಡದು. ಮುಖ್ಯವಾಗಿ ಸ್ವಲ್ಪವೆಟ್ಟಿಗಾದರೂ ಹೊಟ್ಟೆಗೆ ಕೊಡುತ್ತಾ ಬಂದಲ್ಲಿ ಈಗ ಸಾಯತಕ್ಕ ಕಾಲುನಡೆಗಳಲ್ಲಿ ಸೇಕಡ ೫೦ರ ಪ್ರಕಾರ ಸಂದೇಹವಿಲ್ಲದೆ ಬದುಕಬಹುದು. ಸುಖವಾಸಿಯಾದ ದನಗಳಿಗೆ ಬಹಳ ಹೆಚ್ಚಾಗಿ ಆಹಾರ ಕೊಡಕೂಡದು. ಸುಖವಾಸಿರೂವ ದನಕ್ಕೆ ರಕ್ತಚಲನೆ ಕಡಮೆಮಾಡುವದಕ್ಕೆ ಸ್ವಲ್ಪ ಕತ್ತಿನಿಂದ ರಕ್ತಾ ಇಳಿಸಬೇಕು. ೧ ಪಾವಿನಿಂದ ೧॥ ಪಾವಿನವರಿಗೆ ಇಳಿಸಿದರೆ ಸಾಕಾಗಿರುತ್ತದೆ. ಮತ್ತು ಇವುಗಳಿಗೆ ಆಯಾಸ ಕಾಣದಹಾಗೆ ಮತ್ತು ಬರುವದಕ್ಕೆ ಔಷೀಮು ಮಿಶ್ರವಾದ ಆಹಾರ ಕೊಡಬೇಕು. ರೋಗ ಅಂಟಿರತಕ್ಕ ದನಗಳಿಗೆಲ್ಲಾ ಉಪ್ಪು ಹಾಕಿದ ರಾಗಿಯ ಅಥವಾ ಅಕ್ಕಿಯ ಅಂಬಲಿಯನ್ನು ತಣ್ಣಗೆ ಮಾಡಿ ಹೊಟ್ಟೆಗೆ ಹಾಕಬೇಕು, ಅವುಗಳ ಉಚ್ಚಲು ಮೊದಲಾದದ್ದನ್ನು ಆಗಾಗ್ಗೆ ತೆಗೆದು ಬೇರೇ ಗುಂಡಿಗೆ ಹಾಕಬೇಕು. ಕಟ್ಟುತಕ್ಕ ಸ್ಥಳವನ್ನು ಚನ್ನಾಗಿ ಹೊಸ ಮಣ್ಣಿದಪುಡಿ ಎರಚುವದರಿಂದಾಗಲೀ ಅಥವಾ ಗಂಧಕವನ್ನೂ ಟಾರೆಣ್ಣೆಯನ್ನೂ ಸುಡುವದರಿಂದಾಗಲೀ ಶುದ್ಧಿ ಮಾಡಬೇಕು. ಆ ದನಗಳಿಗೆ ಹುಲ್ಲುಗಳೇನಾದರೂ ಹಾಕಿದ್ದಲ್ಲಿ ಅದನ್ನು ಚನ್ನಾಗಿ ಸುಡಬೇಕು. ರೋಗತಗಲಿದ ದನವನ್ನು ಮುಟ್ಟಿದವನು ಬೇರೇ ದನವನ್ನು ಮುಟ್ಟಬೇಕಾದರೆ, ಕೈಕಾಲು ಚನ್ನಾಗಿ ತೊಳೆದುಕೊಂಡು ಬೇರೇಬಟ್ಟೆಹೊದ್ದುಕೊಂಡು ಮುಟ್ಟಬೇಕು; ಇಲ್ಲವಾದರೆ ಇವನ ಮೂಲಕವಾಗಿ ರೋಗವು ಅದಕ್ಕೂ ಅಂಟುಬಹುದು. ರೋಗಪ್ರದೇಶಕ್ಕೆ ಸರ್ವಥಾ ನಾಯಿಗಳನ್ನು ಸೇರಿಸಕೂಡದು. ಸೇರಿಸಿದರೆ ಅಂಟುರೋಗ ಅಲ್ಲಲ್ಲಿ ಹೆಚ್ಚಿಬಿಡುತ್ತದೆ. ಉಚ್ಚೀ ಗುಂಡಿಗಳೇನಾದರೂ ಇದ್ದಲ್ಲಿ ಒಳ್ಳೇ ಹೊಸಮಣ್ಣಿನಿಂದ ಅದನ್ನು ಮುಚ್ಚಬೇಕು. ೫—೬ ದಿವಸ ಹೀಗೆ ಮಾಡುತ್ತಾ ಬಂದರೆ ದನಗಳಿಗೆ ಗುಣಮುಖವಾಗಬಹುದು. ಆ ಕಾಲದಲ್ಲಿ ಒಳ್ಳೇ ಗಂಜಿಯಾಗಲೀ ಅಂಬಲಿಯಾಗಲೀ ಉಪ್ಪು ಸೇರಿಸಿ ಕೊಡುವದಲ್ಲದೆ ಹಸೀ ಚಿಗುರುಹುಲ್ಲನ್ನು ಕೊಟ್ಟರೆ ಅವು ಸ್ವಲ್ಪಸ್ವಲ್ಪವಾಗಿ ತಿಂದು ಜೀರ್ಣಿಸಿಕೊಳ್ಳುತ್ತವೆ. ರೋಗವಿಮುಕ್ತವಾದ ದನವನ್ನು ಚನ್ನಾಗಿ ಅಂಟುವಾಳದ ಕಾಯಿಂದ ತೊಳೆದು ಆ ಮೇಲೆ ಮುಂದೆಗೆ ಸೇರಿಸಬೇಕು. ಅನಂತರ ಬಲ ಬರುವದಕ್ಕೆ ಹಿಂಡಿ ಮೊದಲಾದ ಆಹಾರಗಳನ್ನು ಕ್ರಮೇಣ ಕೊಡುತ್ತಾ ಬರಬೇಕು.

ಆಪರೂಪವಾದ ಮಾತುಗಳಿಗೆ ಬೆಲೆಯೇ ಇಲ್ಲ.

ಅಂಟುರೋಗ ತಗಲಿರತಕ್ಕ ಆಕಳ ಹಾಲನ್ನೂ ಎಮ್ಮೆಯ ಹಾಲನ್ನೂ ಅನೇಕರು ತಂದು ಮಾರುತ್ತಾರೆ. ಇದರಿಂದ ಮನುಷ್ಯರಿಗೆ ಸಹ ಸಿಡುಬು ಮೊದಲಾದ ಅಂಟುರೋಗಗಳು ಹುಟ್ಟಿ ಬಹುಮಾಣಿ ನಷ್ಟವಾಗುತ್ತದೆ. ಈ ವಿಷಯದಲ್ಲಿ ಸಕಲರೂ ಮನಸ್ಸಿಡಬೇಕು. ಬೇಸಿಗೇ ಕಾಲಕ್ಕೆ ಅವರವರ ದನಕ್ಕೆ ಸಾಕಾಗುವಷ್ಟು ಹುಲ್ಲನ್ನು ಪ್ರತಿಯೊಬ್ಬರೂ ಸಂಗ್ರಹಿಸಿರಬೇಕು. ಶುದ್ಧವಾದ ನೀರೂ ಒಳ್ಳೇ ಹುಲ್ಲೂ ಸಿಕ್ಕಿದ್ದರೆ ಈಗ ಸಾಯುವ ದನಗಳ ಸಂಖ್ಯೆಯಲ್ಲಿ ಅರ್ಧಮಟ್ಟಿಗೆ ಕಡಮೆಯಾಗುವದರಲ್ಲಿ ಸಂಶಯವಿಲ್ಲ.

ಕಾಲು ಬಾಯಿ ಜಡವು ದೊಡ್ಡ ರೋಗದಹಾಗೆಯೇ ಅಂಟುರೋಗ ವೆನ್ನಿಸಿಕೊಂಡರೂ, ಅದರಿಂದ ವಿಶೇಷವಾಗಿ ಕಾಲುನಡೆಗಳು ಸಾಯುವದಿಲ್ಲ. ರೋಗ ಬಂದಿದ್ದಾಗ್ಗೆ ಹೊಟ್ಟೆಗಿಲ್ಲದೆ ಸಾಯುವದೇ ಬಹಳವಾಗಿರುತ್ತದೆ. ಬಾಯಿಯೊಳಗೆ ಆಗತಕ್ಕ ಹುಣ್ಣಿನ ನೋವಿನಿಂದ ಹುಲ್ಲು ತಿನ್ನುವದಿಲ್ಲ. ಆದ್ದರಿಂದ ಹೊಟ್ಟೆಗೆ ಆಧಾರವಾಗುವಂತೆ ರಾಗಿಯ ಅಥವಾ ಅಕ್ಕಿಯ ಅಂಬಲಿಯನ್ನು ಉಪ್ಪು ಹಾಕಿ ಕುಡಿಸುವದಲ್ಲದೆ ಗಾಯಗಳಿಗೆ ಈ ಕೆಳಗೆ ವಿವರಿಸುವ ಮುಲಾಮು ಹಾಕಬೇಕು ; ಅಥವಾ ಔಷಧಿ ನೀರಿನಿಂದ ತೊಳೆಯಬೇಕು. ಕಾಲುಗುರಿನ ಸಂದಿಯಲ್ಲಿ ಆಗತಕ್ಕ ಗಾಯಕ್ಕೆ ಟಾರೆಣ್ಣೆಯನ್ನು ಸವರಬೇಕಾಕೆಸರಿನಲ್ಲಿ ನಿಲ್ಲಿಸತಕ್ಕದ್ದು ಸಹ ಒಳ್ಳೇದು.

ಈ ಕೆಳಗೆ ವಿವರಿಸುವ ಔಷಧಗಳು ಗೋಜಾಡ್ಯಕ್ಕೆ ಅನುಕೂಲವಾಗಿವೆ. ಇವುಗಳೆಲ್ಲಾ ಸ್ವದೇಶಾನ್ಯದೇಶಗಳಲ್ಲಿ ಚೆನ್ನಾಗಿ ಪರೀಕ್ಷಿಸಿದನಂತರ ಬಳ್ಳೇವೆಂದು ತಿಳಿದು ಬಂದ ಔಷಧಗಳಾಗಿರುತ್ತವೆ. ಒಂದೊಂದು ಪ್ರಕರಣಕ್ಕೆ ಅನೇಕ ಚಿಕಿತ್ಸೆಗಳಿದ್ದಾಗ್ಯೂ ಸ್ಥಳ ಸಂಕೋಚದಿಂದ ಆಯಾ ಪ್ರಕರಣಗಳಿಗೆ ಒಂದು ಅಥವಾ ಎರಡು ಚಿಕಿತ್ಸೆಗಳನ್ನು ಮಾತ್ರವೇ ಹೇಳಿದೆ. ಅವು ಯಾವವೆಂದರೆ:—

ಭೇದಿಗೆ ಔಷಧ.

ಉಪ್ಪು ೬ ಚಟಾಕು, ಕುದಿಯುವ ನೀರಿನಲ್ಲಿ ಚೆನ್ನಾಗಿ ಮಿಶ್ರಮಾಡಿದ ಲೋಳೆಸರ ೭॥ ರೂಪಾಯಿತೂಕ, ಅಗಸೇ ಬೀಜದೆಣ್ಣೆ ೨ ಚಟಾಕು, ಶುಂಠಿ ೧ ಚಟಾಕು ; ಇವೆಲ್ಲಾ ಸೇರಿಸಿ ಎರಡು ಸೇರು ಬಿಸಿನೀರಿನಲ್ಲಿ ಚೆನ್ನಾಗಿ ಮಿಶ್ರಮಾಡಿ ಬಿಸಿಬಿಸಿಯಾಗಿ ಕೊಡತಕ್ಕದ್ದು. ಇದು ಬಲವಾದ ಭೇದಿಯ ಔಷಧ. ಚೆನ್ನಾಗಿ ಬೆಳೆದ ದೊಡ್ಡ ದನಕ್ಕೆ ಈ ಪ್ರಮಾಣದ ಮೇರೆ ಕೊಡತಕ್ಕದ್ದು. ರಾಸು ಸಣ್ಣದಾದರೆ ಮೇಲೆ ಕಂಡ ಅಳತೆಯಲ್ಲಿ ಅರ್ಧದಿಂದ ಮುಕ್ಕಾಲು ಭಾಗದವರಿಗೂ ಕೊಡಬಹುದು.

ಬೇಸಿಗೆಯಲ್ಲಿ ದನಗಳಿಗೆ ಸಾಮಾನ್ಯವಾಗಿ ಭೇದಿಯ ಔಷಧಗಳನ್ನು ಕೊಡಕೂಡದು. ಜಾಪಾಳದ ಬೀಜ ೬ಳೆ ರೂಪಾಯಿತೂಕ, ಉಪ್ಪು ಮೂರು ಚಟಾಕು; ಇವುಗಳನ್ನು ಅರ್ಧಸೇರು ಗಂಜಿಯಲ್ಲಿ ಹಾಕಿ ಕೊಟ್ಟರೆ ಸುಮಾರಾಗಿ ಭೇದಿಯಾಗುತ್ತದೆ.

ಅರಸರ ಕೂಡೆ ಸರಸವಾಡುವದು ವಿರಸಕ್ಕೆ ಕಾರಣವಂತೆ.

ಜ್ವರ ಹರೌಷಧಗಳು.

(೧) ಕರ್ಪೂರ ।।। ರೂಪಾಯಿತೂಕ, ಕಡ್ಡಿಪ್ಪು ೧ ರೂಪಾಯಿತೂಕ, ಪರಾ ಬು ॥ ಚಟಾಕು. ಪರಾಬಿನಲ್ಲಿ ಕರ್ಪೂರವನ್ನು ಕರಗಿಸಿ ಅನಂತರ ಕಡ್ಡಿಪ್ಪನ್ನು ಸೇರಿಗೆ ಬಂದು ಸೇರು ತಣ್ಣೀರಿನಲ್ಲಿ ದಿನಕ್ಕೆ ಎರಡುಸಾರಿ ಕೊಡುವದು.

(೨) ಕರ್ಪೂರ ।।। ರೂಪಾಯಿತೂಕ, ಕಡ್ಡಿಪ್ಪು ।।। ರೂಪಾಯಿತೂಕ, ದತ್ತೂರಿ ಬೀಜದ ಪುಡಿ ೧½ ರೂಪಾಯಿ ತೂಕ, ಪರಾಬು ಅರ್ಧಚಟಾಕು. ಕರ್ಪೂರವನ್ನು ಪರಾಬಿನಲ್ಲಿ ಕರಗಿಸಿ ಅನಂತರ ದತ್ತೂರೀ ಬೀಜವನ್ನೂ ಕಡ್ಡಿಪ್ಪನ್ನೂ ಸೇರಿಸಿ ಅರ್ಧಸೇರು ತಿಳೀ ಅಕ್ಕಿಯ ಗಂಜಿಯಲ್ಲಿ ಎರಡು ವೇಳೆ ಕುಡಿಸಬೇಕು.

ಬಲವಾದ ಅಜೀರ್ಣ ಹೊಡೆಯುತಕ್ಕ ಔಷಧ.

ಅನ್ನಭೇದಿ ೧½ ತೊಲೆ ತೂಕ, ಚಿರಾಯಿತ ಕಡ್ಡೀಪುಡಿ ೧। ತೊಲೆತೂಕ. ಇವನ್ನು ಪುಡಿ ಮಾಡಿ ಅರ್ಧಸೇರು ಅಕ್ಕೀ ಗಂಜಿಯಲ್ಲಿ ಎರಡು ವೇಳೆ ಕುಡಿಸಬೇಕು.

ಉರಿ ತಪ್ಪಿಸಿ ತಂಪು ಮಾಡುವ ಔಷಧ.

ನವಾಸಾಗರ, ಕಡ್ಡಿಪ್ಪು, ಇವುಗಳನ್ನು ಸಮ ಭಾಗವಾಗಿ ಪುಡಿ ಮಾಡಿ ೨ ಸೇರು ನೀರಿನಲ್ಲಿ ಕರಗಿಸಿ ಉಳುಕುಗಳಿಗೂ ಗಾಯಗಳಿಗೂ ಹಾಕತಕ್ಕದ್ದು.

ಕ್ರಿಮಿ ಹರವಾದ ಔಷಧ.

ಹಿಂಗು ೧। ತೊಲೆತೂಕ, ಗಂಧಕದ ಪುಡಿ ೧ ಚಟಾಕು, ಇವನ್ನು ೫—೬ ದಿವಸ ದವರಿಗೂ ಪ್ರತಿದಿವಸದಲ್ಲಿಯೂ ಅರ್ಧ ಸೇರು ನೀರಿನಲ್ಲಿ ಕೊಟ್ಟರೆ ಕ್ರಿಮಿ ಹರ.

ಕುರಿಗಳಿಗೆ ಕೊಳೇ ರೋಗ ಅಂದರೆ ತೆವಲು ಜಾಡ್ಯ. ಮೈಮೇಲಿನ ತುಬಟು ಉದುರುವ ರೋಗ ವ್ಯಾಪಿಸಿದರೆ ಅದಕ್ಕೆ ಔಷಧ.

ಮೈಲುತುತ್ತ । ರೂಪಾಯಿತೂಕ, ನೀರು ಅರ್ಧಸೇರು ಸೇರಿಸಿ ಕೊಡಬೇಕು.

ರಕ್ತ ಭೇದಿಗೆ ಔಷಧ.

ಸೀಮೇ ಸುಣ್ಣದ ಪುಡಿ ೧। ತೊಲೆ ತೂಕ, ಸಫೇದು ೨ ಆಣೇ ತೂಕ, ಅಫೀಮು ।।। ತೊಲೆ; ಇವನ್ನು ಗಟ್ಟಿಯಾದ ಗಂಜಿಯಲ್ಲಿ ಹಾಕಿ ದಿನಕ್ಕೆ ಎರಡುಸಾರಿ ಕೊಡಬೇಕು.

ಕಾಲು ಬಾಯಿ ಜ್ವರದ ಗಾಯಗಳಿಗೆ ಹಾಕತಕ್ಕ ಲೇಪನ.

ಸೀಮೇ ಸುಣ್ಣದ ಪುಡಿ ೨ ಚಟಾಕು, ಇದ್ದಲ ಪುಡಿ ೭॥ ರೂಪಾಯಿತೂಕ, ಚಟಕದ ಪುಡಿ ೧। ರೂಪಾಯಿ ತೂಕ, ಮೈಲುತುತ್ತದ ಪುಡಿ ೧। ರೂಪಾಯಿತೂಕ; ಎಲ್ಲ

ಅಪರೂಪವಾದ ಮಾತುಗಳಿಗೆ ಬೆಲೆಯೇ ಇಲ್ಲ.

ಅಂಟುರೋಗ ತಗಲಿರತಕ್ಕ ಆಕಳ ಹಾಲನ್ನೂ ಎಮ್ಮೆಯ ಹಾಲನ್ನೂ ಅನೇಕರು ತಂದು ಮಾರುತ್ತಾರೆ. ಇದರಿಂದ ಮನುಷ್ಯರಿಗೆ ನಹ ಸಿಡಬು ಮೊದಲಾದ ಅಂಟುರೋಗಗಳು ಹುಟ್ಟಿ ಬಹುಪ್ರಾಣಿ ನಷ್ಟವಾಗುತ್ತದೆ. ಈ ವಿಷಯದಲ್ಲಿ ಸಕಲರೂ ಮನಸ್ಸಿಡಬೇಕು. ಬೇಸಿಗೇ ಕಾಲಕ್ಕೆ ಅವರವರ ದನಕ್ಕೆ ಸಾಕಾಗುವಷ್ಟು ಹುಲ್ಲನ್ನು ಪ್ರತಿಯೊಬ್ಬರೂ ಸಂಗ್ರಹಿಸಿಟ್ಟಿರಬೇಕು. ಶುದ್ಧವಾದ ನೀರೂ ಒಳ್ಳೇ ಹುಲ್ಲೂ ಸಿಕ್ಕಿದ್ದರೆ ಈಗ ಸಾಯುವ ದನಗಳ ಸಂಖ್ಯೆಯಲ್ಲಿ ಅರ್ಧಮಟ್ಟಿಗೆ ಕಡಮೆಯಾಗುವದರಲ್ಲಿ ಸಂಶಯವಿಲ್ಲ.

ಕಾಲು ಬಾಯಿ ಜಡವು ದೊಡ್ಡ ರೋಗವಹಾಗೆಯೇ ಅಂಟುರೋಗ ವೆನ್ನಿಸಿಕೊಂಡರೂ, ಆದರಿಂದ ವಿಶೇಷವಾಗಿ ಕಾಲುನಡೆಗಳು ಸಾಯುವದಿಲ್ಲ. ರೋಗ ಬಂದಿದ್ದಾಗ್ಯೆ ಹೊಟ್ಟೆಗಿಲ್ಲದೆ ಸಾಯುವದೇ ಬಹಳವಾಗಿರುತ್ತದೆ. ಬಾಯಿಯೊಳಗೆ ಆಗತಕ್ಕ ಹುಣ್ಣಿನ ನೋವಿನಿಂದ ಹುಲ್ಲು ತಿನ್ನುವದಿಲ್ಲ. ಆದ್ದರಿಂದ ಹೊಟ್ಟೆಗೆ ಆಧಾರವಾಗುವಂತೆ ರಾಗಿಯ ಅಥವಾ ಅಕ್ಕಿಯ ಅಂಬಲಿಯನ್ನು ಉಪ್ಪು ಹಾಕಿ ಕುಡಿಸುವದಲ್ಲದೆ ಗಾಯಗಳಿಗೆ ಈ ಕೆಳಗೆ ವಿವರಿಸುವ ಮುಲಾಮು ಹಾಕಬೇಕು ; ಅಥವಾ ಔಷಧಿ ನೀರಿನಿಂದ ತೊಳೆಯಬೇಕು. ಕಾಲುಗುನಿನ ಸಂದಿಯಲ್ಲಿ ಆಗತಕ್ಕ ಗಾಯಕ್ಕೆ ಟಾರೆಣ್ಣೆಯನ್ನು ಸವರಬೇಕು. ಕೆಸರಿನಲ್ಲಿ ನಿಲ್ಲಿಸತಕ್ಕದ್ದು ಸಹ ಒಳ್ಳೇದು.

ಈ ಕೆಳಗೆ ವಿವರಿಸುವ ಔಷಧಗಳು ಗೋಜಾಡ್ಯಕ್ಕೆ ಅನುಕೂಲವಾಗಿವೆ. ಇವುಗಳೆಲ್ಲಾ ಸ್ವದೇಶಾನ್ಯದೇಶಗಳಲ್ಲಿ ಚನ್ನಾಗಿ ಪರೀಕ್ಷಿಸಿದನಂತರ ಒಳ್ಳೇವೆಂದು ತಿಳಿದು ಬಂದ ಔಷಧಗಳಾಗಿರುತ್ತವೆ. ಬಂದೊಂದು ಪ್ರಕರಣಕ್ಕೆ ಅನೇಕ ಚಿಕಿತ್ಸೆಗಳಿದ್ದಾಗ್ಯೂ ಸ್ಥಳ ಸಂಕೋಚದಿಂದ ಆಯಾ ಪ್ರಕರಣಗಳಿಗೆ ಒಂದು ಅಥವಾ ಎರಡು ಚಿಕಿತ್ಸೆಗಳನ್ನು ಮಾತ್ರವೇ ಹೇಳಿದೆ. ಅವು ಯಾವವಂದರೆ:—

ಭೇದಿಗೆ ಔಷಧ.

ಉಪ್ಪು ೬ ಚಟುಕು, ಕುದಿಯುವ ನೀರಿನಲ್ಲಿ ಚನ್ನಾಗಿ ಮಿಶ್ರಮಾಡಿದ ಲೋಳಸರ ೧॥ ರೂಪಾಯಿತೂಕ, ಅಗಸೇ ಬೀಜದೆಣ್ಣೆ ೨ ಚಟುಕು, ಶುಂಠಿ ೧ ಚಟುಕು ; ಇವೆಲ್ಲಾ ಸೇರಿಸಿ ಎರಡು ಸೇರು ಬಿಸಿನೀರಿನಲ್ಲಿ ಚನ್ನಾಗಿ ಮಿಶ್ರಮಾಡಿ ಬಿಸಿಬಿಸಿಯಾಗಿ ಕೊಡತಕ್ಕದ್ದು. ಇದು ಬಲವಾದ ಭೇದಿಯ ಔಷಧ. ಚನ್ನಾಗಿ ಬೆಳೆದ ದೊಡ್ಡ ದನಕ್ಕೆ ಈ ಪ್ರಮಾಣದ ಮೇರೆ ಕೊಡತಕ್ಕದ್ದು. ರಾಸು ಸಣ್ಣದಾದರೆ ಮೇಲೆ ಕಂಡ ಅಳತೆಯಲ್ಲಿ ಅರ್ಧದಿಂದ ಮುಕ್ಕಾಲು ಭಾಗದವರಿಗೂ ಕೊಡಬಹುದು.

ಜ್ವರಿಗೆಯಲ್ಲಿ ದನಗಳಿಗೆ ಸಾಮಾನ್ಯವಾಗಿ ಭೇದಿಯ ಔಷಧಗಳನ್ನು ಕೊಡಕೂಡದು. ಜಾಪಾಳದ ಬೀಜ ೬ಳೆ ರೂಪಾಯಿತೂಕ, ಉಪ್ಪು ಮೂರು ಚಟುಕು, ಇವುಗಳನ್ನು ಅರ್ಧಸೇರು ಗಂಜಿಯಲ್ಲಿ ಹಾಕಿ ಕೊಟ್ಟರೆ ಸುಮಾರಾಗಿ ಭೇದಿಯಾಗುತ್ತದೆ.

ಅರಸನರ ಕೂಡೆ ಸರಸವಾಡುವದು ವಿರಸಕ್ಕೆ ಕಾರಣವಂತೆ.

ಜ್ವರ ಹರೌಷಧಗಳು.

(೧) ಕರ್ಪೂರ ।।। ರೂಪಾಯಿತೂಕ, ಕಡ್ಡುಪ್ಪು ೧ ರೂಪಾಯಿತೂಕ, ಪರಾಬು ॥ ಚಟಾಕು. ಪರಾಬಿನಲ್ಲಿ ಕರ್ಪೂರವನ್ನು ಕರಗಿಸಿ ಅನಂತರ ಕಡ್ಡುಪ್ಪನ್ನು ಸೇರಿಗೆ ಬಂದು ಸೇರು ತಣ್ಣೀರಿನಲ್ಲಿ ದಿನಕ್ಕೆ ಎರಡುಸಾರಿ ಕೊಡುವದು.

(೨) ಕರ್ಪೂರ ।।। ರೂಪಾಯಿತೂಕ, ಕಡ್ಡುಪ್ಪು ।।। ರೂಪಾಯಿತೂಕ, ದತ್ತೂರಿ ಬೀಜದ ಪುಡಿ ೧½ ರೂಪಾಯಿ ತೂಕ, ಪರಾಬು ಅರ್ಧಚಟಾಕು. ಕರ್ಪೂರವನ್ನು ಪರಾಬಿನಲ್ಲಿ ಕರಗಿಸಿ ಅನಂತರ ದತ್ತೂರೀ ಬೀಜವನ್ನೂ ಕಡ್ಡುಪ್ಪನ್ನೂ ಸೇರಿಸಿ ಅರ್ಧಸೇರು ತಿಳೀ ಅಕ್ಕಿಯ ಗಂಜಿಯಲ್ಲಿ ಎರಡು ವೇಳೆ ಕುಡಿಸಬೇಕು.

ಬಲವಾದ ಅಜೀರ್ಣ ಹೊಡೆಯುತಕ್ಕ ಔಷಧ.

ಅನ್ನಭೇದಿ ೧½ ತೊಲೆ ತೂಕ, ಚಿರಾಯಿತ ಕಡ್ಡೀಪುಡಿ ೧। ತೊಲೆತೂಕ. ಇವನ್ನು ಪುಡಿ ಮಾಡಿ ಅರ್ಧಸೇರು ಅಕ್ಕೀ ಗಂಜಿಯಲ್ಲಿ ಎರಡು ವೇಳೆ ಕುಡಿಸಬೇಕು.

ಉರಿ ತಪ್ಪಿಸಿ ತಂಪು ಮಾಡುವ ಔಷಧ.

ನವಾಸಾಗರೆ, ಕಡ್ಡುಪ್ಪು, ಇವುಗಳನ್ನು ಸಮ ಭಾಗವಾಗಿ ಪುಡಿ ಮಾಡಿ ೨ ಸೇರು ನೀರಿನಲ್ಲಿ ಕರಗಿಸಿ ಉಳುಕುಗಳಿಗೂ ಗಾಯಗಳಿಗೂ ಹಾಕತಕ್ಕದ್ದು.

ಕ್ರಿಮಿ ಹರವಾದ ಔಷಧ.

ಹಿಂಗು ೧। ತೊಲೆತೂಕ, ಗಂಧಕದ ಪುಡಿ ೧ ಚಟಾಕು, ಇವನ್ನು ೫—೬ ದಿವಸ ಪರಿಗೂ ಪ್ರತಿದಿವಸದಲ್ಲಿಯೂ ಅರ್ಧ ಸೇರು ನೀರಿನಲ್ಲಿ ಕೊಟ್ಟರೆ ಕ್ರಿಮಿ ಹರ.

ಕುರಿಗಳಿಗೆ ಕೊಳೇ ರೋಗ ಅಂದರೆ ತೆವಲು ಜಾಡ್ಯ ಮೈಮೇಲಿನ ತುಬಟ್ಟು ಉದುರುವ ರೋಗ ವ್ಯಾಪಿಸಿದರೆ ಅದಕ್ಕೆ ಔಷಧ.

ಮೈಲುತುತ್ತ । ರೂಪಾಯಿತೂಕ, ನೀರು ಅರ್ಧಸೇರು ಸೇರಿಸಿ ಕೊಡಬೇಕು.

ರಕ್ತ ಭೇದಿಗೆ ಔಷಧ.

ಸೀಮೇ ಸುಣ್ಣದ ಪುಡಿ ೧। ತೊಲೆ ತೂಕ, ಸಫೇದು ೨ ಆಣೇ ತೂಕ, ಅಫೀಮು ತೊಲೆ; ಇವನ್ನು ಗಟ್ಟಿಯಾದ ಗಂಜಿಯಲ್ಲಿ ಹಾಕಿ ದಿನಕ್ಕೆ ಎರಡುಸಾರಿ ಕೊಡಬೇಕು.

ಕಾಲು ಬಾಯಿ ಜ್ವರದ ಗಾಯಗಳಿಗೆ ಹಾಕತಕ್ಕ ಲೇಪನ.

ಸೀಮೇ ಸುಣ್ಣದ ಪುಡಿ ೨ ಚಟಾಕು, ಇದ್ದಲ ಪುಡಿ ೭॥ ರೂಪಾಯಿತೂಕ, ಪಟಿಕದ ಪುಡಿ ೧। ರೂಪಾಯಿ ತೂಕ, ಮೈಲುತುತ್ತದ ಪುಡಿ ೧। ರೂಪಾಯಿತೂಕ; ಎಲ್ಲಾ

ಅರಸರ ಪ್ರೇವು ಹಿಬ್ಬಾದರೆ ಕಂದಾಯ ಬಿಟ್ಟಾರೆ ?

ಮಿಶ್ರಮಾಡಿ ದನಗಳಲ್ಲಿಯೂ ಕುರಿಗಳಲ್ಲಿಯೂ ಹುಣ್ಣುಗಳಮೇಲೆ ಕಾಲು ಬಾಯಿ ಜ್ವರದ ಮೇಲೂ ಚೆಲ್ಲತಕ್ಕದ್ದು.

ಮೈಲುತುತ್ತದ ಮುಲಾಮು.

ಮೈಲುತುತ್ತದ ಪುಡಿ ।= ರೂಪಾಯಿ ತೂಕ, ಮೆರದ ಎಣ್ಣೆ ।= ರೂಪಾಯಿ ತೂಕ, ಅಗಸೇ ಬೀಜದ ಎಣ್ಣೆ ೭ ಚಟುಕು, ಮೇಣ ೦ ಚಟುಕು ; ಎಣ್ಣೆಯನ್ನೂ ಮೇಣವನ್ನೂ ಕೂಡ ಕರಗಿಸಿ ಅನಂತರ ಮೆರದೆಣ್ಣೆಯನ್ನು ಮೈಲುತುತ್ತವನ್ನೂ ಪುಡಿಸಿ ತಣ್ಣಗೆ ಆಗುವ ವರಿಗೂ ಕಲಸಿ ಚೆನ್ನಾಗಿ ಮಿಶ್ರಮಾಡಿ ಗಾಯಗಳಿಗೆ ಉಪಯೋಗಿಸತಕ್ಕದ್ದು.

ಪಟಿಕದ ಮುಲಾಮು.

ಪಟಿಕ ೬॥ ತೊಲೆ, ಅಗಸೇ ಬೀಜದ ಎಣ್ಣೆ ೧॥ ಚಟುಕು, ಮೆರದೆಣ್ಣೆ । ಚಟುಕು; ಎಣ್ಣೆಯನ್ನೂ ಮೇಣವನ್ನೂ ಬೆಂಕಿಗೆ ಹಿಡಿದು ಕರಗಿಸಿ ಅನಂತರ ಮೆರದೆಣ್ಣೆಯನ್ನೂ ಪಟಿಕವನ್ನೂ ಸೇರಿಸಿ ತಣ್ಣಗಾಗುವ ವರಿಗೂ ಕಲಕಿ ಚೆನ್ನಾಗಿ ಮಿಶ್ರ ಮಾಡತಕ್ಕದ್ದು

ಪಟಿಕದಿಂದ ಮಾಡಲ್ಪಟ್ಟ ಔಷಧದ ನೀರು.

೧॥ ತೊಲೆ ಪಟಿಕವನ್ನು ಕಾಲು ಸೇರು ನೀರಿನಲ್ಲಿ ಕರಗಿಸತಕ್ಕದ್ದು. ಇದು ಹುಣ್ಣು ಮಾಗತಕ್ಕ ಔಷಧದ ನೀರಾಗಿದೆ.

ಶರೀರಕ್ಕೆ ಕ್ರಮೇಣ ಗುಣವನ್ನುಂಟುಮಾಡುವ ಔಷಧಗಳು.

ಲೋಳಸರ ೧॥ ತೊಲೆ, ಅನ್ನಭೇದಿ ।॥ ತೊಲೆ ; ಶುಂಠೀಪುಡಿ ೧॥ ತೊಲೆ. ಇವುಗಳನ್ನೆಲ್ಲಾ ಚೆನ್ನಾಗಿ ಪುಡಿಮಾಡಿ ಅನಂತರ ೧॥ ಚಟುಕು ಕಾಕಂಬಿಯನ್ನು ಸೇರಿಸಿ ಅರ್ಧಸೇರು ತಿಳೀ ಅಕ್ಕಿಯ ಗಂಜಿಯೊಂದಿಗೆ ಮಿಶ್ರಮಾಡಿ ಬಿಸಿಯಾಗಿರುವಾಗಲೇ ಕೊಡತಕ್ಕದ್ದು. ೦ ಅಥವಾ ೩ ದಿನಕ್ಕೆ ಒಂದುಸಾರಿ ಕೊಡತಕ್ಕದ್ದು.

ಶೂಲೆಯನ್ನು ನಿಲ್ಲಿಸತಕ್ಕ ಔಷಧಗಳು.

ಮೆರದೆಣ್ಣೆ ೧॥ ಚಟುಕು, ಅಗಸೇಬೀಜದೆಣ್ಣೆ ೧॥ ಚಟುಕು, ಬಿಸೀಗಂಜಿ ೧ ಪಾವು ; ಇಷ್ಟನ್ನೂ ಮಿಶ್ರಮಾಡತಕ್ಕದ್ದು.

ಹೊಟ್ಟೆ ಊದತಕ್ಕ ಜಾಡ್ಯದಲ್ಲಿ ಪ್ರಯೋಜನಕಾರಿಯಾದದ್ದು.

ಸರಾಬು ೨ರ ಮೊದಲು ೩ ಚಟುಕುಗಳವರಿಗೂ, ಶುಂಠೀಪುಡಿ ೧ ತೊಲೆ, ಕಪ್ಪು ಮೆಣಸು ೧॥ ತೊಲೆ, ಕಾಕಂಬಿ ೧॥ ಚಟುಕು ; ಇವುಗಳನ್ನೆಲ್ಲಾ ಚೆನ್ನಾಗಿ ಮಿಶ್ರಮಾ ೧ ಸೇರು ಬಿಸಿನೀರಿನಲ್ಲಿ ಕೊಡತಕ್ಕದ್ದು.

ಅಧಿಕಾರಗಳನ್ನು ಯೋಗ್ಯರಿಗೇನೇ ಕೊಡಬೇಕು.

ಕಜ್ಜೀವುಲಾವು.

ಟೂರೆಣ್ಣೆ, ಮೆರದೆಣ್ಣೆ, ಸಾಸುವೇ ಎಣ್ಣೆ, ಇವುಗಳಲ್ಲಿ ಸಮಭಾಗಗಳು; ಮುಲಾವು ಮಾಡುವದಕ್ಕೆ ತಕ್ಕಷ್ಟು ಗಂಧಕದ ಪುಡಿ; ಇಷ್ಟನ್ನೂ ಸೇರಿಸಿ ದಿನಕ್ಕೆ ಎರಡು ಅಥವಾ ಮೂರು ಸಾರಿ ದಿನ ಬಿಟ್ಟು ದಿನ ಹಚ್ಚುವದು.

ಸಾಸುವೇ ಎಣ್ಣೆ ೧ ಸೇರು, ಇಂಗಲೀಕ ೧ ತೊಲೆ; ಎಣ್ಣೆಯನ್ನು ಕಾಸಿ ಅನಂತರ ಚೆನ್ನಾಗಿ ಪುಡಿಮಾಡಿದ ಇಂಗಲೀಕವನ್ನು ಸೇರಿಸಿ ಮಿಶ್ರಮಾಡುತ್ತಾ ಬಿಸಿಯಾಗಿ ಹಾಕತಕ್ಕದ್ದು.

ಗಾಯಗಳನ್ನು ಕಟ್ಟತಕ್ಕ ಔಷಧಗಳು.

ಮುರಿದುಹೋದ ಕೊಂಬಿಗೆ ನುಡ್ಡೀಬಟ್ಟೆಗೆ ಕೀಲೆಣ್ಣೆಯನ್ನು ಹಚ್ಚಿ ಅನಂತರ ಹಾಕತಕ್ಕದ್ದು. ಕಳ್ಳೀಹಾಲನ್ನು ಮುರಿದುಹೋದ ಕೊಂಬಿಗೆ ಹಾಕಿ ಮೇಲೆ ಬಟ್ಟೆಸುತ್ತಿ ಸುಣ್ಣ ಬಳಿದರೆ ಬಳ್ಳೀದು.

ಕರ್ಪೂರದೆಣ್ಣೆ.

ಕರ್ಪೂರ ೧ ಭಾಗ, ಮೆರದೆಣ್ಣೆ ೧ ಹಿಸ್ಸೆ, ಸಾಸುವೇ ಎಣ್ಣೆ ೪ ಭಾಗ; ಇವುಗಳನ್ನು ಚೆನ್ನಾಗಿ ಮಿಶ್ರಮಾಡಿ ಹುಣ್ಣುಗಳಿಗೆ ಹಾಕತಕ್ಕದ್ದು. ದುರ್ಗಾಂಸ ಬೆಳೆದರೆ ಮೈಲುತುತ್ತದ ಪುಡಿಯನ್ನು ಹಾಕತಕ್ಕದ್ದು. ದನಕರುಗಳ ಮತ್ತು ಕುರಿಗಳ ಕಾಲುಗಳಲ್ಲಿ ಬರುವ ಹುಣ್ಣುಗಳಿಗೆ ಕಟ್ಟುವದಕ್ಕೆ ಬಳ್ಳೀ ಔಷಧ.

ಜೆಜ್ಜರ ಅಥವಾ ಹುಣ್ಣುಮಾಡತಕ್ಕ ಲೇಪಗಳು.

ತಿಲಮುಖಿ ಎಂಬ ಬೀಜ ೧ ಹಿಸ್ಸೆ, ಅಗಸೇಬೀಜದ ಎಣ್ಣೆ ೬ ಭಾಗಗಳು, ಮೇಣ ೬ ಭಾಗಗಳು. ಮೇಣವನ್ನು ಕರಗಿಸಿ ಅಗಸೇಬೀಜದ ಎಣ್ಣೆಯೊಂದಿಗೆ ಮಿಶ್ರಮಾಡಿ ಅನಂತರ ಹುಳುಗಳನ್ನು ಸೇರಿಸತಕ್ಕದ್ದು.

ಹೇನುಗಳಿಗೂ ಹುಣ್ಣುಗಳಿಗೂ.

(೧) ಕೀಲೆಣ್ಣೆ ೧೫ ಚಟಾಕು, ಮೆರದೆಣ್ಣೆ ೧ ಚಟಾಕು. ಹೇನುಗಳೂ ಉಣ್ಣೆಗಳೂ ಹಿಡಿದು ಇರತಕ್ಕ ಪ್ರದೇಶಗಳಿಗೆ ಹಚ್ಚತಕ್ಕದ್ದು. (೨) ಸಾಸುವೇಪುಡಿ ೧೫ ಚಟಾಕು, ಮೆರದೆಣ್ಣೆ ೧ ಚಟಾಕು, ಬಿಸೀಸಾಸುವೇಎಣ್ಣೆ ೧ ಸೇರು. ಚೆನ್ನಾಗಿ ಮಿಶ್ರಮಾಡಿ ಹಚ್ಚತಕ್ಕದ್ದು.

ಒತ್ತಡ ಕೊಡತಕ್ಕದ್ದು.

ಕಾಲುಘಂಟೆ ಮೊದಲು ೧೦ ಘರ್ಟಘಂಟೇ ಪರ್ಯಂತರ ಫ್ಲಾನಲ್ ಅಥವಾ ಕಂಬಳಿ ಹಾಕಿ ವಿಶೇಷ ಬಿಸಿಯಾಗಿರುವ ನೀರನ್ನು ಸುರಿದು ಒತ್ತಡ ಕೊಡಲ್ಪಟ್ಟ ಜಾಗ ತಂಪಾಗದಂತೆ

ಅಧಿಕಾರಿಗಳೇ ಸ್ವತಂತ್ರರಾದರೆ ರಾಜರನ್ನು ಕೇಳುವರ್ಯಾರು ?

ಎಚ್ಚರಿಕೆಯಿಂದ ನೋಡಿಕೊಂಡು ಅನಂತರ ಬಣಗಿದ ಬಟ್ಟೆಗಳಿಂದ ಬರೆಸಿ ಅನಂತರ ಸಾಸುವೇ ಎಣ್ಣೆ ೪ ಭಾಗಗಳು, ಮರದೆಣ್ಣೆ ೭ ಭಾಗಗಳು, ಇವುಗಳನ್ನು ಚೆನ್ನಾಗಿ ಮಿಶ್ರಮಾಡಿ ಉಜ್ಜತಕ್ಕದ್ದು.

ಹೊಗೆಹಾಕುವದು.

ಕೊಟ್ಟಿಗೆಯಲ್ಲಿ ಅರ್ಧಗಂಟೇ ಪರ್ಯಂತರ ಬಾಗಲನ್ನು ಸ್ವಲ್ಪ ಮುಚ್ಚಿ ಕಬ್ಬಿಣದ ಸಾಟಿನಲ್ಲಿ ಗಂಧಕವನ್ನು ಸುಡತಕ್ಕದ್ದು. ಅಥವಾ ಜೊಗೆಯಿಂದ ದನಗಳು ಕೆಮ್ಮುವ ವರಿಗಾಗಲೀ ಸುಡತಕ್ಕದ್ದು.

ಪೋಲ್ಟೀಸು ಅಥವಾ ಕಟ್ಟುಗಳು.

ಬಿಸಿನೀರಿನಲ್ಲಿ ಅಂಬಲಿ ಅಥವಾ ಚರಿಯಾಗುವಂತೆ ಸೇರಿಸಿ ಬಟ್ಟೇಮೇಲೆಹಾಕಿ ಮೇಲ್ಭಾಗಕ್ಕೆ ಸ್ವಲ್ಪ ಎಣ್ಣೆಯನ್ನು ಹಾಕಿ ಹಚ್ಚಿ ತಕ್ಕದ್ದು. ಹುಣ್ಣು ಬಹಳ ಕೆಟ್ಟದಾಗಿದ್ದಲ್ಲಿ ಪೋಲ್ಟೀಸನ್ನು ಹುಣ್ಣಿಗೆ ಕಟ್ಟುವದಕ್ಕೆ ಪೂರ್ವವೇ ಇದ್ದಲು ಪುಡಿಯನ್ನು ಅದರ ಮೇಲೆ ಚಲ್ಲಿ ಪೋಲ್ಟೀಸನ್ನೂ ಇದ್ದಲನ್ನೂ ಬಾರಿಬಾರಿಗೂ ಬದಲಾಯಿಸ ತಕ್ಕದ್ದು.

ಕೆ. ಶಾಮಯ್ಯಂಗಾರ್,
ಆಗ್ರಿಕಲ್ಚರಲ್ ಇನ್‌ಸ್ಪೆಕ್ಟರ್, ಶಿವಮೊಗ್ಗ.

೨. ಶಾರೀರಕ ಧರ್ಮಶಾಸ್ತ್ರ.

೨ನೇ ಅಧ್ಯಾಯ.—ಸಂಚಾರಾದಿ ಶಾರೀರಕ ಚಲನಗಳು.

ನಿರ್ಜೀವಿಗಳಾದ ಕಲ್ಲು ಮಣ್ಣು ಗುಡ್ಡಗಳನ್ನು ಸ್ಥಾವರಗಳೆಂದೂ ಜೀವಜಂತುಗಳೆಲ್ಲವನ್ನೂ ಜಂಗಮಗಳೆಂದೂ ಸಂಸ್ಕೃತ ಭಾಷೆಯಲ್ಲಿ ಹೇಳುವರು. ಸ್ಥಾವರವೆಂದರೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಲಾರದ ವಸ್ತುವೆಂದು ಅರ್ಥವು. ಆದ್ದರಿಂದ ಸಂಚಾರವೇ ಮೊದಲಾದ ಶಾರೀರಕಚಲನಗಳು ಜೀವಜಂತುಗಳಿಗೂ ನಿರ್ಜೀವಿಗಳಿಗೂ ಇರುವ ವ್ಯತ್ಯಾಸವನ್ನು ತೋರಿಸುವದಕ್ಕೆ ಮುಖ್ಯವಾದ ಹೆಗ್ಗುರುತಾಗಿರುವವಲ್ಲವೆ ? ಜಂಗಮವಸ್ತುಗಳೆಲ್ಲವೂ ಸತ್ತಮೇಲೆ ಸ್ಥಾವರಸ್ಥಿತಿಯನ್ನು ಹೊಂದುವವೆಂಬುವದು ಯಾರಿಗೆತಾನೆ ತಿಳಿಯದು ?

ಮೊದಲನೇ ಅಧ್ಯಾಯದಲ್ಲಿ ಮುಖ್ಯವಾದ ಕೆಲವು ಶರೀರ ನಿರ್ಮಾಣ ಸಾಮಗ್ರಿಗಳು ತಿಳಿಸಲ್ಪಟ್ಟವು. ಅವುಗಳಲ್ಲಿ ಮಾಂಸ ಖಂಡಗಳು ಶಾರೀರಕ ಚಲನಗಳೆಲ್ಲವನ್ನೂ

ಆಪರಾಧ ಹಾಗ ಪೂಲು, ಶಿಕ್ಷೆ ಮುಪ್ಪಾಗ ಪೂಲಾದರೆ ಪ್ರಜೆ ಉಳಿದೀತೆ?

ಉಂಟುಮಾಡುತ್ತವೆ. ದೇಹದಲ್ಲಿ ಅನೇಕ ಮಾಂಸಖಂಡಗಳಿವೆ. ಇವುಗಳೆಲ್ಲವೂ ಸೂಕ್ಷ್ಮವಾದ ಮಾಂಸ ತಂತುಗಳಿಂದ ಮಾಡಲ್ಪಟ್ಟಿವೆ. ಇವುಗಳನ್ನು ಸೂಕ್ಷ್ಮವಸ್ತುಪ್ರದರ್ಶಕ (microscope) ವೆಂಬ ಭೂತಕನ್ನಡಿ ಕೊಳವೆಯ ಮೂಲಕವಾಗಿ ನೋಡಿದರೆ ಹೊರತು ಈ ಮಾಂಸಖಂಡಗಳಲ್ಲಿರುವ ಅತಿ ಸೂಕ್ಷ್ಮವಾದ ಮಾಂಸ ತಂತುಗಳು ಸ್ವಲ್ಪವಾದರೂ ಕಣ್ಣಿಗೆ ಗೋಚರಿಸುವದಿಲ್ಲ. ಈ ತಂತುಗಳಲ್ಲಿ ಎರಡುವಿಧ ಉಂಟು. ಅದರೆ ಅವುಗಳ ಸ್ವಭಾವವು ಮುಂದೆ ತಿಳಿಸಲ್ಪಡುವದು. ಮಿದುಳಿಗೂ ಮಿದುಳು ಬಳ್ಳಿಗೂ ಶರೀರದಲ್ಲಿ ನಡೆಯುವ ಸಕಲ ಕಾರ್ಯಗಳ ಮೇಲೂ ಅಧಿಕಾರವಿರುವದರಿಂದ, ಇವುಗಳ ಪ್ರೇರಣೆಯಿಲ್ಲದೆ ಶಾರೀರಕ ವ್ಯಾಪಾರವು ಯಾವದೂ ನಡೆಯುವದಿಲ್ಲ. ಆದದ್ದರಿಂದ ಮಿದುಳೂ ಮಿದುಳು ಬಳ್ಳಿಯೂ, ಇವುಗಳಿಂದ ಹೊರಡುವ ಚೈತನ್ಯ ತಂತುಗಳೂ, ಯಾವದರಿಂದ ಮಾಡಲ್ಪಟ್ಟಿರುತ್ತವೆಯೋ, ಆ ಶರೀರನಿರ್ಮಾಣ ಸಾಮಗ್ರಿಯನ್ನು ಪ್ರೇರಕ ಸಾಮಗ್ರಿ, ಅಥವಾ, ಉತ್ತೇಜಕ ಸಾಮಗ್ರಿ ಎಂದು ಹೇಳುತ್ತಾರೆ, ಮಾಂಸ ತಂತುಗಳೆಲ್ಲವೂ ಚೈತನ್ಯ ತಂತುಗಳಿಂದ ಪ್ರೇರಿನಲ್ಪಟ್ಟಾಗ ಸಂಕುಚಿಸುವವು; ಅಂದರೆ, ಅವುಗಳ ಉದ್ದವು ಕಡಮೆಯಾಗಿ ದಪ್ಪವು ಹೆಚ್ಚಾಗುವದು. ಈ ಪ್ರಕಾರವಾದ ಮಾಂಸತಂತುಸಂಕೋಚನದಿಂದಲೇ ಮಾಂಸ ಖಂಡಗಳು ಶಾರೀರಕಚಲನಗಳನ್ನುಂಟುಮಾಡುತ್ತವೆ. ಆದಕಾರಣ ಮಾಂಸ ಖಂಡಗಳು ಮಾಡಲ್ಪಟ್ಟಿರುವ ಸಾಮಗ್ರಿಯನ್ನು ಸಂಕೋಚನಸಾಮಗ್ರಿಯೆಂದು ಹೇಳುತ್ತಾರೆ. ಶರೀರ ನಿರ್ಮಾಣ ಸಾಮಗ್ರಿಗಳಲ್ಲೆಲ್ಲಾ ಉತ್ತೇಜಕ ಸಾಮಗ್ರಿಯೂ ಸಂಕೋಚನ ಸಾಮಗ್ರಿಯೂ ಅತಿ ಪ್ರಧಾನವಾದವುಗಳು; ಇವುಗಳಿಂದಲೇ ಶಾರೀರಕ ವ್ಯಾಪಾರಗಳೆಲ್ಲವೂ ಸಾಧಿಸಲ್ಪಡುತ್ತವೆ. ಇತರ ಸಾಮಗ್ರಿಗಳೆಲ್ಲವೂ ಈ ಎರಡು ಪ್ರಧಾನ ಸಾಮಗ್ರಿಗಳ ಸಂರಕ್ಷಣೆಗೂ ಸಹಾಯಕ್ಕೂ ಉಪಯೋಗಿಸುತ್ತವೆ.

ಮಿದುಳೂ ಮಿದುಳು ಬಳ್ಳಿಯೂ ಅಂದರೆ, ಮಾಂಸ ಖಂಡಗಳ ಸಂಕೋಚನವನ್ನು ಪ್ರೇರಿಸುವದಕ್ಕೆ ಉತ್ತೇಜಕ ಸಾಮಗ್ರಿಯಿಂದ ಮಾಡಲ್ಪಟ್ಟಿರುವ ಚೈತನ್ಯ ಗ್ರಂಥಿಗಳ (Nervous ganglia) ಸರಪಣಿಗಳೆರಡು ಬೆನ್ನುದಂಡಿಯ ಮುಂದುಗಡೆಯ ಎರಡು ಪಕ್ಕಗಳಲ್ಲಿಯೂ ಇರುತ್ತವೆ. ಎದೆಯ ಗೂಡು ಮತ್ತು ಉದರ ಪ್ರದೇಶ ಇವುಗಳ ಸುತ್ತು ಗೋಡೆಯನ್ನು ಮುಂದುಗಡೆಯಲ್ಲಿ ಮಾತ್ರವೇ ತೆಗೆದು, ವಕ್ಷೋಂತರ್ದೇಶದಲ್ಲೂ ಉದರಾಂತರ್ದೇಶದಲ್ಲೂ ಇರುವ ಅಂಗಗಳೆಲ್ಲವನ್ನೂ ಹೊರಕ್ಕೆ ಹಾಕಿ, ಒಳಗೆ ಬೆನ್ನುದಂಡಿಯ ಮಗ್ಗಲಲ್ಲಿ ಪರಿಶೋಧಿಸಿ ನೋಡಿದರೆ, ಈ ಚೈತನ್ಯ ಗ್ರಂಥಿಗಳ ಸರಪಣಿಗಳು ಕಾಣಬರುತ್ತವೆ. ಇವುಗಳಂತೆಯೇ ಇನ್ನೂ ಕೆಲವು ಚೈತನ್ಯಗ್ರಂಥಿಗಳು ಶರೀರದಲ್ಲಿರುತ್ತವೆ. ಚೈತನ್ಯ ಗ್ರಂಥಿಗಳಿಂದಲೂ ಚೈತನ್ಯ ತಂತುಗಳು ಹೊರಟು ಕೆಲವು ಮಾಂಸ ಖಂಡಗಳನ್ನು ವ್ಯಾಪಿಸಿ ಇವೆ. ಮಿದುಳಿಗೂ ಮಿದುಳು ಬಳ್ಳಿಗೂ, ಅನೇಕವಾದ ಶಾರೀರಕ

ಅಲ್ಲದ ಮಾತು ಸಲ್ಲುವದೇ ಇಲ್ಲ.

ವ್ಯಾಪಾರಗಳನ್ನು ಪ್ರೇರಿಸುವದರೊಡನೆ, ಜ್ಞಾನವನ್ನೂ ಸುಖದುಃಖಾನುಭವನನ್ನೂ ಸಂಕಲ್ಪ ಶಕ್ತಿಯನ್ನೂ ಮನುಷ್ಯನಿಗೆ ಕೊಡುವದೂ ಕೂಡ ಒಂದು ಮುಖ್ಯ ಕಾರಣವಾಗಿದೆ. ಅದ್ದರಿಂದ ವಿದುಳನ್ನೂ ವಿದುಳು ಬಳ್ಳಿಯನ್ನೂ ಇವೆರಡರಿಂದಲೂ ಹೊರಡುವ ಚೈತನ್ಯತಂತುಗಳನ್ನೂ ಒಟ್ಟಾಗಿ ಮನೋಧಿಷ್ಠಾನವೆಂದು (Cerebrospinal system) ಹೇಳುತ್ತಾರೆ. ಇದಲ್ಲದೆ ಮೈಯಲ್ಲಿ ಅಲ್ಲಲ್ಲಿರುವ ಚೈತನ್ಯ ಗ್ರಂಥಿಗಳು ಜ್ಞಾನಾನುಭವ ಸಂಕಲ್ಪ ಶಕ್ತಿಗಳನ್ನುಂಟುಮಾಡದೆ, ಪ್ರಾಣ ಧಾರಣಕ್ಕೆ ಮಾತ್ರ ಅತ್ಯವಶ್ಯಕಗಳಾದ ಕೆಲವು ಶಾರೀರಕ ಕಾರ್ಯಗಳನ್ನು ನಿರಂತರವಾಗಿ ಪ್ರೇರಿಸುವದರಿಂದ, ಇವುಗಳನ್ನೂ ಜೀವಿತಾನ್ವಧಿಷ್ಠಾನವೆಂದು (Sympathetic system) ಹೇಳುತ್ತಾರೆ.

ಕಮ್ಮಾರನು ಭಾರವಾದ ಚಮ್ಮಟ್ಟಿಗೆಯಿಂದ ಕಬ್ಬಿಣವನ್ನು ಸಾಗಬಡಿಯುವಾಗ ಅವನ ತೋಳನ್ನು ನೋಡಿದರೆ, ಮಾಂಸಖಂಡಗಳು ಶರೀರದಲ್ಲಿ ಚಲನಗಳನ್ನುಂಟುಮಾಡುವ ಕ್ರಮವನ್ನೂ ಹಿಸಬಹುದು. ಮನುಷ್ಯರಿಗೆಲ್ಲರಿಗೂ ತೋಳಿನ ಮುಂದುಗಡೆಯಲ್ಲಿ ಒಂದು ದೊಡ್ಡ ಮಾಂಸಖಂಡವಿದೆ. ಇದಕ್ಕೆ ಮೇಲುಗಡೆಯಲ್ಲಿ ಎರಡು ಮಾಂಸ ಬಂಧನಗಳಿರುವದರಿಂದ, ಇದನ್ನು ದ್ವಿಶೀರ್ಷ (Biceps) ಅಥವಾ ಎರಡು ತಲೆಯುಳ್ಳ ಮಾಂಸಖಂಡವೆಂದು ಹೇಳುತ್ತಾರೆ. ಇದರ ಮೇಲುಗಡೆಯ ಎರಡು ಮಾಂಸಬಂಧನಗಳೂ ರೆಕ್ಕೆ ಎಲುವಿನ ಶಿಖರಗಳಿಗೆ ಬಿಗಿಯಲ್ಪಟ್ಟಿರುತ್ತವೆ; ಕೆಳಗಡೆಯ ಮಾಂಸ ಬಂಧನವು ಕೈಯ ಎಲುವುಗಳಿರಡರಲ್ಲೊಂದರ ತಲೆಗೆ ಬಿಗಿಯಲ್ಪಟ್ಟಿರುತ್ತದೆ. ತೋಳೆಲುವೂ ಕೈಯೆಲುವುಗಳ ಬಂದರಮೇಲೊಂದು ತಿರುಗುವಹಾಗೆ ಕಟ್ಟಲ್ಪಟ್ಟಿರುವದರಿಂದ ನಮ್ಮ ನೊಣಕೈಯು ಕೀಲಿರುವದು. ಆದಕಾರಣ ಈ ದ್ವಿಶೀರ್ಷ ಮಾಂಸಖಂಡವು ಸಂಕೋಚವನ್ನು ಹೊಂದಿದರೆ, ಕೈಯು ತೋಳಿನಮೇಲೆ ಮಡಿಸಲ್ಪಡುವದು. ಕಮ್ಮಾರನು ಚಮ್ಮಟಿಗೆಯನ್ನು ಮೇಲಕ್ಕೆ ಎತ್ತುವಾಗ, ಅವನ ತೋಳಿನ ಮುಂದುಗಡೆಯಲ್ಲಿರುವ ಈ ಮಾಂಸ ಖಂಡವು ದಪ್ಪವಾಗಿ ಉಬ್ಬಿಕೊಳ್ಳುವದು ಎಲ್ಲರಿಗೂ ಚನ್ನಾಗಿ ಕಾಣಬರುತ್ತದೆ. ನಾವು ಕೈಯನ್ನೆತ್ತಬೇಕೆಂದು ಮನಸ್ಸಿನಲ್ಲಿ ಸಂಕಲ್ಪಿಸಿಕೊಂಡು, ಆ ಕಾರ್ಯವನ್ನು ಮಾಡುವದಕ್ಕೆ ಪ್ರಯತ್ನಿಸುವಾಗ ದ್ವಿಶೀರ್ಷಮಾಂಸಖಂಡವು ಅದನ್ನು ವ್ಯಾಪಿಸಿರುವ ಚೈತನ್ಯ ತಂತುಗಳಿಂದ ಪ್ರೇರಿಸಲ್ಪಟ್ಟು, ಸಂಕುಚಿಸುವದು. ಆದರೆ ಕಮ್ಮಾರನು ಚಮ್ಮಟಿಗೆಯಿಂದ ಕಬ್ಬಿಣವನ್ನು ಬಡಿಯುತ್ತಿರುವಾಗ, ಅವನ ತೋಳಿನಲ್ಲಿರುವ ದ್ವಿಶೀರ್ಷ ಮಾಂಸಖಂಡವೊಂದು ಮಾತ್ರವೇ ಸಂಕುಚಿಸುವದಿಲ್ಲ; ಇನ್ನೂ ಇತರ ಮಾಂಸಖಂಡಗಳೂಕೂಡ ಸಂಕುಚಿಸುತ್ತವೆ. ಮನೋಧಿಷ್ಠಾನದಿಂದ ಶಕ್ತಿ ವಿಶೇಷವೊಂದು ಚೈತನ್ಯ ತಂತುಗಳ ಮೂಲಕವಾಗಿ ಆಯಾ ಮಾಂಸಖಂಡಗಳಿಗೆ ಪ್ರಸರಿಸಿ ಅವುಗಳ ಸಂಕೋಚವನ್ನು ಪ್ರೇರಿಸುತ್ತದೆ. ಚೈತನ್ಯತಂತುಗಳ ಪ್ರೇರಣೆಯು ನಿಂತುಹೋದ ಕೂಡಲೇ ಸಂಕುಚಿತ

ಅವಯವಾನಕ್ಕಿಂತ ಚಿಕ್ಕದ್ಯಾವದು ?

ಯಲ್ಲಿದ್ದ ಮಾಂಸಖಂಡಗಳೆಲ್ಲವೂ ತಮ್ಮ ಪೂರ್ವಸ್ಥಿತಿಯನ್ನು ಹೊಂದಿ ಸಡಿಲವಾಗ ಲೇಕಾದದ್ದು ಸಹಜವೇ. ದ್ವಿಶೀರ್ಷ ಮಾಂಸಖಂಡವೂ ಅದರೊಡನೆ ಸಂಕೋಚವನ್ನು ಹೊಂದಿದ್ದ ಇತರ ಮಾಂಸಖಂಡಗಳೂ, ಈ ಪ್ರಕಾರವಾಗಿ ಸಡಿಲವಾಗುವದರಿಂದಲೂ, ಚಮ್ಮಟಿಗೆಯ ಹುತ್ತು ತೋಳಿನ ಭಾರದಿಂದಲೂ, ಮೇಲಕ್ಕೆತ್ತಿದ ತೋಳು ಚಮ್ಮಟಿಗೆಯೊಡನೆ ತಿರುಗಿ ಕೆಳಕ್ಕೆ ಬರುವದು. ಇವೆಲ್ಲದೆ ಮಡಿಸಿದ ಕೈಯನ್ನು ನೀಡಿಸುವದಕ್ಕೆ ತೋಳಿನ ಹಿಂದುಗಡೆಯಲ್ಲಿ ತ್ರಿಶೀರ್ಷವೆಂಬದೊಂದು ಮಾಂಸಖಂಡವಿರುವದು. ಇದರ ಮೇಲುಗಡೆಯ ಮೂರು ಮಾಂಸ ಬಂಧನಗಳಲ್ಲಿ ಒಂದು ರೆಕ್ಕೆಯ ಎಲುವಿಗೂ, ಎರಡು ತೋಳೆಲುವಿನ ಹಿಂಬುಗಡೆಗೂ, ಕೆಳಗಡೆಯ ಮಾಂಸ ಬಂಧನವು ಕನಿಷ್ಠಕ ಭಾಗಸ್ಥಿಯೆಂಬ (Ulna) ಕೈಯೆಲುವಿನ ಕೊಂಬಿನ ಹಿಂದುಗಡೆಗೂ ಅಂಟಿಸಲ್ಪಟ್ಟಿವೆ. ಈ ತ್ರಿಶೀರ್ಷ ಮಾಂಸಖಂಡವು ಜೈತನ್ಯ ತಂತುಗಳಿಂದ ಪ್ಯೇರಿಸಲ್ಪಟ್ಟು ಸಂಕುಚಿಸಿದರೆ, ತೋಳಿನ ಮೇಲೆ ಮಡಿಸಿದ್ದ ಕೈಯನ್ನು ನೀಡಬೇಕಾಗಿ ಬರುವದಲ್ಲವೆ ? ಇದರಿಂದ ದ್ವಿಶೀರ್ಷ ಸಂಕೋಚನದಿಂದ ನಾವು ಕೈಯನ್ನು ತೋಳಿನ ಮೇಲೆ ಮಡಿಸುವದಾಗಿಯೂ, ತ್ರಿಶೀರ್ಷ ಸಂಕೋಚನದಿಂದ ಮಡಿಸಿದ ಕೈಯನ್ನು ನೀಡುವದಾಗಿಯೂ ನಮಗೆ ವಿಶದವಾಗುತ್ತದೆ.

ಹೀಗೆಯೇ ಸಾಧಾರಣವಾಗಿ ಮಾಂಸ ಖಂಡಗಳು ಶರೀರದಲ್ಲಿ ಬಂದಕ್ಕೊಂದು ಪ್ರತಿಯಾಗಿರುವಹಾಗೆ, ಕೀಲುಗಳಿರುವ ಕಡೆಯಲ್ಲೆಲ್ಲಾ ಎಲುವುಗಳಿಗೆ ಬಲವಾಗಿ ಅಂಟಿಸಲ್ಪಟ್ಟಿವೆ. ಇವುಗಳು ಸಮಯೋಚಿತವಾಗಿ ಸಂಕುಚಿಸುವದರಿಂದ, ಶರೀರದಲ್ಲಿ ಸಾಧಿಸಲ್ಪಡುವ ಚಲನಗಳೆಲ್ಲವೂ ಉಂಟಾಗುತ್ತವೆ. ಶರೀರಕ್ಕೆ ಅವಯವಗಳಾದ ಕೈ ಕಾಲುಗಳಿಗೆ ವಿಶೇಷವಾಗಿ ಚಲಿಸುವ ಯೋಗ್ಯತೆ ಇರುತ್ತದೆ. ತಲೆಗೂಕೂಡ ಬೆನ್ನುದಂಡಿಯ ವೇಲೆ ಆಡುವ ಯೋಗ್ಯತೆಯಿದೆ. ಬೆನ್ನು ದಂಡಿಯು ಚಿಕ್ಕಚಿಕ್ಕದಾದ ಎಲುವುಗಳ ಜೋಡಣೆಯಿಂದ ಮಾಡಲ್ಪಟ್ಟಿದ್ದಾಗ್ಯೂ, ಅದರ ಸಹಾಯದಿಂದ ವಿಶೇಷವಾಗಿ ಮೈಯಲ್ಲಿ ಚಲನವನ್ನುಂಟು ಮಾಡುವದಕ್ಕಾಗುವದಿಲ್ಲ. ಬೆನ್ನುದಂಡಿಗೆ ಮುಂದು ಹಿಂದುಗಡೆಗಳಲ್ಲಿಯೂ ಪಕ್ಕಗಳಲ್ಲಿಯೂ ಮಾಂಸಖಂಡಗಳು ಬಿಗಿಯಲ್ಪಟ್ಟಿವೆ. ಇವುಗಳ ಸಂಕೋಚನದಿಂದ ಬೆನ್ನು ದಂಡಿಯನ್ನು ಸ್ವಲ್ಪಮೆಟ್ಟಿಗೆ ಮುಂದಕ್ಕೂ ಹಿಂದಕ್ಕೂ ಪಕ್ಕಗಳಿಗೂ ಬಗ್ಗಿಸಬಹುದು. ಬೆನ್ನುದಂಡಿಯ ಎಲುವುಗಳು ಸಂಧಿಬಂಧನದ ನಾರುಗಳಿಂದ ಬಲವಾಗಿ ಒಂದರೊಡನೆ ಒಂದು ಕಟ್ಟಲ್ಪಟ್ಟಿರುವದರಿಂದ, ಈ ಎಲುವುಗಳು ಒಂದರೆಮೇಲೊಂದು ತಿರುಗಲಾರವು. ಅದರೆ ಎಲುವುಗಳು ಒಂದರಮೇಲೊಂದು ಸುಲಭವಾಗಿ ತಿರುಗುವಕಡೆಯಲ್ಲೆಲ್ಲಾ ದೇಹದಲ್ಲಿ ಕೀಲುಗಳಿರುವದಾಗಿ ಮುಂಚೆ ತಿಳಿಸಲ್ಪಟ್ಟಿತು. ಇಂಥಾ ಕೀಲುಗಳು ಶರೀರಾವಯವಗಳಾದ ಕೈಕಾಲುಗಳಲ್ಲಿ ಬಹಳವಾಗಿವೆ. ಇವುಗಳಲ್ಲಿ ಮೂರು ನಾಲ್ಕು ವಿಧವುಂಟು. ಮೇಲಿನ ಅವಯವಾದ ಬಾಹುವಿನಲ್ಲಿ ತೋಳಿನಕೀಲೂ, ಮೊಣಕೈ ಕೀಲು

ಗಳೂ, ಮಣಿಬಂಧದ ಕೀಲೂ, ಬೆರಳುಗಳ ಕೀಲುಗಳೂ ಇವೆ ; ಕೆಳಗಿನ ಅವಯವದಲ್ಲಿ ತೊಡೆಯ ಕೀಲೂ, ಮೊಣಕಾಲಿನ ಕೀಲೂ, ಪಾದದ ಕೀಲೂ, ಬೆರಳುಗಳ ಕೀಲುಗಳೂ ಇವೆ. ಇವುಗಳಲ್ಲದೆ ತಲೆಗೂ ಪಸ್ಸುದಂಡಿಗೂ ಮಧ್ಯದಲ್ಲೊಂದು ಕೀಲಿರುತ್ತದೆ. ಈ ಕೀಲುಗಳ ಮೂಲಕವಾಗಿ ಶರೀರದ ಅವಯವಗಳಲ್ಲಿ ಮಡಿಸೋಣ (Flexion) ನೀಡೋಣ (Extension), ತಿರುಗಿಸೋಣ (Rotation), ಸುತ್ತೋಣ (Circumduction), ಆಕುಂಚಿಸೋಣ (Adduction), ಪ್ರಸರಿಸೋಣ (Abduction) ಎಂಬ ಆರುವಿಧವಾದ ಚಲನಗಳನ್ನುಂಟುಮಾಡಬಹುದು. ಆದರೆ ಎಲ್ಲಾ ಕೀಲುಗಳಿರುವ ಕಡೆಯಲ್ಲೂ ಈ ಆರು ವಿಧವಾದ ಚಲನಗಳೂ ಉಂಟಾಗುವದಿಲ್ಲ. ಮೊಣಕೈ ಮೊಣಕಾಲು ಕೀಲುಗಳ ಸಹಾಯದಿಂದ ಕೈಯನ್ನೂ ಕಾಲನ್ನೂ, ತೋಳಿನ ಮೇಲೂ ತೊಡೆಯಮೇಲೂ ಮಡಿಸುವದಕ್ಕೂ, ಆ ಮೇಲೆ ನೀಡುವದಕ್ಕೂ ಆಗುವದೇ ಹೊರತು, ಇತರವಿಧವಾದ ಚಲನವನ್ನು ಸಾಧಿಸುವದಕ್ಕಾಗುವದಿಲ್ಲ. ಕೈಕಾಲುಗಳ ಬೆರಳುಗಳ ಸಹಾಯದಿಂದ ಬೆರಳುಗಳನ್ನು ಮಡಿಸುವದಕ್ಕೂ ನೀಡುವದಕ್ಕೂ ಆಗುತ್ತದೆ. ಕೈಯನ್ನು ತೋಳಿನ ಮೇಲೆ ಮುಂದುಗಡೆಯಲ್ಲಿಮಾತ್ರ ಮಡಿಸುವದಕ್ಕಾಗುತ್ತದೆ ; ಹಿಂದಕ್ಕೆ ಮಡಿಸುವದಕ್ಕಾಗುವದೇ ಇಲ್ಲ. ಹೀಗೆಯೇ ಕಾಲನ್ನೂ ಹಿಂದಕ್ಕೆ ಮಡಿಸುವದಕ್ಕಾಗುವದೇ ಹೊರತು ಮುಂದಕ್ಕೆ ಮಡಿಸುವದಕ್ಕಾಗುವದಿಲ್ಲ ಬೆರಳುಗಳನ್ನೂ ಕೂಡ ಬಂದೇ ಕಡೆಯಲ್ಲಿಮಾತ್ರ ಮಡಿಸುವದಕ್ಕೂ ನೀಡುವದಕ್ಕೂ ಆಗುತ್ತದೆ. ಮಣಿಬಂಧದ ಕೀಲಿನ ಸಹಾಯದಿಂದ ಹಸ್ತವನ್ನು ಕೈಯಿನ ಮೇಲೆ ಸ್ವಲ್ಪಮಟ್ಟಿಗೆ ಮುಂದಕ್ಕೂ ಹಿಂದಕ್ಕೂ ಮಡಿಸಬಹುದು. ಹಸ್ತವನ್ನು ತಿರುಗಿಸುವ ಯೋಗ್ಯತೆಯುಕೂಡ ನಮಗಿರುತ್ತದೆ. ಮೇಲು ಮೊಗವಾಗಿರುವ ಅಂಗೈಯನ್ನು ಕೆಳಮೊಗವಾಗುವಂತೆ ಮಾಡಬಹುದು ; ಆಗೆಲೆ ಕೆಳಮೊಗವಾಗಿದ್ದ ಮುಂಗೈಯು ಮೇಲು ಮೊಗವಾಗುವದು. ಆದರೆ ಹೀಗೆ ಹಸ್ತವನ್ನು ತಿರುಗಿಸೋಣವು ಮಣಿಬಂಧದ ಕೀಲಿನ ಮೂಲಕವಾಗಿ ಸಾಧ್ಯವಿಲ್ಲವು. ನಮ್ಮ ಕೈಯಲ್ಲಿ ಎರಡು ಎಲುವುಗಳಿರುವದಾಗಿ ಮೇಲೆ ತಿಳಿಸಲ್ಪಟ್ಟಿತಲ್ಲವೆ ? ಅಂಗೈಯು ಮೇಲುಮೊಗವಾಗಿರುವಹಾಗೆ ಕೈಯನ್ನು ಮುಂದಕ್ಕೆ ನೀಡಿದರೆ, ಆಗ ಈ ಎರಡೆಲುವುಗಳೂ ಉದ್ದಕ್ಕೂ ಒಂದರ ಪಕ್ಕದಲ್ಲೊಂದಿರುವವು. ಇವುಗಳಲ್ಲಿ ಪಸ್ತದ ಹೆಬ್ಬೆಟ್ಟಿನಕಡೆ ಇರುವ ಎಲುವಿಗೆ ಅಂಗುಷ್ಠಭಾಗಾಸ್ಥಿ (Radius) ಯೆಂದು ಹೆಸರು ; ಕಿಬ್ಬೆಟ್ಟಿನ ಕಡೆಗಿರುವದಕ್ಕೆ ಕನಿಷ್ಠಕ ಭಾಗಾಸ್ಥಿ (ulna) ಯೆಂದು ಹೆಸರು. ಇವುಗಳಲ್ಲಿ ತೋಳಿನ ಎಲುವಿನ ಕೆಳಗಡೆಗೆ ಕನಿಷ್ಠಕ ಭಾಗಾಸ್ಥಿಯು ಕೈಯನ್ನು ತೋಳಿನಮೇಲೆ ಮಡಿಸುವದಕ್ಕೂ ನೀಡುವದಕ್ಕೂ ಆಗುವಹಾಗೆ ಕಟ್ಟಲ್ಪಟ್ಟಿದೆ. ಅಂಗುಷ್ಠಭಾಗಾಸ್ಥಿಯು ಶಿರೋದೇಶವರ್ತುಲಾಕಾರವಾಗಿ ಹಳ್ಳವಾಗಿದೆ. ಈ ಹಳ್ಳಕ್ಕೆ ಸರಿಯಾಗಿರುವಹಾಗೆ ತೋಳಿನ ಎಲುವಿನ

ಅನೇಕರಿದ್ದರೂ ರಕ್ಷಿಸುವವರೇ ರಕ್ಷಿಸಬೇಕು.

ಕೆಳಗಡೆಯಲ್ಲಿ ಬಂದು ಉಬ್ಬು ಇದೆ. ಈ ಉಬ್ಬಿಗೂ ಅಂಗುಷ್ಠ ಭಾಗಾಸ್ಥಿಯ ತಿರೋದೇಶಕ್ಕೂ ಇರುವ ಜೋಡಣೆಯಿಂದ ಮೊಣಕೈಯಲ್ಲಿ ಇನ್ನೊಂದು ಕೀಲಿರುತ್ತದೆ. ಅಂಗೈಯು ಮೇಲುಮೊಗವಾಗಿರುವಾಗ ಅಂಗುಷ್ಠ ಭಾಗಾಸ್ಥಿಯೂ ಕನಿಷ್ಠ ಭಾಗಾಸ್ಥಿಯೂ ಒಂದರ ಮುಗ್ಗಲಲ್ಲೊಂದಿರುವವಲ್ಲವೆ ? ಅಂಗೈಯು ಕೆಳಮೊಗವಾಗಿ ಮುಂಗೈಯು ಮೇಲುಮೊಗವಾಗಿರುವಾಗ ಅಂಗುಷ್ಠ ಭಾಗಾಸ್ಥಿಯು ತಿರುಗಿ ಕನಿಷ್ಠ ಭಾಗಾಸ್ಥಿಯ ಮೇಲೆ ಅಡ್ಡವಾಗಿರುತ್ತದೆ. ಇದು ಅಡ್ಡವಾಗುವದರಿಂದಲೇ ನಮ್ಮ ಹಸ್ತವನ್ನು ತಿರುಗಿಸುವದಕ್ಕಾಗುತ್ತದೆ. ಆದ್ದರಿಂದ ಹಸ್ತವನ್ನು ತಿರುಗಿಸುವದು ಮಣಿಕಟ್ಟಿನ ಕೀಲಿನ ಸಹಾಯವಿಂದಲ್ಲ. ಆದಾಗ್ಯೂ ಮಣಿಬಂಧ ಪ್ರದೇಶದಲ್ಲಿ ಚಿಕ್ಕ ಚಿಕ್ಕದಾದ ಎಂಟು ಎಲುವುಗಳು ಪ್ರತ್ಯೇಕ ಪ್ರತ್ಯೇಕವಾಗಿ ಜೋಡಿಸಲ್ಪಟ್ಟಿರುವದರಿಂದ ಮಣಿಕಟ್ಟಿನ ಕೀಲು ಬೇರೇ ಕೀಲುಗಳಿಗಿಂತ ವಿಶೇಷವಾದ ಚಲನಸಾಮರ್ಥ್ಯವುಳ್ಳದ್ದಾಗಿದೆ. ಚಿತ್ರವನ್ನು ಬರೆಯುವಾಗಲೂ ಲ್ಪಕಾರ್ಯಗಳನ್ನು ಮಾಡುವಾಗಲೂ ವೀಣೆಯೇ ಮುಂತಾದ ಸಂಗೀತವಾದ್ಯಗಳನ್ನು ನುಡಿಸುವಾಗಲೂ ಮನುಷ್ಯರ ಹಸ್ತದ ಅತ್ಯಾಶ್ಚರ್ಯಕರವಾದ ಲವಲವಿಕೆಯು ತಿಳಿಯಬರುತ್ತದೆ. ಪಾದದ ಕೀಲೂ ಮುಕ್ಕಾಲುಪಾಲು ಹಸ್ತದ ಕೀಲಿನಹಾಗೆಯೇ ಇದೆ. ಆದರೆ ಹಸ್ತವನ್ನು ಮೇಲಕ್ಕೂ ಕೆಳಕ್ಕೂ ತಿರುಗಿಸುವಹಾಗೆ ಪಾದವನ್ನು ತಿರುಗಿಸುವದಕ್ಕಾಗುವದಿಲ್ಲ. ಪಾದದ ಕೀಲಿನ ಲವಲವಿಕೆಯೂ ಕೂಡ ಬಹಳ ಕಡಮೆಯಾಗಿರುತ್ತದೆ. ಆದರೆ ಕೆಲವು ಕೀಲುಗಳುವಾತ್ರ ಮೇಲೆ ಹೇಳಿದ ಆರುವಿಧವಾದ ಚಲನಗಳನ್ನೂ ಉಂಟುಮಾಡುತ್ತವೆ. ಇಂಥಾ ಕೀಲುಗಳನ್ನು ಸರ್ವತೋಮುಖಸಂಧಿಗಳೆಂದು (Universal joints) ಹೇಳಬಹುದು. ತೋಳಿನ ಕೀಲೂ ತೊಡೆಯಕೀಲೂ ಇಂಥಾವುಗಳು. ಕೈಕ್ಕೀ ಎಲುವಿನ ತಿಲರಗಳಲ್ಲೊಂದರಲ್ಲಿ ಆಳವು ಕಡಮೆಯಾದ ಚಿಕ್ಕ ಸಾಳ್ಗುನಹಾಗೆ ಬಂದು ಹಳವಿಯುವದು. ಇದರ ಸುತ್ತಲೂ ಇರುವ ಮಾಂಸಬಂಧಗಳೆಲ್ಲವೂ ಸೇರಿ ಇದರ ಆಳವನ್ನು ಹೆಚ್ಚಿಸಿ ಇದನ್ನು ಬಂದು ಚಿಕ್ಕ ಬಟ್ಟಲಿನ ಹಾಗೆ ಮಾಡುತ್ತವೆ. ತೋಳೆಲುವಿನ ಉಂಡೆಯಾಗಿರುವ ತಲೆಯು ಈ ಬಟ್ಟಲಿನ ಒಳಗಡೆಯಲ್ಲಿಡಲ್ಪಟ್ಟಿದೆ. ತೊಡೆಯ ಕೀಲೂ ಕೂಡ ಇದರಹಾಗೆಯೇ ಇದೆ. ಕಟಿಕರ್ಪರದ ಎಡಗಡೆಯಲ್ಲಿಯೂ ಬಲಗಡೆಯಲ್ಲಿಯೂ ಆಳವಾದ ಬಟ್ಟಲಿನಹಾಗೆ ಎರಡು ಹಳ್ಳಗಳಿವೆ. ತೊಡೆಯ ಎಲುವಿನ ಉಂಡೆಯಾಗಿರುವ ತಲೆಯು ಈ ಬಟ್ಟಲೊಳಗಿಡಲ್ಪಟ್ಟು ಸಂಧಿಬಂಧನಗಳಿಂದ ಬಿಗಿಯಲ್ಪಟ್ಟಿದೆ. ಆದಕಾರಣ ತೊಡೆಯ ಎಲುವನ್ನು ಈ ಬಟ್ಟಲೊಳಗೆ ಯಾವವಿಧವಾಗಿ ಬೇಕಾದರೂ ತಿರುಗಿಸಬಹುದು. ತೊಡೆಯನ್ನು ಮುಂಡದ ಮೇಲೆ ಮಡಿಸಬಹುದು ; ತಿರುಗಿ ನೀಡಬಹುದು. ಒಂದು ಕಾಲಿನ ಮೇಲೆ ನಿಂತುಕೊಂಡು ಇನ್ನೊಂದು ಕಾಲನ್ನೂ ತೊಡೆಯನ್ನೂ ಚಕ್ರದಹಾಕೆ ಸುತ್ತಬಹುದು ; ಬುಗುರಿಯನ್ನು ತಿರುಗಿಸುವಹಾಗೆ ತಿರುಗಿಸಲೂ ಬಹುದು. ಇದಲ್ಲದೆ ತೊಡೆಯನ್ನೂ

ಅನುಕೂಲವಾದ ವರಬಿಟ್ಟು ಬ್ಯಾರೊಬ್ಬರ ಗೊಡವೆಯಾಕೆ ?

ಅದರೊಡನೆ ಸೇರಿರುವ ಕಾಲನ್ನೂ ಮೈಯಿಂದ ಹೊರಗಡೆಗೆ ಚಾಚಬಹುದು ; ಹೀಗೆ ಹೊರಕ್ಕೆ ಚಾಚಿದ ತೊಡೆಯನ್ನೂ ಕಾಲನ್ನೂ ಪುನಃ ಕರೀರದಕಡೆಗೆ ಎಳೆದುಕೊಳ್ಳಲೂ ಬಹುದು. ಇದರಂತೆಯೇ ತೋಳಿನ ಕೀಲಿನ ಸಹಾಯದಿಂದಲೂ ಮಡಿಸೋಣ, ನೀಡೋಣ, ಸುತ್ತೋಣ, ತಿರುಗಿಸೋಣ, ಪ್ರಸರಿಸೋಣ, ಆಕುಂಚಿಸೋಣವೆಂಬ ಆರ-ವಿಧ ಚಲನಗಳನ್ನೂ ಸುಲಭವಾಗಿಯೇ ಸಾಧಿಸಬಹುದು.

ಹೀಗೆಯೇ ದೇಹದಲ್ಲಿರುವ ಕೆಲವು ಕೀಲುಗಳ ದೆಸೆಯಿಂದ ಕೆಲವು ವಿಧವಾದ ಚಲನಗಳುಂಟಾಗುತ್ತವೆ. ಕೀಲುಗಳಿರುವ ಜಾಗೆಯಲ್ಲೆಲ್ಲಾ ಎಲುವಿನ ಮೇಲೆ ಎಲುವು ಬಲವಾಗಿ ಉಜ್ಜಿ ತೇದು ಹೋಗದೆ ಇರುವದಕ್ಕೋಸ್ಕರ, ಪ್ರತಿಬಂದು ಕೀಲಿನಲ್ಲಿಯೂ ತಿರುಗುವ ಎಲುವುಗಳ ತುದಿಗಳಿಗೆ ಹೊಗರೆಲುವೆಂದು (Cartillage) ಹೆಸರುಳ್ಳ ಮೆತ್ತಗಿರುವ ಅಸ್ಥಿ ಸಾಮಗ್ರಿಯು ಮುಚ್ಚಲ್ಪಟ್ಟಿರುತ್ತದೆ. ಇದೂ ಅಲ್ಲದೆ ಸಂಧಿತ್ವಕ್ಕೆಂಬ (Synovial Membrane) ಒಂದು ಸೂಕ್ಷ್ಮವಾದ ಚರ್ಮದ ಪೊರೆಯು ಈ ಮೃದ್ವಸ್ಥಿಯ (Cartillage) ಮೇಲೆ ಹರಡಲ್ಪಟ್ಟಿದೆ. ಈ ಸಂಧಿತ್ವಕ್ಕಿನಿಂದ ಸಂಧಿಸ್ನೇಹ (Synovial fluid) ವೆಂಬ ಒಂದು ದ್ರವವಿಶೇಷ ವುಂಟಾಗುತ್ತದೆ. ಇದು ಕೀಲುಗಳಿಗೆಲ್ಲವೂ ಎಣ್ಣೆಯು ಹಾಗಿದ್ದು ಎಲುಪುಗಳು ಒಂದರಮೇಲೊಂದು ಸುಲಭವಾಗಿ ತಿರುಗುವಹಾಗೆ ಮಾಡುತ್ತದೆ.

ಎಮ್. ರಂಗಾಚಾರ್, ಎಮ್. ಎ., ರಾಜಮಹೇಂದ್ರ.

೩. ಸ್ತ್ರೀಯರಿಗೆ ಇರತಕ್ಕ ಹಕ್ಕುಗಳು.

ಹಿಂದೊಲಾದ ಪ್ರಕಾರ ಪತಿಯು ಆರ್ಜಿಸಿದ ದ್ರವ್ಯದಲ್ಲಿ ಸ್ತ್ರೀಯು ತಾನು ಬದುಕಿರುವ ವರಿಗೂ ಸ್ವತಂತ್ರವಾಗಿ ಬದುಕುವದಕ್ಕೋಸ್ಕರ ಗಂಡುಮಕ್ಕಳೊಡನೆ ಸಮಭಾಗವನ್ನು ಹೊಂದಬೇಕೆಂದು, ಯಾಜ್ಞವಲ್ಕ್ಯ, ಕಾತ್ಯಾಯನ, ನಾರದ, ವಿಷ್ಣು, ಬೃಹಸ್ಪತಿ, ವ್ಯಾಸ, ಇವರುಗಳು ಕಂಠೋಕ್ತವಾಗಿ ಹೇಳಿದಾರೆ. ದಾಯಭಾಗ ಮತ್ತು ದಾಯತತ್ವ ಎಂಬ ನವೀನಗ್ರಂಥಗಳ ವ್ಯಾಖ್ಯಾನಕರ್ತರು ಈ ಮೇಲೆ ಹೇಳಿದವರ ಗ್ರಂಥೋಕ್ತಿಗಳನ್ನು ವ್ಯತ್ಯಾಸ ಮಾಡಿದಾರೆ. ಏನಂದರೆ:—" ಏಕಪುತ್ರವತಿಯಾದವಳು ದಾಯಭಾಗಕ್ಕೆ ಅರ್ಹಳಲ್ಲ. ಪತಿಯ ಆಸ್ತಿಯೆಲ್ಲಾ ಪುತ್ರನಿಗೇ ಸೇರತಕ್ಕದ್ದು. ಪುತ್ರನಿಗೆ ಆಸ್ತಿ ಬಂದಮೇಲೆ ಆತನು ಮೃತನಾದ ಪಕ್ಷದಲ್ಲಿ ಪೌತ್ರನಿಗೆ ಸೇರತಕ್ಕದ್ದು. ಪೌತ್ರನು ಇಲ್ಲದೇ ಇರತಕ್ಕ ಪಕ್ಷದಲ್ಲಿ ಆಸ್ತಿಯೆಲ್ಲಾ ಸೊಸೆಗೆ ಸೇರತಕ್ಕದ್ದು. ತಾನು ಮಗ ಅಥವಾ ಸೊಸೆಯ ಅಧೀನಲ್ಲಿದ್ದುಕೊಂಡು ಜೀವನವನ್ನು ಪಡೆಯಬೇಕು " ಎಂಬದಾಗಿ ವಿಧಿಸಿದಾರೆ. ಇದಲ್ಲದೆ ಸ್ತ್ರೀಗೆ

ಅಕ್ಷರವಿಲ್ಲದ ಊಟ ಅದು ಬಲುಕಾಟ.

ಪುತ್ರರಿಲ್ಲದೇ ಇದ್ದರೆ ಆಕೆಗೆ ಕುಟುಂಬದ ಆಸ್ತಿಯಲ್ಲಿ ಜೀವನಾಂಶವಿನಾ ಇನ್ನೇನೂ ಸಲ್ಲಕೂಡದೆಂಬದಾಗಿಯೂ ಮಾಡಿದಾರೆ. ಈ ನಿಬಂಧನೆಗಳಿಂದ ನಿರಂತರವೂ ಮನೆಗೆ ಯಜಮಾನತಿಯಾಗಿಯೂ ಮನೆಯಲ್ಲಿ ಎಲ್ಲರ ಗೌರವಕ್ಕೂ ಪಾತ್ರಳಾಗಿಯೂ ಇರತಕ್ಕ ಪತಿಯು ಕಾಲಾಧೀನವಾದ ಮಾರನೇ ದಿವಸವೇ ಜೀವನಾಂಶಕ್ಕೆ ಮಾತ್ರ ಪಾತ್ರಳಾಗಿ ಎಲ್ಲರಿಂದಲೂ ತಿರಸ್ಕೃತಳಾಗಿ ಇರಬೇಕು. ಪತಿವಿಯೋಗಾನಂತರ ಸ್ತ್ರೀಯಳಿಗೆ ಇರತಕ್ಕದ್ದು ೩ ಮಾರ್ಗಗಳು: ಪುನರ್ವಿವಾಹವನ್ನು ಮಾಡಿಕೊಂಡು ಬೇರೇ ಪತಿಯೊಡನೆ ಸ್ವತಂತ್ರವಾಗಿರುವದಕ್ಕಿಲ್ಲದೆ ತನಗೆ ಆಧೀನರಾಗಿದ್ದವರಿಗೆ ಸೇವಕಾವೃತ್ತಿಯಲ್ಲಿರತಕ್ಕದ್ದು ಒಂದು; ಅಥವಾ ದೇಹವಿಕ್ರಯವನ್ನು ಮಾಡಿಕೊಂಡು ಅಧರ್ಮಕ್ಕವರ್ತಳಾಗಿ ಅವಮಾನಕರವಾದ ಜೀವನವನ್ನು ಮಾಡುವದು ಒಂದು; ಅಥವಾ ಪತಿಯೊಡನೆಯೇ ಸಹಗಮನ ಮಾಡತಕ್ಕದ್ದೊಂದು. ಬೃಹಸ್ಪತಿ, ವಿಷ್ಣು, ಮನು, ಯಾಜ್ಞವಲ್ಕ್ಯ, ಕಾತ್ಯಾಯನ, ಇನ್ನರುಗಳು ಮಗನಿಗೆ ಬರುವ ಆಸ್ತಿಯಲ್ಲಿ ೪ರಲ್ಲಿ ೧ ಪಾಲು ಮಗಳಿಗೂ ಸಲ್ಲಬೇಕೆಂಬದಾಗಿ ಹೇಳುತ್ತಾರೆ. ಆದರೆ ದಾಯಭಾಗದ ವ್ಯಾಖ್ಯಾತರು ಹೆಣ್ಣು ಮಕ್ಕಳಿಗೆ ದಾಯಭಾಗದ ಹಕ್ಕೇ ಇಲ್ಲವೆಂದು ಹೇಳುತ್ತಾರೆ. ಇದಲ್ಲದೆ ವಿಶೇಷಗೌರವದಲ್ಲಿ ದೃಷ್ಟಿಯಿಲ್ಲದೇ ಇರತಕ್ಕ ಬ್ರಾಹ್ಮಣರಿಗೆ ಹೆಣ್ಣು ಮಕ್ಕಳೇ ಜೀವನೋಪಾಯದಂತೆ ಪರಿಣಮಿಸುವಹುದುಂಟು. ಅವರು ತಮ್ಮ ಹೆಣ್ಣು ಮಕ್ಕಳನ್ನು ವಿಶೇಷ ದ್ರವ್ಯಕೊಟ್ಟವರಿಗೆ ಕೊಟ್ಟು ಮದುವೆ ಮಾಡುತ್ತಾರೆ. ಕನ್ಯಾ ವಿಕ್ರಯ ಮಾಡುವದು ಅಧರ್ಮವೆಂಬದಾಗಿಯೂ ಹೇಡಿಗಳು ಮಾಡತಕ್ಕ ಕೆಲಸವೆಂಬದಾಗಿಯೂ ಹೇಳಿದರೆ, ಇವುಗಳೆಲ್ಲಾ ಯುಕ್ತವಾದದ್ದೆಂದು ಮನು ಮುಂತಾದವರ ವಚನಗಳನ್ನು ಹೇಳುತ್ತಾರೆ. ಈ ಕನ್ಯಾವಿಕ್ರಯ ಮಾಡತಕ್ಕದ್ದು ಅಧರ್ಮವಾದದ್ದೆಂತಲೂ ಅವಮಾನಕರವಾದದ್ದೆಂತಲೂ ತಾರತಮ್ಯಜ್ಞಾನವುಳ್ಳವರೆಲ್ಲರೂ ಒಪ್ಪಿಕೊಳ್ಳುವರು. ಇದು ಒಂದು ವಿಧದಲ್ಲಿ ಶೋಚನೀಯವಾದದ್ದು. ಸ್ತ್ರೀಯರಿಗೆ ದಾಯಭಾಗ ಉಂಟೆಂಬದಾಗಿ ಕೆಲವು ಋಷಿಗಳು ಹೇಳಿದ್ದಾಗ್ಯೂ ಮತ್ತು ಕೆಲವರು ಅದನ್ನು ನಿಷೇಧಮಾಡಿ ಆಚರಣೆಯಲ್ಲಿ ಬರದಹಾಗೆ ಮಾಡಿರತಕ್ಕದ್ದು ಮತ್ತೊಂದು ವಿಧದಲ್ಲಿ ಶೋಚನೀಯವಾದದ್ದು. ಅನೇಕ ವಿತಂತುಗಳು ಗಂಡನ ಮನೆಯಲ್ಲಿಯೂ ತಾರವಮನೆಯಲ್ಲಿಯೂ ದಾಯಭಾಗವನ್ನು ಹೊಂದದೆ ಜೀವನಾಂಶ ಪಡೆಯುವದಕ್ಕೆ ಕೂಡ ಮಾರ್ಗ ತಿಳಿಯದೆ ಬಹುಕಷ್ಟವನ್ನು ಪಡುತ್ತಾರೆ. ಅನೇಕರು ಜೀವನೋಪಾಯವಿಲ್ಲದೆ ದುರ್ಮಾರ್ಗದಲ್ಲಿ ಪ್ರವರ್ತಿಸುತ್ತಾರೆ. ಮಾನಿಷ್ಠೆಯರಾದ ಅನೇಕರು ಆತ್ಮಹತ್ಯವನ್ನು ಕೂಡ ಮಾಡಿಕೊಳ್ಳುತ್ತಾರೆ. ಇದಲ್ಲದೆ ಇನ್ನು ಕೆಲವರು ದಾವಾಮಾಡಿ ಜೀವನಾಂಶವನ್ನು ಪಡೆದುಕೊಳ್ಳತಕ್ಕ ಸಂಕಟುಗಳನ್ನು ಅನುಭವಿಸುವದಕ್ಕಿಂತ ಜೀವನಾಂಶದ ಹಕ್ಕನ್ನೇ ಬಿಟ್ಟುಬಿಟ್ಟು ಸೇವಾವೃತ್ತಿಯಲ್ಲಿ ಅತ್ಯಂತ ಕಷ್ಟವಾದ ಜೀವನವನ್ನು ಮಾಡುತ್ತಾರೆ. ಇಂಥಾದ್ದರಲ್ಲಿ ಒಂದುವೇಳೆ ಕಷ್ಟಜೀವ

ಅಗ್ಗದ ಆಸೆಗೆ ಗೊಬ್ಬರವನ್ನು ಕೊಳ್ಳುವರೆ ?

ನಕ್ಕೂ ಅಭಾವವಾಗಿ ಸತ್ಯಮಾರ್ಗಾವಲಂಬನೆಯುಳ್ಳವರುಕೂಡ ದುರ್ಮಾರ್ಗದಿಂದ ಹೊಟ್ಟೈಹೊರದುಕೊಳ್ಳತಕ್ಕ ಕಾಲ ಬರುವದುಂಟು. ಮನು, ವಿಷ್ಣು, ನಾರದ, ಯಾಜ್ಞವಲ್ಕ್ಯ ಮುಂತಾದ ಪೂರ್ವಋಷಿಗಳು ಧರ್ಮಕ್ಕೆ ಲೋಪವಿಲ್ಲದಂತೆ ಗ್ರಂಥಗಳನ್ನು ಬರೆದಿಟ್ಟಾರೆ. ಈಚಿಗೆ ಧರ್ಮಶಾಸ್ತ್ರವಿಷಯದಲ್ಲಿ ಗ್ರಂಥಗಳನ್ನು ಬರೆದಿರತಕ್ಕ ಬ್ರಾಹ್ಮಣರು ಪ್ರಜೆಗಳ ಕ್ಷೇಮಕ್ಕೆ ಕಂಟಕವಾದ ಸಿದ್ಧಾಂತಗಳನ್ನು ಏರ್ಪಡಿಸಿದರು.

ಇದಲ್ಲದೆ ಈ ಸ್ಮೃತಿಗಳೆಲ್ಲಾ ಸಂಸ್ಕೃತಭಾಷೆಯಲ್ಲಿವೆ. ಆದದರಿಂದಲೇ ಸಾಮಾನ್ಯವಾದ ಜನಗಳಿಗೆ ಇದು ಗೊತ್ತಾಗುವದಿಲ್ಲ. ಆ ಧರ್ಮಶಾಸ್ತ್ರದ ತತ್ವವನ್ನು ತಿಳಿಯದೇ ಇರತಕ್ಕ ಕೆಲವು ಶುಂಬ್ರಾಹ್ಮಣರು ಹೇಳತಕ್ಕದ್ದನ್ನು ನಂಬುತ್ತಾರೆಯೇ ಹೊರತು, ಈ ವಿದ್ಯಾವಂತರಾದಂಥಾ ಜನಗಳೂ ಕೂಡ ಈಗ ಧರ್ಮಶಾಸ್ತ್ರಗಳಲ್ಲಿ ಏನು ಹೇಳಿದೆಯೆಂದು ಯೋಚಿಸಿ ಅವುಗಳನ್ನು ಅನುಸರಿಸಿ ನಡೆಯುವದಿಲ್ಲ.

" ಪೂರ್ವದ ಸ್ಮೃತಿಕರ್ತರೆಲ್ಲಾ ಸ್ತ್ರೀಯರಿಗೆ ಸೌಖ್ಯಪ್ರದವಾದ ಏರ್ಪಾಡುಗಳನ್ನೇ ಮಾಡಿದಾರೆ, ಅದಕ್ಕೆ ಕುಂದುಕ ಬರುವಂತೆ ಯಾವ ವಿಧಿಯನ್ನೂ ಮಾಡಿಲ್ಲ. ಆದರೆ ಈ ಬ್ರಾಹ್ಮಣರು ಅವರಿಗೆ ಸರ್ವಸ್ವಾತಂತ್ರ್ಯವನ್ನೂ ತಪ್ಪಿಸಿ ಬದುಕಿರುವದಕ್ಕಿಂತ ಸಾಯುವದೇ ಮೇಲು ಎಂದು ತೋರುವದಕ್ಕೆ ಸಾಕಾದಷ್ಟು ಏರ್ಪಾಡುಗಳನ್ನು ಮಾಡಿದಾರೆ." ಎಂದು ರಾಜಾವೋಹನರಾಯರವರು ಈಗ ೭೦ ವರ್ಷಗಳಿಗೆ ಮುಂಚೆಯೇ ಹೇಳಿರುತ್ತಾರೆ. ಇದರಿಂದ ಈ ಸ್ಮೃತಿಕಾರರು ಲೋಕೋಪಕಾರರೆಂಬದಾಗಿಯೂ ಇದೇ ವಿಷಯದಲ್ಲಿ ಈಚಿಗೆ ಗ್ರಂಥಗಳನ್ನು ಬರೆದು ಬ್ರಾಹ್ಮಣರು ನಮ್ಮ ಧರ್ಮಶಾಸ್ತ್ರವನ್ನು ಕೆಡಿಸಿದ್ದಲ್ಲದೆ ಸ್ತ್ರೀಯರಿಗೆ ಅತ್ಯಂತ ದೊಡ್ಡ ಅಪಕಾರವನ್ನು ಮಾಡಿದರೆಂಬದಾಗಿಯೂ ಗೊತ್ತಾಗುತ್ತದೆ. ನಮ್ಮ ಶಾಸ್ತ್ರಪ್ರಕಾರ ಲೋಕವ್ಯವಹಾರಗಳ ವಿಷಯದಲ್ಲಿ ಯಾವದರಲ್ಲಿಯೂ ಸ್ತ್ರೀಪುರುಷರಿಗೆ ವ್ಯತ್ಯಾಸವಿಲ್ಲ. ಈಚಿನ ಬ್ರಾಹ್ಮಣರು ಅನೇಕವಿಷಯಗಳಲ್ಲಿ ಸ್ತ್ರೀಯರಿಗೆ ಪ್ರತಿಕೂಲವಾದ ತಾರತಮ್ಯವನ್ನು ಕಲ್ಪಿಸಿದರು. ಸ್ಮೃತ್ಯುಕ್ತವಾದ ತಾರತಮ್ಯಾಭಾವ ಉಂಟಾಗುವಹಾಗೆ ಸ್ತ್ರೀಯರಿಗೆ ಯೋಗ್ಯವಾದ ಸ್ಥಿತಿಯನ್ನು ಕಲ್ಪಿಸತಕ್ಕದ್ದಕ್ಕೆ ಈಗಿನ ಬ್ರಾಹ್ಮಣರು ಒಪ್ಪುವದಿಲ್ಲ. ಆದದರಿಂದ ಪೂರ್ವದ ಸ್ಮೃತಿಗಳನ್ನು ಅನುಸರಿಸಿ ಸ್ತ್ರೀಯರನ್ನು ಉತ್ತಮಸ್ಥಿತಿಗೆ ತರತಕ್ಕ ಏರ್ಪಾಡುಗಳನ್ನು ಮಾಡಬೇಕು. ಈಚಿನ ಬ್ರಾಹ್ಮಣರ ಗ್ರಂಥಗಳು ಈ ವಿಷಯದಲ್ಲಿ ಅನುಸರಿಸುವದಕ್ಕೆ ಯೋಗ್ಯವಾದವುಗಳಲ್ಲ " ಎಂದು ದಿವಾನ ಬಹದೂರ್ ರಘುನಾಥರಾಯರವರು ಬರೆದಿದಾರೆ.

ಈ ಸ್ಮೃತಿಗಳೆಲ್ಲಾ ಸಂಸ್ಕೃತ ಭಾಷೆಯಲ್ಲಿರತಕ್ಕದ್ದೇ ಈ ದುಷ್ಟ ಜನರ ಪ್ರಾಬಲ್ಯಕ್ಕೆ ಸಾಧನವಾಗಿದೆ. ಇವುಗಳನ್ನೆಲ್ಲಾ ದೇಶಭಾಷೆಯಲ್ಲಿ ತರ್ಜುಮೆ ಮಾಡಿ ಸರ್ವರಿಗೂ ತಿಳಿಯುವಂತೆ ಮಾಡಿದರೆ ಇವರ ಪುಂಡಾಟ ನಿಲ್ಲುವದಲ್ಲದೆ, ಇವರು ಸ್ಮೃತಿಗ

ಳನ್ನು ಉಲ್ಲಂಘಿಸಿ ಆಚರಣೆಗೆ ಬರುವಹಾಗೆ ಮಾಡಿರತಕ್ಕ ಸಂಪ್ರದಾಯಗಳೆಲ್ಲಾ ಶಿಥಿಲವಾಗುವದಕ್ಕೂ, ಸ್ವಾಭಾವ್ಯಕ್ತವಾದ ಆಚರಣೆಗಳೆಲ್ಲಾ ರೂಢಿಯಲ್ಲಿ ಬರುವದಕೂ ಸಾಧನವಾಗುತ್ತದೆ.

೪. ಭೂಕಂಪಗಳೂ ಅಗ್ನಿಪರ್ವತಗಳೂ.

ಭೂಕಂಪಗಳು ಅಗ್ನಿಪರ್ವತಗಳು ಎಂಬ ಮಾತುಗಳನ್ನು ನೀವೆಲ್ಲರೂ ಕೇಳಿರಬಹುದು. ಆ ಮಾತುಗಳಿಗೆ ಅರ್ಥವೇನು? ಅವುಗಳು ಆಗುವದಕ್ಕೆ ಕಾರಣವೇನು? ಎಂಬದಾಗಿ ಯಾವಾಗಲಾದರೂ ವಿಚಾರಿಸಿದ್ದೀರಾ? ಭೂಕಂಪವೆಂದರೆ ಭೂಮಿಯು ನಡುಗುವದು. ನಮ್ಮ ದೇಶದಲ್ಲಿಯೂ ಭೂಮಿಯು ನಡುಗಿರುವದನ್ನು ನಾವು ಬಲ್ಲೆವು. ಈ ದೇಶದಲ್ಲಿ ನಡುಗಿದ್ದರಿಂದ ಒಬ್ಬರಿಗೂ ಹಾನಿಯುಂಟಾಗಲಿಲ್ಲ. ಕೆಲವು ದೇಶಗಳಲ್ಲಿ ಭೂಮಿಯು ನಡುಗಿದರೆ ಎಲ್ಲವೂ ಅಲ್ಲೋಲಕಲ್ಲೋಲವಾಗಿ ಕೆಲವು ಹಳ್ಳಿಗಳು ಒಟ್ಟಿಗೆ ಭೂಮಿಯ ಒಳಕ್ಕೆ ಇಳಿದು ಹೋಗುವವು. ಮೊದಲು ಮೈದಾನವಾಗಿದ್ದ ಕಡೆಗಳಲ್ಲಿ ದೊಡ್ಡ ದೊಡ್ಡ ಗುಡ್ಡಗಳು ಏಳುವವು. ಭೂಕಂಪಗಳಾದ್ದರಿಂದ ನಷ್ಟವೊಂದೇ ಎಂದು ಹೇಳಕೂಡದು, ಆದಾಯವೂ ಉಂಟು. ಆದಾಯವೆಂದರೆ ಅಲ್ಪಸ್ವಲ್ಪವಲ್ಲ; ಬಹಳ ಆದಾಯವೇ ಉಂಟು. ಈ ವಿಷಯವನ್ನು ಮುಂದೆ ತಿಳಿಸುತ್ತೇನೆ.

ಅಗ್ನಿಪರ್ವತಗಳು ಅಂದರೇನು? ಕೆಲವು ಪರ್ವತಗಳುಂಟು. ಅವುಗಳು ಶಿಖರುದಲ್ಲಿ ಒಡೆದು ದೊಡ್ಡದಾಗಿ ಬಾಯಿ ಆಗಿ, ಆ ಪರ್ವತದ ಒಳಗಿನಿಂದ ಆ ಬಾಯಿಯ ಮಾರ್ಗವಾಗಿ ಅಪರಿಮಿತವಾದ ಹೊಗೆಯೂ ಕಲ್ಲುಗಳೂ ಮಣ್ಣೂ ಬೂದಿಯೂ ನೀರುನೀರಾಗಿ ಕರಗಿದ ಕಲ್ಲಿನ ಪ್ರವಾಹವೂ ಈಚಿಗೆ ಬಹಳ ವೇಗದಿಂದ ಹೊರಟು ಬರುತ್ತವೆ. ಇಂಥಾ ಪರ್ವತಗಳೇ ಅಗ್ನಿಪರ್ವತಗಳು. ಕೆಲವು ಪರ್ವತಗಳಿರುತ್ತವೆ. ಅವುಗಳು ಅಗ್ನಿಪರ್ವತಗಳೆಂದು ಹೇಳುವದಕ್ಕೆ ಯಾವ ಚಿಹ್ನೆಯೂ ಇಲ್ಲದೇ ಇದ್ದು, ಅಕಸ್ಮಾತ್ತಾಗಿ ಶಿಖರವು ಬಿಡೆದು, ಮೇಲೆ ಹೇಳಿದ ಪದಾರ್ಥಗಳೆಲ್ಲಾ ಈಚಿಗೆ ಹೊರಟು ಬಂದು, ಸುತ್ತುಮುತ್ತಲೂ ಇರತಕ್ಕ ಗ್ರಾಮಗಳ ಮೇಲೆಲ್ಲಾ ಬಿದ್ದು ಪೂರ್ವದಲ್ಲಿ ಅಲ್ಲಿ ಗ್ರಾಮಗಳೇ ಇರಲಿಲ್ಲವೆಂಬುವ ಹಾಗೆ ನಿಶ್ಶೇಷವಾಗಿ ಮುಚ್ಚಿಬಿಡುತ್ತವೆ. ಇದಕ್ಕೆ ದೃಷ್ಟಾಂತಗಳನ್ನು ಕೊಡುತ್ತೇನೆ.

ಈಗ ಬಂದು ಭೂಪಟವನ್ನು ತೆಗೆದುಕೊಂಡು ಅಗ್ನಿಪರ್ವತಗಳು ಎಲ್ಲಿವೆ ಎಂಬದನ್ನು ನೋಡಿ. ಅವುಗಳು ಸಾಧಾರಣವಾಗಿ ಸಮುದ್ರದ ಕರೆಗಳಲ್ಲಿರುತ್ತವೆ. ಕೆಲವು

ಅಕ್ಷರ ಪೂರ್ಣವಾಗಿದ್ದರೆ ಸಕ್ಕರೆಗಿಂತ ಸವಿ.

ಪರ್ವತಗಳು ದೇಶ ವಿಭಾಗ ಪ್ರದೇಶದಲ್ಲಿಯೂ ಇರುತ್ತವೆ. ಆದರೆ ಅಲ್ಲಿಯೂ ದೊಡ್ಡ ಕೆರೆಗಳ ಸಮೀಪದಲ್ಲಿಯೇ ಇರುತ್ತವೆ.

ಅಗ್ನಿಪರ್ವತಗಳು ಒಡೆದು ಮೇಲೆ ಹೇಳಿದ ಪದಾರ್ಥಗಳೆಲ್ಲಾ ಅವುಗಳಿಂದ ಹೊರಗೆ ಬರುವದಕ್ಕೆ ಮುಂಚೆ ಭೂಕಂಪವಾಗುತ್ತದೆ. ಹೀಗೆ ಭೂಕಂಪವಾಗುತ್ತವೆ ಎಂಬುವದನ್ನು ತಿಳಿಯುವದಕ್ಕೆ ಅನೇಕ ಚಿಹ್ನೆಗಳು ಕಾಣಬರುತ್ತವೆ ವೆ. ಯಾವ ಪ್ರದೇಶಗಳಲ್ಲಿ ಭೂಕಂಪವಾಗುತ್ತದೆಯೋ ಆ ಪ್ರದೇಶಗಳಲ್ಲಿಯೇ ಚಿನ್ಹೆಗಳು ತೋರುತ್ತವೆ. ಅವು ಯಾವವೆಂದರೆ :— ಮಳೆಯಿಲ್ಲದ ಪ್ರದೇಶಗಳಾದರೆ ಆ ಪ್ರದೇಶಗಳಲ್ಲಿ ಬಹಳ ಮಳೆಯಾಗುವದು; ಭೂಮಿಯ ಒಳಗೆ ಗುಡುಗಿನಂತೆ ಶಬ್ದ ಉಂಟಾಗುವದು. ಇವುಗಳೇ ಮೊದಲಾದ ಚಿಹ್ನೆಗಳಾಗುವವು. ಭೂಕಂಪವಾಗುವದಕ್ಕೆ ಸ್ವಲ್ಪ ಮುಂಚೆ ವಾಯು ಮಂಡಲದಲ್ಲಿ ವ್ಯತ್ಯಾಸಗಳಾಗುವದನ್ನು ನೋಡಿದರೆ ಭೂಮಿಗೂ ವಾಯುಮಂಡಲಕ್ಕೂ ಏನೋ ಬಹಳ ಸಂಬಂಧವಿದೆಯೆಂದು ಚನ್ನಾಗಿ ತೋರುತ್ತದೆ. ಆದರೆ ಆ ಸಂಬಂಧ ಎಂಥಾದ್ದೋ ಹ್ಯಾಗೆ ಉಂಟಾಗಿದೆಯೋ ಅದು ಇನ್ನೂ ತಿಳಿಯಲಸಾಧ್ಯ.

ಯಾವ ಪ್ರದೇಶಗಳಲ್ಲಿ ಭೂಕಂಪಗಳಾಗುತ್ತವೆಯೋ ಆ ಪ್ರದೇಶಗಳೆಲ್ಲಾ ಅಲ್ಲೊಲ್ಲಕಲ್ಲೊಲವಾಗುತ್ತವೆ ಎಂಬುವದಕ್ಕೆ ಉದಾಹರಣೆಗಳು ಯಾವವೆಂದರೆ :—

೧೮೦೦ನೇ ಇಸವಿಯಲ್ಲಿ ದಕ್ಷಿಣ ಅಮರಿಕಾ ಖಂಡದಲ್ಲಿ ಚಿಲ್ಲಿ ಎಂಬ ದೇಶದಲ್ಲಿ ಬಂದು ಭೂಕಂಪವಾಯಿತು. ಆ ಭೂಕಂಪವಾದದ್ದರಿಂದ ಸಮುದ್ರದ ಮತ್ತು ಭೂಮಿಯ ಮಟ್ಟುಗಳು ಬಹಳವಾಗಿ ಬದಲಾದವು. ಸಮುದ್ರದಲ್ಲಿ ಮೊದಲು ಹಡಗುಗಳು ನಿಲ್ಲುತ್ತಿದ್ದ ಸ್ಥಳಗಳಲ್ಲಿ ಆನಂತರ ಹಡಗುಗಳು ನಿಲ್ಲುವದಕ್ಕಾಗಲಿಲ್ಲ. ಹಡಗುಗಳು ನಿಲ್ಲಬೇಕಾದರೆ ನೀರು ಆಳವಾಗಿರಬೇಕು. ಆಳವಿಲ್ಲದಿದ್ದರೆ ನಿಲ್ಲುವದಕ್ಕಾಗುವದಿಲ್ಲ. ಮೊದಲು ತಗ್ಗಾಗಿದ್ದ ಸ್ಥಳಗಳು ೪—೬ ಅಡಿ ಎತ್ತರವಾದವು. ಇದಕ್ಕೆ ಪೂರ್ವದಲ್ಲಿ ಅಂದರೆ ೧೮೦೭ನೇ ಇಸವಿಯಲ್ಲಿ ನಮ್ಮ ದೇಶದಲ್ಲಿ ಬಂದು ಭೂಕಂಪವಾಯಿತು. ಸಿಂಧೂನದಿಯು ಸಮುದ್ರಕ್ಕೆ ಬೀಳುವಸ್ಥಳದಲ್ಲಿ ಕಚ್ ಎಂಬ ರಾಜ್ಯಕ್ಕೆ ಸೇರಿದ ೭೦೦ ಮೈಲು ಬಂದು ಪ್ರದೇಶವಿರುತ್ತದೆ. ಅದು ಭೂಕಂಪವಾಗುವದಕ್ಕೆ ಮುಂಚೆ ಸರಿಯಾದ ಭೂಮಿಯಾಗಿತ್ತು. ಈಗ ಕಚ್ ಕೊಲ್ಲಿ ಎಂದು ಭೂಮಿಯು ಕೆಳಗೆ ಇಳಿದು ಮೇಲೆಲ್ಲಾ ನೀರು ಬಂದು ಅದು ಬಂದು ಸಮುದ್ರದಂತೆ ಇದೆ.

ಯೂರೋಪ್ ಖಂಡದಲ್ಲಿ ಇಟಲಿ ಎಂಬ ದೇಶವಿದೆಯಷ್ಟೆ. ಅಲ್ಲಿ ವಿಸೂವಿಯಸ್ ಎಂಬ ಪರ್ವತವಿದೆ. ಈ ಪರ್ವತವು ಕ್ರಿಸ್ತಶಕದ ಮೊದಲಿನಲ್ಲಿ ಅಗ್ನಿಪರ್ವತವಾಗಿರಲಿಲ್ಲ. ಇದು ಅಗ್ನಿಪರ್ವತವೆಂದು ತಿಳಿಯುವದಕ್ಕೆ ಯಾವ ಸೂಚನೆಯೂ ಇರಲಿಲ್ಲ. ಕ್ರಿಸ್ತಶಕದ ೭೯ನೇ ಇಸವಿಯಲ್ಲಿ ಅಕಸ್ಮಾತ್ತಾಗಿ ಈ ಪರ್ವತದ ಸಮೀಪದ ದೇಶಗಳೆಲ್ಲೆಲ್ಲಾ ಭೂಕಂಪ

ಗಳಾಗುವದಕ್ಕೆ ಪ್ರಾರಂಭವಾಯಿತು. ಕೂಡಲೆ ಆ ಪರ್ವತದ ಮೇಲುಭಾಗವು ಬಡೆದು ಪರ್ವತದ ಒಳಗಿನಿಂದ ಕಲ್ಲುಗಳೂ ಗುಂಡುಗಳೂ ಬೂದಿಯೂ ಅಪರಿಮಿತವಾಗಿ ಈಚಿಗೆ ಹೊರಟುಬಂದು ಬಹಳ ಸಮೀಪದಲ್ಲಿದ್ದ ಎರಡು ಪಟ್ಟಣಗಳ ಮೇಲೆ ಬಿದ್ದು ಅವುಗಳನ್ನು ಅಲ್ಲಿ ಪಟ್ಟಣಗಳೇ ಇರಲಿಲ್ಲವೆಂದು ಕಾಣುವಂತೆ ಮುಚ್ಚಿಕೊಂಡವು. ಹೀಗೆ ಮುಚ್ಚಿಕೊಂಡು ಹೋದ ಅನಂತರ ಅಲ್ಲಿ ಪಟ್ಟಣಗಳಿದ್ದದ್ದು ತಿಳಿದದ್ದು ಹ್ಯಾಗೆಂದು ಕೇಳಬಹುದು. ಈಗ ಕೆಲವು ವರ್ಷಗಳ ಕೆಳಗೆ ಪೂರ್ವದಲ್ಲಿ ಈ ಪಟ್ಟಣಗಳಿದ್ದ ಸ್ಥಳದಲ್ಲಿ ಯಾವದೋ ಬಂದು ಉದ್ದೇಶದಿಂದ ಅಗೆಯುತ್ತಿದ್ದರು. ಸ್ವಲ್ಪ ಅಗೆದನಂತರ ಒಳಗೆ ಬೀದಿಗಳಿದ್ದ ಹಾಗೆ ಕಾಣಿಸಿತು. ಒಳಗೆ ಹೋಗಿ ನೋಡುತ್ತಲೆ ಪೂರ್ವದಲ್ಲಿ ಮನುಷ್ಯರು ವಾಸ ಮಾಡಿಕೊಂಡಿದ್ದ ಪಟ್ಟಣಗಳೆಂದು ಸ್ಪಷ್ಟವಾಗಿ ತಿಳಿಯಬಂತು.

ಈಗ ನಾನು ಹಿಂದೆ ಹೇಳಿರುವ ಸಂಗತಿಗಳನ್ನೆಲ್ಲಾ ಸ್ವಲ್ಪ ಚೆನ್ನಾಗಿ ಆಲೋಚಿಸಿ ನೋಡಿರಿ. ಭೂಕಂಪಗಳಿಂದ ಎಷ್ಟು ವ್ಯತ್ಯಾಸಗಳಾಗುತ್ತವೆ. ಅಗ್ನಿಪರ್ವತಗಳಿಂದ ಹೊರಡುವ ಪದಾರ್ಥಗಳು ಎಷ್ಟು ಕೆಲಸಗಳನ್ನು ಮಾಡುತ್ತವೆ ನೋಡಿ. ಮುಂದೆ ನಾವು ಭೂಕಂಪಗಳಿಗೂ ಅಗ್ನಿಪರ್ವತಗಳಿಂದ ಅನೇಕ ಪದಾರ್ಥಗಳು ಈಚಿಗೆ ಹೊರಡುವದಕ್ಕೂ ಕಾರಣವನ್ನು ವಿಚಾರಿಸಿ ತಿಳುಕೊಳ್ಳೋಣ.

ಲೋಕದಲ್ಲಿರುವ ಸಕಲ ವಸ್ತುಗಳೂ ಘನರೂಪ, ಜಲರೂಪ, ವಾಯುರೂಪ ಗಳೆಂಬ ಮೂರು ರೂಪ ಭೇದಗಳನ್ನು ಹೊಂದಿರುತ್ತವೆ. ಒಂದು ಪದಾರ್ಥವು ಘನ ರೂಪದಿಂದ ಜಲರೂಪಕ್ಕೆ ಬರಬೇಕಾದರೆ ಬಹಳ ಶಾಖವು ಬೇಕು. ಈಗ ಕಬ್ಬಿಣವನ್ನಾಗಲೀ ಚಿನ್ನವನ್ನಾಗಲೀ ಬೆಳ್ಳಿಯನ್ನಾಗಲೀ ಕರಗಿಸಬೇಕಾದರೆ ಬಹಳ ಶಾಖ ಬೇಕಲ್ಲವೆ? ಹೀಗೆಯೇ ಎಲ್ಲಾ ಘನರೂಪದಲ್ಲಿರುವ ಪದಾರ್ಥಗಳಿಗೂ, ನೀರಾಗಬೇಕಾದರೆ ಬಹಳ ಶಾಖ ಬೇಕು. ಘನರೂಪ ಪದಾರ್ಥವು ನೀರಾಗುವದಕ್ಕೆ ನಾವು ಉಪಯೋಗಿಸಿದ ಶಾಖವು ಎಲ್ಲಿಯೂ ಹೋಗುವದಿಲ್ಲ; ಅದರಲ್ಲಿಯೇ ಇರುತ್ತದೆ. ಆದರೆ ಅದು ಇರುವದು ನಮಗೆ ತಿಳಿಯುವದಿಲ್ಲ. ನೀರಾದ ಪದಾರ್ಥವು ಪುನಃ ಘನರೂಪವನ್ನು ಪಡೆದಾಗ ನಾವು ಕೊಟ್ಟ ಶಾಖವನ್ನು ತಿರುಗಿ ಕೊಟ್ಟುಬಿಡುತ್ತದೆ. ಇದಕ್ಕೆ ಉದಾಹರಣ ವಸ್ತುವಾಗಿ ನೀರನ್ನು ಕುರಿತು ವಿಚಾರಮಾಡೋಣ. ನೀರು ಘನರೂಪವನ್ನು ಧರಿಸಿದರೆ ಅದೇ ಹಿಮದ ಗಡ್ಡೆ. ನೀರನ್ನು ತೆಗೆದುಕೊಂಡು ಅದನ್ನು ನಾವು ಹಿಮದಗಡ್ಡೆಯಾಗಿ ಮಾಡಬಹುದು. ಸ್ವಲ್ಪ ಹಿಮದ ಗಡ್ಡೆಯನ್ನು ನೀರು ಮಾಡಬೇಕಾದರೆ ಎಷ್ಟು ಶಾಖವಾಗಬೇಕೋ ಅಷ್ಟೇ ಶಾಖವು ಆ ನೀರನ್ನು ಪುನಃ ಹಿಮದ ಗಡ್ಡೆಯಾಗಿ ಮಾಡಿದಾಗ ಬಂದುಬಿಡುತ್ತದೆ. ಹೀಗೆಯೇ ಎಲ್ಲಾ ಪದಾರ್ಥಗಳೂ ಘನರೂಪದಿಂದ ಜಲರೂಪವಾಗಬೇಕಾದರೆ ಶಾಖವನ್ನು ತೆಗೆದುಕೊಳ್ಳು

ಅಷ್ಟದಿಕ್ಕು ಆಳಿದರೂ, ಸೃಷ್ಟಿಸಿದವನೇ ಬೇರೆ.

ತ್ತವೆ. ಜಲರೂಪದಿಂದ ಘನರೂಪವಾಗಬೇಕಾದರೆ ಶಾಖವನ್ನು ಕೊಟ್ಟುಬಿಡುತ್ತವೆ ಈ ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಳ್ಳಿರಿ. ಇದಲ್ಲದೆ ಬಂದು ಪದಾರ್ಥವನ್ನು ಬಹಳ ಶಾಖ ಮಾಡಿ ಆರಿಸುವದಕ್ಕೆ ಪ್ರಾರಂಭ ಮಾಡಿದರೆ, ಮೊದಲು ಪದಾರ್ಥದ ಮೇಲಿನಭಾಗ ಆರುತದೆ; ಅನಂತರ ಸ್ವಲ್ಪಸ್ವಲ್ಪವಾಗಿ ಒಳಗಿನ ಭಾಗವು ಆರುತ್ತದೆ ಪದಾರ್ಥದ ಮಧ್ಯಪ್ರದೇಶವು ಎಲ್ಲಾ ಭಾಗಗಳಿಗಿಂತಲೂ ಕಡೆಯಲ್ಲಿ ಆರುತ್ತದೆ. ಮಸಲಾ ಬಂದು ಕಬ್ಬಿಣದ ಗುಂಡನ್ನು ಚೆನ್ನಾಗಿ ಕಾಯಿಸಿ ಆರುವದಕ್ಕೆ ಇಟ್ಟರೆ, ಮೇಲಿನಭಾಗವೆಲ್ಲಾ ಮೊದಲು ಆರುತ್ತದೆ, ಅನಂತರ ಒಳಗಿನ ಭಾಗವು ಆರುತ್ತದೆ. ಮೇಲಿನ ಭಾಗವೆಲ್ಲಾ ಆರಿದ ಕೂಡಲೆ ಅದನ್ನು ಬಿಸಿದರೆ ಒಳಗಿನ ಭಾಗ ಇನ್ನೂ ಬಹಳ ಶಾಖವಾಗಿಯೇ ಇರುತ್ತದೆ. ಈ ವಿಷಯವು ಸಾಧಾರಣವಾಗಿ ಎಲ್ಲರಿಗೂ ತಿಳಿದಿರಬಹುದು. ಪದಾರ್ಥಗಳು ಸಾಧಾರಣವಾಗಿ ಶಾಖ ಮಾಡಿದರೆ ದೊಡ್ಡದಾಗುವದೂ, ತಣ್ಣಗೆ ಮಾಡಿದರೆ ಸಣ್ಣದಾಗುವದೂ ಸ್ವಭಾವವಾಗಿರುತ್ತದೆ. ಬಂಡೀ ಚಕ್ರಗಳಿಗೆ ಪಟ್ಟೀ ಬಿಡುವದನ್ನು ಅನೇಕರು ನೋಡಿರಬಹುದು. ಮೊದಲು ಪಟ್ಟೆಯನ್ನು ಕೆಂಪಗೆ ಕಾಯಿಸಿ ಅನಂತರ ಅದನ್ನು ಚಕ್ರಕ್ಕೆ ಸೇರಿಸುತ್ತಾರೆ. ಸೇರಿಸಿದಾಗ ಆ ಪಟ್ಟೆಯು ಚಕ್ರವನ್ನು ಬಿಗಿಯಾಗಿ ಹಿಡಿದುಕೊಂಡಿರುವದಿಲ್ಲ. ಕೂಡಲೆ ಅದರ ಮೇಲೆ ತಣ್ಣೀರನ್ನು ಸುರಿಯುತ್ತಾರೆ. ಹಾಗೆ ಸುರಿದ ಕೂಡಲೆ ಪಟ್ಟೆಯು ಚಕ್ರವನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತದೆ. ಈ ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಳ್ಳಿರಿ.

ಯುಗಾಂತರದಲ್ಲಿ ಭೂಮಿಯು ಈಗ ಇರುವಹಾಗೆ ಇರಲಿಲ್ಲ. ಮೊದಲು ಜಲರೂಪವಾಗಿದ್ದು, ಕ್ರಮೇಣ ಘನರೂಪವನ್ನು ಧರಿಸುತ್ತಾ ಬಂದಿದೆ. ಹೀಗೆ ಹೇಳುವದಕ್ಕೆ ಅನೇಕ ಕಾರಣಗಳಿವೆ. ಅವುಗಳನ್ನು ಇಲ್ಲಿ ಹೇಳುವದು ಪ್ರಕೃತವಲ್ಲ. ಭೂಮಿ ಬಂದು ಕೆತ್ತಲೇ ಹಣ್ಣಾಗಿದೆ ಎಂಬುವದನ್ನು ನೀವು ಕೇಳಿರಬಹುದು. ನಾವೆಲ್ಲರೂ ಅಂದರೆ ಪ್ರಾಣಿಗಳೆಲ್ಲಾ ಭೂಮಿಯ ಮೇಲಿನಭಾಗದಲ್ಲಿ ವಾಸ ಮಾಡುತ್ತಾ ಇದೇವೆ. ಭೂಮಿಯ ಒಳಗೆ ಹೋಗುತ್ತಾ ಹೋಗುತ್ತಾ ಶಾಖವು ಹೆಚ್ಚಾಗುತ್ತಾ ಬರುತ್ತದೆ. ಭೂಮಿಯಲ್ಲಿ ಬಂದು ಆಳವಾದ ಬಾವಿಯನ್ನು ತೆಗೆದರೆ, ಆ ಬಾವಿಯ ಕೆಳಗಿನ ಭಾಗದ ಶಾಖಕ್ಕೂ ಮೇಲಿನ ಭಾಗದ ಶಾಖಕ್ಕೂ ಬಹಳ ತಾರತಮ್ಯವಿದೆಯೆಂಬುವದನ್ನು ಸಾಧಾರಣವಾಗಿ ಕೂಲೀಜನಗಳೆಲ್ಲಾ ಬಲ್ಲರು. ಇದರಿಂದ ಭೂಮಿಯ ಕೆಳಗೆ ಹೋಗುತ್ತಾ ಹೋಗುತ್ತಾ ಶಾಖವು ಹೆಚ್ಚಾಗುತ್ತದೆಂಬುವದು ಸ್ಪಷ್ಟವಾಗುತ್ತದೆ. ಆದ್ದರಿಂದ ಭೂಮಿಯ ಕೆಳಗೆ ಬಹಳ ಆಳಕ್ಕೆ ಹೋದರೆ ಕಲ್ಲುಗಳು ಸಹ ಕರಗಬಹುದೆಂದು ನಾವು ಊಹಿಸಬಹುದು. ಮೊದಲು ಜಲರೂಪವಾಗಿದ್ದ ಭೂಮಿಯು ತನ್ನಲ್ಲಿದ್ದ ಶಾಖದಲ್ಲಿ ಸ್ವಲ್ಪ ಶಾಖವನ್ನು ಕೊಟ್ಟು, ಘನರೂಪವಾಗಿದೆ. ಘನರೂಪವಾಗಿದ್ದರೂ ಭೂಮಿಯಲ್ಲಿ

ಅಗಸನ ಕತ್ತೆ ಮರಿಹಾಕಿದರೆ ಅರಸರಿಗೆ ಲಾಭವಂತೆ.

ಇನ್ನೂ ಬಹಳ ಶಾಖವಿದೆ. ಭೂಮಿಯು ಮೇಲಿನಭಾಗದಲ್ಲಿಮಾತ್ರ ತಣ್ಣಗಾಗಿದ್ದರೂ, ಒಳಗಿನ ಭಾಗದಲ್ಲಿ ಬಹಳ ಶಾಖವಾಗಿದೆ. ಈ ಒಳಗಿರುವ ಶಾಖವೂ ಹೋಗಿ ಭೂಮಿಯು ಎಲ್ಲಾ ತಣ್ಣಗಾದರೆ ಆನಂತರ ಭೂಕಂಪಗಳೂ ಅಗ್ನಿಪರ್ವತಗಳೂ ಆಗುವದಿಲ್ಲ. ಮೇಲಿನಭಾಗ ಮಾತ್ರ ತಣ್ಣಗೂ ಒಳಗಿನಭಾಗ ಬಹಳ ಶಾಖವಾಗಿಯೂ ಇರುವದರಿಂದಲೇ ಭೂಕಂಪಗಳೂ ಅಗ್ನಿಪರ್ವತಗಳೂ ಆಗುವವು. ಹ್ಯಾಗಂದರೆ, ಬಂದು ಗಾಜಿನ ಪಾತ್ರೆಯನ್ನು ತೆಗೆದುಕೊಂಡು ಅದನ್ನು ಚನ್ನಾಗಿ ಕಾಯಿಸಿ ಆನಂತರ ಅದರ ಮೇಲೆ ತಣ್ಣೀರು ಹಾಕಿದರೆ ಆ ಪಾತ್ರೆಯು ಒಡೆದು ಹೋಗುತ್ತದೆ. ಇದು ನಿಮ್ಮಲ್ಲಿ ಅನೇಕರಿಗೆ ತಿಳಿದಿರಬಹುದು. ಅದು ಯಾತಕ್ಕೆ ಒಡೆದು ಹೋಗುತ್ತದೆಂದು ವಿಚಾರಿಸಿದ್ದೀರಾ ? ಚನ್ನಾಗಿ ಕಾಯಿಸಿದ ಗಾಜಿನ ಪಾತ್ರೆಯ ಮೇಲುಗಡೆ ನೀವುಹಾಕಿದರೆ ಮೇಲುಗಡೆಮಾತ್ರತಣ್ಣಗೆ ಆಗುತ್ತದೆ; ಒಳಗಡೆ ಶಾಖವಾಗಿಯೇ ಇರುತ್ತದೆ. ಮೇಲಿನಭಾಗದಲ್ಲಿ ತಣ್ಣಗಾದ್ದರಿಂದ ಅಲ್ಲಿನ ಪರಮಾಣುಗಳು ಹತ್ತರಹತ್ತರಕ್ಕೆ ಬರುತ್ತವೆ. ಅಂದರೆ ನಾನು ಮೊದಲು ಹೇಳಿರುವಂತೆ ಮೇಲಿನಭಾಗವು ಸಣ್ಣಗಾಗಿ ಒಳಗಿನ ಭಾಗವು ಶಾಖವಾಗಿರುವದರಿಂದ ದೊಡ್ಡದಾಗಿಯೇ ಇರುತ್ತದೆ. ಒಂದೇ ಪದಾರ್ಥದಲ್ಲಿ ಮೇಲಿನಭಾಗ ತಣ್ಣಗೂ ಸಣ್ಣದಾಗಿಯೂ ಒಳಗಿನಭಾಗ ಶಾಖವಾಗಿಯೂ ದೊಡ್ಡದಾಗಿಯೂ ಇರುವದಕ್ಕಾಗುವದಿಲ್ಲ. ಆದ್ದರಿಂದ ಅದು ಒಡೆದುಹೋಗುತ್ತದೆ. ಹಾಗೆಯೇ ಭೂಮಿಯು ಮೇಲುಗಡೆ ತಣ್ಣಗೂ ಸಣ್ಣದಾಗಿಯೂ, ಒಳಗೆ ಶಾಖವಾಗಿಯೂ ದೊಡ್ಡದಾಗಿಯೂ ಇರುವದರಿಂದಲೇ ಬಿಡೆಯುತ್ತದೆ. ಈ ಬಿಡೆಯುವದೇ ಭೂಕಂಪಕ್ಕೆ ಒಂದು ಕಾರಣ. ಮತ್ತೊಂದು ಏನಂದರೆ: ಮಳೆಗಾಲದಲ್ಲಿ ಬಹಳ ಮಳೆ ಬರುವದು ಸರಿಯಷ್ಟೆ. ಆ ನೀರೆಲ್ಲಾ ಏನಾಗುತ್ತದೆ ? ಸ್ವಲ್ಪಭಾಗ ಪ್ರವಾಹವಾಗಿ ಕೆರೆಗಳಿಗಾಗಲೀ ನದಿಗಳಿಗಾಗಲೀ ಬೀಳುತ್ತದೆ. ಮತ್ತು ಸ್ವಲ್ಪಭಾಗ ಭೂಮಿಯ ಒಳಗೆ ಇಂಗಿ ಹೋಗಿಬಿಡುತ್ತದೆ. ಹೀಗೆ ಒಳಗೆ ಹೋದನೀರೇ ನಾವು ಬಾವಿಯಾಗಲೀ ಕೊಳವಾಗಲೀ ತೆಗಿಸಿದಾಗ ಅದಕ್ಕೆ ಬರುವದು. ಧೈವಜಲವೆಂದು ಹೇಳುತ್ತಾರಲ್ಲವೆ ? ಭೂಮಿಯ ಒಳಕ್ಕೆ ಹೋದ ನೀರೇ ಅದು. ಕೆಲವುಕಡೆಗಳಲ್ಲಿ ಕೊಳದ ನೀರು ಬಿಸಿಯಾಗಿರುತ್ತದೆಂದು ಹೇಳುತ್ತಾರಲ್ಲವೆ ? ಅದು ನಿಜ. ಆ ಕೊಳಕ್ಕೆ ಬರತಕ್ಕ ನೀರು ಭೂಮಿಯಲ್ಲಿ ಬಹಳ ಆಳಕ್ಕೆ ಹೋಗಿಬರುತ್ತದೆ. ಆದದರಿಂದ ಆ ನೀರು ಬಿಸಿಯಾಗಿರುತ್ತದೆ. ಆದ್ದರಿಂದ ನೀರು ಭೂಮಿಯ ಒಳಗೆ ಬಹಳ ಆಳಕ್ಕೆ ಹೋದರೆ ಅಲ್ಲಿ ಶಾಖವು ಬಹಳ ಹೆಚ್ಚಾಗಿರುವದರಿಂದ ಆ ನೀರೆಲ್ಲಾ ಹಬೆಯಾಗುತ್ತದೆ. ಒಟ್ಟಿಗೆ ಬಹಳ ನೀರು ಹಬೆಯಾದರೆ ಆ ಹಬೆಯೆಲ್ಲಾ ಹೊರಕ್ಕೆ ಹೋಗಲೇಕಾದರೆ ಭೂಮಿಯು ಒಡೆಯದೆ ಆಗುತ್ತದೆಯೇ ? ಅದು ಹೊರಗೆ ಬರುವಾಗ ಅದರ ದಾರಿಯಲ್ಲಿ ಸಿಕ್ಕಿದ ಪದಾರ್ಥಗಳನ್ನು ಮೇಲಕ್ಕೆ ತೆಗೆದುಕೊಂಡು ಬರದೇ ಬಿಡುವದೆ ? ಹಬೆಯ ಶಕ್ತಿಯನ್ನು ತಿಳಿಯಬೇಕಾದರೆ ರೇಲ್ವೇ ಗಾಡಿಗಳನ್ನು ಚ್ಞಾಪಿ

ಅಡೂ ಇಟ್ಟು ಬದುಕನ್ನ ಬಿಡಿಸುವದು ಕಷ್ಟ.

ಸಿಕೊಳ್ಳಿ. ಒಂದು ರೇಲ್ವೇ ಯಂತ್ರಕ್ಕೆ ಎಷ್ಟು ಗಾಡಿಗಳನ್ನು ಕಟ್ಟುತ್ತಾರೆ! ಅಷ್ಟು ಗಾಡಿಗಳನ್ನೂ ಯಾವದು ಎಳೆದುಕೊಂಡು ಹೋಗುತ್ತದೆ? ನೀರಿನ ಹಬೆಯಲ್ಲವೆ? ಕೆಲವು ವೇಳೆ ಹಬೆಯು ಹೆಚ್ಚಾಗಿ ಹೊರಕ್ಕೆ ಹೋಗುವದಕ್ಕೆ ಜಾಗವಿಲ್ಲದೇ ಇದ್ದರೆ ಯಂತ್ರವೇ ಒಡೆದು ಹೋಗಿಬಿಡುತ್ತದೆ. ಸ್ವಲ್ಪ ಹಬೆಗೆ ಇಷ್ಟು ಶಕ್ತಿ ಇರುವಾಗ್ಗೆ ಒಟ್ಟಿಗೆ ಬಹಳ ಹಬೆಯಾದರೆ ಆ ಹಬೆಯು ಏನನ್ನು ತಾನೆ ಮಾಡಲಾರದು? ಆದರೆ ಮತ್ತೊಂದು ವಿಷಯವಿದೆ. ಒಂದು ಗಾಜಿನ ಪಾತ್ರೆಯನ್ನು ತೆಗೆದುಕೊಂಡು ಅದಕ್ಕೆ ಅರ್ಧ ಮುಕ್ಕಾಲುಭಾಗಕ್ಕೆ ನೀರು ಹಾಕಿ ನೀರನ್ನು ಕಾಯಿಸಿ ಹಬೆಯನ್ನು ಒಟ್ಟುಮಾಡಿ ಆವಿಯು ಹೆಚ್ಚಾಗಿ ಹೊರಕ್ಕೆ ಹೋಗುವದಕ್ಕೆ ಸ್ಥಳವಿಲ್ಲದಂತೆಮಾಡಿದರೆ, ಆಗ ಹಬೆಯು ಆ ಪಾತ್ರೆಯ ಯಾವ ಭಾಗದಲ್ಲಿ ಶಕ್ತಿ ಕಡಮೆಯಾಗಿರುತ್ತದೆಯೋ ಆ ಭಾಗವನ್ನು ಒಡೆದುಕೊಂಡು ಹೊರಗೆ ಹೋಗುತ್ತದೆ. ಹಾಗೆಯೇ ಭೂಮಿಯಲ್ಲಿಯೂ ಹಬೆಯು ಯಾವ ಭಾಗದಲ್ಲಿ ಆಗುತ್ತದೆಯೋ ಆಭಾಗದಲ್ಲಿಯೇ ಮೇಲಕ್ಕೆ ಬರುವದಿಲ್ಲ. ಸ್ವಲ್ಪದೂರ ಮುಂದಕ್ಕಾಗಲೀ ಅಥವಾ ಹಿಂದಕ್ಕಾಗಲೀ ಹೋಗಿ ಶಕ್ತಿಯಿಲ್ಲದ ಭಾಗವನ್ನು ನೋಡಿ ಅಲ್ಲಿ ಮೇಲಕ್ಕೆ ಬರುತ್ತದೆ. ಅಷ್ಟು ಹಬೆಯು ಮುಂದಕ್ಕಾಗಲೀ ಹಿಂದಕ್ಕಾಗಲೀ ಹೋಗುವಾಗ ಮಾರ್ಗದಲ್ಲಿರುವ ಕಲ್ಲುಗಳನ್ನೂ ಗುಂಡುಗಳನ್ನೂ ನೀರಾದ ಕಲ್ಲುಗಳನ್ನೂ ತಳ್ಳಿಕೊಂಡು ಹೋಗುತ್ತದೆ. ಈ ಪದಾರ್ಥಗಳನ್ನೆಲ್ಲಾ ತಳ್ಳಿಕೊಂಡು ಹೋಗುವಾಗ ಭೂಕಂಪವಾಗುವದು ಆಶ್ಚರ್ಯವೆ? ಅಲ್ಲ. ಭೂಕಂಪಕ್ಕೆ ಇದೂ ಒಂದು ಕಾರಣ. ಈ ಪದಾರ್ಥಗಳೆಲ್ಲಾ ಯಾವ ಭಾಗದಲ್ಲಿ ಹೊರಕ್ಕೆ ಬರುತ್ತವೋ ಆ ಭಾಗಕ್ಕೆ ಅಗ್ನಿಪರ್ವತವೆಂದು ಹೆಸರು. ಅಗ್ನಿಪರ್ವತಗಳು ಸಾಧಾರಣವಾಗಿ ದೊಡ್ಡದೊಡ್ಡ ನೀರಿನ ಭಾಗಗಳ ಸಮೀಪದಲ್ಲಿರುತ್ತವೆಂದು ನಾನು ಮೊದಲೇಹೇಳಿದ್ದೇನಷ್ಟೆ. ಅದಕ್ಕೆ ಕಾರಣ ನಿಮಗೆ ಈಗ ಗೊತ್ತಾಗಿರಬಹುದು. ಮಳೆಯು ಬಹಳವಾಗಿ ದೊಡ್ಡದೊಡ್ಡ ನೀರಿನ ಭಾಗಗಳಲ್ಲಿ ಬೀಳುತ್ತದೆ. ಭೂಮಿಯ ಕೆಳಗೆ ಬಹಳವಾಗಿ ನೀರಿರಬೇಕಾದರೂ ದೊಡ್ಡ ನೀರಿನ ಭಾಗಗಳ ಸಮೀಪದಲ್ಲಿಯೇ. ಇದರಿಂದಲೇ ಅಗ್ನಿಪರ್ವತಗಳು ದೊಡ್ಡ ನೀರಿನ ಭಾಗಗಳ ಸಮೀಪದಲ್ಲಿರುವವು ಎಂದು ತೋರುವದಲ್ಲವೆ?

ನಾನು ಇದುವರೆವಿಗೂ ಹೇಳಿರುವ ಸಂಗತಿಗಳನ್ನೆಲ್ಲಾ ನೀವು ಚನ್ನಾಗಿ ತಿಳಿದುಕೊಂಡರೆ ಅಗ್ನಿಪರ್ವತಗಳು ಭೂಕಂಪಗಳು ಅಂದರೆ ಇಂಥಾವೆಂತಲೂ ಅವುಗಳಿಗೆ ಕಾರಣ ಏಂಥಾದ್ದೆಂತಲೂ ತಿಳಿಯಬಹುದೆಂದು ನಂಬುತ್ತೇನೆ.

ಭೂಕಂಪಗಳಾಗುವದರಿಂದ ಜನಗಳಿಗೆ ನಷ್ಟವೊಂದೇ ಅಲ್ಲ, ಬಹಳ ಆದಾಯವೂ ಉಂಟೆಂದು ನಾನು ಮೇಲೆ ಹೇಳಿದೆನಲ್ಲವೆ? ಆದಾಯವು ಏನಂದರೆ, ಅನೇಕ ಲೋಹಗಳು ಅಂದರೆ ಕಬ್ಬಿಣಮುಂತಾದವುಗಳೂ ಕಲ್ಲಿದ್ದಲೂ ಎಲ್ಲಿ ಸಿಕ್ಕುತ್ತವೆ? ಭೂಮಿಯ

ಅರಗಳಿಯ ಮಾತುಗಳು ಅತಿ ಚಿಕ್ಕವು.

ಸಿಕ್ಕುತ್ತವೆ. ಈ ಪದಾರ್ಥಗಳು ಭೂಮಿಯಲ್ಲಿ ಇಂಥಾ ಭಾಗಗಳಲ್ಲವೆ ಎಂದು ತಿಳಿದದ್ದು ಹ್ಯಾಗೆ ? ಇವುಗಳೆಲ್ಲಾ ಭೂಮಿಯ ಒಳಗಿನ ಭಾಗದಲ್ಲಿ ಅಗೋಚರವಾಗಿದ್ದವುಗಳು ; ಭೂಕಂಪಗಳಿಂದ ಭೂಮಿಯ ಮೇಲಿನಭಾಗಕ್ಕೆ ಬಂದು ಗೋಚರವಾದವು. ಭೂಕಂಪಗಳಿಲ್ಲದೆ ಇದ್ದರೆ ಈ ಪದಾರ್ಥಗಳೆಲ್ಲಾ ಭೂಮಿಯ ಮೇಲಿನ ಭಾಗಕ್ಕೆ ಬರುತ್ತಲೇ ಇರಲಿಲ್ಲ. ಇವುಗಳು ಇಲ್ಲದಿದ್ದರೆ ಮನುಷ್ಯರ ಸುಖವು ಎಷ್ಟುಮಟ್ಟಿಗೆ ಕಡಮೆಯಾಗುತ್ತಿತ್ತೆಂಬುವದನ್ನು ನೀನೇ ಊಹಿಸಿಕೊಳ್ಳಬಹುದು.

ಎಮ್. ಶಾಮರಾವ್, ಎಮ್. ಎ.

೫. ಶಾಸ್ತ್ರಪ್ರವೇಶದಾಯಿನಿ.

ಮಗುವಿನ ಕೈಗೆ ಯಾವದಾದರೂ ಒಂದು ವಸ್ತುವು ಸಿಕ್ಕಿದರೆ ಅದು ಆ ವಸ್ತುವನ್ನು ಹಿಸುಕುತ್ತದೆ, ಬಾಯಿಯಲ್ಲಿಟ್ಟುಕೊಳ್ಳುತ್ತದೆ, ದೂರಕ್ಕೆ ಎಸೆಯುತ್ತದೆ. ಅದು ಹೀಗೆಲ್ಲಾ ಮಾಡುವದರಿಂದ ಅದಕ್ಕೆ ಆ ವಸ್ತುವಿನ ಧರ್ಮಗಳು ಗೊತ್ತಾಗುವವು. ದೊಡ್ಡವರೂ ಕೂಡ ಯಾವದಾದರೂ ಒಂದು ವಸ್ತುವಿಂಥಾದ್ದೆಂದು ಕಂಡು ಹಿಡಿಯಬೇಕಾದರೆ ಆ ವಸ್ತುವನ್ನು ಚೆನ್ನಾಗಿ ನೋಡುತ್ತಾರೆ, ಕೈಯಿಂದ ಹಿಸಿಕಿ ನೋಡುತ್ತಾರೆ, ಮೂಸಿ ನೋಡುತ್ತಾರೆ, ಕೆಲವು ವೇಳೆ ಅಗಿದು ರುಚಿಯನ್ನು ನೋಡುತ್ತಾರೆ, ಹೀಗೆ ವಸ್ತುಗಳ ಧರ್ಮವನ್ನು ಕಂಡು ಹಿಡಿಯುವದಕ್ಕಾಗಿ ಅವುಗಳನ್ನು ಪರೀಕ್ಷಿಸಿ ನೋಡುವದು ಸಂವೀಕ್ಷಣೆಯೆಂದನ್ನಿಸಿಕೊಳ್ಳುತ್ತದೆ. ಆ ವಸ್ತುಗಳನ್ನು ಹಿಸುಕುವದು ಮೂಸಿ ನೋಡುವದು ಎಸೆಯುವದೇ ಮೊದಲಾದ ಕೆಲಸವು ಪರೀಕ್ಷೆಯೆಂದೆನ್ನಿಸಿಕೊಳ್ಳುತ್ತದೆ. ಆದರೆ ಜನರು ಸಾಮಾನ್ಯವಾಗಿ ವಸ್ತುಗಳನ್ನು ಅಷ್ಟು ಚೆನ್ನಾಗಿ ಪರೀಕ್ಷಿಸಿ ನೋಡುವದೂ ಇಲ್ಲ, ಪರೀಕ್ಷಿಸುವದೂ ಇಲ್ಲವಾದ್ದರಿಂದ, ಜನಗಳಿಗೆ ಆ ವಸ್ತುಗಳ ವಿಷಯವಾಗಿರುವ ಜ್ಞಾನವು ಕೇವಲ ನಿಷ್ಕೃಷ್ಟವಾದದ್ದಲ್ಲ. ಇಂಥಾ ಜ್ಞಾನವನ್ನು ಲೌಕಿಕ ಜ್ಞಾನವೆನ್ನಬಹುದು. ಕೇವಲ ಜಾಗರೂಕತೆಯಿಂದ ವಸ್ತುಗಳನ್ನು ಪರೀಕ್ಷಿಸಿ ನೋಡುವದರಿಂದಲೂ ಪರೀಕ್ಷಿಸುವದರಿಂದಲೂ ಉಂಟಾಗುವ ಜ್ಞಾನವೇ ಶಾಸ್ತ್ರೀಯವಾದ ಸಿದ್ಧಾಂತವೆನ್ನಿಸುವದು. ಕೇವಲ ನಿಷ್ಕರ್ಷತೆಯೊಂದು ಹೊರತು, ಮಿಕ್ಕ ವಿಷಯಗಳಲ್ಲಿ ಲೋಕದಲ್ಲಿ ಜನಗಳಿಗೆ ವಸ್ತುಗಳ ವಿಷಯವಾಗಿರುವ ಲೌಕಿಕ ಜ್ಞಾನಕ್ಕೂ ಅದೇ ವಸ್ತುಗಳ ವಿಷಯವಾಗಿ ಹೇಳಲ್ಪಟ್ಟಿರುವ ಶಾಸ್ತ್ರಸಿದ್ಧಾಂತಗಳಿಗೂ, ವಸ್ತುಗಳ ಧರ್ಮ ವೈಲಕ್ಷಣ್ಯಗಳನ್ನು ತಿಳಿದು

ಅಕ್ಷರವೇ ತಾಯಿ ತಂದೆಯಂತೆ.

ಕೊಳ್ಳುವದಕ್ಕಾಗಿ ಜನರು ಸಾಧಾರಣವಾಗಿ ಉಪಯೋಗಿಸುತ್ತಿರುವ ಲೌಕಿಕ ವಿಚಾರಕ್ಕೂ, ಅದೇ ವಿಷಯವಾದ ಶಾಸ್ತ್ರೀಯ ವಿಚಾರಕ್ಕೂ, ಭೇದವೇನೂ ಇಲ್ಲ. ಸರ್ವರಿಂದಲೂ ದಿನೇದಿನೇ ಲೋಕ ವ್ಯವಹಾರಕ್ಕಾಗಿ ಸಾಧಾರಣವಾಗಿ ಉಪಯೋಗಿಸಲ್ಪಡುವ ಸಂವೀಕ್ಷಣೆ ಪರೀಕ್ಷೆಗಳನ್ನೂ ಶಾಸ್ತ್ರೋಕ್ತ ಸಂವೀಕ್ಷಣೆ ಪರೀಕ್ಷೆಗಳನ್ನು ಬಂದೆಂತಲೇ ಹೇಳಬೇಕು. ಲೌಕಿಕ ಸಂವೀಕ್ಷಣ ಪರೀಕ್ಷೆಗಳಿಗಿಂತಲೂ ನಿಷ್ಕೃಷ್ಟವಾಗಿ ಮಾಡಲ್ಪಟ್ಟ ಸಿದ್ಧಾಂತ ಸಾಧಕಗಳಾದ ಶಾಸ್ತ್ರೀಯ ಸಂವೀಕ್ಷಣೆಪರಿಕ್ಷೆಗಳು ಅತ್ಯಂತ ಕಷ್ಟ ಸಾಧ್ಯಗಳು. ಶಾಸ್ತ್ರರೀತಿಯಾಗಿ ವಸ್ತುಗಳನ್ನು ಸಂವೀಕ್ಷಿಸುವದಕ್ಕೂ ಅಭ್ಯಾಸವಿಲ್ಲದವರಿಗೆ ಆ ಕೆಲಸಗಳ ಕಷ್ಟವು ಗೊತ್ತಾಗುವದು. ಅತ್ಯಂತ ಸುಲಭವಾಗಿ ಗ್ರಹಿಸಲ್ಪಡುವಂಥಾವಾಗಿಯೂ ದಿನೇದಿನೇ ಸಂಭವಿಸುವಂಥಾವುಗಳಾಗಿಯೂ ಇರುವ ಸಾಧಾರಣ ಕಾರ್ಯಗಳನ್ನು ಕೂಡ ಸ್ವಲ್ಪವಾದರೂ ಹೆಚ್ಚು ಕಡಮೆಯಿಲ್ಲದೆ ಯಥಾಕ್ರಮವಾಗಿ ತಿಳಿಸುವದಕ್ಕೆ ಅನಂತರದಲ್ಲೊಬ್ಬನು ಸಮರ್ಥನಾಗುವನೋ ಇಲ್ಲವೋ! ಅನೇಕರು ನಡೆದ ಕಾರ್ಯದಲ್ಲಿ ಅವಶ್ಯವಾಗಿ ತಿಳಿಸಬೇಕಾದ ವಿಷಯಗಳಲ್ಲಿ ಕೆಲವನ್ನು ಬಿಟ್ಟುಬಿಡುವದಲ್ಲದೆ ತಾವು ಪ್ರತ್ಯಕ್ಷವಾಗಿ ನೋಡಿದ್ದಾಗ್ಯೂ ತಮ್ಮಿಂದ ಊಹಿಸಲ್ಪಟ್ಟವೆಂದು ತಿಳಿಯದೇನೇ ಊಹಿಸಲ್ಪಟ್ಟವೆಂದು ತಿಳಿಯದೇನೇ ಊಹಿಸಲ್ಪಟ್ಟಿರುವ ವಿಷಯಗಳನ್ನು ತಾವು ಕಂಡವುಗಳೆಂದು ಹೇಳುವದುಂಟು. ಸೂನೃತವಾದಿಗಳಾದ ಸಾಕ್ಷಿಗಳಿಬ್ಬರು ನ್ಯಾಯಸ್ಥಾನದಲ್ಲಿ ನ್ಯಾಯಾಧಿಪನ ಮುಂದೆ ಬಂದು ವಿಷಯವಾಗಿ ಸಾಕ್ಷಿ ಕೊಡುತ್ತಿರುವಾಗ ಒಬ್ಬನು ಕೊಟ್ಟದ್ದಕ್ಕೆ ಮತ್ತೊಬ್ಬನದು ವಿರೋಧವಾಗಿ ಕಾಣಬಂದಲ್ಲಿ, ಅವರು ಪ್ರತ್ಯಕ್ಷವಾಗಿ ನೋಡಿದ ಕಾರ್ಯಗಳಿಂದ ಅವರಲ್ಲೊಬ್ಬನಿಂದಾಗಲಿ ಅಥವಾ ಇಬ್ಬರಿಂದಲೂ ಆಗಲಿ, ಅಜ್ಞಾತವಾಗಿ ಊಹಿಸಲ್ಪಟ್ಟ ವಿಷಯಗಳನ್ನೂ ಪ್ರತ್ಯಕ್ಷವಾಗಿ ನೋಡಿದ ಕಾರ್ಯಗಳನ್ನೂ ಭ್ರಾಂತಿಯಿಂದ ಕಲಸರಕೆಮಾಡಿ, ತಾವು ಪ್ರತ್ಯಕ್ಷವಾಗಿ ನೋಡಿದ ವಿಷಯಗಳನ್ನೇ ಹೇಳುವರೆಂದು ತಿಳಿದು ಹೇಳಿರುವದನ್ನು ಪರ್ಯಾಲೋಚಿಸಿ ಪರೀಕ್ಷಿಸಿದಲ್ಲಿ ಸಕಲರಿಗೂ ಸ್ಪಷ್ಟವಾಗುವದು.

ಒಂದಾನೊಂದುದಿನ ಸಾಯಂಕಾಲವಾದಮೇಲೆ ರಾಮನೂ ಕೃಷ್ಣನೂ ಜೊತೆಯಾಗಿ ಬಂದು ರಸ್ತೆಯಲ್ಲಿ ಹೋಗುತ್ತಾ ಬಂದು ಸೇತುವೆಯ ಮೇಲೆ ನಿಂತರು. ಆಗ ಆಕಾಶದಲ್ಲಿ ಅಮೋಘವಾದ ನಕ್ಷತ್ರಗಳು ಕಾಣಬರುತ್ತಿದ್ದವಾದ್ದರಿಂದ ಇಬ್ಬರೂ ಅವುಗಳನ್ನು ನೋಡುತ್ತಿದ್ದರು. ಹೀಗಿರುವಾಗ ಇವರಿಬ್ಬರಿಗೂ ತಿಳಿಯುವಹಾಗೆ ಭೀಮನು ಮೆಲ್ಲಮೆಲ್ಲನೆ ಬಂದು ಕೃಷ್ಣನ ಜೇಬಿನೊಳಕ್ಕೆ ಕೈ ಹಾಕಿ ಅದರೊಳಗಿದ್ದ ರೂಪಾಯಿಯನ್ನು ಕದ್ದುಕೊಂಡು ಥಟ್ಟನೆ ಸೇತುವೆಯ ಕೆಳಕ್ಕೆ ಹೋಗಿ ಅವಿತುಕೊಂಡನು. ಆಗ ಕೃಷ್ಣನು ಯಾರೋ ತನ್ನ ಜೇಬಿಗೆ ಕೈ ಹಾಕಿದರೆಂದು ತಿಳಿದು, ಜೇಬಿನೊಳಕ್ಕೆ ಕೈ ಹಾಕಿ ರೂಪಾಯಿಯನ್ನು ಕಾಣದೆ, ಸುತ್ತ ಮುತ್ತ ನೋಡಿ, ರಾಮನೊಬ್ಬನನ್ನ ಹೊರತು ಮತ್ತಾರನ್ನೂ

ಅನ್ಯರು ಒಪ್ಪದ ಕಾರ್ಯವನ್ನು ಮಾಡಲೇ ಬಾರದು.

ಕಾಣಿಕ್ಕೆರಿಂದ ರೂಪಾಯನ್ನು ತನ್ನ ಬಳಿ ಇದ್ದ ರಾಮನೇ ಕದ್ದನೆಂದೂಹಿಸಿ ಅವನನ್ನು ಕೇಳಿದನು. ರಾಮನು ಎಷ್ಟು ಬಗೆಯಲ್ಲಿ ತಾನು ಕದಿಯಲಿಲ್ಲವೆಂದು ಹೇಳಿದರೂ ನಂಬದೆ, ನೀನೇ ಕದ್ದಿ ಎಂದು ಕೃಷ್ಣನು ಅವನೊಡನೆ ಜಗಳವಾಡ ತೊಡಗಿದನು. ಹೀಗೆ ಜೇಬಿಗೆ ಯಾರೋ ಕೈ ಹಾಕಿದರೆಂದು ತಿಳಿದ ಸಂಗತಿಯಿಂದ ಕೃಷ್ಣನು ರಾಮನೇ ಕಳ್ಳನೆಂಬದಾಗಿ ಊಹಿಸಿದ್ದು ಅವನಿಗೆ ಊಹಿತವಾಗಿ ತೋರಲಿಲ್ಲ. ನೋಡಿದ್ದಕ್ಕಿಂತ ಹೆಚ್ಚಾಗಿ ರಾಮನೇ ಕಳ್ಳನೆಂದು ಹೇಳಿದನು. ಈಪ್ರಕಾರವಾಗಿ ಅಭ್ಯಾಸವಿಲ್ಲದ ಸಂವೀಕ್ಷಕ ಪರೀಕ್ಷಕರು ತಾವು ಪ್ರತ್ಯಕ್ಷವಾಗಿ ನೋಡಿದ ವಿಷಯಗಳನ್ನೂ ತಮ್ಮಿಂದಲೂಹಿತವಾದವುಗಳನ್ನೂ ಅಭೇದವಾಗಿ ತಿಳಿದು ಎಲ್ಲವೂ ನೋಡಿರುವವೆಂದೇ ಹೇಳಿಬಿಡುವರು. ಶಾಸ್ತ್ರೋಕ್ತವಾಗಿ ಸಂವೀಕ್ಷಿಸುವ ಬಗ್ಗೆ ಪರೀಕ್ಷಿಸುವದಕ್ಕೂ ವಿಚಾರಮಾಡುವದಕ್ಕೂ ಅಭ್ಯಾಸ ವಿರುವವರು ಸಹ ಕೆಲವು ಸಮಯಗಳಲ್ಲಿ ಮೋಸ ಹೋಗುವರು. ಕೂಲಂಕಷವಾಗಿಯೂ ನಿಷ್ಕೃಷ್ಟವಾಗಿಯೂ ಅಜ್ಞಾತೋಕ್ತಿಗಳಿಂದ ರಹಿತವಾಗಿಯೂ ಇರುವದೇ ಶಾಸ್ತ್ರೀಯ ಸಂವೀಕ್ಷಣೆ. ಅಕೃತ್ರಿಮ ವಸ್ತುಗಳ ಅವಸ್ಥೆಗಳನ್ನು ಬುದ್ಧಿಪೂರ್ವಕ ಬದಲಾಯಿಸುವದರಿಂದಲೂ, ಆ ವಸ್ತುಗಳನ್ನು ಒಂದರೊಂದಿಗೆ ಮತ್ತೊಂದನ್ನು ಸೇರಿಸುವದರಿಂದಲೂ ಬೇರೆಬೇರೆ ಮಾಡುವದರಿಂದಲೂ ಸಂಭವಿಸುವ ಕಾರ್ಯಗಳನ್ನು ತಿಳಿಯುವದೇ ಪರೀಕ್ಷೆಯಾಗಿರುವದರಿಂದ, ನಿಷ್ಕೃಷ್ಟವಾಗಿ ಗೊತ್ತಾಗಿರುವ ಕಲ್ಪಿತಾವಸ್ಥೆಗಳನ್ನು ವಸ್ತುಗಳಿಗುಂಟುಮಾಡಿ ಸಂಭವಿಸುವ ಕಾರ್ಯಗಳನ್ನು ಪರೀಕ್ಷಿಸುವದೇ ಶಾಸ್ತ್ರೀಯ ಪರೀಕ್ಷೆ.

ಕೆಲವು ಅವಸ್ಥೆಗಳಲ್ಲಿ ನೀರು ಗಟ್ಟಿಯಾಗಿ ಗಡ್ಡೆ ಕಟ್ಟಿಕೊಳ್ಳುತ್ತದೆಂಬದು ಸಾಧಾರಣವಾಗಿ ಎಲ್ಲರಿಗೂ ತಿಳಿದೇ ಇರುತ್ತದೆ. ಆದರೆ ನೀರು ಇಂಥಿಂಥಾ ಅವಸ್ಥೆಗಳಲ್ಲೇ ಗಡ್ಡೆ ಕಟ್ಟಿಕೊಳ್ಳುವದೆಂದು ನಿಷ್ಕೃಷ್ಟವಾಗಿ ತಿಳಿದುಕೊಳ್ಳುವದೇ ಶಾಸ್ತ್ರೀಯ ಸಂವೀಕ್ಷಣೆಯಿಂದ ಉಂಟಾಗುವ ಫಲ. ಬಿಣಿಗಿರುವ ಮರದ ತುಂಡು ನೀರಿನಲ್ಲಿ ತೇಲುವ ದೆಂಬದು ಸುಲಭದಲ್ಲೇ ಗೊತ್ತಾಗುವದು; ಆದರೆ ಆ ಮರದ ತುಂಡಿನ ತೂಕದಷ್ಟೇ ತೂಗುವ ನೀರು ಆಕ್ರಮಿಸುವಷ್ಟು ಸ್ಥಳವನ್ನು ಆ ಮರದ ತುಂಡು ಆಕ್ರಮಿಸಿರುವದೆಂಬದು ಶಾಸ್ತ್ರೀಯ ಪರೀಕ್ಷೆಯಿಂದಲೇ ಗೊತ್ತಾಗಬೇಕು. ಸಕಲರೂ ಮರಣಾಧೀನರೆಂಬ ಜ್ಞಾನದಿಂದ ನಾನೂ ಮರಣಾಧೀನನೆಂದು ತಿಳಿದುಕೊಳ್ಳುವ ರೀತಿಗೆ ಅನುಮಾನವೆಂದು ಹೆಸರು. ಶಾಸ್ತ್ರೀಯ ಸಂವೀಕ್ಷಣೆ ಪರೀಕ್ಷೆಗಳಿಗೂ ಲೌಕಿಕ ಸಂವೀಕ್ಷಣೆ ಪರೀಕ್ಷೆಗಳಿಗೂ ಇರುವ ವ್ಯತ್ಯಾಸವೇ ಶಾಸ್ತ್ರೀಯಾನುಮಾನಕ್ಕೂ ಲೌಕಿಕಾನುಮಾನಕ್ಕೂ ಇದೆ. ಅವು ಎಷ್ಟು ಕಷ್ಟವಾದ ಕೆಲಸಗಳೋ ಇದೂ ಅಷ್ಟು ಕಷ್ಟವಾದಕೆಲಸ. ಅನೇಕ ವಸ್ತುಗಳನ್ನು ಶಾಸ್ತ್ರೋಕ್ತವಾಗಿ ಸಂವೀಕ್ಷಿಸಿ ಪರೀಕ್ಷಿಸಿ ಆ ವಸ್ತುಗಳಿಗೆಲ್ಲಾ ಸಾಮಾನ್ಯವಾಗಿರುವ ಧರ್ಮವು ಇಂಥಾದ್ದೆಂದು ಕಂಡು ಹಿಡಿಯುವ ರೀತಿಗೆ ವ್ಯಾಪ್ತಿ ಗ್ರಹೋಪಾಯವೆಂದು ಹೆಸರು. ಅನೇಕ ಗೋಲಿಗಳನ್ನು ಪರೀಕ್ಷಿಸಿ

ಅಸಮಾನನನ್ನು ಸಮಾನ ಮಾಡಿಕೊಂಡರೆ ದೂಷಿಸುವರು.

ಗೋಲಿಗಳೆಲ್ಲಾ ಗಟ್ಟಿಯಾಗಿರುವ ವೆಂಬುದನ್ನು ತಿಳಿಯುವದೇ ವ್ಯಾಪ್ತಿ ಗ್ರಹೋಪಾಯವು. ಹೀಗೆ ವ್ಯಾಪ್ತಿ ಗ್ರಹೋಪಾಯದಿಂದ ಲಬ್ಧವಾಗುವ ಗೋಲಿಗಳೆಲ್ಲಾ ಗಟ್ಟಿಯಾಗಿರುವವೆಂಬ ಜ್ಞಾನದಿಂದ ನನ್ನ ಬಳಿ ಇರುವ ಗೋಲಿಯೂ ಗಟ್ಟಿಯಾಗಿದೆಯೆಂದು ತಿಳಿಯುವದೇ ಅನುಮಾನ. ನನ್ನ ಬಳಿ ಇರುವ ಗೋಲಿ ಗಟ್ಟಿಯಾಗಿದೆ ಎಂಬುವದೇ ನಿಗಮನವ್ಯಾಪ್ತಿ ಗ್ರಹೋಪಾಯಾನುಮಾನ. ನಿಗಮನಗಳ ವಿಷಯವು ತರ್ಕಶಾಸ್ತ್ರದಲ್ಲಿ ಸಾಂಗವಾಗಿ ಹೇಳಲ್ಪಡುವದರಿಂದ ಆ ಶಾಸ್ತ್ರವನ್ನು ಓದುವಾಗ ಆ ವಿಷಯಗಳು ಸರಿಯಾಗಿ ತಿಳಿಯುವವು. ಅನೇಕ ವಸ್ತುಗಳನ್ನು ಭೂಯೋ ಭೂಯೋ ಶಾಸ್ತ್ರೀಯವಾಗಿ ಸಂವೀಕ್ಷಿಸಿ ಪರೀಕ್ಷಿಸುವದರಿಂದಲೂ ವ್ಯಾಪ್ತಿ ಗ್ರಹೋಪಾಯಾನುಮಾನಗಳಿಂದಲೂ ಉಂಟಾಗುವ ಜ್ಞಾನವೇ ಪ್ರಕೃತಿ ನಿಯಮಗಳೆಂಬದು ಇಲ್ಲಿ ಮುಖ್ಯವಾಗಿ ತಿಳಿಸು ಬೇಕಾದ ಅಂಶವಾಗಿದೆ. ಇಂಥಾ ಪ್ರಕೃತಿ ನಿಯಮಗಳಿಂದ ಅನುಮಾನ ಪೂರ್ವಕ ಲಭಿಸುವ ನಿಗಮನಗಳ ಕಾಲ್ಪನಿಕ ವ್ಯವಹಾರಿಕ ವಿಷಯಗಳಿಗೆ ಉಪಯೋಗವಾಗುವವು. ಕೇವಲ ನಿಷ್ಕೃಷ್ಟವಾಗಿರುವ ಲೌಕಿಕ ಜ್ಞಾನವೇ ಶಾಸ್ತ್ರಸಿದ್ಧಾಂತವಾಗಿರುವದರಿಂದ ಲೌಕಿಕ ಜ್ಞಾನವೇ ಶಾಸ್ತ್ರಕ್ಕೆ ಮೂಲವಾಗಿರುವದು. ಸಾವಧಾನ ಸಂವೀಕ್ಷಣ ಪರೀಕ್ಷೆಗಳಿಂದಲೂ ವ್ಯಾಪ್ತಿ ಗ್ರಹೋಪಾಯಾನುಮಾನಗಳಿಂದಲೂ ಲೌಕಿಕ ಜ್ಞಾನವನ್ನು ದೋಷರಹಿತವಾಗಿ ಮಾಡಿಕೊಳ್ಳುವದಲ್ಲದೆ ಅವುಗಳಿಂದ ಉಂಟಾಗುವ ಪ್ರಕೃತಿ ನಿಯಮಗಳನ್ನು ತಪ್ಪಿಲ್ಲದೆ ಸರಿಯಾಗಿ ವಿವೇಚಿಸುವದಕ್ಕೂ ತಿಳಿಯಬೇಕು. ಇಂಥ ಪ್ರಕೃತಿ ನಿಯಮಗಳಿಂದ ನಮ್ಮ ಕಾರ್ಯಗಳನ್ನು ನಿರವೇರಿಸಿಕೊಳ್ಳುವದಕ್ಕೆ ಬೇಕಾದ ವಿಷಯಗಳನ್ನು ಅನುಮಾನಪೂರ್ವಕ ತಿಳಿಯುವದಕ್ಕೂ ತಿಳಿಯಬೇಕು

ಕೆ. ವೆಂಕಟಸ್ವಾಮಿ ಅಯ್ಯರ್, ಬಿ, ಎ.

೬. ಫರೂಕಬಾದಿನ ಆರ್ಯ ಸಮಾಜ.

(ಹಿಂದಲ ತಿಂಗಳ ಶೇಷ.)

ನಾನು ಕೇಳಿರುವದೇನೆಂದರೆ—ಮೈನಪುರ ಜಿಲ್ಲೆಯಲ್ಲಿ ಘಾಟಕ ಬ್ರಾಹ್ಮಣರಿಗೆ ೪೦ ಗ್ರಾಮಗಳೂ, ಅಹೀರರಿಗೆ ೫೦ ಗ್ರಾಮಗಳೂ, ಜಾಠೌರ್ ತಾಕೂರರಿಗೆ ೫೦ ಗ್ರಾಮಗಳೂ, ಭೋಲೇ ಬ್ರಾಹ್ಮಣರಿಗೆ ೭೦ ಗ್ರಾಮಗಳೂ ಸೇರಿ ಇರುತ್ತವೆ. ಇವುಗಳಲ್ಲಿ ಹೆಣ್ಣು ಮಕ್ಕಳ ವಧೆ ಆಗದೆ ಇರುವದು ಬಹಳ ಅಪೂರ್ವ. ಎಲ್ಲಾದರೂ ಬಂದೆರಡು ಉಳಿದರೆ

ಅಪಸಾಕ್ಷಿ ಹೇಳಿದರೆ ಸುಳ್ಳಸಂಖ್ಯೆಯವರು.

ಪತಿಗಳಾಗುತ್ತಾರೋ ಅವರು ಮನುಷ್ಯಸಂಖ್ಯೆಯನ್ನು ತಿಳಿಕೊಳ್ಳುತ್ತಾರೆ ದದಲ್ಲಿರುವ ಇತರ ಪ್ರಮಾಣವನ್ನು ಮೇ : — "ಅಸ್ಮಾಕಮುಕ್ತಸ್ಯ ಸುಖಾಯ ಪ್ರಭು" ಯಾವಾಗ ಪತಿಯು ಸಂತಾನೋತ್ಪತ್ತಿಯಲ್ಲಿ ಅಸಮರ್ಥನಾಗುತ್ತಾನೋ ಆಗ ಅವರು ತನ್ನ ಸ್ತ್ರೀಗೆ ಅಪ್ಪಣೆ ಕೊಡಬೇಕೆಂದು "ಭೀ ಸಖಿ, ನಾಥನ್ಯ ನಾನ್ಯವನ್ನು ಇಚ್ಛಿಸು ಮೂಡುವಳೆ? ನೀನು ಬೇರೆ ಪತಿಯನ್ನು ಇಚ್ಛಿಸು. ಯಾಕಕ್ಕರದೆ, ನನ್ನ ಅಕ್ಕ ಇಡಬೇಡ. ನಾನು ಸಂತಾನೋತ್ಪತ್ತಿಯಲ್ಲಿ ಅಸಮರ್ಥನಾಗಿರುತ್ತೇನೆ." ಮನುಷಗವಂತನ ಇತರ ಪ್ರಮಾಣವನ್ನು ಕೇಳಿ "ಪ್ರಜಿನೊ ಧರ್ಮಕಾರ್ಯಾರ್ಥಂ ಪ್ರವೇಷ್ಯೊನರಃ ಸಮೋ ವಿದ್ಯಾರ್ಥಂ ಪ್ರಯತೇದ್ವಂಶಾಕಾರ್ಯಂ ಸ್ತ್ರಿಸ್ತ್ವಥಾನ್ಯಕ" ಇದರ ಅರ್ಥ ವಿವಾಹಿತ ಸ್ತ್ರೀಯು ಪತಿಯು ಧರ್ಮಾರ್ಥವಾಗಿ ಪರದೇಶ ಗಮನ ಮಾಡಿದ್ದರೆ ಎಂಟುವರ್ಷ ವಿದ್ಯೆಅಥವಾ ಕೀರ್ತಿಗೋಸ್ಕರ ಹೋಗಿದ್ದರೆ ಆರು ವರ್ಷ, ಸಂತ್ತ ಧನಸಂಪಾದನೆಗೋಸ್ಕರ ಹೋಗಿದ್ದರೆ ಮೂರುವರ್ಷ, ಈ ಪ್ರಕಾರ ಅವನು ತಿರಿಗಿ ಬರುವದನ್ನು ನಿರೀಕ್ಷಣೆಮಾಡಿ, ಅನಂತರ ವಿನಿಯೋಗ ಮಾಡುವವರ ಮೂಲಕ ಸಂತಾನೋತ್ಪತ್ತಿಯನ್ನು ಮಾಡಿಸಿಕೊಳ್ಳಬಹುದು. ಪರಾಶರಭಗವಂತನ ವಾಕ್ಯವನ್ನು ಕೂಡ ಸ್ವಲ್ಪ ಲಾಲಿಸಿ, ಕಲೌಪಾರಾಶರ ಸ್ಮೃತಿ ಎಂಬ ವಚನವು ಪ್ರಸಿದ್ಧವಾಗಿರುತ್ತದೆ. ಇವರು ಹೇಳಿದ್ದೇನೆಂದರೆ "ನಷ್ಟೆ ಮೃತೆ ಪ್ರವ್ರಜಿತೆ ಕ್ಲೀಬೆಚ ಪತಿತೌಪತಿತ, ಪಂಚಸ್ವಾಪತ್ಸುನಾರೀಣಾಂ ಪತಿರನ್ಯೋವಿಧೀಯತೆ." (ಸೇಷ)

ಎಮ್. ಗಣೇಶಂಗ.

೭. ಕ್ಷೇಮೇಂದ್ರಕವಿ.

ನಮ್ಮದೇಶಕ್ಕೆ ವಾಯವ್ಯದಿಂದ ಪ್ರವೇಶಿಸಿದ್ದಕ್ಕಿಂತ ಮೊದಲು ಹಿಮಾಚಲದ ತಪ್ಪಲಲ್ಲಿರುವ ಕಾಶ್ಮೀರದೇಶವು ಒಂದು ಪ್ರಸಿದ್ಧಿಯನ್ನು ಹೊಂದಿರುತ್ತದೆಯಷ್ಟೆ. ಪೂರ್ವದಲ್ಲಿ ಈ ದೇಶವು ಸಂಸ್ಕೃತಭಾಷೆಗೆ ಮಾತೃಸ್ಥಾನವಾಗಿತ್ತು. ಈಗಲೂ ಹಾಗೆಯೇ ಇರುತ್ತದೆ. ಕ್ರಿಸ್ತಶಕದ ೧೦೬೪ ರಿಂದ ೧೦೮೦ ರವರಗೂ ಈ ದೇಶವನ್ನು ಅನಂತರಾಜನೆಂಬ ಧೊರೆಯು ಆಳುತ್ತಿದ್ದನು. ಈ ರಾಜನು ಆಳುತ್ತಿರುವ ಕಾಲದಲ್ಲಿ ಮೂಲದ ದೇವನ್ನು ಭೋಜರಾಜನು ಆಳುತ್ತಿದ್ದನು. ಈ ವಿಷಯವನ್ನು ಕಾಶ್ಮೀರದೇಶದ ರಾಜವೃತ್ತಾಂತರೂಪವಾದ ರಾಜ ತರಂಗಣಿ ಯೆಂಬ ಗ್ರಂಥದ ಏಳನೇ ತರಂಗದ ೩೫ನೇ ಶ್ಲೋಕದಿಂದ ತಿಳಿಯಬರುತ್ತದೆ. ಏನಂದರೆ:— ಸುಕವಿ ಭೋಜನೇಂದ್ರಸ್ಯ ದಾನೋತ್ಕರ್ಷೇಣ ವಿಸ್ಮಿತಾ ಸೂತೇಸ್ಮ ಕ್ಷೇಮಣೆ ತುಲ್ಯಂ ದ್ಯಾವಾಸ್ತಾಂ ಕವಿಬಾಂಧವಾ ॥

ಆಹಸಿಂದೆಗೆ ಸಿಕ್ಕಲೇ ಬಾರದು.

ಈ ಭೋಜರಾಜನ ಕಾಲವು ಶಾಸನಗಳಿಂದಲೂ ಕರ್ಣಾಟ ಮಂಡಲ ಮಹೀಶೂರ ಮಹಾರಾಜರ ವಂಶವರ್ತ್ಮಕರದಿಂದಲೂ ಸರಿಯಾಗಿ ತಿಳಿದು ಬರುವದಾದಕಾರಣ ಮೇಲೆ ಹೇಳಿದ ಕಾಶ್ಮೀರದೇಶದ ಧೊರೆಯಕಾಲವು ಚನ್ನಾಗಿ ತಿಳಿಯಲಾಯಿತು. ಈ ಅನಂತರಾಜನ ಕಾಲದಲ್ಲಿಯೇ ಕ್ಷೇಮೇಂದ್ರ ಮಹಾಕವಿಯು ಆ ದೇಶದ ನಿವಾಸಿಯಾದ ಪ್ರಕಾಶೇಂದ್ರನೆಂಬ ಬಬ್ಬು ಬ್ರಾಹ್ಮಣೋತ್ತಮನ ಉದರದಲ್ಲಿ ಜನಿಸಿ ಸಂಗಕನೆಂಬ ವಿದ್ವಾಂಸನ ಬಳಿ ವಿದ್ಯಾಭ್ಯಾಸವನ್ನು ಮಾಡಿ ಅನಂತರಾಜನ ಆಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದನು. ಈ ವಿಷಯವು ಈ ಕವಿಮಾಡಿದ ಬೃಹತ್ಕಥಾಮಂಜರಿಯ ಕಡೇಭಾಗದಿಂದಲೂ ಔಚಿತ್ಯ ವಿಚಾರ ಚರ್ಚೆಯೆಂಬ ಗ್ರಂಥ ಸಮಾಪ್ತಿಯಲ್ಲಿರುವ " ಯಸ್ಯಾಸೀ ಪರಿವಾರಕೃತ್ಸ್ವಭುವನ ಪ್ರಖ್ಯಾತ ಲೀಲಾಗೃಹೇ ಸರ್ವಸ್ವಾವನತೇನ ಯೇನ ನಿತರಾಂ ಪ್ರಾಪ್ತಾ ವಿಶೋಷೋನ್ನತಿಃ ಆಶಾಶ್ಚೀತಲತಾಂ ನಯತ್ಯವಿರತಂ ಯಸ್ಯ ಪ್ರತಾಪಾನಲಃ ತಸ್ಯ ಶ್ರೀಮದನಂತರಾಜನೃಪತೇಃ ಕಾಲೇಕಿಲಾಯಂಕೃತಃ ॥ " ಎಂಬ ಶ್ಲೋಕದಿಂದಲೂ ತಿಳಿಯುವುದಿದೆ.

ಈ ಕವಿಯು ಮಾಡಿದ ಗ್ರಂಥಗಳಲ್ಲಿ ಇದುವರಿಗೂ ಗೊತ್ತಾಗಿರುವವು ಯಾವವೆಂದರೆ:—ಅಮೃತತರಂಗಕಾವ್ಯ, ಔಚಿತ್ಯವಿಚಾರಚರ್ಚೆ, ಕನಕಜಾನಕಿ, ಕಲಾವಿಲಾಸ, ಕವಿಕಂಠಾಭರಣ, ಚತುರ್ವರ್ಗಸಂಗ್ರಹ, ಚಾರುಚರ್ಯೆ, ಚಿತ್ರಭಾರತನಾಟಕ, ದಶಾವತಾರ ಚರಿತಕಾವ್ಯ, ದೇಶೋಪದೇಶ, ನೀತಿಕಲ್ಪತರು, ಪದ್ಯ ಕಾದಂಬರಿ, ಪವನದೂತಾಖ್ಯಕೆ, ಬೃಹತ್ಕಥಾಮಂಜರಿ, ಭೋಧಸತ್ತ್ವಾವದಾನಕಲ್ಪಲತೆ, ಭಾರತಮಂಜರಿ, ಮುಕ್ತಾವಳಿ, ರಾಜಾವಳಿ, ರಾಮಾಯಣಮಂಜರಿ, ಲಾವಣ್ಯವತಿ, ಲೋಕಪ್ರಕಾಶಕೋಷ, ವಾತ್ಸ್ಯಾಯನ ಸೂತ್ರಸಾರ, ವ್ಯಾಸಾಷ್ಟಕ, ಶಂವಂಶ ಮಹಾಕಾವ್ಯ, ಸಮಯಮಾತೃಕೆ, ಸುವೃತ್ತತಿಲಕ, ಸೇವ್ಯಸೇವಕೋಪದೇಶ, ಅವಸರಸಾರ, ನೀತಿಲತೆ, ಮುನಿಮತವಿಮರ್ಶೆ, ಲಲಿತರತ್ನಮಾಲೆ, ವಿನಯವಲ್ಲಿ. ಈ ಕವಿಯು ಅನಂತರಾಜನ ದಿವಸದಲ್ಲಿದ್ದವನಾದ್ದರಿಂದ ಕ್ರಿಸ್ತಶಕದ ೧೦ನೇ ಶತಮಾನದಲ್ಲಿ ಇದ್ದ ಬಹು ಪ್ರಸಿದ್ಧಿಯನ್ನು ಪಡೆದನೆಂಬುವದರಲ್ಲಿ ಏನೂ ಸಂದೇಹವಿಲ್ಲ. ಆ. ಆನಂದಾಳ್ವಾರ್.

ಶ್ರೀಮಹಾಕವಿ ಭಾಣಭಟ್ಟ.

ಭಾಣಭಟ್ಟನು ಸರಸ್ವತೀನದೀತೀರದಲ್ಲಿ ಪ್ರೀತಿಕೋಟವೆಂಬ ಅಗ್ರಹಾರದಲ್ಲಿ ವಾಸ ಮಾಡಿಕೊಂಡಿದ್ದ ಶ್ರೀಪತ್ಸಗೋತ್ರೋತ್ಪನ್ನನಾದ ಚಿತ್ರಭಾನುವೆಂಬ ಬ್ರಾಹ್ಮಣನ ಮಗನು. ಇವನಿಗೆ ಬಾಲ್ಯದಲ್ಲಿಯೇ ಮಾತೃವಿಯೋಗ ಪ್ರಾಪ್ತವಾಯಿತು. ಅನಂತರ ಇವನ ತಂದೆಯೇ

ಅನ್ಯರ ವಿಷಯದಲ್ಲಿ ದೋಷವ ಹೇಳಿದರೆ ಕೆಟ್ಟುಹೋಗುವರು.

ಬಹು ಶ್ರಮಪಟ್ಟು ಇವನನ್ನು ಸಾಕಿ, ಉಪನಯನವನ್ನು ಮಾಡಿ, ವೇದಾಧ್ಯಯನ ಮಾಡಿಸಿ, ಕಡೆಗೆ ಆತನೂ ವ್ಯುತ್ಪನ್ನನಾದನು. ಆ ಬಳಿಕ ಇವನ ತಾಯಿಯಾದ ಮಾಲತಿ ಎಂಬವಳು ಇವನನ್ನು ಬಹು ಆದರದಿಂದ ಸಾಕುತ್ತಾ ಬಂದಳು. ಆಕಾಲದಲ್ಲಿ ಸಕಲ ಶಾಸ್ತ್ರಪ್ರವೀಣರಾದ ಅನೇಕಜನ ವಿದ್ಯಾರ್ಥಿಗಳು ಇವನ ಪ್ರತಿಭೆಯನ್ನು ಕಂಡು ಇವನಲ್ಲಿ ಸ್ನೇಹವನ್ನು ಬೆಳಿಸಿದರು. ಈತನು ಅವರೊಡನೆ ಕೂಡಿ, ದೇಶಸಂಚಾರಕ್ಕಾಗಿ ಹೊರಟು ಅನೇಕ ದೇಶಗಳನ್ನು ಬಹುಕಾಲ ಸಂಚಾರಮಾಡಿ, ನಾನಾವಿಧ ಪಾಂಡಿತ್ಯದಲ್ಲಿ ಪ್ರಸಿದ್ಧಿಯನ್ನು ಹೊಂದಿ, ಆವರೊಡನೆ ಪುನಃ ಅಗ್ರಹಾರಕ್ಕೆ ಬಂದು ಸೇರಿದನು.

ಬಾಣನು ದೇಶಾಟನೆ ಮಾಡುತ್ತಿದ್ದ ಕಾಲದಲ್ಲಿ ಕನ್ಯಕುಬ್ಜ (Kanouj) ಎಂಬ ದೇಶವನ್ನು ಹರ್ಷವರ್ಧನನೆಂಬ ರಾಜನು ಆಳುತ್ತಿದ್ದನು. ಅವನ ಬಳಿಯಲ್ಲಿದ್ದ ಕೃಷ್ಣ ಮಿತ್ರನೆಂಬವನು ಈ ಭಾಣನ ಚಾತುರ್ಯಾದಿಗಳನ್ನು ಕೇಳಿ, ಇವನು ರಾಜಾಸ್ಥಾನಕ್ಕೆ ಯೋಗ್ಯನೆಂದು ಭಾವಿಸಿ, ಇವನನ್ನು ಕರಿಸಿ, ರಾಜಸಂದರ್ಶನವನ್ನು ಮಾಡಿಸಿದನು. ಆಗ ರಾಜನು ಇವನು ಚಿಕ್ಕವಯಸ್ಸಿನವನಾದ್ದರಿಂದ ಪರೀಕ್ಷಿಸಬೇಕೆಂದು ಯೋಚಿಸಿ ಆಸ್ಥಾನದಲ್ಲಿ "ಇವನೇನೋ ಸ್ವಚ್ಛಂದಚಾರಿಯಾದ ಭಾಣ?" ಎಂದು ಕೇಳಲು, ಭಾಣನು ಎದ್ದು "ಎಲೈ ರಾಜನೆ, ನಾನು ಕ್ರಮತಪ್ಪಿ ಯಾವದನ್ನೂ ಮಾಡಲಿಲ್ಲ. ನನ್ನ ಮಾತಾಪಿತೃಗಳು ಬಾಲ್ಯದಲ್ಲಿಯೇ ವಿಯುಕ್ತರಾದ್ದರಿಂದಲೂ, ನಾನು ಬಾಲನಾದ್ದರಿಂದಲೂ, ದೇಶಾಂತರ ಸಂಚಾರದಲ್ಲಿ ಕುತೂಹಲವುಳ್ಳವನಾಗಿ, ನನ್ನ ಸ್ನೇಹಿತರೊಡನೆ ಸ್ವಧರ್ಮಕ್ಕೂ ಜ್ಞಾನಕ್ಕೂ ವಿರೋಧವಿಲ್ಲದಂತೆ ನಾನಾದೇಶಗಳನ್ನು ಸಂಚಾರಮಾಡಿ ಬಂದೆನು. ಅನೇಕ ವಿದ್ವಾಂಸಮಂಡಲಿಗಳನ್ನು ಸೇರಿ ಪುನಃ ನನ್ನ ಅಗ್ರಹಾರವನ್ನು ಸೇರುವೆನು. ಹೀಗಿರುವಲ್ಲಿ ನಾನು ಹ್ಯಾಗೆ ಸ್ವಚ್ಛಂದಚಾರಿಯಾಗುವೆನು?" ಹೇಳಿದನು. ರಾಜನು ಇವನ ಧೈರ್ಯಕ್ಕೂ ಗಾಂಭೀರ್ಯಕ್ಕೂ ಸಂತೋಷಿಸಿ, ಇವನನ್ನು ತನ್ನ ಆಸ್ಥಾನಪಂಡಿತನನ್ನಾಗಿ ಮಾಡಿಕೊಂಡನು. ಅನಂತರ ಕೆಲವು ಕಾಲದನಂತರ ಭಾಣನು ತನ್ನ ಜ್ಞಾತಿ ಬಂಧು ಮಿತ್ರಾದಿಗಳನ್ನು ನೋಡುವದಕ್ಕಾಗಿ ತನ್ನ ಅಗ್ರಹಾರಕ್ಕೆ ಬರಲು, ಅವರೆಲ್ಲರೂ ಇವನನ್ನು ಕಂಡು ಸಂತೋಷಿಸಿ, ಇವನನ್ನು ಕುರಿತು "ಎಲೆ ಕವಿಶ್ರೇಷ್ಠನೆ, ನೀನು ಹೋಗಿ ಕಂಡ ರಾಜನ ಚರಿತ್ರವನ್ನು ಹೇಳು" ಎಂದು ಕೇಳಲು ಆಕ್ಷಣದಲ್ಲಿ ಹರ್ಷಚರಿತವೆಂಬ ಗದ್ಯರೂಪವಾದ ಮಹಾಪ್ರಬಂಧವನ್ನು ಮಾಡಿ ಹೇಳಿದನು. ಈ ಕಥೆಯನ್ನು ಅವನು ಮಾಡಿದ ಹರ್ಷಚರಿತದ ೧—ನೇ ಆಶ್ವಾಸಗಳಲ್ಲಿ ವಿವರಿಸಿರುತ್ತಾನೆ.

ಈ ಕವಿಯು ಮಾಡಿದ ಅನೇಕ ಗ್ರಂಥಗಳಲ್ಲಿ ಇವುಗಳಿಗೂ ಗೊತ್ತಾಗಿರತಕ್ಕವುಗಳು ಕಾದಂಬರಿ ಪೂರ್ವಭಾಗ, ಹರ್ಷಚರಿತ, ಚಂಡೀಶತಕ, ಪಾರ್ವತೀಪರಿಣಯ ನಾಟಕ

ಅಟ್ಟುವಣಿ ಕಂದಾಚಾರ ಅರಮನೆಗೆ ಸೇರಿದ್ದು

ಶೃಂಗಾರಭೂಷಣಭಾಣ, ಮುಕುಟತಾಡಿತ ನಾಟಕ, ಪದ್ಯಕಾದಂಬರಿ. ಇವುಗಳಲ್ಲಿ ಪೂರ್ವತೀಪರಿಣಯ ಶೃಂಗಾರಭೂಷಣಕಾವ್ಯಗಳನ್ನು ನೋಡಿದರೆ ಇವುಗಳನ್ನು ಈ ಕವಿಯೇ ಮಾಡಿದನೆಂದು ಹೇಳುವದಕ್ಕಾಗುವದಿಲ್ಲ. ಭಾಣನೆಂಬ ಹೆಸರುಳ್ಳ ಮತ್ತೊಬ್ಬ ಪಂಡಿತನು, ವಿದ್ಯಾರಣ್ಯರ ಕಾಲದಲ್ಲಿ ಇದ್ದನೆಂದು ತಿಳಿದುಬರುತ್ತದೆ. ಇವುಗಳನ್ನು ಈತನೇ ಮಾಡಿರಬಹುದೆಂದು ತಿಳಿದುಬರುತ್ತದೆ. ಮುಕುಟತಾಡಿತ ನಾಟಕ, ಪದ್ಯ ಕಾದಂಬರಿ ಎಂಬ ಗ್ರಂಥಗಳು ಇನ್ನೂ ಸಿಕ್ಕಿಲ್ಲ. ಆದರೆ ಅನೇಕ ಕವಿಗಳು ಈ ಗ್ರಂಥ ಗಳಲ್ಲಿನ ಶ್ಲೋಕಗಳನ್ನು ತಮ್ಮತಮ್ಮ ಗ್ರಂಥಗಳಲ್ಲಿ ಉದಹರಿಸಿ ಇರುತ್ತಾರೆ

ಕ್ರಿಸ್ತಶಕದ ೬೦೦ನೇ ವರ್ಷದಿಂದ ೬೫೦ನೇ ವರ್ಷದವರೆಗೂ ಹರ್ಷವರ್ಧನನು ರಾಜ್ಯವನ್ನು ಆಳಿದನು. ಚೀನಾ ದೇಶದಿಂದ ಬೌದ್ಧಮತಸ್ಥನಾದ ಹಿವಂತ್ ಸಾಂಗ್ (Hiouen Thsang) ಎಂಬವನು ಈ ಭರತಖಂಡಕ್ಕೆ ಬಂದು ಇಲ್ಲಿಯೇ ಸಂಚಾರ ಮಾಡುತಿದ್ದು, ಅನಂತರದಲ್ಲಿ ತಾನು ಬಂದದ್ದು ಮೊದಲು ನಡೆದ ಸಕಲ ವಿಷಯಗ ಳೆನ್ನೂ ಬರೆದಿರುತ್ತಾನೆ. ಅದರಲ್ಲಿ ಹರ್ಷವರ್ಧನನು ಕನ್ಯಾಕುಬ್ಜವನ್ನು ಆಳುತ್ತಿದ್ದ ನೆಂದು ಬರೆದಿರುತ್ತಾನೆ. ಇದರಿಂದ ಈ ಕವಿಯು ಕ್ರಿಸ್ತಶಕದ ೭ನೇ ಶತಮಾನದ ಪೂರ್ವಾರ್ಧದಲ್ಲಿ ಇದ್ದನೆಂದು ತಿಳಿದುಬರುತ್ತದೆ.

ಈ ಭಾಣ ಕವಿಯೂ, ಕಾದಾನ ಭವಭೂತಿ ಮುಂತಾದವರೂ, ಮಾಲವದೇಶ ವನ್ನು ಆಳುತಿದ್ದ ಭೋಜರಾಜನ ಆಸ್ಥಾನಪಂಡಿತರೆಂದು ಪ್ರಸಿದ್ಧವಿರುತ್ತದೆ. ಇದು ಕಾಲವನ್ನು ತಿಳಿಯದೆ ಕಥೆ ಹೇಳತಕ್ಕವರ ಮಾತಾಗಿದೆ. ಇದಕ್ಕೆ ಕಾರಣವೇನೆಂದರೆ: ಕ್ಷೇಮೇಂದ್ರಮಹಾಕವಿಯು ಚರಿತ್ರವಲ್ಲಿ ಉದಹರಿಸಿರುವ ರಾಜತರಂಗಣೀ ಶ್ಲೋಕದಿಂದ ಆ ಕಾಲದಲ್ಲಿದ್ದ ಅನಂತರಾಜನೆಂಬ ಕಾಶ್ಮೀರರಾಜನೂ ಈ ಭೋಜರಾಜನೂ ಏಕಕಾಲದ ಲ್ಲಿದ್ದವರೆಂದು ಗೊತ್ತಾಗುತ್ತದೆ ಮತ್ತು ಈ ಭೋಜರಾಜನು ಮಾಡಿರುವ ಸರಸ್ವತೀ ಕಂಠಾಭರಣವೆಂಬ ಅಲಂಕಾರ ಗ್ರಂಥದಲ್ಲಿ ಭಾಣನೇ ಮುಂತಾದವರ ಶ್ಲೋಕಗಳು ಉದಹರಿಲ್ಪಟ್ಟಿವೆ. ಇವಲ್ಲದೆ ಭಾಣನು ತನ್ನ ಹರ್ಷಚರಿತಗ್ರಂಥದ ಉಪೋದ್ಘಾತದಲ್ಲಿ ಕಾಳಿದಾಸನನ್ನು ಸ್ತೋತ್ರಮಾಡಿರುತ್ತಾನೆ. ಇವಲ್ಲದೆ ಶಾಸನಮುಂತಾದವುಗಳಿಂದ ಈ ಕವಿಗಳು ಬೇರೆಬೇರೆ ಕಾಲದವರೆಂದು ತಿಳಿದುಬರುತ್ತದೆ. ಇದನ್ನು ಆಯಾ ಕವಿಗಳ ಪ್ರಸ್ತಾವದಲ್ಲಿ ವಿವರಿಸುವೆನು.

ಆ. ಆನಂದಾಳ್ವಾರ್.

ಅಲ್ಪರ ಸಂಗ ಅಭಿಮಾನ ಭಂಗ.

೯. ಜ್ಯೋತಿಷ.

ಹೊಗೇ ಗಾಡಿಯು ವೇಗವೇಗ ಉತ್ತರದ ಕಡೆಗೆ ಓಡುತ್ತಿರುವಾಗ ಆ ಬಂಡಿಯಲ್ಲಿರುವವರಿಗೆ ಇಕ್ಕೆಲದಲ್ಲಿರುವ ಮರ ಮುಂತಾದವು ದಕ್ಷಿಣಕ್ಕೋಡುವಂತೆ ಕಾಣಬರುವವೇ ಹೊರತು, ತಾವು ಕೂತಿರುವ ಬಂಡಿಯು ಓಡುವಂತೆ ಕಾಣುವದಿಲ್ಲ ಹೀಗೆಯೇ ಸಂವತ್ಸರಕ್ಕೊಂದುಸಾರಿ ಭೂಮಿಯು ಸೂರ್ಯನ ಸುತ್ತೂ ತಿರುಗುತ್ತಿದ್ದರೂ ಸೂರ್ಯನೇ ಚಲಿಸುವಂತೆ ತೋರುವದೂ ಭೂಮಿಯ ಚಲನೆ ತೋರದಿರುವದೂ ಸಹಜವಾಗಿದೆ. ವೇಗದಿಂದ ಓಡುತ್ತಿರುವ ಬಂಡಿಗಳಲ್ಲಿ ಕ್ರಮವು ಅನುಲೋಮವಾಗಿ ಹೋಗುತ್ತಿರುವವರಿಗೆ ನಿರ್ಜೀವವಪದಾರ್ಥಗಳಾದ ಗುಡ್ಡಬೆಟ್ಟುಗಳು ವಿಲೋಮವಾಗಿ ಚಲಿಸುವಂತೆ ಕಂಡುಬರುವದು ಎಲ್ಲರಿಗೂ ತಿಳಿದೇ ಇದೆ. ಇಲ್ಲಿ ಬರೆದಿರುವ ನಕ್ಷೆಯಿಂದ ಇದು ಇನ್ನೂ ಸ್ಪಷ್ಟವಾಗುವದು.



A B C D ಎಂಬ ವರ್ತುಲವು ಭೂಕಕ್ಷ್ಯೆಯು. ಇದರ ಮಧ್ಯಭಾಗದಲ್ಲಿ ಸೂರ್ಯನಿರುವನು. E F G H ಎಂಬ ವಲಯವು ನಕ್ಷತ್ರಮಂಡಲವು. A ಇರುವಕಡೆ ಭೂಮಿಯು ಇರುವಾಗ G ಇರುವಕಡೆ ಇರುವ ನಕ್ಷತ್ರದಲ್ಲಿ ಸೂರ್ಯನಿರುವಹಾಗೆ ಕಾಣಬರುವನು. ಭೂಮಿಯು A ಇರುವ ಸ್ಥಳವನ್ನು ಬಿಟ್ಟು ತನ್ನ ಕಕ್ಷ್ಯೆಯು ಮಾರ್ಗವಾಗಿ B ಗೆ ಬಂದಾಗ, ಸೂರ್ಯನು G ಇರುವ ಕಡೆಯನ್ನು ಬಿಟ್ಟು H ಇರುವಕಡೆ ಇರುವ ನಕ್ಷತ್ರಕ್ಕೆ ಬಂದು ಸೇರುವನು. ಹೀಗೆಯೇ ಭೂಮಿಯು C ಇರುವ ಸ್ಥಳಕ್ಕೆ ಬರುವಾಗ ಸೂರ್ಯನು E ಇರುವಕಡೆ ಇರು ನಕ್ಷತ್ರವನ್ನು ಸೇರುವನು ಭೂಮಿಯು D ಗೆ ಬಂದಾಗ ಸೂರ್ಯನು F ಇರುವಕಡೆ ಇರುವ ನಕ್ಷತ್ರಕ್ಕೆ ಬರುವನು. ಪುನಃ ಭೂಮಿಯು A ಗೆ

ಆಗಸೇಸೊಪ್ಪು ಆರೋಗ್ಯಕಾರಿ.

ಬಂದುಸೇರಿದಾಗ ಸೂರ್ಯನು G ಇರುವಕಡೆ ಇರುವ ನಕ್ಷತ್ರಗಳನ್ನು ಸೆರಿದಂತೆ ಕಾಣುವನು ಆದ್ದರಿಂದ ಭೂಮಿಯು A B C D ಎಂಬ ಕಕ್ಷೆಯಯಲ್ಲಿ ಅನುಲೋಮವಾಗಿ ತಿರುಗುತ್ತಾ ಬಂದು ಭಗಣವನ್ನು ಅನುಭವಿಸುವ ಕಾಲದಲ್ಲಿ ಸೂರನು E H G F ಎಂಬ ಕಕ್ಷೆಯಲ್ಲಿ ವಿಲೋಮವಾಗಿ ತಿರುಗುತ್ತಾ ಬಂದು ಭಗಣವನ್ನು ಅನುಭವಿಸುವಂತೆ ಕಾಣುವನು. ಸೂರ್ಯನು ತನ್ನ ಕಕ್ಷೆಯಲ್ಲಿ ದಿನಕ್ಕೆ ಸ್ವಲ್ಪ ಕಡಮೆ ಬಂದು ಭಾಗದೂರ ಮುಂದರಿಯುವನು. ಈ ಕಕ್ಷೆ ಯು ಮೇಷಾದಿ ೧೭ ರಾಶಿಗಳಾಗಿ ವಿಭಾಗಿಸಲ್ಪಟ್ಟಿರುವದರಿಂದ ರಾಶಿಚಕ್ರವೆನ್ನಲ್ಪಡುತ್ತದೆ. ಸೂರ್ಯನು ಬಂದು ಸ್ಥಳವನ್ನು ಬಿಟ್ಟು ಪುನಃ ಅದೇ ಸ್ಥಳಕ್ಕೆ ಬರಲಕಾದರೆ ಬಂದು ವತ್ಸರ ಸರಿಯಾಗಿ ಆಗುವದು. ಮತ್ತು ಭೂಚಲನವೇ ಸೂರ್ಯಚಲನಕ್ಕೆ ಕಾರಣವಾಗಿರುವದರಿಂದ ಸೂರ್ಯನು ತಿರುಗುವಂತೆ ತೋರುವ ಕಕ್ಷೆಯೂ ಭೂಕಕ್ಷೆಯೂ ಸಮಕ್ಷೇತ್ರಸ್ಥವಾಗಿರುವವು; ಅಂದರೆ, A B C D ಎಂಬ ಭೂಕಕ್ಷೆ ಯೂ E F G H ಎಂಬ ಸೂರ್ಯಕಕ್ಷೆಯೂ ಬಂದೇ ಕ್ಷೇತ್ರದಲ್ಲಿರುವವೆಂದು ತಾತ್ಪರ್ಯ ಈ ಕ್ಷೇತ್ರವು ಕ್ರಾಂತಿಮಂಡಲವೆನ್ನಿಸಿಕೊಳ್ಳುವದು. ಆದ್ದರಿಂದ ಕ್ರಾಂತಿಮಂಡಲವೆಂದರೆ ಭೂಮಿಯು ಚಲಿಸುವ ಮಾರ್ಗ ಅಥವಾ ಸೂರ್ಯನು ತಿರುಗುವಂತೆ ಯಾವ ಮಾರ್ಗದಲ್ಲಿ ಕಾಣಬರುವನೋ ಆ ಮಾರ್ಗವೆಂದರ್ಥ. ಸೂರ್ಯನು ಪ್ರವೇಶಿಸುವ ನಕ್ಷತ್ರಗಳು ಅವನ ಮಹತ್ತರವಾದ ಕಾಂತಿಯಿಂದ ತೇಜೋಹೀನಗಳಾಗಿ ನಮಗೆ ಹಗಲಲ್ಲಿ ಕಾಣಿಸದಿದ್ದರೂ ರಾತ್ರಿವೇಳೆಯಲ್ಲಿ ಕಾಣುವ ನಕ್ಷತ್ರಗಳ ಜ್ಞಾನದಿಂದ ಸೂರ್ಯನು ಇಂಥಾ ನಕ್ಷತ್ರದಲ್ಲಿದಾನೆಂಬದನ್ನು ಸುಲಭವಾಗಿ ಗೊತ್ತು ಮಾಡಬಹುದು. ಇದಲ್ಲದೆ ಭೂಮಿಯು ವತ್ಸರಕ್ಕೊಂದೊಮ್ಮೆ ಸೂರ್ಯನ ಸುತ್ತಲೂ ತಿರುಗಿಬರುವದರಿಂದ ಒಂದು ಋತುವಿನಲ್ಲಿ ಕಾಣಿಸುವ ನಕ್ಷತ್ರಗಳು ಮತ್ತೊಂದು ಋತುವಿನಲ್ಲಿ ಕಾಣಿಸುವದಿಲ್ಲ. ಬೇರೇ ನಕ್ಷತ್ರಗಳು ಕಾಣಿಸುವವು. ವಸಂತರ್ತುವಿನಲ್ಲಿ ಕಾಣಿಸುವ ನಕ್ಷತ್ರಗಳಲ್ಲಿ ಕೆಲವು ಗ್ರೀಷ್ಮರ್ತುವಿನಲ್ಲಿ ಕಾಣಿಸದೆ ಇರುವವು. ವರ್ಷರ್ತುವಿನಲ್ಲಿ ಇನ್ನೂ ಕೆಲವು ಕಾಣದೆ ಹೋಗುವವು ಶರದೃತುವಿನಲ್ಲಿ ವಸಂತದಲ್ಲಿ ಕಾಣಿಸುತ್ತಿದ್ದವುಗಳಲ್ಲೊಂದೂ ಕಾಣಿಸದು. ಆಗ ಬೇರೇ ನಕ್ಷತ್ರಗಳು ಕಾಣಿಸುವವು. ಮೇಲಿನ ಕಕ್ಷೆಯನ್ನು ಪರ್ಯಾಲೋಚಿಸಿ ನೋಡಿದರೆ ಇದು ಸ್ಪಷ್ಟವಾಗುವದು. ಅದರಲ್ಲಿ ಸೂರ್ಯಾಭಿಮುಖವಾಗಿರುವ ಭೂಮಿಯ ಅರ್ಧಭಾಗ ಬೆಳಗೂ ಉಳಿದರ್ಧಭಾಗ ಕಪ್ಪಾಗಿಯೂ ಬಗೆದಿರುವದು. ಬೆಳಕಿನ ಭಾಗದಲ್ಲಿರುವವರಿಗೆ ಹಗಲೆಂತಲೂ ಕಪ್ಪುಭಾಗದಲ್ಲಿರುವವರಿಗೆ ರಾತ್ರಿಯೆಂತಲೂ ತಿಳಿಯುವದು. ಭೂಮಿಯು A ಇರುವ ಸ್ಥಳದಲ್ಲಿರುವಾಗ ಮಧ್ಯಾಹ್ನಗತನಾದ ಸೂರ್ಯನು G ಇರುವಕಡೆ ಕಾಣುವನು. F G H ಎಂಬ ಅರ್ಧಗೋಳದಲ್ಲಿರುವ ನಕ್ಷತ್ರಗಳು ಸೂರ್ಯ ಪ್ರಭೆಯಿಂದ ತೇಜೋಹೀನಗಳಾಗಿ ಅಡಗುವವು. ಅರ್ಧರಾತ್ರಿಯಲ್ಲಿ E ಉಚ್ಚವಾಗುವದರಿಂದ F E H ಎಂಬ ಅರ್ಧಗೋಳದಲ್ಲಿರುವ ನಕ್ಷತ್ರಗಳೆಲ್ಲಾ ಕಾಣಿಸುತ್ತಿರುವವು.

ಅರಿಯದ ಭಾಗವನ್ನು ಅರಿಯೆನೆಂಬುವನೇ ಜಾಣ.

ನೂರುತಿಂಗಳು ಕಾಲದಲ್ಲಿ ಭೂಮಿಯು ಸುತ್ತಿಕೊಂಡು B ಇರುವಕಡೆಗೆ ಬರುವದು. ಆಗ ಸೂರ್ಯನು H ಇರುವಕಡೆ ಕಾಣುವನು. G H E ಎಂಬರ್ಧಗೋಳಕ್ಕೆಲ್ಲ ಹಗಲಾಗಿಯೂ G F E ಎಂಬರ್ಧಗೋಳಕ್ಕೆ ರಾತ್ರಿಯಾಗಿಯೂ ಇರುವಹಾಗೆ ಭೂಮಿಯು A ಇರುವಕಡೆ ಇದ್ದಾಗ ಕಾಣಬರದ F G ಎಂಬ ಗೋಳ ಚತುರ್ಥಾಂಶದಲ್ಲಿನ ನಕ್ಷತ್ರಗಳು ಈಗ ಕಾಣಬರುವವು. ಆಗ ಕಾಣಬರುತ್ತಿದ್ದ H E ಎಂಬ ಗೋಳಚತುರ್ಥಾಂಶದಲ್ಲಿನ ನಕ್ಷತ್ರಗಳು ಈಗ ಕಾಣದೆಹೋಗುವವು. ಇದೇ ಪ್ರಕಾರವಾಗಿ ಭೂಮಿಯು C ಬಳಿಯಿರುವಾಗ H E F ಎಂಬ ಗೋಳಾರ್ಧ ಬೆಳಕಿನಲ್ಲೂ F G H ಎಂಬದು ಕತ್ತಲ್ಲೂ ಇರುವದರಿಂದ ಭೂಮಿಯು A ಇರುವಕಡೆ ಇದ್ದಾಗ ಕಾಣಿಸುತ್ತಿದ್ದ ನಕ್ಷತ್ರಗಳೊಂದೂ ಇಲ್ಲರುವಾಗ ಕಾಣಿಸವು; ಆಗ ಕಾಣದ ನಕ್ಷತ್ರಗಳೆಲ್ಲಾ ಈಗ ಕಾಣಿಸುವವು. ಭೂಮಿಯು ಮತ್ತೆ ಮೂರುತಿಂಗಳುಕಾಲದಲ್ಲಿ D ಇರುವಕಡೆ ಬರುವದು. ಆಗ E F G ಗೋಳಾರ್ಧದಲ್ಲಿರುವ ರಾಶಿಗಳೂ ನಕ್ಷತ್ರಗಳೂ ಕಾಣದೆಹೋಗುವವು; G H E ನಲ್ಲಿರುವವು ಕಾಣಿಸುವವು. ನಕ್ಷತ್ರಗಳನ್ನು ಪದೇಪದೇ ನೋಡುವ ಅಭ್ಯಾಸವಿರುವವರಿಗೆ ಬರತ್ಕಾಲದಲ್ಲಿ ಕಾಣಿಸುವ ಮೃಗಶಿರ ಕೃತ್ತಿಕಾದಿಗಳೆ ವಸಂತಕಾಲದಲ್ಲಿ ಕಾಣಿಸವು. ವಸಂತಕಾಲದಲ್ಲಿ ಕಾಣಿಸುವ ಮಘಾನಕ್ಷತ್ರಾದಿ ಜ್ಯೋತಿಷ್ಯಾಚಿಗಳು ಶರತ್ಕಾಲದಲ್ಲಿ ಕಾಣವೆಂಬದು ಗೊತ್ತಾಗದಿರಲಾರದು. ಹಗಲುಹೊತ್ತು ನಕ್ಷತ್ರಗಳು ಕಾಣದಿರುವದಕ್ಕೆ ಮುಖತ್ತರವಾದ ಸೂರ್ಯಪ್ರಭೆಯೇ ಕಾರಣವೆಂಬದು ಗೊತ್ತಿದೇ ಇದೆ. ದೂರದರ್ಶಕ ಯಂತ್ರಗಳಿಂದ ನೋಡಿದರೆ ಹಗಲಿನಲ್ಲೂ ನಕ್ಷತ್ರಗಳು ಸ್ಪಷ್ಟವಾಗಿ ಕಾಣಿಸುವವು.

ಮೇಲೆ ಹೇಳಿರುವಂತೆ ಭೂಮಿಯು ಒಂದುಸಾರಿ ಸೂರನ ಸುತ್ತೂ ಬರಬೇಕಾದ ಸ್ವಲ್ಪಕಡಿಮೆ ೩೬೫ ದಿನಗಳೂ ೬ ಗಳಿಗೆಗಳೂ ಆಗುವವು. ಇದರಿಂದಲೇ ಋತುಭೇದಗಳಾಗುವವೆಂದು ಹಿಂದೆ ಹೇಳಲ್ಪಟ್ಟಿತು. ವರ್ಷವರ್ಷ ತಪ್ಪದೆ ಒಂದು ಋತುವಾದಮೇಲೆ ಮತ್ತೊಂದು ಕ್ರಮವಾಗಿ ಉಂಟಾಗುವದರಿಂದ ಜನರಿಗೆ ಋತುಗಳಲ್ಲೇನು ಆಶ್ಚರ್ಯವೋರುವದಿಲ್ಲ ಆದರೆ ಪರ್ಯಾಲೋಚಿಸಿದಲ್ಲಿ ಋತುಗಳಿಗಿಂತಲೂ ಆಶ್ಚರ್ಯವಾದದ್ದೂ ರಮಣೀಯವಾದ್ದೂ ಮತ್ತೊಂದೂ ಇರಲಾರದು. ಶೈತ್ಯದಲ್ಲಿ ಶೀತಬಾಧೆಯಿಂದ ನಡುಗುತ್ತಿರುವ ಜನರಿಗೆ ವಸಂತಾಗಮನವು ಕೇವಲ ಹರ್ಷೋತ್ಪಾದಕವಾಗಿರುವದರಲ್ಲಿ ಸಂಶಯವೇನೂ ಇಲ್ಲ. ಈ ವಸಂತಕಾಲದಲ್ಲಿ ಮೇಘಗಳಿಂದ ರಹಿತವಾಗಿ ನಿರ್ಮಲವಾಗಿರುವ ಆಕಾಶದಲ್ಲಿ ಸೂರ್ಯನು ದಿನೇದಿನೇ ಪ್ರಕಾಶಿಸುತ್ತಾ ಸತ್ವಪ್ರಾಣಿಗಳಿಗೂ ಚೈತನ್ಯಾಭಿವೃದ್ಧಿಯನ್ನುಂಟುಮಾಡುತ್ತಿರುವನು. ಎಲ್ಲಿ ನೋಡಿದರೂ ಸೌಂದರ್ಯ ಹೊರಹೊಮ್ಮುತ್ತಿರುವದು. ಸಕಲಚರಾಚರಗಳೂ ನಮ್ಮ ಹೃದಯಗಳಲ್ಲಿ ಆನಂದವನ್ನುಂಟುಮಾಡುತ್ತಾ ದೇವರಲ್ಲಿ ಭಕ್ತಿಯನ್ನು ಹೆಚ್ಚಿಸುವವು. ಸಾವಧಾನವಾಗಿ ಸೃಷ್ಟಿಯನ್ನು ನೋಡ

ಲವಿಪತ್ತಿ ಜೊನ್ಸ ಸಕಲ ರೋಗ ಹರ.

ವವನ ಆನಂದಕ್ಕೆ ಪಾರವಿಲ್ಲವು. ಶ್ಯಾಮಲವರ್ಣದಿಂದ ಕಂಗೊಳಿಸುತ್ತಿರುವ ಆಕಾಶ ಮಂಡಲವೂ, ವಿಚಿತ್ರವಿಚಿತ್ರವಾದ ಬಣ್ಣಗಳಿಂದ ರಮಣೀಯವಾದ ಮೇಘಪಙ್ಕ್ತಿಗಳೂ, ಮುಂಗಾರುಮಳೆಯಿಂದ ರಸಿಯು ರಸವತಿಯಾಗಿ ಹೊಳಲಸದಳವಾದ ವರ್ಣವಿಶೇಷಗಳಿಂ ದೊಪ್ಪುತ್ತಿರುವ ಪುಷ್ಪವನರಿಮಳವೂ, ಕವಿಗಳಿಗಿಂಪಾಗಿರುವ ಶುಕಪಿಕಾದಿಗಳ ಮಧುರ ಗಾನವೂ, ಮಧುಪರಣಕ್ಕಾಗಿ ಝೇಂಕರಿಸುತ್ತಾ ಯಥೇಚ್ಛವಾಗಿ ತಿರುಗಾಡುತ್ತಿರುವ ಮಧುಪಗಳೂ, ಸರ್ವೇಂದ್ರಿಯಗಳನ್ನೂ ಆಕರ್ಷಿಸುತ್ತಿರುವವು. ಈ ವಸಂತದಲ್ಲಿ ಸಕಲಪ್ರಾಣಿಗಳಿಗೂ ಸಂತೋಷ ಉಕ್ಕುತ್ತಿರುವದು. ಕೋಲಾಹಲಧ್ವನಿಯಿಂದ ಕೂಡಿರುವ ಜನನಿಬಿಡವಾದ ಪಟ್ಟಣಗಳೂ ಗಾಜಛವನಗಳೂ ಅತ್ಯುನ್ನತಗಳಾದ ಸಾಧಗಳೂ ದೇವಾಲಯಗಳೂ ಬಿಸಲಿಗೆ ಥಳಥಳಿಸುತ್ತಿರುವ ಆ ದೇವಾಲಯಗಳ ಸ್ವರ್ಣಮಯಗೋಪುರಗಳೂ ಅತ್ಯಂತ ಮನೋಹರಗಳಾಗಿರುವವು. ಸೃಷ್ಟಿಯು ಸೊಬಗಿನಿಂದ ತುಂಬಿ ತುಳುಕುತ್ತಿರುವದರಿಂದ ಸೃಷ್ಟಿಯು ಹೊಸದೆಂಬ ಭ್ರಾಂತಿ ಬರುವದು. ಮತ್ತು ಪ್ರಾಣಿಗಳಲ್ಲೂ ಸಸ್ಯ ಸಮೂಹಗಳಲ್ಲೂ ಶಾಖೋತ್ಪತ್ತಿ ಯುಂಟಾಗುವದರಿಂದ ಹರ್ಷ ಹೆಚ್ಚಿ ಚೆನ್ನಾಗಿ ಬೆಳೆಯುವವು. ಪ್ರಜೋತ್ಪತ್ತಿ ಬಹಳವಾಗಿ ಆಗುವದು. ಶೈತ್ಯರದಲ್ಲಿ ಅಡಗಿದ್ದ ವೃಕ್ಷಲತಾದಿಗಳು ಪುಷ್ಪಫಲಭಾರದಿಂದ ಜೋಲುತ್ತಿರುವವು. ವೃಕ್ಷಗಳ್ಳಾದಿಗಳ ಎಲೆಗಳು ಹಸುರಾಗಿ ಹರಡುವವು. ಪಕ್ಷಿಜಾತಿಯು ಮರಿಗಳ ಪೋಷಣಾರ್ಥವಾಗಿ ಗೂಡುಗಳನ್ನು ಕಟ್ಟಲು ಉದ್ಯೋಗಿಸುವದು. ಪಕ್ಷಿಗಳುಕೊಂಬೆಗಳ ಮೇಲೆ ಕುಳಿತು ಗಾನ ಮಾಡುತ್ತಿರುವದರಿಂದ ಮರಗಳೇ ಗಾನಮಾಡುತ್ತವೆಯೋ ಎಂಬ ಹಾಗೆ ತೋರುವವು. ಸರ್ವಪ್ರಪಂಚವೂ ಜೀವಕಳೆಯಿಂದ ತುಂಬಿತುಳುಕುತ್ತಿರುವದು. ಮೇಷ ಸಂಕ್ರಾಂತಿಯದಿನ ಸೂರ್ಯನು ಕ್ರಾಂತಿವೃಂಡಲ ನಾರೀವೃಂಡಲಗಳ ಸಂಯೋಗಸ್ಥಾನಗತನಾಗುವದರಿಂದ ಅಹೋರಾತ್ರಿಗಳು ಸಮಪ್ರಮಾಣವುಳ್ಳವುಗಳಾಗಿರುವವು. ದಕ್ಷಿಣಾಯನದ ಆರುತಿಂಗಳಕಾಲ ಕತ್ತಲಲ್ಲಿ ವೇಷಾಡುತ್ತಿದ್ದ ಉತ್ತರಶೀತವಲಯದ ಜನರಿಗೆ ಲೋಕಾಹ್ಲಾದಕರನಾದ ಸೂರ್ಯನ ದರ್ಶನವು ಆದಿನ ಆಗುವದರಿಂದ ಉಂಟಾಗುವ ಸಂತೋಷವನ್ನು ಬಣ್ಣಿಸಲಸದಳವು. ಇವಲ್ಲದೆ ರಾತ್ರಿಕಾಲಗಳಲ್ಲಿ ಚಂದ್ರೋದಯದಿಂದ ಪ್ರಪಂಚವು ಮತ್ತಷ್ಟು ರಮಣೀಯವಾಗಿರುವದು. ಅನೇಕಸಹಸ್ರನಕ್ಷತ್ರಗಳೊಡನೆ ರಾಜನಾದ ಚಂದ್ರನು ತಲೆದೋರಿ ನಿರ್ಮಲವಾದ ತಿಂಗಳುಬೆಳಕನ್ನು ಪ್ರಸರಿಸುತ್ತಿರುವನು. ಗ್ರಹಗಳು ತಮ್ಮತಮ್ಮ ಕಕ್ಷೆಯನ್ನು ಅನುಸರಿಸಿ ಚಲಿಸುತ್ತಿರುವವು. ಇಂಥಾ ವರ್ಣನಲಕ್ಷ್ಯವಾದ ಸೃಷ್ಟಿಯು ನಿಶ್ಚಬ್ದವಾಗಿರುವ ರಾತ್ರಿವೇಳೆಗಳಲ್ಲಿ ಧ್ಯಾನಾಸಕ್ತನಾದವನ ಮನವಲ್ಲಿ ಗಂಭೀರವಾದ ಮನೋವ್ಯಾಪಾರಗಳನ್ನುಂಟುಮಾಡುತ್ತಿರುವವು. ಸೃಷ್ಟಿಯು ಗಾಂಭೀರ್ಯವನ್ನೂ ಸೊಬಗನ್ನೂ ನೋಡಿ ಸಂತೋಷದಿಂದಲೂ ಆಶ್ಚರ್ಯದಿಂದಲೂ ಸ್ತಬ್ಧ

ಅನುಪಯೋಗವಾದ ಚಿಂತನೆ ಮಾಡಲೇ ಬಾರದು.

ರಾಗಿ ಹೋಗುವೆವು. ಇಂಥಾ ಬಣ್ಣಿಸಲಸಾಧ್ಯವಾದ ಮಹಾದ್ಭುತವಾದ ಸೃಷ್ಟಿಗೆ ಅದಿ ಕಾರಣನಾದ ಪರಂಜ್ಯೋತಿಸ್ವರೂಪನಾದ ಈಶ್ವರನನ್ನು ಧ್ಯಾನಿಸುತ್ತಿರುವದೇ ನಮಗೆ ನಿರಂತರವಾದ ಕೆಲಸವಾಗಿರಬೇಕೆಂದು ಸಕಲಸೃಷ್ಟಿಯೂ ಘೋಷಿಸುತ್ತಿರುವದು.

ಕೆ. ವೆಂಕಟಸ್ವಾಮಿ, ಬಿ. ಎ.

೧೦. ಪಾಕ ಶಾಸ್ತ್ರ.

ಪಕ್ವಾನ್ನಗಳನ್ನು ಉತ್ತರದೇಶದಲ್ಲಿ ಮಾಡುವ ರೀತಿಗೂ ಈ ದೇಶದಲ್ಲಿ ಮಾಡುವ ರೀತಿಗೂ ವಿಶೇಷ ವ್ಯತ್ಯಾಸ ಕಾಣಿಸುವದರಿಂದ, ಉತ್ತರದೇಶದಲ್ಲಿ ಎರಡು ಪಕ್ವಾನ್ನಗಳನ್ನು ಮಾಡುವ ಬಗೆಯನ್ನು ವಿವರಿಸುವ ಪ್ರಕರಣವನ್ನು ಮಹಾರಾಷ್ಟ್ರ ಭಾಷೆಯಿಂದ ತೆಗೆದು ಕನ್ನಡದಲ್ಲಿ ಈ ಕೆಳಗೆ ವಿವರಿಸಿ ಇರುತ್ತೇನೆ.

ವಾಂಗೀಭಾತ್ ಅಥವಾ ಬದನೇಕಾಯನ್ನ.

ಬಂದುಸೇರು ಸಣ್ಣಕ್ಕಿಯನ್ನು ಚೆನ್ನಾಗಿ ತೊಳೆದು ಬಸಿಯಬೇಕು. ಅದಕ್ಕೆ ಎರಡು ರೂಪಾಯಿತೂಕ ತುಪ್ಪವನ್ನು ಹಚ್ಚಿ ಇಡಬೇಕು. ಕೊತ್ತಂಬರಿಬೀಜ ಹತ್ತು ರೂಪಾಯಿತೂಕ, ಬಣಗಿದ ಕೊಬ್ಬರಿ ಇಪ್ಪತ್ತುತೊಲೆ, ಲವಂಗ ಎರಡುತೊಲೆ, ಜೀರಿಗೆ, ಶಾಜೀರಿಗೆ, ಮೆಣಸು, ದಾಲಚಿನ್ನಿ, ನಾಗಕೇಸರ, ಯಾಲಕ್ಕಿ, ಹಿಂಗು, ಇವು ಒಂದೊಂದು ತೊಲೆ, ಮೆಣಸಿನಕಾಯಿ ೫ ತೊಲೆ, ಅರಸಿನ ೪ ತೊಲೆ, ಈ ಪ್ರಕಾರ ಪದಾರ್ಥಗಳನ್ನು ತಂದಿಟ್ಟುಕೊಳ್ಳಬೇಕು. ಇನ್ನುಗಳಲ್ಲಿ ಶಾಜೀರಿಗೆ ಹೊರತು ವಿಕ್ಕದ್ದನ್ನೆಲ್ಲಾ ತವ್ವದಲ್ಲಿ ಹುರಿಯಬೇಕು. ಹುರಿದ ಲವಂಗದಲ್ಲಿ ಬಂದು ತೊಲೆಯನ್ನು ಬಗ್ಗರಣಿಗೆ ಇಟ್ಟುಕೊಂಡು ಮಿಕ್ಕ ಲವಂಗವನ್ನೂ, ಹುರಿಯು ಇಟ್ಟಿರುವ ಮಿಕ್ಕ ಮಸಾಲೇ ಸಾಮಾನುಗಳನ್ನೂ ಶಾಜೀರಿಗೆಯನ್ನೂ ಸಹ ಸೇರಿಸಿ ಸಣ್ಣ ಪುಡಿಯಾಗುವಂತೆ ಕುಟ್ಟಬೇಕು. ಬಂದು ಸೇರು ಅಕ್ಕಿಗೆ ನೂರು ಇಪ್ಪತ್ತು ತೊಲೆ ಎಳೇಬದನೇಕಾಯಿ, ಸಣ್ಣದಾಗಿ ಇರುವದನ್ನು ಬಳಕ ಮುಂತಾದದ್ದು ಇಲ್ಲದ್ದು ನೋಡಿ ತೆಗೆದುಕೊಂಡುಬಂದು, ತೊಟ್ಟು ಸಂಪೂರ್ಣವಾಗಿ ತೆಗೆದು ಗಾಕಿ, ಒಂದುಸಾರಿ ತೊಟ್ಟಿನಕಡೆಯಿಂದಲೂ ಒಂದುಸಾರಿ ತುದಿಯ ಕಡೆಯಿಂದಲೂ, ಹೀಗೆ ನಾಲ್ಕುಭಾಗವಾಗಿ ಹಿಚ್ಚಬೇಕು. ಕುಟ್ಟಿ ಇಟ್ಟಿರುವ ಮಸಾಲೇಪುಡಿಗೆ ಐದುತೊಲೆ ಉಪ್ಪಿನ ಪುಡಿಯನ್ನೂ, ಇದಕ್ಕೆ ಬಣ್ಣ ಬರುವದಕ್ಕೆ ಎಷ್ಟು ಅವಶ್ಯಕವೋ ಅಷ್ಟು ಹರಳು ಇದ್ದಿಲಿನ ಪುಡಿ ಅಥವಾ ಅಡಿಕೆಯನ್ನು ಸುಟ್ಟು ಅದರ ಪುಡಿಯನ್ನು ಸಹ ಬೆರಸಿ, ಅದರಲ್ಲಿ

ಅಗ್ನಿಯೇ ಚೈತನ್ಯ ಅಗತ್ಯವಾಗಿರಬೇಕು.

ಎರಡು ಸಮಭಾಗ ಮಾಡಬೇಕು. ಅರ್ಧಪುಡಿಯನ್ನು ತೊಳೆದು, ತುಪ್ಪ ಹಚ್ಚಿಟ್ಟಿರುವ ಅಕ್ಕಿಗೆ ಸೇರಿಸಿ, ಉಳಿದ ಅರ್ಧವನ್ನು ಸ್ವಲ್ಪ ಹುಣಿಸೇ ಗೊಜ್ಜಿನಲ್ಲಿ ಕಲಸಿ ಹೆಚ್ಚಿದ ಬದನೇ ಕಾಯಿಗಳಲ್ಲಿ ತುಂಬಬೇಕು.

ಮಸಾಲೆ ಪುಡಿ ಬೆರಸಿದ ಅಕ್ಕಿಯು ಅಳತೆಯಲ್ಲಿ ಎಷ್ಟಾಗುವದೋ ಅದರಲ್ಲಿ ಎರಡರಷ್ಟು ನೀರು ಎನ್ನಿಡಬೇಕು. ಇನ್ನೊಂದು ಕಲಾಯದ ಪಾತ್ರೆಯಲ್ಲಿ ಇಪ್ಪತ್ತು ತೊಲೆ ತುಪ್ಪ ಬಗ್ಗರಣಿಗೆ ಇಟ್ಟು, ಅದಕ್ಕೆ ಸಾಸುವೇಕಾಳುಹಾಕಿ, ಚಟಪಟವೆಂದು ಶಬ್ದವಾದ ಕೂಡಲೆ ಬದನೇಕಾಯಿಗಳನ್ನು ಬಗ್ಗರಣಿಗೆ ಹಾಕಬೇಕು. ಅನಂತರ ಚೆನ್ನಾಗಿ ಕಲಕಿ ಅದರಮೇಲೆ ನೀರುತುಂಬಿದ ಪಾತ್ರೆಯನ್ನು ಮುಚ್ಚಬೇಕು. ಬದನೇಕಾಯಿ ಪೂರಾ ಬೇಯುವದಕ್ಕೆ ಮುಂಚೆಯೇ, ಎರಡುಸಾರಿ ಬಿಳೀ ಹೊಗೆ ಬರುತ್ತಲಿ ಅದನ್ನು ತೆಗೆದು ಕೊಂಡು ಬೇರೇ ಪಾತ್ರೆಗೆ ಹಾಕಿ ಕೊಳ್ಳಬೇಕು. ಬಗ್ಗರಣಿಹಾಕಿದ ಕಲಾಯದ ತಪ್ಪಲಿಯಲ್ಲಿ ಪುನಃ ಇಪ್ಪತ್ತು ತೊಲೆ ತುಪ್ಪಹಾಕಿ, ಅದರಲ್ಲಿ ಹುರಿದು ಬಗ್ಗರಣಿಯರಿತು, ತೆಗೆದು ಇಟ್ಟಿದ್ದ ಅರ್ಧಲವಂಗವನ್ನು ಹಾಕಬೇಕು. ಬಗ್ಗರಣಿ ಆದಕೂಡಲೆ ಪುಡಿಯನ್ನು ಬೆರಸಿರುವ ಅಕ್ಕಿಯನ್ನು ಹಾಕಬೇಕು. ಅದನ್ನು ಕಲಕಿ ಅನಂತರ ಅದಕ್ಕೆ ಕಾದ ಎಸರನ್ನು ಸುರಿಯಬೇಕು.

ಅಕ್ಕಿಯು ಮೂರುಪಾಲು ಬೆಂದಕೂಡಲೆ ಅನ್ನದಲ್ಲಿ ನಾಲ್ಕರಲ್ಲಿ ಬಂದು ಭಾಗವನ್ನು ಸಟಿನಿಂದ ಬೇರೇ ಪಾತ್ರೆಗೆ ತೆಗೆದು ಕೊಂಡು ಅನ್ನದ ಪಾತ್ರೆಗೆ ಬದನೇಕಾಯನ್ನು ಹಾಕಿ, ಅದರಮೇಲೆ ಬೇರೇ ಪಾತ್ರೆಗೆ ತೋಡಿಕೊಂಡಿದ್ದ ಮುಕ್ಕಾಲುಪಾಲು ಬೆಂದ ಅನ್ನವನ್ನು ಹಾಕಿ, ನಲವತ್ತು ತೊಲೆತುಪ್ಪವನ್ನು ಹಾಕಿ ಮುಚ್ಚಿ ಕೆಂಡವನ್ನು ಕೆದರಿ ಅದರಮೇ ಇಟ್ಟು, ಮುಚ್ಚಿದ ಪಾತ್ರೆಯಲ್ಲಿ ಮೇಲೆ ಕೆಂಡ ಹಾಕಿ ಇಟ್ಟಿದ್ದು ಚೆನ್ನಾಗಿ ಬೆಂದನಂತರ ಇಳಿಸಿ ಕೊಳ್ಳಬೇಕು.

ಸಾತೇಕಾಯಿ, ತೊಂಡೇಕಾಯಿ, ಹೀರೇಕಾಯಿ, ಆಲೂಗಡ್ಡೆ, ಸಹ ಹಾಗೆ ಇದೇ ಪ್ರಕಾರ ಅನ್ನ ಮಾಡಬಹುದು.

ಮಾವಿನಹಣ್ಣಿನ ರಸದ ಅನ್ನ.

ಒಂದುಸೇರು ಅಕ್ಕಿಯನ್ನು ಚೆನ್ನಾಗಿ ತೊಳೆದು, ನೀರು ಬಸಿದು ಇಡಬೇಕು. ಅನಂತರ ಎರಡು ರೂಪಾಯಿತೂಕ ತುಪ್ಪವನ್ನು ಅದಕ್ಕೆ ಇಡಬೇಕು. ಅಕ್ಕಿಯ ನಾಲ್ಕುಪಾಲು ಮಾವಿನಹಣ್ಣಿನ ರಸವನ್ನು ಬಂದು ಕಲಾಯದ ಪಾತ್ರೆಯಲ್ಲಿ ಮರಳಲಿಕ್ಕೆ ಇಟ್ಟು ಈ ರಸವು ಕುದಿಯುವವರೆಗೆ ಆರಂಭವಾದ ಕೂಡಲೆ, ಇದರಲ್ಲಿ ತುಪ್ಪವನ್ನು ಹಾಕಿ ಇಟ್ಟಿರುವ ಅಕ್ಕಿಯನ್ನು ಸುರಿದು, ಕಲಾಯವಾಡಿದ ಸಾಟಿನಿಂದಲಾಗಲೀ, ಲಟ್ಟಣಿಗೆ ಯಿಂದಲಾಗಲೀ,

ಆತ್ಮರಕ್ಷಣೆಗಿಂತ ದೊಡ್ಡ ಧ್ಯಾನವದು ?

ತೊಳೆಸಬೇಕು. ಅಕ್ಕಿ ಸುಮಾರು ಬೆಂದಕೂಡಲೆ ಆದಕ್ಕೆ ಒಂದು-ನೂರು ರೂಪಾಯಿತೂಕ ಸಕ್ಕರೆಯನ್ನು ಹಾಕಿ ಕಲಿಸಬೇಕು. ಆಗಲೆ ಅದರಲ್ಲಿ ಒಂದು ತೊಲಾ ಯಾಲಕ್ಕೀ ಪುಡಿ ಹತ್ತು ತೊಲೆ ತೊಳೆದು ಸಿಪ್ಪೆತೆಗದ ಬಾದಾಮಿಬೀಜ, ಹತ್ತು ತೊಲೆ ದ್ರಾಕ್ಷಿ ಹಾಕಿ ಕಾಯಿಸಿ, ಮೇಲೆ ೪ ರೂಪಾಯಿ ತೂಕ ತುಪ್ಪವನ್ನು ಹಾಕಿ, ಕೆಂಡ ಕೆದರಿ ಅದರಮೇಲೆ ಈ ಅನ್ನದ ಪಾತ್ರೆಯನ್ನು ಇಟ್ಟು, ಮೇಲೆ ಪರಾತವನ್ನು ಮುಚ್ಚಬೇಕು. ಚನ್ನಾಗಿ ಬೆಂದದ್ದನ್ನು ನೋಡಿಕೊಂಡು ಇಳಿಸಿಕೊಳ್ಳಬೇಕು. ಇದನ್ನು ತೋಡಿಕೊಂಡು ಬಡಿಸುವಾಗ ಹತ್ತು ರೂಪಾಯಿತೂಕ ತಾಲತಿ ಕಲ್ಲು ಸಕ್ಕರೆಯನ್ನು ಹಾಕಿ ಅನಂತರ ಬಡಿಸಬೇಕು.

ಎಮ್. ನಾರಾಯಣರಾವ್.

೧೧. ಗಣಿತ.

(ಈ ಲೆಕ್ಕಗಳನ್ನು ಯಾರಾದರೂ ಮಾಡಿ ಕಳುಹಿಸಿ ಕೊಟ್ಟಲ್ಲಿ ಕೃತಜ್ಞತೆಯೊಡನೆ ಅಂಗೀಕರಿಸಿ ಮುಂದಿನ ತಿಂಗಳಲ್ಲಿ ಪ್ರಕಟಿಸುವೆವು.)

1. (೧).—8976ನ್ನು 123ರಿಂದ ಎರಡು ಪಟ್ಟಿಗಳಲ್ಲಿ ಗುಣಿಸು.

(೨).—ಈ ಭಿನ್ನರಾಸಿಗಳ ಛೇದಗಳಿಗೆ ಲ. ಸ. ಅ. ಕಂಡು ಹಿಡಿಯದೇ ಅವುಗಳನ ಸಂಕಲನ ಮಾಡು.

$$\frac{1}{2} + \frac{1}{6} + \frac{1}{12} + \frac{1}{20} + \frac{1}{30} + \frac{1}{42} + \frac{1}{56} + \frac{1}{72} + \frac{1}{90}.$$

2. ಭಾಗಹಾರಮಾಡದೇ ಈ ಕೆಳಗೆ ಇರುವ ಭಿನ್ನರಾಶಿಗಳನ್ನು ದಶಮಾಂಶಗಳಲ್ಲಿ ನಿರೂಪಿಸು:— $\frac{1}{16}$, $\frac{1}{37}$.

3. ಮೂರು ಸಂಖ್ಯೆಗಳ ಸಂಕಲನ ಲಬ್ಧವು 97 ; ಒಂದೆರಡನೇ ಸಂಖ್ಯೆಗಳ ಸಂಕಲನ ಲಬ್ಧವು 59 ; ಎರಡು ಮೂರನೇ ಸಂಖ್ಯೆಗಳ ಸಂಕಲನ ಲಬ್ಧವು 65 : ಒಂದು ಮೂರನೇ ಸಂಖ್ಯೆಗಳ ಸಂಕಲನ ಲಬ್ಧವನ್ನು ಕಂಡು ಹಿಡಿ.

4. 'ಎ' ಎಂಬವನು 'ಬಿ' ಎಂಬವನಿಗಿಂತ 23 ವರ್ಷ ದೊಡ್ಡವನು ಮತ್ತು 'ಸಿ' ಎಂಬುವನಿಗಿಂತ 16 ವರ್ಷ ಚಿಕ್ಕವನು. 'ಡಿ' ಎಂಬವನ ವಯಸ್ಸು 'ಎ ಬಿ' ಎಂಬುವರ ವಯಸ್ಸುಗಳ ಸಂಕಲನ ಲಬ್ಧಕ್ಕೆ ಸಮವಾಗಿದೆ. 'ಸಿ' ಎಂಬವನಿಗೆ 56 ವರ್ಷ ವಯಸ್ಸು. 'ಸಿ' ಎಂಬವನು 'ಡಿ' ಎಂಬವನಿಗಿಂತ ಎಷ್ಟು ವರ್ಷ ದೊಡ್ಡವನು ಅಥವಾ ಚಿಕ್ಕವನು ?

ಆತ್ಮಹತ್ಯೆಕ್ಕಿಂತ ಚಿಕ್ಕದ್ದ್ಯಾವದು.

5. 'ಎ' ಎಂಬ ಊರಿನಿಂದ 'ಬಿ' ಎಂಬ ಊರಿಗೆ 24 ಮೈಲುಗಳ ದೂರವಿದೆ. ಒಬ್ಬ ಮನುಷ್ಯನು 'ಎ' ಎಂಬ ಊರಿನಿಂದ ಹೊರಟು ಘಂಟೆ 1ಕ್ಕೆ 3 ಮೈಲುಗಳಂತೆ ನಡೆಯುತ್ತಾ ಪ್ರತಿ ಆರು ಮೈಲಿಗಳ ಅನಂತರ 20 ಮಿನೀಟುಗಳ ವರಿಗೆ ಸುದಾರಿಸಿಕೊಳ್ಳುತ್ತಾ ಹೋಗುತ್ತಾನೆ. ಅವನು ಎಷ್ಟು ಘಂಟೆಗಳಲ್ಲಿ 'ಬಿ' ಎಂಬ ಊರಿಗೆ ತಲಪ ಬಹುದು ?

6. 'ಎ' ಎಂಬವನು ರೂ. 2—15—6 ನ್ನೂ 25 ಸೇರು ರಾಗಿಯನ್ನೂ ಸಹ ಕೊಟ್ಟು, 30 ಸೇರು ಗೋಧಿಯನ್ನು ತೆಗೆದು ಕೊಳ್ಳುವದಾಗಿ 'ಬಿ' ಎಂಬವನೊಡನೆ ಒಪ್ಪಿಕೊಂಡನು. ತರುವಾಯ 'ಬಿ' ಎಂಬವನ ಬಳಿ 12 ಸೇರು ಗೋಧಿ ಮಾತ್ರವೇ ಇತ್ತು. 'ಎ' ಎಂಬುವನು 11 ಆಣೆಯನ್ನೂ, 25 ಸೇರು ರಾಗಿಯನ್ನೂ ಸಹ ಕೊಟ್ಟು ಆ ಹನ್ನೆರಡು ಸೇರು ಗೋಧಿಯನ್ನೇ ತೆಗೆದು ಕೊಂಡನು. 'ಬಿ' ಎಂಬವನು ತನ್ನ ರಾಗಿಯನ್ನು ರೂಪಾಯಿ 1ಕ್ಕೆ ಎಷ್ಟು ಸೇರುಗಳಂತೆ ಲೆಕ್ಕ ಮಾಡಿಕೊಂಡನು ?

7. ಒಬ್ಬ ಮನುಷ್ಯನಲ್ಲಿ ಕೆಲವು ಮೂವಿನಹಣ್ಣುಗಳಿದ್ದವು. ಅವನು ಅವುಗಳಲ್ಲಿ ಅರ್ಧಹಣ್ಣುಗಳನ್ನು 3 ಕಾಸಿಗೆ ಬಂದರಂತೆ ಮಾರಿ, ಬಂದ ಹಣಕ್ಕೆ 2 ಆಣೆ 3 ಕಾಸಿಗೆ ಬಂದರಂತೆ ಸೇಬಿನಹಣ್ಣುಗಳನ್ನು ತೆಗೆದು ಕೊಂಡನು. ಬಳಿಕ ಅವನ ಬಳಿ ಉಳಿದಿದ್ದ ಮೂವಿನ ಹಣ್ಣುಗಳು ಸೇಬಿನ ಹಣ್ಣುಗಳು ಸಹ ಒಟ್ಟು 100 ಆಯಿತು. ಆದರೆ ಅವನು ತೆಗೆದುಕೊಂಡ ಸೇಬಿನ ಹಣ್ಣುಗಳು ಎಷ್ಟು?

ಎಚ್. ಕೃಷ್ಣರಾವ್.

೧೨. ವೃತ್ತಾಂತ ಸಂಗ್ರಹ.

ಈ ಪ್ರಪಂಚದಲ್ಲಿರತಕ್ಕ ಎಲ್ಲಾ ಪೋಸ್ಟ್ ಆಫೀಸುಗಳಲ್ಲಿಯೂ ೩,೯೦,೨೫೦ ಜನ ನೌಕರರಿದಾರೆ. ವರ್ಷಕ್ಕೆ ೪೯೦,೧೦,೦೦,೦೦೦ ಕಾಗದಗಳೂ, ೫೯,೯೦,೦೦,೦೦೦ ಪೋಸ್ಟ್ ಕಾರ್ಡುಗಳೂ, ೧೦೩,೧೦,೦೦,೦೦೦ ಬುಕ್ಕು ಭಾಂಗಿಗಳೂ, ೧೯೫,೯೦,೦೦,೦೦೦ ನ್ಯೂಸ್ ಪೇಪರುಗಳೂ, ೧೦,೩೦,೦೦,೦೦೦ ಟೆಲಿಗ್ರಾಮುಗಳೂ ಈ ಪೋಸ್ಟ್‌ಆಫೀಸುಗಳಿಂದ ರವಾನೆಯಾಗುತ್ತವೆ. ೫೫ ಕೋಟಿರೂಪಾಯಿ ಇವುಗಳಿಂದ ಸರ್ಕಾರಕ್ಕೆ ಉತ್ಪತ್ತಿಯಾಗುತ್ತದೆ.

ಮಾತಾಜೀ ಎಂಬ ಒಬ್ಬ ಮರಾಟಾಬ್ರಾಹ್ಮಣಸ್ತ್ರೀಯು ಕಾಶಿಯಲ್ಲಿ ವಿದ್ಯಾಭ್ಯಾಸವನ್ನು ಪೂರೈಸಿ, ಎಲ್ಲಾ ಪಟ್ಟಣಗಳನ್ನೂ ಸಂಚಾರಮಾಡಬೇಕೆಂಬ ತಾತ್ಪರ್ಯದಿಂದ ದೇಶಯಾತ್ರೆಯನ್ನು ಉಪಕ್ರಮಿಸಿದಾಳೆ. ಈಕೆಯು ಸಂಸ್ಕೃತದಲ್ಲಿ ಅದ್ವಿತೀಯಪಾಂಡಿ

ಆಗದ ಕಾರ್ಯಕ್ಕೆ ಪ್ರಯತ್ನ ಮಾಡಲು ಪ್ರಯೋಜನವಿಲ್ಲ.

ತ್ಯವನ್ನು ಹೊಂದಿದಾಳೆ. ಬಂಗಾಳಿ, ಹಿಂದ್ವಿ, ಮರಾಟಿ ಮುಂತಾದ ಭಾಷೆಗಳೆಲ್ಲಾ ಈಕೆಗೆ ಲೀಲಾಜಾಲವಾಗಿವೆ. ಇದಲ್ಲದೆ ಈಕೆಯು ಲೌಕಿಕವ್ಯವಹಾರಗಳಲ್ಲಿ ಬಹಳ ಪ್ರವೀಣೆ. ಬೆಂಕೀಪುರದಲ್ಲಿ ಬಂದು ಉಪನ್ಯಾಸವನ್ನು ಮಾಡಿ ಸಕಲಮತಗಳಲ್ಲಿಯೂ ಸಮದೃಷ್ಟಿಯಿರಬೇಕೆಂಬುದಾಗಿ ಹೇಳಿದಳಂತೆ. ಸಾವಿರಾರು ಜನರು ಈ ಉಪನ್ಯಾಸವನ್ನು ಕೇಳಿ ಸಂತೋಷಪಟ್ಟರು.

ಅಮೃತಸರ ಭಾಗವತಸಿಂಗ್ ಎಂಬುವನು ಬಳ್ಳೀಕತ್ತಲೀಕಾಲದಲ್ಲಿ ಬಂದು ಕಡ್ಡಿಯಲ್ಲಿ ದಾರದ ಗಂಟುಗಳನ್ನು ಹಾಕಿ ಆಗಂಟುಗಳನ್ನೇ ಅಕ್ಷರಗಳ ಸಂಕೇತಗಳನ್ನಾಗಿ ಮಾಡಿಕೊಂಡು ಯಾವಸಂಗತಿಯನ್ನು ಬೇಕಾದರೂ ಆ ಗಂಟುಗಳನ್ನು ಮುಟ್ಟಿ ನೋಡಿ ಓದುತ್ತಾನೆ.

ಹೂಗ್ಲೀನದಿಯಲ್ಲಿ ಮುಳಗಿಹೋದ ಮರಾಟಾ ಎಂಬ ರೇಲ್ವೆಯಲ್ಲಿ ೬೫೦ ಜನಗಳು ಇದ್ದರೆಂಬುದಾಗಿಯೂ ಇವರಲ್ಲಿ ೬೦೦ ಜನಗಳು ಬದುಕಿಕೊಂಡರೆಂಬುದಾಗಿಯೂ ವರ್ತಮಾನವಿದೆ.

೧೮೭೪ನೇ ಇಸವಿಯಲ್ಲಿ ಬೊಂಬಾಯಿಮ್ಯೂನಸಿಪಲ್ ಉತ್ಪತ್ತಿಯು ೧೭ ಲಕ್ಷ ರೂಪಾಯಿ ಇತ್ತು. ಕಳೆದ ವರ್ಷ ೪೮ ಲಕ್ಷರೂಪಾಯಿ ಉತ್ಪತ್ತಿಯಾಯಿತು.

ಬೊಂಬಾಯಿ ಸಂಸ್ಥಾನದಲ್ಲಿ ಪ್ರತಿ ಬಂದು ಗ್ರಾಮಕ್ಕೂ ಬಂದು ಬಾಲಿಕಾಪಾಠಶಾಲೆಯನ್ನು ಏರ್ಪಾಡುಮಾಡಿದಾರೆ. ಇಲ್ಲಿ ೪೦,೦೦೦ ಜನ ಬಾಲೆಯರು ವಿದ್ಯಾಭ್ಯಾಸ ಮಾಡುತ್ತಲಿದಾರೆ.

ಮಾ|| ಸಿ. ರಾಮಚಂದ್ರಯರ್, ಸಿ. ಎಸ್. ಐ. ರವರು ಸೇಲಮ್ ಡಿಸ್ಟ್ರಿಕ್ಟ್ ಸೆಷನ್ಸ್ ಜಡ್ಜಿಗಳಾಗಿ ನೇಮಿಸಲ್ಪಟ್ಟರು.

ಬಂದು ಗುಜರಾತಿ ಪತ್ರಿಕೆಯ ಕರ್ತರು ರುಕ್ಮಾಭಾಯಿಗಂಡ ದಾದಾಜಿಯು ತಪ್ಪೀರನ್ನು ಹಾಕಿಸಿ ಈತನು ದಡ್ಡನಲ್ಲವೆಂಬ ವಿಷಯವು ಈತನ ಚಹರೆಯಿಂದಲೇ ಎಲ್ಲರಿಗೂ ತಿಳಿಯುವದಕ್ಕೋಸ್ಕರ ತಮ್ಮ ಪತ್ರಿಕೆಯ ಛಂಬಾದಾರರೆಲ್ಲರಿಗೂ ಕಳುಹಿಸಿದಾರೆ.

ಲೆಕ್ಕಾಚಾರಗಳನ್ನು ಹೇಳುವದಕ್ಕೋಸ್ಕರ ಪಚ್ಚಪ್ಪನ ಕಾಲೇಜಿನಲ್ಲಿ ಬಂದು ಪಾಠಶಾಲೆಯನ್ನಿಟ್ಟಿತ್ತಷ್ಟೆ. ಈ ಪಾಠಶಾಲೆಯ ವಿದ್ಯಾರ್ಥಿಗಳ ಪೈಕಿ ೬೦ ಜನ ಪರೀಕ್ಷೆಗೆ ಹೋಗಿದ್ದರು. ಇವರಲ್ಲಿ ೧೫ ಜನ ತೇರ್ಗಡೆಯಾದರು.

ಬೊಂಬಾಯಲ್ಲಿ ಭಾಂತಿ ಭೇದೀ ಉಪದ್ರವವು ತಲೆದೋರಿ ಇದೆ. ಜೂಲೈ ೧೦ರಿಂದ ೧೯ರವರಿಗೂ ೧೦ ಜನಗಳು ಈ ರೋಗದಿಂದ ಮೃತರಾದರಂತೆ. ಅಷ್ಟು ಗೊಡ್ಡ

ಆಗುವದೇನೋ ಆಗೇ ಆಗುವದು.

ಪಟ್ಟಣದಲ್ಲಿ ಇಷ್ಟು ಜನಗಳು ಸಾಯುವದು ವಿಶೇಷವೆಲ್ಲ. ಬೊಂಬಾಯಿಸಂಸ್ಥಾನಕ್ಕೆ ಸೇರಿದ ಅನೇಕ ಪಟ್ಟಣಗಳಲ್ಲಿ ಈ ರೋಗದಿಂದ ಅನೇಕರು ಮೃತರಾಗುತ್ತಲಿದಾರೆ.

ಪ್ಯಾರಿಸ್ ಪಟ್ಟಣದಲ್ಲಿ ನಾಯಿಗಳಿಗೆ ಅನುಕೂಲವಾದ ಆಭರಣಗಳನ್ನೂ ಅವುಗಳಕಾಲಿಗೆ ಮೋಜಾಗಳನ್ನೂ ಮಾಡಿ ೪,೦೦೦ ಜನಗಳವರಿಗೂ ಸುಖದಿಂದ ಜೀವನ ಮಾಡುತ್ತಾರೆ.

೧೩. ಬಳದೇಶದ ವೃತ್ತಾಂತಸಂಗ್ರಹ.

ಮೈಸೂರು ರೆವಿನ್ಯೂ ಸರ್ವೆಯು ೧೮೬೫ನೇ ಇಸವಿಯಲ್ಲಿ ಪ್ರಾರಂಭವಾಯಿತು. ಇನ್ನು ಪೂರೈಸುತಾ ಬರುತ್ತಲಿದೆ. ಇನ್ನೂ ಅಳತೆಯಾಗತಕ್ಕದ್ದು ೨; ತರಗತಿ ವಿಂಗಡಿಸಬೇಕಾದದ್ದು ೧೧, ಸೆಟಲ್‌ಮೆಂಟ್ ಆಗತಕ್ಕದ್ದು ೧೩, ಇಷ್ಟು ತಾಲ್ಲೂಕುಮಾತ್ರ ಉಳಿದಿರುತ್ತವೆ. ಸರ್ವೆ ಸೂಪರಿಂಟೆಂಡೆಂಟರವರು ಗವರ್ನಮೆಂಟ್ ಸ್ಯಾಂಕ್ಷನ್ನಿನಿಂದ ತಮ್ಮ ಇಲಾಖೆ ೬೬ ಯಂದಿಯನ್ನು ಕಡಮೆ ಮಾಡತಕ್ಕ ಏರ್ಪಾಡುಗಳನ್ನು ಮಾಡುತ್ತಲಿದಾರೆ. ಬೊಂಬಾಯಿ ಸಂಸ್ಥಾನದಲ್ಲಿ ಜಾರಿಯಲ್ಲಿರುವಂತೆ ಸರ್ವೆ ಸೆಟಲ್‌ಮೆಂಟುಗಳನ್ನು ಚೀಫ್ ಕಮಿಷ್ನರ್ ಬೌರಿಂಗ್ ಸಾಹೇಬರು ಈ ಸಂಸ್ಥಾನಕ್ಕೆ ತಂದರು. ಅನೇಕಜನರು ಪಟ್ಟೆಯಲ್ಲಿ ಕಂಡ ಭೂಮಿಗಿಂತಲೂ ಹೆಚ್ಚಾಗಿ ಆಕ್ರಮಿಸಿಕೊಂಡು ಅನುಭವಿಸುತ್ತಿದ್ದರು. ಅನೇಕ ಅಧಿಕಾರಿಗಳು ಇಂಥಾ ಜನಗಳಿಂದ ಸುಲಿದುಕೊಂಡು ತಿನ್ನುತ್ತಿದ್ದರು. ಈ ಸರ್ವೆ ಸೆಟಲ್‌ಮೆಂಟಿಗಾಗಿ ೪೮,೦೦,೪೭೦ ರೂಪಾಯಿ ೯ ಆಣೆ, ೯ ಪೈ ಖರ್ಚಾಗಿದೆ. ೧,೬೦,೪೧,೪೭೬ ಎಕರೆ ಭೂಮಿಯು ಅಳತೆಯಾಯಿತು; ೧,೪೪,೪೬,೪೪೪ ಎಕರೆ ಭೂಮಿಯು ತರಗತಿ ವಿಂಗಡಿಸಲ್ಪಟ್ಟಿತು; ೧೩,೬೦೦ ಗ್ರಾಮಗಳ ಸೆಟಲ್‌ಮೆಂಟ್ ಆಯಿತು. ೧೦೯೪ ಗ್ರಾಮಗಳ ಪತ್ರಗಳನ್ನು ತಯಾರು ಮಾಡಿಸಿ ಮುದ್ರಿಸಿ ಸ್ಥಳಿಕ ಅಧಿಕಾರಿಗಳಿಗೆ ಕೊಟ್ಟರು. ೧೮೯೮ನೇ ಇಸವಿಯಲ್ಲಿ ೪,೬೬,೮೮೪ ಎಕರೆ ಭೂಮಿಯು ತರಗತಿ ವಿಂಗಡಿಸಲ್ಪಟ್ಟಿತು. ೧ ಎಕರೆ ಭೂಮಿಯು ಅಳತೆಗೂ, ತರಗತಿ ವಿಂಗಡಿಸುವದಕ್ಕೂ, ಒಟ್ಟು ಎರಡರಿಂದ ೪ ಆಣೆ ೧೦ ಪೈ ಮೇರೆ ಖರ್ಚಾಗಿರುತ್ತದೆ.

ಶ್ರೀಮನ್ಮಹಾರಾಜರವರು ೧೩ನೇ ಜುಲೈನಲ್ಲಿ ಪುಟ್ಟರ ಮತ್ತು ಕುಷ್ಠರೋಗದವರ ಆಸ್ಪತ್ರೆಗೆ ಹೋಗಿ, ಅವರ ಪೋಷಣೆಗೋಸ್ಕರ ಅಲ್ಲಿ ನಡೆಯುತ್ತಿದ್ದ ಉಪಚಾರಗಳನ್ನು ನೋಡಿ ಬಹಳ ಸಂತೋಷಪಟ್ಟು, ತಮ್ಮ ಭೇಟಿಯ ಜ್ಞಾಪಕಾರ್ಥವಾಗಿ ಅವರಿಗೆಲ್ಲರಿಗೂ ಅಲ್ಲಿ ೧೮೯೮ನೇ ತಾರೀಖಿನಲ್ಲಿ ಔತಣವನ್ನು ಮಾಡಿಸಿದರು.

ಆಸ್ತಿಕನಿಗೆ ಸಕಲವೂ ಶೋಕ.

ಚೀಫ್‌ಕೊರ್ಟು ಜಡ್ಜಿಗಳಾದ ಮಾ॥ ತಂಬೂಸೆಟ್ಟರವರು ತಾವು ಕಂಟೋನ್ಮೆಂಟಿನಲ್ಲಿದ್ದಾಗ್ಯೂ ಮೈಸೂರು ಸರ್ಕಾರದ ನೌಕರರಾದ್ದರಿಂದ ಇನ್‌ಕಮ್ ಟ್ಯಾಕ್ಸ್ ಅಂದರೆ ಆದಾಯದಮೇಲೆ ತೆರಿಗೆಯನ್ನು ಕೊಡುವದಕ್ಕೆ ಕಾರಣವಿಲ್ಲವೆಂಬದಾಗಿ ಅದನ್ನು ಕೊಡದೆ ಹೋದರು. ಈ ಸಂಗತಿಯು ಇಂಡಿಯಾ ಸರ್ಕಾರದವರ ಹುಕುಮಿಗೋಸ್ಕರ ರಿಪೋರ್ಟು ಗಿತ್ತು. ಇಂಡಿಯಾ ಗವರ್ನ್‌ಮೆಂಟಿನವರು ಮೈಸೂರು ನೌಕರಿಯಲ್ಲಿರತಕ್ಕವರು ಕಂಟೋನ್ಮೆಂಟಿನಲ್ಲಿದ್ದಾಗ್ಯೂ ಅವರು ಇನ್‌ಕಮ್‌ಟ್ಯಾಕ್ಸ್ ಕೊಡತಕ್ಕ ಅವಶ್ಯ ವಿಲ್ಲವೆಂದು ವಿರ್ಣಾಡುಮಾಡಿದಾರೆ. ಮಾ॥ ತಂಬೂಸೆಟ್ಟರವರ ಪ್ರಯತ್ನದಿಂದ ಅನೇಕರಿಗೆ ಉಪಕಾರವಾಯಿತು.

ಬೆಂಗೂರು ಸೊಳೆಯಲ್ಲಿ ಸಿಡುಬಿನ ಉಪದ್ರವವು ಹೆಚ್ಚಾಗಿದೆ. ಬಲಾತ್ಕಾರವಾಗಿ ಸಿಡುಬನ್ನು ಹಾಕತಕ್ಕ ಸಂಪ್ರದಾಯವನ್ನು ಆಚರಣೆಗೆ ತಂದು ಸಿಡುಬು ಹಾಕತಕ್ಕವರನ್ನು ಹೆಚ್ಚಾಗಿ ನೇಮಿಸತಕ್ಕದ್ದು ಅತ್ಯಂತ ಅವಶ್ಯಕವಾದದ್ದು.

ಅಂಜೇಬಕ್ಷಿ ಮಾ॥ ಮರಿಗಂಗಯ್ಯನವರು ತಮಗೆ ಪೆರ್ಷ್ಯ ಕೊಡಲೆಂದು ದಿವಾನರಿಗೆ ಬರದುಕೊಂಡಿದ್ದರು. ಅದಕ್ಕೆ ದಿವಾನರು "ಒಳ್ಳೇ ಪೆರ್ಷ್ಯಬರಬೇಕಾದರೆ ೫ ವರ್ಷದ ಸರ್ವಿಸ್ ಪೂರೈಸಬೇಕು. ಹಾಗಿಲ್ಲದಿದ್ದರೆ ಮುಂದೆ ಕೆಲಸ ಮಾಡುವದಕ್ಕೆ ಶಕ್ತಿಯಿಲ್ಲವೆಂದು ಮೆಡಿಕಲ್ ಸರ್ಟಿಫಿಕೇಟಿ ಕಳುಹಿಸಬೇಕು. ಅದೂ ಇಲ್ಲದೆ ಇದ್ದರೆ ಕೆಲಸಮಾಡುವದಕ್ಕೆ ಇಷ್ಟವಿಲ್ಲದ ಪಕ್ಷದಲ್ಲಿ ಕೆಲಸಕ್ಕೆ ರಾಜೀನಾಮೆ ಕೊಡಬೇಕು" ಎಂದು ತಿಳಿಸಿದರು. ಇಷ್ಟರಲ್ಲಿಯಾವನೋ ಒಬ್ಬ ದುಷ್ಟನು ಚೇಷ್ಟೆಮಾಡೋಣವೆಂದು ಮಾ॥ ಮರಿಗಂಗಯ್ಯನವರ ಹೆಸರಿನಲ್ಲಿಒಂದು ರಾಜೀನಾಮೆಯನ್ನು ಬರೆದು ಅವರಂತೆಯೇ ರಾಜೀನಾಮೆ ದಿವಾನರಿಗೆ ಕಳುಹಿಸಿದನು. ದಿವಾನರವರು 'ಪೆರ್ಷ್ಯ ಕೊಡುವದಕ್ಕಾಗುವದಿಲ್ಲ. ನಿಮ್ಮ ರಾಜೀನಾಮೆಯನ್ನು ಅಂಗೀಕರಿಸಿದೇನೆ' ಎಂದು ಹುಕುಂ ಕೊಟ್ಟರು. ಈ ಹುಕುಮನ್ನು ನೋಡಿ ಭಕ್ಷಿಯವರು ಅತ್ಯಂತ ವಿಸ್ಮಿತರಾಗಿ ವಾಸ್ತವವಾದ ಸ್ಥಿತಿಯನ್ನು ದಿವಾನರಿಗೆ ತಿಳಿಸಿದ್ದಲ್ಲದೆ ಈ ರಾಜೀನಾಮೆಯನ್ನು ಬರೆದವನನ್ನು ಪತ್ತೆ ಮಾಡಿ ಕೊಡತಕ್ಕವರಿಗೆ ೧೦೦ ರೂಪಾಯಿ ಇನಾಮು ಕೊಡುವಂತೆ ಪ್ರಕಟಿಸಿದಾರೆ.

ಆರಸೀಕೆರೆ ತಾ॥ ಜಾವಗಲ್ ಕಸಬಾ ವಾಸಸ್ಥನಾದ ದೇವಾಂಗದವಜಾತಿ ರಂಗಪ್ಪನೆಂಬವನು ಶನಿವಾರ ಭಾನುವಾರ ಸೇಂದಿ ಪಾನಮಾಡಿಕೊಂಡು ಬರುವಾಗ ಖೂನುಮಾಡಲ್ಪಟ್ಟು ಆ ಗ್ರಾಮಕ್ಕೆ ೧॥ ಮೈಲು ದೂರದಲ್ಲಿ ಬಿದ್ದಿದ್ದನು. ವಿಚಾರಣೆಯಲ್ಲಿ ಇವನೂ ಮತ್ತಿಬ್ಬರೂ ಪಾನಮಾಡಿದ್ದಾಗ ಪರಸ್ಪರ ಕಲಹದಿಂದ ಸತ್ತನೆಂದು ತಿಳಿಯಿತು. ಆಹಾ! ಸುರಾದೇವಿಯ ಸೇವೆಯನ್ನು ಮಾಡಿದವರಿಗೆ ಏನು ಫಲತಾನೆ ಲಭಿಸುವದಿಲ್ಲ!

	ರೂ.	ಆ.
ಮೈಸೂರು ಪಟ್ಟಣದಲ್ಲಿರುವವರಿಗೆ	೧	
,, ವಿದ್ಯಾರ್ಥಿಗಳಿಗೆ ...	೧	೦
ಇತರ ಸ್ಥಳದಲ್ಲಿರತಕ್ಕವರಿಗೆ ಪೋಸಲು ಸಹಿತ ..	೧	೧೪
,, ವಿದ್ಯಾರ್ಥಿಗಳಿಗೆ ...	೧	೪
ಬಿಡಿ ಪ್ರತಿ ೧ಕ್ಕೆ	೦	೩.

ವಿದ್ಯಾರ್ಥಿಗಳೆಲ್ಲರೂ ತಮ್ಮ ಪಾಠಶಾಲೆಗಳ ಹೆಡ್ ಮಾಸ್ಟರ್ ಮುಖಾಲ ಕವೇ ತರಿಸಿಕೊಳ್ಳಬೇಕು. ೧೦ ಆಥವಾ ಹೆಚ್ಚು ಪ್ರತಿಗಳನ್ನು ಬುಬ್ಬಿತ ಪೆಸರಿಗೆ ತರಿಸಿಕೊಳ್ಳುವವರಿಗೆ ಒಂದು ಪ್ರತಿ ಹೆಚ್ಚಾಗಿ ಬೊರಿಯುವದು ; ಅಂಚೆ ಪೋಸಲೂ ಕಡಮೆಯಾಗುವದು. ಚಂದಾಹಣವನ್ನು ಮನಿಯಾರ್ಡರ್ ಕರ್ಚಿಸಿ ಸೋಟುಗಳ ಮೂಲಕವಾಗಿ ಕಳುಹಿಸಬೇಕು. ಅಂಚೆ ಲೇಬಿಲ್ ಗಳನ್ನೂ ರಸೀದಿ ಲೇಬಿಲ್‌ಗಳನ್ನೂ ಕಳುಹಿಸಿದರೆ, ರೂಪಾಯಿ ೧ಕ್ಕೆ ೧ ಆಣೆಯನ್ನು ಹೆಚ್ಚಾಗಿ ಕಳುಹಿಸಬೇಕು. ಚಂದಾಹಣವನ್ನು ಈ ಕೆಳಗೆ ರುಜು ಮಾಡಿರುವವರ ಪೆಸರಿಗೆ ಕಳುಹಿಸಬೇಕು.

ಎಮ್. ವೆಂಕಟಕೃಷ್ಣಯ್ಯ,
ಹಿತಬೋಧಿನಿಯ ಎಡಿಟರ್

ಮೈಸೂರು.

ಪ್ರಸಿದ್ಧ ಪತ್ರಿಕೆ.

ಹಿಂದೂ ಚರಿತ್ರ ಸಂಗ್ರಹ.

ಇದು ವಿದ್ಯಾಭ್ಯಾಸದ ಸೆಕ್ರಟರಿ ಮಿ॥ ಲೈಸ್ ಸಾಹೇಬರ ಮತ್ತು ಮೈಸೂರು ದೇಶೀಯ ಪರೀಕ್ಷೆಯ ಕಮಿಟಿ ಮೆಂಬರುಗಳಲ್ಲಿ ಕೆಲವರ ಪ್ರೇರಣೆಯಿಂದ, ಹಿಂದೂಚರಿತ್ರದರ್ಪಣ ಗ್ರಂಥಕರ್ತರು ಬರೆದದ್ದು. ಇದರಲ್ಲಿ ಹಿಂದೂದೇಶದ ಭೂಪಟ, ವಂಶವೃಕ್ಷಗಳು; ಆಯಾಕಾ ದಲ್ಲಿ ಆಯಾ ಚಕ್ರವರ್ತಿಗಳಿಗೆ ಅಧೀನವಾಗಿದ್ದ ಇತರ ರಾಜ್ಯಗಳು, ಅವುಗಳ ರಾಜಧಾನಿ ಅವುಗಳ ಕಾಲ, ಇಂಥಾ ಪಟ್ಟಿ ; ಮುಖ್ಯವಾದ ಸಂಗತಿಗಳು ; ಅವುಗಳ ಪಾರಿಭಾಷಿಕ ಪಟ್ಟಿಗಳು ಇವುಗಳು ಸೇರಿಸಿವೆ. ೧೫೦ ಪುಟಗಳಿವೆ.

ಚಿತ್ರದುರ್ಗದ ಹೈಸ್ಕೂಲ್ ಹೆಡ್ ಮ್ಯಾಸ್ಟರ್ ಎಮ್. ಬಿ. ಶ್ರೀನಿವಾಸಯ್ಯಂಗಾರ್ ಬಿ. ಎ ಯವರಲ್ಲಿ ಆಥವಾ ಬೆಂಗಳೂರು ಚೀಫ್ ಕೋರ್ಟು ಟ್ರಾನ್ಸ್‌ಲೇಟರ್ ಮತ್ತು ದೇಶೀಯ ಪರೀಕ್ಷೆಯಲ್ಲಿ ಬುಬ್ಬಪರೀಕ್ಷಕರಾದ, ಎಮ್. ಎಸ್. ಪುಟ್ಟಣ್ಣ ಬಿ. ಎ. ಯವರಲ್ಲಿ ದೊರೆಯುವದು.

ಪ್ರತಿ ೧ಕ್ಕೆ ೫ ಆಣೆ.
ಪ್ರತಿ ೧ಕ್ಕೆ ೧೦ ರೂಪಾಯಿ ಕೂಡ ; ಅಪ್ಪದಿಂದ ಟಪ್ಪಾಲು ಪೋಸಲು ೧ ಆಣೆ.

ಶಾಲಿವಾಹನ ಶಕ ೧೮೦೧ನೇ ಸರ್ವಜಿತ್ಸಂವತ್ಸರದ ಭಾದ್ರಪದ ಮಾಸದ ಪಂಚಾಂಗ

ತಿಂಗಳು, ತಾರೀಖು.	ಪಕ್ಷ.	ವಾರ.	ತಿಥಿ	ಗಳಿಗೆ.	ನಕ್ಷತ್ರ.	ಗಳಿಗೆ.	ಮಾನ, ತೇದಿ.	ವಿಶೇಷ ದಿವಸಗಳು
ಆಗಸ್ಟ್ ೧೮೭೯.		ಶ	೧	೭–೧೫	ಪುಷ್ಯ	೫೧–೫೯	೬	
		ಭಾ	೨	೧೦–೫೦				
		ಸೋ	*ಆ ೩	೫೪–೧೬	ಉತ್ತರೆ	೬೭–೬೫	೭	ಸ್ವರ್ಣಗೌರೀವ್ರತ, ಕಲ್ಕಿ ಜಂ
		ಮಂ	* ೪	೫೯–೭೦	ಹಸ್ತ	೬೫–೭೬	೮	ಸಿದ್ಧಿವಿನಾಯಕವ್ರ/ಸೋಮಗ್ರ
		ಬು	೫	೬೫–೭೮	ಚಿತ್ತೆ	೪೯–೧೬	೯	
		ಗು	೬	೭೭–೮೦	ಸ್ವಾತಿ	೬೫–೧೫	೧೦	
		ಶು	೭	೮೭–೯	ವಿಶಾಖ	೧೧–೬೦	೧೧	
		ಶ	೮	೧೦೭–೧೮	ಅನೂ	೧೮–೬೦	೧೨	ಜ್ಯೇಷ್ಠಾ, ಸಿದ್ಧಿ, ಮಹಾಲಕ್ಷ್ಮಿ ವ್ರ
		ಶ	೯	೧೧೭–೨೭	ಜ್ಯೇಷ್ಠ	೧೬–೨೧	೧೩	
		ಭಾ	೧೦	೧೯–೨೭	ಮೂಲ	೧೭–೧೬	೧೪	
		ಸೋ	೧೧	೧೨೭–೨೯	ಪೂಷಾ	೧೭–೨೧	೧೫	ಸರ್ವತ್ರೈಕಾದಶಿ.
		ಮಂ	೧೨	೧೩೭–೨೭	ಉತ್ತಾ	೧೬–೨	೧೬	ಮಹಾಪ್ರದೋಷ, ವಾಮನ ಜಯಂತಿ,
		ಬು	೧೩	೧೪೭–೧೮	ಶ್ರವಣ	೧೮–೧೯	೧೭	
		ಗು	೧೪	೧೮–೨೮	ಧನಿಷ್ಠಾ	೨೦–೨೯	೧೮	ಅನಂತ ಪದ್ಮನಾಭವ್ರತ.
		ಶು	೧೫	೨೦–೨೯	ಶತಭಿಷ	೨೬–೧೬	೧೯	
		ಶ	೧	೨೫–೨೬	ಪೂಭಾ	೬೦–೧	೨೦	ಅಪರ ಪಕ್ಷಾರಂಭ.
		ಭಾ	೨	೨೦–೨೪	ಉಭಾ	೬೮–೧೮	೨೧	
		ಸೋ	೩	೨೫–೨೦	ರೇವತಿ	೨೫–೨೬	೨೨	
		ಮಂ	೪	೨೦–೨೧	ಅಶ್ವಿನಿ	೧೦–೦	೨೩	ಸಂಕಷ್ಟಚತುರ್ಥಿ.
		ಬು	೫	೨೫–೨೬	ಭರಣಿ	೧–೧೦	೨೪	ಮಹಾಭರಣಿ.
		ಗು	೬	೨೯–೨೫	ಕೃತ್ತಿಕೆ	೨–೧೦	೨೫	ಪ್ರಸನ್ನ ಕೃಷ್ಣಸ್ವಾಮಿ ರಥೆ
		ಶು	೭	೨೫–೨೮	ರೋ	೧೦–೧೧	೨೬	
		ಶ	೮	೨೫–೨೭	ಮೃಗ	೧೬–೨	೨೭	ಶ್ರೀಕೃಷ್ಣ ಜಯಂತಿ.
		ಭಾ	೯	೨೮–೩೦	ಆರ್ದ್ರಾ	೧೭–೨೦	೨೮	ಹರಿಹರವ್ರತ.
		ಸೋ	೧೦	೨೫–೨೯	ಪುನ	೨೦–೨೧	೨೯	ಮಹಾವ್ಯತೀಪಾತ.
		ಮಂ	೧೧	೨೫–೨೦	ಪುಷ್ಯ	೨೦–೨೧	೩೦	ಸರ್ವತ್ರೈಕಾದಶಿ.
		ಬು	೧೨	೨೩–೨೫	ಆಶ್ಲೇ	೨೧–೨೩	೩೧	ಯತಿದ್ವಾದಶಿ.
		ಗು	೧೩	೨೯–೩೦	ಮಘೆ	೨೩–೨೬	೧	
		ಶು	೧೪	೨೭–೩೦	ಪುಬ್ಬೆ	೨೬–೨೯	೨	ಷಡಶೀತಿ ಪುಣ್ಯಕಾಲ.
		ಶ	*ಆ ೧೫	೨೯–೩೦	ಹುಬ್ಬೆ	೨೯–೩೨	೩	ಸರ್ವತ್ರ ಮಹಾಲಯಾಮಾ

*ಅಷ್ಟಾಗಳಲ್ಲಿ ಅಂತರಿಸಿರುವ ಸಂಖ್ಯೆಗಳು ಅಧಿಕಮಾಸಗಳು

1889

ಆರ್ಯಮತಸಂಜೀವಿನಿ.

ಅಮಲೀಮಸಪುಚ್ಛಿದ್ರಮುಕೌಶ್ಯಮತಿಸುಂದರಮ್ ॥
ಅದೇಯಮುಪತಿಗ್ರಾಹ್ಯಮುಹೋಜ್ಞಾನಂಮಹಾಧನಂ।

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

1 ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ
6—1—1962.

ಪತ್ರಿಕೆ ಹೆಸರು ಆರ್ಯಮತ ಸಂಜೀವಿನಿ.
ಆರಂಭ ದಿನಾಂಕ 1889
ಪ್ರಕಟನಾ ಸ್ಥಳ ಮೈಸೂರು
ಸಂಪಾದಕರ ಹೆಸರು ಶ್ರೀ ಕೃಷ್ಣಶರ್ಮರು ಆಳಿ।
ಮಾಲೀಕರ ಹೆಸರು
ಸೌಜನ್ಯ ಕೃಪೆ ಶ್ರೀಯುತ ಎಂ. ಶೇಷಗಿರಿರಾವ್ ಗಾಳಿ

ಸುವಿದ್ಯಾಮಂದಿರ ಮುದ್ರಾಶಾಲೆಯಲ್ಲಿ

ಮೈಸೂರ್

April 1889

ಈ ಪತ್ರಿಕೆಯ ಒಂದು ಸಂಚಿಕೆಯು ಉಪಲಬ್ಧವಿದೆ

ಶ್ರೀ ಮಹಾ ಭಾರತ ಕಥಾ ಪ್ರಸಂಗ.

* ವ್ಯಾಸಂ ವಸಿಷ್ಠನಪ್ತಾರಂ ಶಕ್ತೇಃಪೌತ್ರಮಕಲ್ಮಷಮ್।
ಪರಾಶರಾತ್ಮಜಂ ವಂದೇ ಶುಕತಾತಂ ತಪೋನಿಧಿಮ್ ॥
‡ ನಾರಾಯಣಂನಮಸ್ಕೃತ್ಯ ನರಂಚೈವನರೋತ್ತಮಮ್।
ದೇವೀಂ ಸರಸ್ವತೀಂ ಚೈವ ತತೋಜಯಮುದೀರಯೇತ್ ॥

ನೈಮಿಶಾರಣ್ಯದಲ್ಲಿ ಶೌನಕಮುನೀಂದ್ರನು ತಪಸ್ಸ್ವಾಧ್ಯಾಯದಲ್ಲಿ ಇರುತಿದ್ದ ವೇಳೆಯಲ್ಲಿ ಲೋಮಹರ್ಷಣಪುತ್ರನಾದ ಸೂತಪುರಾಣಿಕನು ಬರಲು, ಆಪೌರಾಣೀಕನನ್ನು ಅಲ್ಲಿದ್ದ ಋಷಿಗಳು ಪ್ರೂಜಿಸಿ, "ಅಯ್ಯಾ ಪೌರಾಣಿಕೋತ್ತಮರೇ, ಒಂದು ಉತ್ತಮವಾದ ಪುರಾಣಶ್ರವಣ ಉಂಟೇ" ಎಂದು ಕೇಳಲಾಗಿ; ಅವನುಕ್ಕೈಮುಗಿದು "ಅಯ್ಯಾ ಋಷಿಗಳಿರಾ, ಒಂದು ಪುರಾಣ, ಶ್ರೀ ಮಹಾಭಾರತಕಥೆಯುಂಟು. ಅದು ಪಂಚಮ ವೇದವೆನಿಸುವದು. ಅದನ್ನು ಜನಮೇಜಯ ಮಹಾರಾಜನು ಸರ್ಪಯಾಗ ಬ್ರಾಹ್ಮಣಹತ್ಯಾದೋಷ ಪರಿಹಾರಾರ್ಥವಾಗಿ, ವೇದವ್ಯಾಸರ ಆಜ್ಞೆಯಪ್ರಕಾರ ವೈಶಂಪಾಯನ

ಟೀಕು * ವಸಿಷ್ಠಮಹರ್ಷಿಗೆ ಮೊಮ್ಮಗನ ಮಗನಾಗಿಯೂ, ಶಕ್ತಿ ಮಹರ್ಷಿಗೆ ಮೊಮ್ಮಗನಾಗಿಯೂ, ಪರಾಶರರಿಗೆ ಮಗನಾಗಿಯೂ, ಶ್ರೀಶುಕಮಹರ್ಷಿಗೆ ತಂದೆಯಾದ ಶ್ರೇಷ್ಠನಾದ ವ್ಯಾಸಮಹರ್ಷಿಗೆ ನಮಸ್ಕಾರವು.

‡ ನಾರಾಯಣನನ್ನೂ ಮನುಷ್ಯರಿಗೆಲ್ಲಾ ಉತ್ತಮನಾದ ನರನನ್ನೂ, ಸರಸ್ವತೀದೇವಿಯನ್ನೂ, ನಮಸ್ಕರಿಸಿದಮೇಲೆ ಜಯಸಂಜ್ಞಕವಾದ ಮಹಾಭಾರತವೆಂಬ ಇತಿಹಾಸವನ್ನು ಪ್ರಾರಂಭಿಸಬೇಕು.

ಮುನೀಂದ್ರನಿಂದ ಕೇಳಿದನು. ನಾನಲ್ಲಿ ಕೇಳಿದೆನು. ಅದನ್ನು ಹೇಳಲೇ" ಎಂದು ವಿಜ್ಞಾಪಿಸಲು; ಋಷಿಗಳು "ಭೃಗುವಂಶೋತ್ಪನ್ನನಾಗಿ, ವೇದಪಾರಂಗತನಾಗಿ, ನಮ್ಮ ಕುಲಪತಿಯಾದ ಶೌನಕನು ತಪಸ್ಸಮಾಧಿಯಲ್ಲಿರುವನು. ಆಮುನಿಯು ಬರುವತನಕ ವಿಶ್ರಮಿಸಿಕೊಂಡಿದ್ದು ಅವನು ಕೇಳಿದ್ದನ್ನು ಹೇಳಿರಿ" ಎಂದು ಹೇಳಿದರು.

ಅನಂತರ ಶೌನಕಮುನಿಯು ಬಂದು, ಸೂತ ಪೌರಾಣಿಕನನ್ನು ಬಹುಮಾನಿಸಿ, "ಎಲೈ, ಪೌರಾಣಿಕೋತ್ತಮನೇ! ನಮ್ಮ ಭಾರ್ಗವವಂಶವನ್ನು ಮೊದಲು ಕೇಳಲಿಚ್ಛೈಸುತ್ತೇನೆ" ಎಂದುಹೇಳಲು, ಆ ಮಾತಿಗೆ ಸೂತಪೌರಾಣಿಕನು ಇಂತೆಂದನು.

ಎಲೈ, ಕುಲಪತಿಯೂಧ ಶೌನಕನೇ! ಕೇಳು. ಪೂಜ್ಯರಾದ ಭೃಗುಋಷಿಯು ವರುಣನ ಯಜ್ಞಕುಂಡದಲ್ಲಿ ಬ್ರಹ್ಮದೇವರಿಂದು ತಪ್ಪನ್ನರಾದರು. ಅವರಿಗೆ ಪುಲೋಮೆಯಂಬಸತಿಯಿದ್ದಳು. ಅವಳು ಗರ್ಭಿಣಿಯಾಗಿರಲಾಗಿ; ಒಂದುದಿನ ಅಭಿಷೇಕಾರ್ಥವಾಗಿ ಮನೆಯಿಂದ ಅವರು ತೆರಳಲು; ಇತ್ತಲಾಸತಿಯು ಅಗ್ನಿಹೋತ್ರದ ಮನೆಗೆ ಬರಲು, ಆಸಮಯದಲ್ಲಿ ಪುಲೋಮನೆಂಬ ಒಬ್ಬ ರಾಕ್ಷಸನು ಪರ್ಣಶಾಲೆಗೆ ಹೋಗಿ, ಇವಳನ್ನು ನೋಡಿ ಆಶೆಪಟ್ಟವನಾಗಿ ಈಕೆ ಯಾರೆಂದು ವಿಚಾರಿಸೋಣವೆಂದರೆ ಯಾರನ್ನೂ ಕಾಣದೆ, ಅಲ್ಲಿದ್ದ ಯಜ್ಞೋಪುರುಷನನ್ನು—ಈಕೆ ಯಾರಹೆಂಡತಿಯೆಂದು ಕೇಳಲು, ಯಜ್ಞೋಪುರುಷನು ತನ್ನ ಮನಸ್ಸಿನಲ್ಲಿ—ನಿಜವನ್ನು ಹೇಳಿದರೆ ಬ್ರಾಹ್ಮಣನು ಶಪಿಸುವನು. ಅನೃತವನ್ನು ಹೇಳಿದಶೆ ಅನಂತದೋಷಬರುವದು. ಬ್ರಾಹ್ಮಣನ ಶಾಪವನ್ನಾದರೂ ಕಳೆದುಕೊಂಡೇನು. ಅನೃತವನಾಡಿದದೋಷವನ್ನು ಕಳೆದುಕೊಳ್ಳಲರಿಯನು. ಎಂದು ಚಿಂತಿಸಿ,— ಈಕೆಭೃಗು ಋಷಿಯ ಪತ್ನಿಯೆಂದು ನಿಜವನ್ನು ಹೇಳಲಾಗಿ, ಆರಾಕ್ಷಸನು ತನಿಗೆ ಬೇಕೆಂದು ಕೇಳಿದ ಹೆಣ್ಣೆಂದು ಎತ್ತಿಕೊಂಡು ಹೋದನು. ಆಗ ಈಕೆಯು ಬಹಳ ಮೊರೆಇಡಲಾಗಿ, ಅವಳ ಗರ್ಭದೊಳಗಿದ್ದ ಶಿಶುವು ಕೇಳಿ ಕೆಳಗೆ ಜಾರಿ ಬಿದ್ದು ಆ ರಾಕ್ಷಸನನ್ನು ಕ್ರೂರ ದೃಷ್ಟಿಯಿಂದ ನೋಡಲಾಗಿ, ಅಲ್ಲಿಯೇ ಆರಾಕ್ಷಸನು ಭಸ್ಮೀಕೃತನಾದನು. ಆತನು

ಗರ್ಭದಿಂದ ಜಾರಿ ಬಿದ್ದ ಕಾರಣ ಚ್ಯವನ ಋಷಿಯೆಂದು ಪ್ರಸಿದ್ಧನಾದನು. ಆಕೆಯು ಶಿಶುವನ್ನು ಎತ್ತಿಕೊಂಡು ಆಶ್ರಮಕ್ಕೆ ತಿರಿಗಿ ಬಂದಿರಲು; ಭೃಗುಋಷಿಯು ಅಹ್ನಿಕವನ್ನು ಪೂರೈಸಿಕೊಂಡುಬಂದು, ಈಕೆಯ ಆಕಾರವನ್ನು ನೋಡಿ, ಮಹಾದುಃಖಿತೆಯಾಗಿದ್ದದ್ದನ್ನು ಕಂಡು, ಜ್ಞಾನದೃಷ್ಟಿಯಿಂದ ಯಜ್ಞ ಪುರುಷನು ಇದನ್ನು ಹೇಳಿದನೆಂದು ತಿಳಿದು, ಯಜ್ಞೇಶ್ವರನಿಗೆ ಸರ್ವಭಕ್ಷಕನಾಗೆಂದು ಶಾಪವನ್ನುಕೊಟ್ಟನು. ಆಶಾಪಕ್ಕೆ ಯಜ್ಞಪುರುಷನು ಮನಸ್ಸಿನಲ್ಲಿ ನೊಂದು— ನಾನು ನಿಜವನ್ನು ಹೇಳಿದರೆ ಶಾಪವನ್ನು ಕೊಡುವದಕ್ಕೆ ಕಾರಣವೇನೆಂದು ಕೋಪವನ್ನು ತಾಳಿ, ತನ್ನ ರೂಪವನ್ನು ಅಡಗಿಸಿದನು. ಲೋಕದವರ ಹವ್ಯ ಕವ್ಯ ದೇವಪೂಜೆ ಧೂಪ ದೀಪ ಶಾಕಪಾಕವೇನೂ ಇಲ್ಲದಿರಲಾಗಿ, ಲೋಕವೆಲ್ಲಾ ಕಂಗೆಟ್ಟು ಬ್ರಹ್ಮದೇವರಿಗೆ ಮೊರೆಯಿಡಲು, ಬ್ರಹ್ಮದೇವರು ಯಜ್ಞೇಶ್ವರನನ್ನು ಕರೆಸಿ— ಬ್ರಾಹ್ಮಣ ಶಾಪವನ್ನು ನಾವ್ರತಿರಿಗಿಸಲರಿಯೆವು. ನೀನು ಸರ್ವಭಕ್ಷಕನಾಗಿದ್ದರೂ, ನೀನೇ ಲೋಕಕ್ಕೆಲ್ಲಾ ಪವಿತ್ರನೆಂದು ವರವನ್ನು ಕೊಟ್ಟು ಕಳುಹಲು, ಅಗ್ನಿಯು ಲೋಕದೊಳಗೆ ವ್ಯವರ್ತಿಸಿದನು.

ಆ ಚ್ಯವನಋಷಿಯಲ್ಲಿ ಪ್ರಮತಿ ಹುಟ್ಟಿದನು. ಪ್ರಮತಿಗೆ ಘೃತಾಚಿಯೆಂಬ ಅಪ್ಸರಸ್ತ್ರೀಯಲ್ಲಿ ರುರು ಹುಟ್ಟಿದನು. ರುರುವಿಗೆ ಪ್ರಮದ್ವರೆಯಲ್ಲಿ ನಿನ್ನ ತಂದೆಯಾದ ಶುನಕ ಹುಟ್ಟಿದನು. ಆ ರುರುವಿನ ಚರಿತ್ರೆಯನ್ನು ವಿಸ್ತಾರವಾಗಿ ಹೇಳುವೆನು ಕೇಳು.

ಪೂರ್ವದಲ್ಲಿ ಮೇನಕೆಯು ಗಂಧರ್ವರಾಜನಾದ ವಿಶ್ವಾವಸುವಿನಿಂದ ಗರ್ಭವನ್ನು ಧರಿಸಿ, ಆ ಗರ್ಭವನ್ನು ಸ್ಥೂಲಕೇಶಮಹರ್ಷಿಯ ಆಶ್ರಮದೆಡೆಯಲ್ಲಿ ನಿರ್ವ್ರಣೆಯಾಗಿ ಬಿಟ್ಟುಹೋದಳು. ಆ ಋಷಿಯು ಸ್ನಾನಕ್ಕೆ ಹೋಗುತ್ತಿರುವಾಗ, ಈ ಮೊಗುವನ್ನು ನಿರ್ಜನಪ್ರದೇಶದಲ್ಲಿ ಕಂಡು, ತನ್ನಾಶ್ರಮಕ್ಕೆ ತಂದು, ಸ್ತ್ರೀರುಗಳಿಗಲ್ಲಾ ಸುಂದರಳಾಗಿದ್ದದ್ದರಿಂದ ಪ್ರಮದ್ವರೆಯೆಂದು ಹೆಸರಿಟ್ಟು, ಪೋಷಿಸುತ್ತಾ ಇದ್ದನು. ಅನಂತರ ರುರುವು ಕುಲಶೀಲಸಂಪನ್ನೆಯಾದ ಈ ಪ್ರಮದ್ವರೆಯನ್ನು ಕಂಡು, ಅಭಿಲಾಷೆಯುಳ್ಳವನಾಗಿ, ವಿವಾಹವನ್ನು

ಮಾಡಿಕೊಂಡು ಸುಖದಿಂದ ಇರುತಿದ್ದನು. ಒಂದಾನೊಂದು ದಿನ ಸಖಿಗಳೊಂದಿಗೆ ಆಡುತ್ತಿರುವ ಈಕೆಯನ್ನು ಒಂದು ಸರ್ಪವು ಕಚ್ಚಿತು. ಅವಳು ಸರ್ಪದಷ್ಟಳಾಗಿ ಮರಣವನ್ನೈದಲಾಗಿ, ಆಬುಋಷಿಯು ಅರಣ್ಯದೊಳಗೆ ಹೋಗಿ, ಅತಿದುಃಖದಿಂದಳುತ್ತಿರಲು ಆಗ ಆಕಾಶವಾಣಿಯು — ಎಲೈ ವಿಪ್ರೋತ್ತಮನೆ! ಈಕೆಯ ಆಯುಸ್ಸು ಅಷ್ಟೆ. ಈಕೆ ಬದುಕುಬೇಕಾದರೆ ನಿನ್ನ ಆಯುಸ್ಸಿನೊಳಗೆ ಅರ್ಧವನ್ನು ಧಾರೆಯೆರೆ ಎಂದು ಹೇಳಲು, ಇವನು ಅರ್ಧಾಯುಸ್ಸನ್ನೆರದು ಸುಖದಿಂದ ಅವಳೊಂದಿಗೆ ಇದ್ದುಕೊಂಡು, ಅವಳನ್ನು ಸರ್ಪಕಚ್ಚಿತೆಂಬ ದ್ವೇಷದಿಂದ ಅರಣ್ಯಗಳಲ್ಲಿ ಇದ್ದ ಹುತ್ತುಗಳನ್ನು ಅಗೆದು ಅಲ್ಲಿ ಸರ್ಪಗಳ ಕಂಡರೆ ಕೊಲ್ಲುತ್ತಾ ಇದೇವರ್ತಮಾನವಾಗಿರುತ್ತಿದ್ದನು. ಒಂದಾನೊಂದು ದಿನ ಅವನು ಒಂದು ನೀರುಹಾವನ್ನು ಕಂಡು, ದಂಡವನ್ನೆತ್ತಿಕೊಂಡು ಹೊಡಿಯುವದಕ್ಕೆ ಹೋಗಲಾಗಿ, ಆ ಹಾವು — ನೀನು ಯಾಕೆ ನಂಶಜ್ಞೋದ ದೋಷವನ್ನುಹೊಂದುತ್ತೀಯೇ? ಬ್ರಾಹ್ಮಣನಿಗೆ ವೇದಧಾರಣವೇ ಮುಖ್ಯವಾದ ಧರ್ಮವು. ಕ್ಷತ್ರಿಯನಿಗೆ ದಂಡಧಾರಣವೂ ಪ್ರಜಾಪಾಲನೆಯೂ ಧರ್ಮವು. ಆದ್ದರಿಂದ ನೀನು ಈಹಿಂಸೆಯನ್ನು ಬಿಡು. ಕೇಳು ಪೂರ್ವದಲ್ಲಿ ಜನಮೇಜಯ ರಾಯನ ಯಜ್ಞದಲ್ಲಿ ತಾಯಿಯ ಶಾಪದಿಂದ ಸರ್ಪಗಳೆಲ್ಲಾ ನಾಶಹೊಂದುತಿದ್ದವು. ಆಗ ಅವುಗಳನ್ನು ವೇದಪಾರಂಗತನಾದ ಆಸ್ತಿಕನೆಂಬ ಬ್ರಾಹ್ಮಣಶ್ರೇಷ್ಠನು ರಕ್ಷಿಸಿದನು ಎಂದುಹೇಳಿತು. ಆ ಮಾತನ್ನು ಕೇಳಿ— ಹಾಗಾಗಲೆಂದು ಅವನು ದೊಣ್ಣೆಯನ್ನು ಬಿಸಾಡಿ, ಆ ಹಾವನ್ನು ಶಾಪಗ್ರಸ್ತನಾದ ಋಷಿಯಂದು ತಿಳಿದು — ನೀನು ತಿಳಿಸಿದ ಕಥೆಯನ್ನು ವಿಸ್ತಾರವಾಗಿ ಹೇಳೆಂದು ಕೇಳಲಾಗಿ; ನಿನ್ನ ತಂಬೆಯಿಂದ ತಿಳಿ ಎಂದು ಹೇಳಿ, ಶಾಪಗ್ರಸ್ತನಾಗಿ ಹಾವಿನದೇಹವನ್ನು ಧರಿಸಿದ್ದ ಆ ಋಷಿಯು ನಿಜರೂಪವನ್ನು ಹೊಂದಿ ಅಂತರ್ಧಾನನಾದನು.

ಅನಂತರ ರುರುವು ತಂದೆಯಾದ ಪ್ರಮತಿಯಿಂದ ಆವೃತ್ತಾಂತವೆಲ್ಲವನ್ನೂ ತಿಳಿದನು. ಎಂದು ಸೂತಪೌರಾಣಿಕನು ಶೌನಕ ಋಷಿಗೆ ಹೇಳಿದನು.

ಆವಾತನ್ನು ಕೇಳಿ ಶೌನಕಮುನಿಯು — ಎಲೈ ಪೌರಾಣಿಕಶ್ರೇಷ್ಠ! ಯಾಕೆ ಸರ್ಪಗಳು ತಾಯಿಯ ಶಾಪವನ್ನು ಹೊಂದಿದವು? ಯಾವ ಕಾರಣದಿಂದ ಜನಮೇಜಯ ರಾಯನು ಸರ್ಪಯಾಗವನ್ನು ಮಾಡಿದನು? ಸರ್ಪಗಳು ಹ್ಯಾಗೆ ಆಸ್ತೀಕನಿಂದ ರಕ್ಷಿಸಲ್ಪಟ್ಟವು? ಎಂದು ಕೇಳಲು, ಅದಕ್ಕೆ ಸೂತಪೌರಾಣಿಕನು—

ಅಯ್ಯಾ ಶೌನಕಮುನಿಯೇ ಕೇಳು—ಕಶ್ಯಪಬ್ರಹ್ಮರ್ಷೀಶ್ವರರಿಗೆ ದಕ್ಷಪ್ರಜಾಪತಿಯ ಹದಿಮೂರು ಹೆಣ್ಣು ಮಕ್ಕಳೂ ಹೆಂಡತಿಗಳಾದರು. ಅವರೊಳಗೆ ವಿನತೆಯೂ ಕದ್ರೂದೇವಿಯೂ ಮುಖ್ಯರು. ಕದ್ರೂದೇವಿಯು ಗಂಡನನ್ನು ಪ್ರಾರ್ಥಿಸಿ ಸಾವಿರ ಸರ್ಪಗಳನ್ನು ಪಡೆದಳು. ವಿನತೆಯು ಪ್ರಾರ್ಥಿಸಿ ಎರಡು ಮೊಟ್ಟೆಗಳನ್ನು ಪಡೆದಳು. ಕದ್ರೂದೇವಿಗೆ ಸಾವಿರಮಂದಿ ಮಕ್ಕಳು ಹುಟ್ಟಲಾಗಿ, ವಿನತೆಯು ಅಭ್ಯಾಸ್ರದಿಂದ ತಾನೇ ತನ್ನ ತೊಟ್ಟಿಯನ್ನು ಒಡೆಯಲು, ಅರುಣನು ಹೆಳವನಾಗಿ ಹುಟ್ಟಿದನು. ಅವನು— ತನ್ನನ್ನು, ಸಂಪೂರ್ಣಾವಯವಗಳು ಆಗುವ ಪರ್ಯಂತರ ತಡೆಯದೆ ತೊಟ್ಟಿಯನ್ನು ಬೇಗ ಒಡದು ಕೆಡಿಸಿದೆಯಾದ್ದರಿಂದ, ನೀನು ನಿನ್ನ ಸವತಿಯ ಮನೆಯಲ್ಲಿ ಐನೂರು ವರುಷ ದಾಸಿಯಾಗಿರು ಎಂದು ತಾಯಿಗೆ ಶಾಪವನ್ನು ಕೊಟ್ಟನು. ಅದನ್ನು ಕೇಳಿ ಈಕೆ ದುಃಖದಿಂದಿರಲಾಗಿ— ಮುಂದಣ ತೊಟ್ಟು ತನಗೆ ತಾನೇ ಒಡೆಯುವ ಪರ್ಯಂತರ ನೀನು ಸುಮ್ಮನೆ ಸಂರಕ್ಷಣೆಯನ್ನು ಮಾಡಿಕೊಂಡಿದ್ದರೆ ಅಲ್ಲಿ ಹುಟ್ಟುವ ಮಗನು ದೊಡ್ಡವನಾಗಿ, ನಿನಗೆ ಶಾಪವಿಮೋಚನೆಯನ್ನು ಮಾಡುವನು ಎಂದು ಹೇಳಿ, ಅರುಣನು ಸೂರ್ಯನ ರಥಕ್ಕೆ ಸಾರಥಿಯಾಗಿ ಹೋದನು. ಉಳಿದ ಒಂದುತೊಟ್ಟಿಯು ತನಗೆ ತಾನೇ ಒಡದು ಗರುತ್ಮಂತನಾಗಿ, ಹುಟ್ಟಿದನು.

ಒಂದಾನೊಂದು ದಿನ ವಿನತೆಯೂ ಕದ್ರೂದೇವಿಯೂ ಗಂಗಾತೀರಕ್ಕೆ ಹೋಗಿರಲು, ಅಲ್ಲಿ ಉಚ್ಚೈಃಶ್ರವಸ್ಸೆಂಬ ಇಂದ್ರನ ಕುದುರೆಯು ಮೇಯುತ್ತಿರಲಾಗಿ ವಿನತೆಯು ನೋಡಿ, ಈಕುದುರೆಯು ಎಷ್ಟು ಬಿಳಿಪಾಗಿದೆಯಂದು ಆಶ್ಚರ್ಯಪಡಲು, ಕದ್ರೂದೇವಿಯು ಕೇಳಿ—

ನೋಡು! ಅದರ ಬಾಲಕಪ್ಪಾಗಿದೆ ಎಂದಳು. ಅದಕ್ಕೆ ಅವಳು— ಉಚ್ಚೈಶ್ರವಸ್ಸಿಗೆ ಕಪ್ಪುಂಟೆ! ನೋಡುವ ಬಾ ಎನಲಾಗಿ, ಕದ್ರೂದೇವಿಯು — ಇಂದು ಬೇಡ, ನಾಳೆ ನೋಡುವ, ನೀನೂ ನಾನೂ ಪಂಥವ ಮಾಡಿಕೊಳ್ಳೋಣ. ಅದರಬಾಲದಲ್ಲಿ ಕಪ್ಪು ಇಲ್ಲದಿದ್ದರೆ ನಾನು ನಿನ್ನ ಮನೆಯಲ್ಲಿ ದಾಸಿಯಾಗಿರುವೆನು. ಕಪ್ಪಿದ್ದರೆ ನೀನು ನನ್ನಮನೆಯಲ್ಲಿ ದಾಸಿಯಾಗು ಎಂದು, ಇಬ್ಬರೂ ಶಪಥವಂ ಮಾಡಿಕೊಂಡು ಮನಗೆ ಬರಲು, ಆಕದ್ರೂದೇವಿಯು ತನ್ನ ಸಹೋದರ ಪುತ್ರರಯ ಹೊಡಿಕೊಂಡು ದುಃಖದಿಂದ ಮಲಗಿರಲು, ಮಕ್ಕಳಾದ ಸಾವಿರ ಮಂದಿ ಸರ್ಪಗಳು ಬಂದು, ನೀನು ಏನು ಕಾರಣ ದುಃಖಪಡುತ್ತೀಯೆ? ಎಂದು ಕೇಳಲು, ಅವಳು—ಕಪ್ಪಿಲ್ಲದ ಉಚ್ಚೈಶ್ರವಸ್ಸಿಗೆ ಕಪ್ಪುಂಟೆಂದು ಹೇಳಿ ಸವತಿಯ ಸಂಗಡ ಪಂಥವನ್ನು ಮಾಡಿಕೊಂಡೆನು. ಆದ್ದರಿಂದ ನೀವುಗಳು ಹೋಗಿ ಆ ಕುದುರೆಯ ಬಾಲದಲ್ಲಿ ಕೇರಿಕೊಳ್ಳಿರಿ ಎಂದು ಆಜ್ಞಾಪಿಸಲು, ಆಗ ಸರ್ಪಗಳು — ನೀನು ಸವತಿಯ ಸಂಗಡ ಹೀಗೆ ಪಂಥವನ್ನು ಮಾಡಬಹುದೇ! ಎಂದು ನಿರಾಕರಿಸಲಾಗಿ, ಮಕ್ಕಳಮೇಲೆ ಕೋಪಿಸಿಕೊಂಡು— ನೀವು ಜನಮೇಜಯನು ಮಾಡುವ ಯಜ್ಞದಲ್ಲಿ ಸತ್ತುಹೋಗಿರಿ ಎಂದು ಶಾಪವನ್ನು ಕೊಟ್ಟಳು. ಅನಂತರ ತಾಯಿಯ ಶಾಪಕ್ಕೆ ತಲ್ಲಣಿಸಿ ಕರ್ಕೋಟಕನೆಂಬ ಸರ್ಪನು— ನಾನು ಕಪ್ಪು ಮಾಡಿಕೊಡುವೆನು ಎಂದು ಹೇಳಿ, ತನ್ನ ಜೊತೇಸರ್ಪಗಳನ್ನೆಲ್ಲಾ ಕರದುಕೊಂಡು ಹೋಗಿ, ಆ ಉಚ್ಚೈಶ್ರವಸ್ಸಿನ ಬಾಲದಲ್ಲಿ ಕೇರಿತು. ಮರುದಿವಸ ತಮ್ಮ ತಮ್ಮ ಪಂಥವನ್ನು ಗೆಲ್ಲಬೇಕೆಂದು ನಿಶ್ಚೈಸಿ, ತಾವಿಬ್ಬರೇ ಹೋಗಿ, ಆ ಕುದುರೆಯನ್ನು ಮೊದಲು ಕಂಡಸ್ಥಳಕ್ಕೆ ಬಂದು, ಅಲ್ಲಿ ಕಾಣದೆ, ಅಲ್ಲಲ್ಲಿ ಸಂಚರಿಸುತ್ತಾ, ಸಮುದ್ರದ ದಡದಲ್ಲಿ ಅದನ್ನು ಕಂಡರು. ಅದರ ಬಾಲವು ಕಪ್ಪಾಗಿ ತೋರಲಾಗಿ, ವಿನತೆಯು ಬಹಳ ವ್ಯಸನದಿಂದ ಕದ್ರೂ ದೇವಿಯ ಮನೆಯ ದಾಸಿಯಾದಳು.

ಆ ವಿನತೆಯ ಮಗನಾದ ಗರುಡನು ಆಕದ್ರೂದೇವಿಯ ವಶನಾಗಿ ಅವಳು ಹೇಳಿದ ಕೆಲಸವನ್ನು ಮಾಡಿಕೊಂಡಿರಲು, ಬಂದಾನೊಂದು ದಿನ ಕದ್ರೂದೇವಿಯು— ನನ್ನ ಮಕ್ಕಳನ್ನು ಎಲ್ಲಾದರೂ ಆಡಿಸುವ

ಕ್ಕಾಗಿ ನಿನ್ನ ಮಗನಿಗೆ ಹೇಳಿಂದು ವಿನತೆಗೆ ಆಜ್ಞಾಪಿಸಲು, ಅವಳು ಗರುಡನಿಗೆ ಹಾಗೆಯೇ ಹೇಳಿದಳು. ಆ ಗರುಡನು ಸರ್ಪಗಳನ್ನು ತಾಯಿಯ ಆಜ್ಞಾನುಸಾರವಾಗಿ ಬೆನ್ನಿನಮೇಲೆ ಏರಿಸಿಕೊಂಡು, ಸೂರ್ಯನಪರ್ಯಂತರ ನೆಗದು ಹೋಗಲಾಗಿ, ಸೂರ್ಯಪ್ರಭೆಯನ್ನು ತಾಳಲಾರದೆ ಸರ್ಪಗಳೆಲ್ಲಾ ಬಿದ್ದು ಮೂರ್ಛೆ ಹೊಂದಿದ್ದಕ್ಕೆ ಕದ್ರೂದೇವಿಯು ಕೋಪಿಸಿಕೊಂಡಳು. ಅನಂತರ ಗರುಡನು ವ್ಯಸನಪಟ್ಟ ತಾಯಿಯು ಬಳಿಗೆ ಬಂದು, ಈವೃತ್ತಾಂತವನ್ನೆಲ್ಲಾ ಹೇಳಿ— ನಾವು ಹಿರಿಯವರು ಹೇಳಿದಹಾಗೆ ಯಾಕೆ ಮಾಡಿಕೊಂಡಿರೋಣ? ಇವರು ಏನುಕೊಟ್ಟರೆ ನಮ್ಮ ಶರೆಯನ್ನು ಬಿಡುವರು. ಕೇಳು ಎನ್ನಲಾಗಿ, ವಿನತೆಯು ಕದ್ರೂದೇವಿಯು ಬಳಿಗೆ ಹೋಗಿ, ನಿಮಗೆ ನಾವೇನು ಕೊಟ್ಟರೆ ನಮ್ಮ ಶರೆಯನ್ನು ಬಿಡುತ್ತೀರಿ? ಎಂದು ಕೇಳಲು, ಅವಳು— ಅಮೃತವನ್ನು ತಂದು ಕೊಟ್ಟರೆ ಬಿಡುತ್ತೇವೆ ಎನಲು, ಆ ಮಾತನ್ನು ವಿನತೆಯು ಗರುತ್ಮಂತನೊಡನೆ ಹೇಳಲು— ಗರುಡನು ಹಾಗೆ ಮಾಡುವೆನೆಂದು ತಾಯಿಗೆ ನಮಸ್ಕಾರಮಾಡಿ ಅಮೃತವನ್ನು ತರಹೊರಟು— ತಾಯೇ! ನನಗೆ ಆಹಾರವೇನೆಂದು ಕೇಳಲಾಗಿ, ಆಕೆಯು— ಸಮುದ್ರದ ಮಧ್ಯದಲ್ಲಿ ದುಷ್ಟರಾದ ನಿಷಾದರಿರುವರು, ಅವರನ್ನು ನೀನು ಭಕ್ಷಿಸು. ಅಲ್ಲಿ ಬ್ರಾಹ್ಮಣರು ಇದ್ದರೆ ಬಿಟ್ಟು ಬಿಡು ಎಂದಳು. ಗರುಡನು ಆ ವಾಕ್ಯವನ್ನು ಕೇಳಿ— ಅಮ್ಮ ಮಂದಿ ಜನರೊಳಗೆ ಬ್ರಾಹ್ಮಣರು ಎಂಬುವದನ್ನು ತಿಳಿಯುವ ರೀತಿ ಹ್ಯಾಗೆ? ಎಂದು ಕೇಳಲಾಗಿ— ಬ್ರಾಹ್ಮಣನನ್ನು ನುಂಗಿದರೆ ಗುಪಲಲ್ಲಿ ಉರಿಯುವದು ಎಂದು ಹೇಳಲು, ಹಾಗೆ ಆಗಲೆಂದು ಸಮುದ್ರಮಧ್ಯಕ್ಕೆ ಬಂದು, ಅಲ್ಲಿದ್ದ ನಿಷಾದರನ್ನು ನುಂಗಿದನು, ಆ ಸಮಯದಲ್ಲಿ ಅವನ ಕೊರಳಲ್ಲಿ ಅಗ್ನಿ ಜ್ವಾಲೆಯಹಾಗೆ ಉರಿಯುತ್ತಾ ನುಂಗುವದಕ್ಕಾಗದೆ ಇರುವ ಬ್ರಾಹ್ಮಣನನ್ನು ಕಂಡು— ನೀನು ಯಾರು? ಎಂದು ಕೇಳಲಾಗಿ,— ನಾನು ಬ್ರಾಹ್ಮಣನು: ನಿಷಾದಸ್ತ್ರಿಯನ್ನು ಮದುವೆಯಾಗಿ ಮಕ್ಕಳನ್ನು ಪಡೆದಿರುವೆನು. ನೀನು ದಯವಿಟ್ಟು ಪುತ್ರ ಕಳತ್ರರೊಂದಿಗೆ ನನ್ನನ್ನು ಬಿಡ್ಯೆಯ್ಯಾ ಎಂದು ಬೇಡಿಕೊಳ್ಳಲು—ನೀನು ನಿನ್ನ ಸ್ತ್ರೀಪುತ್ರರೊಡನೆ ಹೊರಡು ಎಂದು

ಹೇಳಿ ಅವರನ್ನು ಉಗುಳಿ, ಮಿಕ್ಕ ಕಿರಾತರನ್ನೆಲ್ಲಾ ನುಂಗಿದರೂ ಹಸಿವು ಅಡಗದೆ ಇದ್ದದ್ದರಿಂದ ತಂದೆಯಾದ ಕಶ್ಯಪರ ಬಳಿಗೆಹೋಗಿ— ನನಗೆ ಆಹಾರವನ್ನು ಕರುಣಿಸಬೇಕು ಎಂದು ಕೇಳಲಾಗಿ, ಅವರು ಸುಪ್ರತೀಕ ವಿಭಾವಸುಗಳೆಂಬ ಇಬ್ಬರು ದಾಯಾದರು ಪಿತ್ರಾರ್ಜಿತಧನನಿಮಿತ್ತವಾಗಿ ಹೊಡದಾಡಿ ಶಾಪಗ್ರಸ್ತರಾಗಿ ಒಬ್ಬನು ಹನ್ನೆರಡು ಯೋಜನ ಪ್ರಮಾಣದ ಆಮೆಯಾಗಿಯೂ ಮತ್ತೊಬ್ಬನು ಹನ್ನೆರಡು ಯೋಜನ ಪ್ರಮಾಣದ ಆನೆಯಾಗಿಯೂ ಒಂದು ಸರಸ್ಸಿನಲ್ಲಿ ಇದ್ದುಕೊಂಡು ನಿತ್ಯವೂ ಜಗಳವಾಡುತ್ತಲಿರುವರು; ಅವರನ್ನು ಭಕ್ಷಿಸು ಎಂದು ಹೇಳಲು, ಅವನು ಅಲ್ಲಿಗೆ ಹೋಗಿ ಅವುಗಳನ್ನು ಒಂದೊಂದು ಕೈಯಲ್ಲಿ ಹಿಡಿದುಕೊಂಡು, ಅಂತರಿಕ್ಷಕ್ಕೆ ಹಾರಿ, ಭಕ್ಷಿಸುವದಕ್ಕೆ ಸ್ಥಳವನ್ನು ನೋಡಬೇಕೆಂದು ಅಲ್ಲಲ್ಲಿ ಸುತ್ತುತ್ತಾ, ಸಮುದ್ರತೀರದಲ್ಲಿದ್ದ ಕೋಹಿಣೀವೃಕ್ಷದ ನೂರು ಯೋಜನಪ್ರಮಾಣದ ಒಂದು ಕೊಂಬೆಯನ್ನು ಕಂಡು, ಅದರಮೇಲೆ ಕುಳಿತನು. ಅಲ್ಲಿ ವಾಲಿಖಿಲ್ಯರೆಂಬ ಋಷಿಗಳು ತಲೆ ಕೆಳಗಾಗಿ ತಪಸ್ಸನ್ನು ಮಾಡುತ್ತಿದ್ದರು. ಆ ಗರುಡನು ಆ ಕೊಂಬೆಯ ಮೇಲೆ ಕುಳಿತುಕೊಂಡದ್ದರಿಂದ ಆ ಕೊಂಬೆಯು ಮುರಿಯಲಾಗಿ, ಆ ಕೊಂಬೆಯ ಕೆಳಗೆ— ನೂರಾರು ಮಂದಿ ಋಷಿಗಳು ಸತ್ತುಹೋಗುವರೆಂದು ಅದನ್ನು ಬಾಯಲ್ಲಿ ಕಚ್ಚಿಕೊಂಡು, ಆ ಗಜಕಚ್ಛಪಗಳನ್ನು ಕಾಲಲ್ಲಿರಿಸಿಕೊಂಡು, ತಂದೆಯಾದ ಕಶ್ಯಪರ ಬಳಿಗೆ ಬಂದು, ಈ ವೃತ್ತಾಂತವನ್ನು ಹೇಳಲೂ, ಕಶ್ಯಪರು ಭಯಪಟ್ಟ ವಾಲಿಖಿಲ್ಯಾದಿ ಋಷಿಗಳಿಗೆ ನಮಸ್ಕಾರ ಮಾಡಿ— ನನ್ನ ಮಗನ ಅಪರಾಧವನ್ನು ಕ್ಷಮಿಸಿ ಎಂದು ಸಂತವಿಸಲು, ಅವರು ಹಿಮವತ್ಪರ್ವತದ ಗುಹೆಗೆ ತೆರಳಿದರು. ಅನಂತರ ಗರುಡನು— ಸ್ವಾಮಿ, ಈಕೊಂಬೆಯನ್ನೆಲ್ಲಿ ಬಿಸಾಡಲಿ? ಈಗಜಕಚ್ಛಪಗಳನ್ನು ಎಲ್ಲಿ ಭಕ್ಷಿಸಲಿ? ಎಂದು ಕೇಳಿದ್ದಕ್ಕೆ, ಕಶ್ಯಪರು ಈ ಗಿರಿಯ ಉತ್ತರಭಾಗದಲ್ಲಿ ನಿರ್ಜನಪ್ರದೇಶವಿರುವದು. ಕೊಂಬೆಯನ್ನು ಅಲ್ಲಿ ಬಿಸಾಡು. ಆ ಗಿರಿಯ ಶಿಖರದಲ್ಲಿಯೇ ನಿಸ್ತೀರ್ಣವಾದ ಒಂದು ಶಿಲೆಯಿರುವದು. ಅಲ್ಲಿ ಕುಳಿತು ಇವುಗಳನ್ನು ಭಕ್ಷಿಸು ಎಂದು ಹೇಳಿದರು. ಅದಕ್ಕೆ ಗರುಡನು— ಹಾಗೆಯೇ ಆಗಲಿ ಎಂದು

ಅಲ್ಲಿಗೆ ಹೋಗಿ ಮೊದಲ ಕೊಂಬೆಯನ್ನು ಬಿಸಾಡಿ, ಗಜಕಚ್ಛಪಗಳನ್ನು ಭಕ್ಷಿಸಿ, ತಂದೆಯ ಬಳಿಗೆ ಬಂದು—ನಾನು ಸಂತುಷ್ಟನಾದೆನು. ನಮ್ಮ ತಾಯಿಯ ದಾಸ್ಯವನ್ನು ಬಿಡಿಸುವ ನಿಮಿತ್ತ ಅಮೃತವನ್ನು ತರಹೋಗುತ್ತೇನೆಂದು ವಿಜ್ಞಾಪಿಸಿ, ಅವರ ಅನುಗ್ರಹವನ್ನು ಸ್ವೀಕರಿಸಿ, ಅಲ್ಲಿಂದ ಸ್ವರ್ಗಕ್ಕೆ ಹೋಗಿ, ಅಮೃತಕಲಶದ ಸುತ್ತಲೂ ಕಾದುಕೊಂಡಿದ್ದ ಗಂಧರ್ವರೊಡೆ ಯುದ್ಧಮಾಡಿ, ಗೆದ್ದು, ಸಮುದ್ರದ ಉದಕವನ್ನು ಮುಕ್ಕಳಿಸಿ, ಅಲ್ಲಿ ಸುತ್ತಲೂ ಉರಿಯುತ್ತಿದ್ದ ಅಗ್ನಿಯನ್ನು ಅಳಿಸಿ, ಮುಂದಕ್ಕೆ ಹೊರಟು, ಅಗ್ನಿಸೂರ್ಯಪ್ರಕಾಶವಾಗಿ ಸದಾ ತಿರುಗುತ್ತಿದ್ದ ಚಕ್ರವನ್ನು ಸೂಕ್ಷ್ಮರೂಪದಿಂದ ಪ್ರವೇಶಿಸಿ, ಆಚಕ್ರದ ಕೆಳಗೆ ಕಣ್ಣುಗಳಿಂದ ವಿಷವನ್ನು ಕಾರುತ್ತಾ ಇರುವ ಸರ್ಪಗಳ ನಿರ್ನಿಮೇಷರಹಿತವಾದ ಕಣ್ಣುಗಳನ್ನು ತನ್ನ ರೆಕ್ಕೆಯ ಘಾಳಿಯಿಂದೆಬ್ಬಿಸಿದ ಧೂಳಿಯಿಂದ ಮುಚ್ಚಿ, ಅವುಗಳನ್ನು ಅಲ್ಲಿಯೇ ಕೊಂದು, ಅಮೃತಕಲಶವನ್ನು ಹೊರಕ್ಕೆ ತೆಗೆದುಕೊಂಡು ಬರುತ್ತಿರುವ ಸಮಯದಲ್ಲಿ, ಅಲ್ಲಿಗೆ ನಾರಾಯಣನು ಬಂದು, ಇವನ ಪ್ರತಾಪಕ್ಕೆ ಮೆಚ್ಚಿದವನಾಗಿ— ವರವನ್ನು ಬೇಡು ಎನಲಾಗಿ,— ಅವನು ಸ್ವಾಮಿಯ ವಾಹನವಾಗಿದ್ದೇನೆಂದು ಕೇಳಿಕೊಳ್ಳಲು, ಹಾಗೆಯೇ ಆಗಲೆಂದು ವರವನ್ನು ಕೊಟ್ಟನು.

ಅನಂತರ ದೇವೇಂದ್ರನು— ಅಮೃತವನ್ನು ತೆಗೆದುಕೊಂಡು ಹೋಗುವನು ಎಂದು ಕೋಪದಿಂದ ಚಿನ್ನಟ್ಟ, ವಜ್ರಾಯುಧದಿಂದ ಇವನನ್ನು ಹೊಡೆಯಲು, ಅದರಿಂದೇನೂ ಇವನಿಗೆ ಘಾಯವಾಗದೆ ಇರುವದನ್ನು ಕಂಡು, ದೇವೇಂದ್ರನು ಆಶ್ಚರ್ಯಪಟ್ಟು— ನಿನ್ನ ಪಕ್ಷವು ವಜ್ರಾಯುಧಕ್ಕೆ ಹರಿಯದಾದ್ದರಿಂದ ನಿನಗೆ ಸುವರ್ಣನೆಂಬ ಹೆಸರಾಗಲಿ. ನಿನ್ನ ಸಖ್ಯವನ್ನು ನಾನು ಬಯಸುವೆನು. ನೀನು ಅಮೃತವನ್ನು ಇತರರಿಗೆ ಕೊಟ್ಟು, ಅವರಿಂದ ನಮಗೆ ಹಿಂಸೆ ತರಬೇಡವೆಂದು ಬೇಡಿಕೊಳ್ಳಲು— ಏನೋ ಒಂದು ಕಾರ್ಯನಿಮಿತ್ತದಿಂದ ಕದ್ರೂ ದೇವಿಗೆ ಕೊಡುವೆನು. ಅದನ್ನು ಒಂದುಪ್ರದೇಶದಲ್ಲಿ ಇರಿಸುವೆನು. ನಿನಗೆ ತೆಗೆದುಕೊಂಡು ಹೋಗುವದು ಸಂಮತವೆ? ಎಂದು ಹೇಳಲು, ಇಂದ್ರನು ಬಹಳ ಸಂತುಷ್ಟನಾಗಿ—ಒಂದು

ವರವನ್ನು ಬೇಡು ಎನಲಾಗಿ— ಸರ್ಪಭಕ್ಷಕನಾಗುವಹಾಗೆ ನನಗೆ ವರವನ್ನು ಕೊಡು ಎನಲು, ಇಂದ್ರನು ಅವನು ಕೇಳಿದವರವನ್ನು ಕೊಟ್ಟು— ಅಮೃತವನ್ನು ಸರ್ಪಗಳಿಗೆ ಕೊಟ್ಟು ಕೆಡಿಸಬೇಡ. ಇವನ್ನು ತೆಗೆದುಕೊಂಡು ಹೋಗಿ, ಸರ್ಪಗಳಿಗೆ ಕೊಟ್ಟು, "ಇದು ದೇವತೆಗಳವಸ್ತು. ಸ್ನಾನವನ್ನು ಮಾಡಿ, ಶುಚಿಭೂತರಾಗಿ, ತೆಗೆದುಕೊಳ್ಳಿರೀ" ಎಂದು ಸರ್ಪಗಳಿಗೆ ಹೇಳು ಎಂದು ಗರುಡನನ್ನು ಜೀವಿಕೊಳ್ಳಲು—ಹಾಗೆಯೇ ಆಗಲೆಂದು ಅಮೃತಕಲಶವನ್ನು ತಂದು, ಕದ್ರೂದೇವಿಗೆ ಕೊಟ್ಟು,— ಶುಚಿಯಾಗಿ ತೆಗೆದುಕೊಳ್ಳಿರೀ ಎಂದು ಹೇಳಿ, ದರ್ಭೆಯನ್ನು ಹಾಸಿ, ಅದರಮೇಲೆ ಕಲಶವನ್ನಿರಿಸಿ, ತಮ್ಮ ತಾಯಿಯ ಕೈಯನ್ನು ಬಿಡಿಸಿಕೊಂಡು ಹೋದನು.

ಆಮೇಲೆ ಸರ್ಪಗಳು,—ತಾವು ಸ್ನಾನವನ್ನು ಮಾಡಿ ಬರುವೆನ್ನು ಎಂದು ನಮಿಗೆ ಎಲ್ಲವೂ ಹೋಗಲಾಗಿ, ದೇವೇಂದ್ರನು ಯಾರೂ ಇಲ್ಲದ ಸಮಯವನ್ನರಿತು, ಅಕಲಶವನ್ನು ಎತ್ತಿಕೊಂಡು ಹೋದನು. ಅವುಗಳು ಸ್ನಾನವನ್ನು ಮಾಡಿ ಬಂದು, ಅಮೃತವಾನ ಮಾಡುತ್ತೀವೆ ಎಂದು ನೋಡಲಾಗಿ, ಕಲಶವನ್ನು ಕಾಣದೆ, ಹಾಸಿದ್ದ ದರ್ಭೆಯನ್ನು ನೆಕ್ಕಲು, ನಾಲಿಗೆ ನೀಳ ಎರಡುಜಿಹ್ವೆಯಾಯಿತು. ಅವರ್ಗಳನ್ನು ನೆಕ್ಕಿದಕಾರಣ ಸರ್ಪಗಳಿಗೆ ಸಾವಿರವದುವ ಆಯುಷ್ಯವಾಯಿತು, ಮತ್ತು ದ್ವಿಜಿಹ್ವಗಳೆಂಬ ಜೆಸರೂ ಬಂತು.

ಅನಂತರ ಎಲ್ಲಾ ಸರ್ಪಗಳೂ ಕೂಡಿ ಪರಸ್ಪರ ವಿಚಾರಮಾಡಿಕೊಂಡು, ಬ್ರಹ್ಮದೇವರ ಓಲಗಕ್ಕೆ ಹೋಗಿ, ಆ ಸಭೆಯಲ್ಲಿ— ಪೆತ್ತ ಮಕ್ಕಳಿಗೆ ತಾಯಿ ಶಾಪಕೊಡುವದುಂಟೇ! ಎಂದು ಬ್ರಹ್ಮದೇವರಿಗೆ ವಿನ್ನವವನ್ನು ಮಾಡಲಾಗಿ, ಬ್ರಹ್ಮದೇವರು— ಯಾಯಾವರ ಮಾತಿನಲ್ಲಿ ಜಿತೇಂದ್ರಿಯನಾದ ಜರತ್ಕಾರುವೆಂಬ ಬಬ್ಬ ಮುನಿಯು ಹುಟ್ಟುವನು. ಆತನಿಂದ ಜರತ್ಕಾರುವೆಯಂಬ ನಿಮ್ಮ ವಾಸುಕಿಯ ತಂಗಿಯಲ್ಲಿ ಆಸ್ತೀಕನೆಂಬ ಒಬ್ಬ ಬ್ರಾಹ್ಮಣಶ್ರೇಷ್ಠನು ಹುಟ್ಟುವನು. ಅವನು ಜನಮೇಜಯರಾಯನ ಯಜ್ಞದಲ್ಲಿ ಧರ್ಮಬುದ್ಧಿಯು ನಿಮ್ಮ ಕೆಲವುಸರ್ಪಗಳನ್ನು ಬದುಕಿಸುವನು ಎಂದು ನಿರೂಪವನ್ನು ಕೊಡಲು, ವಾಸುಕಿಯು ಪ್ರಜಾಪತಿಮುಖನಾದ ಬ್ರಹ್ಮನ ವಾಕ್ಯವನ್ನು ಕೇಳಿ,

ಇತರಸರ್ಪಗಳನ್ನು ಕುರಿತು— ಎಲೈ ಸರ್ಪಗಳಿರಾ! ಯಾವಾಗ ಜರತ್ಕಾರುವೆಂಬ ಋಷಿಯು ಪತ್ನಿಯನ್ನು ಅಪೇಕ್ಷಿಸುವನೋ, ಆ ಸ್ತ್ರೀಯನ್ನೇ ಬಂದು ನನಗೆ ತಿಳಿಸಿರಿ. ಅದರಿಂದ ನಮಗೆ ಶ್ರೇಯಸ್ಸುಂಟಾಗುವದು ಎಂದು ಹೇಳಲು, ಸರ್ಪಗಳೆಲ್ಲಾ ಸಂತೋಷದಿಂದ ಹೊರಟುಹೋದವು.

ಇತ್ತಲು, ಬಹಳಕಾಲ ಕಳೆದಮೇಲೆ ಜರತ್ಕಾರುವೆಂಬ ಋಷೀಶ್ವರನು ಬ್ರಹ್ಮಚರ್ಯವ್ರತದಲ್ಲಿ ತಪಸ್ಸು ಮಾಡಿಕೊಂಡು ಕಾಲವನ್ನು ಕಳೆಯುತ್ತಿರಲು, ಒಂದಾನೊಂದುದಿನ ಫಲಪುಷ್ಪವನ್ನು ತರುವೆನೆಂದು ಅರಣ್ಯದೊಳಗೆ ಹೋಗಲು, ಒಂದು ಮಾಷಿಕದ ಬಿಲದೊಳಗೆ ಗರಿಕೆಯನ್ನು ಹಿಡಿದುಕೊಂಡು ಕೆಲವರು ಅಧೋಮುಖವಾಗಿ ಜೋಲಾಡುತ್ತಿರುವದನ್ನು ಕಂಡು, ಇದೊಂದು ಆಶ್ಚರ್ಯವತಪಸ್ಸು! ಇವರನ್ನು ಕೇಳಬೇಕೆಂದು,—ನೀವು ಈಪ್ರಕಾರದಲ್ಲಿ ಯಾತಕ್ಕಇದ್ದೀರೀ? ಎಂದು ಕೇಳಲಾಗಿ, ಅವರು ಇವನನ್ನು ಅರಿತು, — ನಮ್ಮ ವಂಶದಲ್ಲಿ ಜರತ್ಕಾರುವೆಂಬ ಪಾವಕಕರ್ಮನು ಹುಟ್ಟಿರುವನು. ಅವನು ವಿವಾಹವನೊಲ್ಲದೆ ಸಂತಾನವ ಪಡೆಯದೆ ಇರುವದರಿಂದ ನಾವು ಅಧೋಗತಿಯಾಗಿ ಹೋಗುತ್ತಾ ಇದ್ದೇವೆ. ಅವನನ್ನು ಕಂಡರೆ ನಾವು ಹೀಗಿದ್ದೇವೆಂದು ಹೇಳಿದರೆ ನಿಮ್ಮ ಮಾತನ್ನು ಕೇಳಿ ಆತನು ಸಂತಾನವನ್ನು ಪಡೆದರೆ ನಮಗೆ ಊರ್ಧ್ವಗತಿಯುಂಟಾಹೀತು ಎಂದು ಹೇಳಲಾಗಿ, ಅವನು— ತಾನೇ ಜರತ್ಕಾರುವೆಂದು ಹೇಳಿದನು. ಆವಾಕ್ಯವನ್ನು ಕೇಳಿ ಅವರು — ಆದರೆ, ವಿವಾಹವಾಗಿ ಸಂತಾನವನ್ನು ಪಡೆ. ಅಲ್ಲವೇ, ನಮಗೆ ಅಧೋಗತಿಯುಂಟಾಗುತ್ತದೆ. ನಾವು ನಿನ್ನ ಪಿತೃ ಪಿತಾಮಹ ಪ್ರಪಿತಾಮಹರು. ನಮ್ಮನ್ನು ಹೀಗೆ ಕೆಡಿಸಬೇಡ ಎಂದು ಹೇಳಲಾಗಿ,— ನನಗೆ ಬ್ರಹ್ಮಚರ್ಯವ್ರತವೇ ಪರಿಣಾಮವಾಗಿ ಇದ್ದೀತು, ಹೆಸರಿನ ಸ್ತ್ರೀಯು ಇದ್ದರೆ ವಿವಾಹವಾಗುವೆನು. ಇಲ್ಲದಿದ್ದರೆ ಒಲ್ಲೆನು. ಮತ್ತು ನಾನು ಕನ್ಯಾರ್ಥಿಯಾಗಿ ಎಲ್ಲಿಗೂ ಹೋಗುವದಿಲ್ಲ; ನನಗೆ ಇಷ್ಟಬಂದಾಗ ಯಾರಾದರು ಕನ್ನಿಕೆಯನ್ನು ತಂದುಕೊಟ್ಟರೆ ವಿವಾಹವಾಗುವೆನು. ಇಲ್ಲದಿದ್ದರೆ ಒಲ್ಲೆನು ಎಂದು ಹೇಳಲು, ಅವರು—

ಹಾಗೆಯೇ ಮಾಡು ಎಂದರು. ಈಸುದ್ದಿಯನ್ನು ಪಾತಾಳಲೋಕದಲ್ಲಿ ಸರ್ಪರಾಜನಾದ ವಾಸುಕಿಯು ಕೇಳಿ, ತನ್ನ ತಂಗಿಯನ್ನು ಭೂಲೋಕಕ್ಕೆ ತಂದು, ಜರತ್ಕಾರುವನ್ನು ಕುರಿತು— ಈಕೆ ನಿನ್ನ ಅರಸಿ, ನಿನ್ನ ಹೆಸರುಳ್ಳವಳು. ಈಕೆಯನ್ನು ವಿವಾಹವಾಗು ಎಂದು ಕೇಳಿಕೊಳ್ಳಲಾಗಿ, ಆತನು ವಿವಾಹವಾದನು. ಇತ್ತಲಾ ಅನನು ಆಕೆಯ ಸಂಗಡ— ನೀನು ನನಗೆ ಅವಮಾನವಮಾಡಿದರೆ ನಿನ್ನನ್ನು ಬಿಟ್ಟು ಹೋಗುವೆನೆಂದು ಕಟ್ಟುವಮಾಡಿ, ಅವಳನ್ನು ವರಿಸಿ ಕೆಲವುದಿನವಿರಲಾಗಿ, ಅವಳು ಗರ್ಭಿಣಿಯಾದಳು. ಒಂದಾನೊಂದು ದಿನದಲ್ಲಿ ಆ ಜರತ್ಕಾರುವು ತನ್ನ ಪತ್ನಿಯ ತೊಡೆಯಮೇಲೆ ಮಲಗಿರಲು, ಸೂರ್ಯಾಸ್ತಮಯವಾಗಲಾಗಿ, ಎಲ್ಲಾ ಋಷಿಗಳು ಅನುಷ್ಠಾನಕ್ಕೆ ಹೋಗುವದನ್ನು ಕಂಡು, ಸಂಧ್ಯಾಕಾಲದಲ್ಲಿ ತನ್ನ ಪತಿಯು ಮಲಗಿ ಇದ್ದರೆ ಆಯುಷ್ಯಕ್ಷಯವಾಹೀತು, ತನಗೆ ವೈಧವ್ಯ ಬಂದೀತೆಂದು ಬಗೆದು, ಅದರಿಂದಲೇ ಆತನನ್ನು ಎಬ್ಬಿಸಬೇಕೆಂದು ನಿಶ್ಚಯಿಸಿ, ಅವಳು ಅವನನ್ನು ಎಬ್ಬಿಸಲಾಗಿ, ಆತನು ಎದ್ದು ಕೋಪಿಸಿಕೊಂಡು—ನಾನೇ ಮನೆಗಿರಲಾಗಿ ಸೂರ್ಯನು ಅಸ್ತಮಯವಾದಾನೇ? ನನ್ನ ಸತ್ಯವನ್ನರಿಯನೇ? ನೀನೇ ಎಬ್ಬಿಸಿ ನನಗೆ ಅಪಮಾನಮಾಡಿದೆ. ನಾನು ಇನ್ನುಮೇಲೆ ಇಲ್ಲಿರಲೊಲ್ಲೆನು ಎಂದು ಹೇಳಿ ತಪಸ್ಸಿಗೆ ಹೋದನು. ಮೇಲೆ ಆಕೆಯ ಗರ್ಭದಲ್ಲಿ ಆಸ್ತೀಕನೆಂಬ ಋಷಿಯು ಹುಟ್ಟಿ, ವೇದಶಾಸ್ತ್ರಸಂಪನ್ನನಾಗಿ, ತಾಯಿಯೊಂದಿಗೆ ಸುಖದಿಂದಿರುತಿದ್ದನು.

ಇತ್ತ, ಕೌರವವಂಶೋತ್ಪನ್ನನಾಗಿ, ಅರ್ಜುನನಿಗೆ ಪ್ರಪೌತ್ರನಾಗಿ, ಪರೀಕ್ಷಿತ ಮಹಾರಾಯನ ಪುತ್ರನಾದ ಜನಮೇಜಯರಾಯನು ರಾಜ್ಯಭಾರವನ್ನು ಗೈಯುತ್ತಾ ಸುಖದಿಂದಿರುತ್ತಿದ್ದ ವೇಳೆಯಲ್ಲಿ, ಪುರೋಹಿತನಾದ ವೇದನೆಂಬ ಬ್ರಾಹ್ಮಣನಿಗೆ ಮುಖ್ಯಶಿಷ್ಯನಾದ ಉತಂಕ್ಯನೆಂಬ ಋಷಿಯು, ಗುರುಸಂಭಾವನೆಯನ್ನು ತರುವದಕ್ಕೆ ಹೋಗಿ, ತಕ್ಷಕನಿಂದ ಬಹಳ ಕಷ್ಟಪಟ್ಟವನಾದ ಕಾರಣ, ತಕ್ಷಕನಿಗೆ ಪ್ರತೀಕಾರ ಮಾಡಬೇಕೆಂದು ನಿಶ್ಚಯ ಮಾಡಿಕೊಂಡು, ಜನಮೇಜಯ ರಾಯನ ಬಳಿಗೆ ಹೋಗಿ, ಆಶೀರ್ವಾದ ಪೂರ್ವಕ ಕುಳಿತುಕೊಂಡು— ಅಯ್ಯಾ ಮಹಾರಾಜನೇ! ನೀನು

ಶ್ರೀವಿಷ್ಣುಪುರಾಣ.

ಶುಕ್ಲಾಮ್ಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ಸರ್ವವಿಘ್ನೋಪಶಾನ್ತಯೇ ॥

ಕೃತತ್ತ್ವೇನ ಯಶ್ಚಿದಚಿದೀಶ್ವರತತ್ಸ್ವಭಾವ ಭೋಗಾಪವರ್ಗತದು
ಪಾಯಗತೀರುದಾರಃ । ಸನ್ದರ್ಶಯನ್ನಿರಮಿಮೀತ ಪುರಾಣರತ್ನಂ
ತಸ್ಮೈ ನಮೋ ಮುನಿವರಾಯ ಪರಾಶರಾಯ ॥ * ॥

ಶ್ರಿಯುಶ್ಶ್ರೀಯಸ್ಸದಾಸ್ಥಾನಂ ದಿವ್ಯಂಹೃದಯಪಙ್ಕಜಮ್ ।
ಬೋಧಿತಂ ಯೇನ ತಂ ವನ್ದೇ ಪರಾಶರದಿವಾಕರಮ್ ॥ * ॥

ಶ್ರೀಪರಾಶರಮಹರ್ಷಿಗಳು ಲೋಕ ಹಿತಕ್ಕಾಗಿ ತಮ್ಮ ಶಿಷ್ಯರಾದ ಮೈತ್ರೇಯ ಋಷಿಯನ್ನು ನಿಮಿತ್ತೀಕರಿಸಿ, ಶ್ರೀವಿಷ್ಣುತತ್ತ್ವಪ್ರತಿಪಾದಕವಾದ ಪುರಾಣವನ್ನು ಷಡಂಗಗಳಿಂದ ಕೂಡಿದ ವೇದದಂತೆ ಷಡಂಶಗಳಾಗಿ ಹೇಳಿದರು; ಅದೇನಂದರೆ :—

ಸರ್ವಜ್ಞರಾದ ಪರಾಶರಮುನೀಶ್ವರರು ಪೌರ್ವಾಹ್ಣಿಕಕ್ರಿಯೆಗಳನ್ನು ನೆರವೇರಿಸಿ ಪ್ರಸನ್ನಮಾಗಿ ಕುಳಿತಿರಲು, ಆತ್ಮಗುಣಸಂಪನ್ನ

---

§ ಅವ್ಯಾಜಕರುಣಾನಿಧಿಗಳಾಗಿ, ಚಿತ್ಸ್ವರೂಪವನ್ನೂ ಅಚಿತ್ಸ್ವರೂಪವನ್ನೂ ಈಶ್ವರಸ್ವರೂಪವನ್ನೂ ಆತ್ಮಗಳಿಂದನುಭವಿಸಬೇಕಾದ ವಿಷಯಸುಖಗಳನ್ನೂ ಮತ್ತು ಮೋಕ್ಷಸುಖವನ್ನೂ ಅವುಗಳ ಸಾಧನ ಭೇದಗಳನ್ನೂ ತಾವು ತಿಳಿದಹಾಗೆ ಅಜ್ಞರಾದ ಜನಗಳಿಗೆ ತಿಳಿಸಬೇಕೆಂದಾಶೆಯುಳ್ಳವರಾಗಿ, ದುರವಗಾಹವಾದ ವೇದಾರ್ಥಗಳನ್ನು ಪುರಾಣರೂಪವಾಗಿ ಮಾಡಿದಂಥಾ, ಋಷಿಗಳಿಗೆಲ್ಲಾ ಸರ್ವೋತ್ಕೃಷ್ಟರಾದ ಪರಾಶರರಿಗೆ ನಮಸ್ಕಾರ.

* ಲಕ್ಷ್ಮೀದೇವಿಗೆ ನಿತ್ಯವಾಸಸ್ಥಾನವಾದ ನಾರಾಯಣನ ಹೃದಯಕಮಲವನ್ನು ವಿಕಾಸಮಾಡಿದಂಥ ಪರಾಶರರೆಂಬ ಸೂರ್ಯನಿಗೆ ನಮಸ್ಕಾರ.

ರಾದ ಪರಮೈಷ್ಠಶಿಷ್ಯರಾದ ಮೈತ್ರೇಯಬುಷಿೀಶ್ವರರು ಅಭಿವಾಷ್ಯ ನಪೂರ್ವಕ ನಮಸ್ಕರಿಸಿ ಇಂತೆಂದರು.

"ಎಲೈ ಗುರುಗಳಾದ ಪರಾಶರಮಹರ್ಷಿಗಳೆ! ತಮ್ಮಿಕೃಪೆಯಿಂದ ಸಕಲವೇದಾಧ್ಯಯನವು ಸ್ವೀಕರಿಸಲ್ಪಟ್ಟಿತು. ಅದೇಪ್ರಕಾರ ಶಿಕ್ಷಾದಿ ಷಡಂಗಗಳೂ ಮನ್ವಾದಿ ಧರ್ಮಶಾಸ್ತ್ರಗಳೂ ಯಥಾಕ್ರಮವಾಗಿ ಸ್ವೀಕರಿಸಲ್ಪಟ್ಟವು. ಸ್ವಾಮಿಾ, ಮಾನ್ಯರುಗಳು ನನ್ನನ್ನು ಸರ್ವಶಾಸ್ತ್ರಗಳಲ್ಲಿಯೂ ಪರಿಶ್ರಮವುಳ್ಳವನೆಂದು ಹೇಳಿಕೊಳ್ಳುವರು. ಆದ್ದರಿಂದ ಅನನ್ಯಶರಣನಾಗಿರುವ ನಾನು ನಿಮ್ಮಿಕೃಪೆಯಿಂದ ತತ್ವಜಿಜ್ಞಾಸುವಾಗಿ ಕೇಳಲಪೇಕ್ಷಿಸುವದೇನಂದರೆ :— ಸ್ಥಾವರಜಂಗಮಾತ್ಮಕವಾದ ಈಜಗತ್ತೆಲ್ಲವು ಹ್ಯಾಗುಂಟಾಯಿತು? ಯಾವ ಪ್ರಕಾರ ಮುಂದಿರುವದು? ತಿರಿಗಿ ಹ್ಯಾಗಾಗುವದು? ಮತ್ತು ಈ ಜಗತ್ತಿಗೆ ಯಾವುದು *ಉಪಾದಾನಕಾರಣವಾಗಿರುವದು? ಯಾತರಿಂದ ರಕ್ಷಿತವಾಗಿದೆ? ಈ ಚರಾಚರಾತ್ಮಕವಾದ ಪ್ರಪಂಚವು ಯಾತರಿಂದ ನಿರ್ಮಿಸಲ್ಪಟ್ಟಿತು? ಪೂರ್ವದಲ್ಲಿ ಯಾಪದರಲ್ಲಿ ಲಯವನ್ನು ಹೊಂದಿತ್ತು? ಮುಂದೆಲ್ಲಿ ವಿಲಯವನ್ನು ಹೊಂದುವದು? ಪೃಥಿವ್ಯಾದಿ ಭೂತಗಳು ಪ್ರತ್ಯೇಕಪ್ರತ್ಯೇಕ ಎಷ್ಟು ಪ್ರಮಾಣಉಳ್ಳವುಗಳು? ದೇವಾಸುರ ನರತಿರ್ಯಗಾದಿಗಳ ಉತ್ಪತ್ತಿಯು ಹ್ಯಾಗುಂಟಾಯಿತು? ಯಾವಪ್ರಕಾರ ಸಮುದ್ರ ಪರ್ವತಾದಿಗಳಿಗೂ, ಭೂಮಿಗೂ ಸ್ವರೂಪಸ್ವಭಾವವುಂಟಾಯಿತು? ಚಂದ್ರಸೂರ್ಯ ಗ್ರಹ ನಕ್ಷತ್ರಗಳ ಸುಸ್ಥಾನವು ಹ್ಯಾಗೆ, ಅವುಗಳ ಪ್ರಮಾಣವೆಷ್ಟು? ದೇವಾಸುರ ವಂಶಗಳನ್ನೂ, ಮನುಗಳನ್ನೂ, ಮನ್ವಂತರಗಳನ್ನೂ, ಕಲ್ಪಗಳನ್ನೂ, ವಿಕಲ್ಪಗಳನ್ನೂ, ಕೃತತ್ರೇತಾದಿ ವಿಶೇಷದಿಂದುಂಟಾದ ಅವಾಂತರಕಲ್ಪಗಳನ್ನೂ, ಪ್ರಳಯಸ್ವರೂಪ ಸ್ವಭಾವಗಳನ್ನೂ, ಕೃತತ್ರೇತಾದಿ ಚತುರ್ಯುಗಗಳ ವಿಶೇಷಧರ್ಮಗಳನ್ನೂ ಸಾಕಲ್ಯವಾಗಿ ತಿಳಿಯಲಿಚ್ಛೈಸುತ್ತೇನೆ. ದೇವರ್ಷಿ ರಾಜರ್ಷಿಚರಿತ್ರಗಳನ್ನೂ, ಋಗ್ಯಜುಸ್ಸಾಮಾಥರ್ವಣರೂಪವಾದ ವೇದಶಾಖೆಗಳನ್ನೂ, ಕೃತತ್ರೇ

---

* ಘಟಕ್ಕೆ ಮಣ್ಣು ಉಪಾದಾನಕಾರಣ. ಅದರಂತೆ

ತಾದಿ ಚತುರ್ಯುಗಗಳ ಕಾಲಪ್ರಮಾಣವನ್ನೂ, ಬ್ರಹ್ಮಕ್ಷತ್ರಾದಿಚಾತುರ್ವರ್ಣ್ಯಧರ್ಮಗಳನ್ನೂ, ಬ್ರಹ್ಮಚರ್ಯಾದ್ಯಾಶ್ರಮ ನಿಯತಧರ್ಮಗಳನ್ನೂ, ಹಾಗೆಯೇ *ಅನುಲೋಮ ವಿಲೋಮಾದಿ ಸಂಕೀರ್ಣಜಾತಿಯವರಿಗೆ ವಿಹಿತವಾದ ಸಾಮಾನ್ಯ ವಿಶೇಷಧರ್ಮಗಳನ್ನೂ ತಮ್ಮನುಗ್ರಹದಿಂದ ಕೇಳಲಪೇಕ್ಷಿಸುತ್ತೇನೆ. ಎಲೈ ಬ್ರಹ್ಮಜ್ಞಾನಿಯಾದ ಮಹಾಮುನೀಶ್ವರರೇ! ಯಾವ ಉಪದೇಶದಿಂದ ಪ್ಪೂರ್ವೋಕ್ತವಾದ ಸಕಲಧರ್ಮಗಳನ್ನೂ ತಿಳಿದು ಧನ್ಯನಾಗುವೆನೋ, ಹಾಗೆ ತಮ್ಮ ಚಿತ್ತವನ್ನು ನನ್ನಲ್ಲಿ ಅನುಗ್ರಹವುಳ್ಳದ್ದಾಗಿ ಮಾಡಬೇಕು" ಎನ್ನುತ್ತಾ ಪರಾಶರರು ಹೇಳುವರು.

"ಎಲೈ ಸರ್ವಜ್ಞನಾದ ಮೈತ್ರೇಯನೆ! ನೀನುಮಾಡಿದಪ್ರಶ್ನೆಯು ಬಹುಚನ್ನಾಗಿತು. ನಿನ್ನಪ್ರಶ್ನೆಗಳಿಂದ, ನಿಮ್ಮತಂದೆಗೆ ತಂದೆಯಾದ ಪೂಜ್ಯರಾದ ವಸಿಷ್ಠಮಹರ್ಷಿಯು ನಮ್ಮಲ್ಲಿ ಅನುಗ್ರಹದಿಂದುಪದೇಶಮಾಡಿದ ವೃತ್ತಾಂತವನ್ನು ಸ್ಮರಿಸಿದೆವು. ಆವೃತ್ತಾಂತವೇನೆಂದರೆ :— ಪೂರ್ವಕಾಲದಲ್ಲಿ ವಿಶ್ವಾಮಿತ್ರಮಹರ್ಷಿಯಿಂದ ಪ್ರೇರಿತನಾಗಿಬಂದ ರಾಕ್ಷಸನು ನಮ್ಮತಂದೆಯಾದ ಶಕ್ತಿಮಹರ್ಷಿಯನ್ನು ಭಕ್ಷಿಸಿದನೆಂದು ಕೇಳಿದೆವು. ಅದರಿಂದ ನಮಗೆ ಮಹತ್ತಾದ ಕೋಪವುಂಟಾಯಿತು. ನಾವು ಕೋಪೋದ್ರೇಕವಶರಾಗಿ ರಾಕ್ಷಸರ ವಿನಾಶಕ್ಕೆ ಯಜ್ಞವನ್ನಾರಂಭಿಸಿದೆವು. ಅದರಲ್ಲಿ ಬಹುಮಂದಿ ರಾಕ್ಷಸರು ಭಸ್ಮೀಕೃತರಾಗಲು, ಅದನ್ನು ಕಂಡು ನಮ್ಮ ಪಿತಾಮಹರಾದ ವಸಿಷ್ಠಮಹರ್ಷಿಯು ನಮ್ಮನ್ನು ಕುರಿತು — ಅಪ್ಪಾ, ಮೊಮ್ಮಗುವೆ, ಅತಿ ಕೋಪವಮಾಡಬಾರದು. ಈಯಾಗವನ್ನು ಬಿಡು. ಈ ರಾಕ್ಷಸರು ತಪ್ಪುಮಾಡಿದವರಲ್ಲ, ನಿಮ್ಮ ತಂದೆಗೆ ಕಾಲಗತಿಯಾಗಿತ್ತು. ಮೂಢರಿಗಲ್ಲದೆ ಜ್ಞಾನಿಗಳಿಗೆ ಈಪ್ರಕಾರ ಕೋಪ ಹುಟ್ಟದು, ಅವರಿಗೆ ಕೋಪವೆಲ್ಲಿಂದಬಂತು? ಮೊಗುವೇ, ಪ್ರಪು

---

* ಉತ್ತಮಬೀಜದಿಂದ ನೀಚಕ್ಷೇತ್ರದಲ್ಲಿ ಹುಟ್ಟಿದಜಾತಿ– ಅನುಲೋಮಜಾತಿ, ನೀಚಬೀಜದಿಂದ ಉತ್ತಮಕ್ಷೇತ್ರದಲ್ಲಿ ಹುಟ್ಟಿದ ಜಾತಿ– ವಿಲೋಮಜಾತಿ ಯೆನ್ನಿಸಿಕೊಳ್ಳುವದು.

ಷನು ತಾನು ಹಿಂದೆಮಾಡಿದ ಕರ್ಮಫಲವನ್ನನುಭವಿಸುತ್ತಾನಾದ್ದರಿಂದ ಯಾವನಿಂದ ಯಾವನು ಕೊಲ್ಲಲ್ಪಡುವನು? ಕೇಳ್ಮಯ್ಯಾ ಪರಾಶರನೇ! ಹಿಂದೆ ಕಷ್ಟಪಟ್ಟು ಸಂಪಾದಿಸಿದ ತಪಸ್ಸಿಗೂ ಕೀರ್ತಿಗೂ ಕ್ರೋಧವೇ ಅತ್ಯಂತನಾಶಕವು. ಸ್ವರ್ಗಾಪವರ್ಗವನ್ನು ಕೆಡಿಸುವ ಕೋಪವನ್ನು ಪರಮಬುಷಿಗಳು ಆದ್ದರಿಂದಲೇ ನಿರಂತರದಲ್ಲೂ ಬಿಡುತ್ತಿದ್ದರು. ಆದಕಾರಣ ನೀನು ಕೋಪಕ್ಕೆ ವಶನಾಗಬೇಡ. ನಿರಪರಾಧಿಗಳಾಗಿಯೂ ದೀನರಾಗಿಯೂ ಇರುವ ರಾಕ್ಷಸರನ್ನು ದಹಿಸುವದರಿಂದ ಪ್ರಯೋಜನವೇನು? ಈರಾಕ್ಷಸಸಂಹಾರಕ್ಕೆ ಮಾಡುವ ಯಜ್ಞವು ನಿವೃತ್ತವಾಗಲಿ. ಸಜ್ಜನರು ಅಪರಾಧಿಗಳಲ್ಲಿಯೂ ಕ್ಷಮಯೇ ಸಾರವಾಗಿ ಉಳ್ಳವರಲ್ಲವೇ! ಎಂದರು.

ಹೀಗೆ ಸಂತವಿಸಲ್ಪಟ್ಟವನಾವು ಆಕ್ಷಣಪಲ್ಲೀ ಅವರ ವಾಕ್ಯಗೌರವದಿಂದ ಯಜ್ಞವನ್ನುಪಸಂಹರಿಸಿದೆವು. ಅನಂತರದಲ್ಲಿ ಸರ್ವಜ್ಞರಾದ ವಸಿಷ್ಠರು ಸಂತೋಷವನ್ನು ಹೊಂದಿದರು. ಆಸಮಯದಲ್ಲಿ ಬ್ರಹ್ಮದೇವರ ಕುಮಾರರಾದ ಪುಲಸ್ತ್ಯಮಹಾಮುನಿಯು ಬಂದು ನಮ್ಮ ಪಿತಾಮಹರಾದ ವಸಿಷ್ಠಬುಷಿಗಳಿಂದ ಆಸನಪರಿಗ್ರಹವನ್ನು ಮಾಡಿ, ಅರ್ಘ್ಯಾದಿಗಳಿಂದ ಪೂಜಿತರಾಗಿ ನಮ್ಮನ್ನು ಕುರಿತು ಇಂತೆಂದರು.

"ಕೇಳೀ ಪರಾಶರನೆ! ಮಹತ್ತಾದ ವೈರವುಂಟಾದಾಗ್ಯೂ, ಗುರುವಾದ ವಸಿಷ್ಠರವಾಕ್ಯದಿಂದ ನೀವು ಕ್ಷಮೆಯನ್ನು ಆಶ್ರಯಿಸಿದವರಾದಕಾರಣ ನೀವು ಸಕಲಶಾಸ್ತ್ರವನ್ನು ಬಲ್ಲವರಾಗುತ್ತೀರಿ. ನೀವು ಕುಪಿತರಾಗಿ ಯಾವಕಾರಣದಿಂದ ನಮ್ಮಸಂತತಿಚ್ಛೇದವನ್ನು ಮಾಡಲಿಲ್ಲವೊ, ಆದ್ದರಿಂದ ನಿಮಿಗೆ ಮತ್ತೊಂದು ಉತ್ತಮವರವನ್ನು ಕೊಡುತ್ತೇವೆ. ಆವರವ್ಯಾವದಂದರೆ:— ನೀವು ಪುರಾಣಸಂಹಿತೆಗಳಿಗೆ ಕರ್ತರಾಗಿ ದೇವತಾಸಾರಮಾರ್ಥ್ಯವನ್ನು ಯಥಾರ್ಥವಾಗಿ ತಿಳಿಯುವವರಾಗುತ್ತೀರಿ. ನಮ್ಮ ಪ್ರಸಾದದಿಂದ ತ್ರಿವರ್ಗಾಪವರ್ಗಸಾಧನಕರ್ಮಗಳಲ್ಲಿ ಸಂಶಯ ವಿಪರ್ಯಯಜ್ಞಾನ ರಹಿತವಾದ ಬುದ್ಧಿಯೂ ನಿಮಿಗುಂಟಾಗಲಿ"

ಎಂಬ ಪುಲಸ್ತ್ಯವಾಕ್ಯಾನಂತರದಲ್ಲಿ ನಮ್ಮ ಪಿತಾಮಹರಾದ ವಸಿಷ್ಠರು, ''ಎಲೈ ಪರಾಶರನೇ! ಪುಲಸ್ತ್ಯರುಕೊಟ್ಟ ವರಗಳೆಲ್ಲವೂ ನಿನಗೆ ಸಿದ್ಧಿಸಲಿ'' ಎಂದು ನಮ್ಮನ್ನು ಅನುಗ್ರಹಿಸಿದರು. ಈ ಪ್ರಕಾರದಲ್ಲಿ ಪುಲಸ್ತ್ಯರು, ಮತ್ತು ವಸಿಷ್ಠರು ಹೇಳಿದ ವಾಕ್ಯಗಳೆಲ್ಲವೂ ನಿನ್ನ ಪ್ರಶ್ನೆಯಿಂದ ಜ್ಞಾಪಕಕ್ಕೆಬಂದವು. ಆವರಗಳವ್ಯಾಖ್ಯಾನದಿಂದ ಸಕಲವನ್ನು ತಿಳಿದು ಪ್ರಶ್ನೆಮಾಡುವ ನಿನಗೆ ನಾವು ಸಕಲಾರ್ಥವನ್ನು ಹೇಳುತ್ತೇವೆ. ಈ ಪುರಾಣಸಂಹಿತೆಯನ್ನು ಚನ್ನಾಗಿ ತಿಳಿಯುವವನಾಗು'' ಎಂದು ಹೇಳಿ ಶ್ರೋತೃಬುದ್ಧಿಸಮಾಧಾನಾರ್ಥವಾಗಿ ಪ್ರಶ್ನತಾತ್ಪರ್ಯಾನು ಗುಣವಾಗಿ ಸಂಕ್ಷೇಪಿಸಿ ಶಾಸ್ತ್ರಾರ್ಥವನ್ನು ಹೇಳಿದರು.

ಅದೇನೆಂದರೆ:— ಚರಾಚರಾತ್ಮಕವಾಗಿ ಉತ್ಪತ್ತಿ ನಾಶವುಳ್ಳ ಈ ಪ್ರಪಂಚವು ಸರ್ವವ್ಯಾಪಕನಾದ, ಚಿದಚಿದ್ಬರಿತನಾದ, ವಿಷ್ಣುವಿನ ಸನ್ನಿಧಾನದಿಂದುತ್ಪನ್ನವಾಯಿತು. ಶ್ರೀ ಮಹಾ ವಿಷ್ಣುವೇ ಈ ಪ್ರಪಂಚಕ್ಕೆ ರಕ್ಷಕನು. ಆ ವಿಷ್ಣುವೇ ನಾಶಕನು. ಹೀಗೆ ಅಂತರ್ಬಹಿರ್ವ್ಯಾಪಕನಾಗಿ ತ್ರಿವಿಧಕಾರಣನಾದುದರಿಂದ ಈ ಜಗತ್ತು ಅವಿಷ್ಣುವೇ.

ಎಂಬಲ್ಲಿಗೆ ಆದಿಪುರಾಣವಾದ ಶ್ರೀ ವಿಷ್ಣು
ಪುರಾಣದಲ್ಲಿ ಪ್ರಥಮಾಂಶದ ಪ್ರಥ
ಮಾಧ್ಯಾಯವು ಮುಗಿಯಿತು.

ಕನ್ನಡ ವಿಷ್ಣು ಪುರಾಣ

ಎರಡನೇ-ಅಧ್ಯಾಯ.

ಸಂಕ್ಷೇಪವಾಗಿ ನಿರೂಪಿಸಿದ ಪುರಾಣಾರ್ಥವನ್ನು ವಿಸ್ತೃತವಾಗಿ ತಿಳಿಸುವದಕ್ಕೋಸ್ಕರ ಶ್ರೀಪರಾಶರಮಹರ್ಷಿಗಳು, ನಿರ್ವಿಘ್ನ ಪರಿಸಮಾಪ್ತ್ಯರ್ಥವಾಗಿ, ವರಪ್ರದಾನದಿಂದ ಲಬ್ಧವಾದ ಜ್ಞಾನವಿಷಯನಾಗಿಯೂ, ಸ್ವಾಭೀಷ್ಟ ಸರ್ವೋತ್ಕೃಷ್ಟ ದೆಸತೆಯಾಗಿಯೂ, ಇರುವ ಭಗವಂತನಿಗೆ ನಮಸ್ಕಾರರೂಪವಾದ ಮಂಗಳವನ್ನು ಆಚರಿಸುತ್ತಾರೆ.

ಸ್ವರೂಪದಿಂದ * ವಿಕಾರ ರಹಿತನಾಗಿ, ಪ್ರಾಕೃತಸಂಬಂಧವಾದ ಕ್ಲೇಶದೋಷಗಳಿಂದ ರಹಿತನಾಗಿ, ಕಾಲತ್ರಯದಲ್ಲಿಯೂ ಅಸಂಕುಚಿತ ಜ್ಞಾನನಾಗಿ, ಪರಾಧೀನವಲ್ಲದ ನಿಯಂತೃವಾದ ಆತ್ಮನಾಗಿ, ಸರ್ವಕಾಲದಲ್ಲಿಯೂ § ಬದ್ಧಮುಕ್ತ ನಿತ್ಯವ್ಯಾಪ್ತವಾದ ದಿವ್ಯಮಂಗಳವಿಗ್ರಹದಿಂದ ಪರಿಶೋಭಿಸುವನಾಗಿ, ಸರ್ವೋತ್ಕೃಷ್ಟನಾದ ಮಹಾವಿಷ್ಣುವಿಗೆ ನಮಸ್ಕಾರವು.

---

* ಪ್ರಕೃತಿ ಸಂಬಂಧದಿಂದುಂಟಾದ ಅವಸ್ಥಾಭೇದಗಳು -ವಿಕಾರಗಳು. ಅವುಗಳು — ಇರುವಿಕೆ, ಹುಟ್ಟುವಿಕೆ, ವೃದ್ಧಿಯಾಗುವಿಕೆ, ರೂಪಾಂತರ ಹೊಂದುವಿಕೆ, ಕ್ಷೀಣವಾಗುವಿಕೆ, ನಾಶ ಹೊಂದುವಿಕೆ ಎಂಬಿವುಗಳಾಗಿವೆ. ಇವುಗಳಿಗೆ ಷಡ್ಭಾವ ವಿಕಾರಗಳೆಂದೂ ಹೆಸರು ಆದ್ದರಿಂದ ಪ್ರಥಮವಿಶೇಷಣದಿಂದ, ಜಡಪ್ರಕೃತಿಯಿಂದ ಭಿನ್ನನು ಎಂಬ ಅರ್ಥವಾಗುತ್ತದೆ.

§ ನಿತ್ಯರು ಯಾರೆಂದರೆ – ಸಂಸಾರಸಂಬಂಧವನ್ನು ಎಂದಿಗೂ ಹೊಂದದೇಇರುವ, ಭಗವಂತನ ಸೇವೆಯನ್ನೇ ನಿರಂತರದಲ್ಲಿಯೂ ಮಾಡಿಕೊಂಡಿರುವ, ಶ್ರೀವೈಕುಂಠವಾಸಿಗಳಾದ ಅನಂತ ಗರುಡ ವಿಷ್ವಕ್ಸೇನಾದಿಗಳು. ಮುಕ್ತರು ಎಂದರೆ– ಸಂಸಾರವನ್ನು ಹೊಂದಿ ಅನಂತರ ನಿರ್ಹೇತುಕ ಭಗವತ್ಕೃಪೆಯಿಂದ ಮೋಕ್ಷವನ್ನು ಹೊಂದಿದ ಸನಕಾದಿಗಳು. ಬದ್ಧರಾರೆಂದರೆ– ಸಂಸಾರವನ್ನು ಹೊಂದಿ ಅದನ್ನೇ ಅಭಿವೃದ್ಧಿ ಮಾಡಿಕೊಂಡು ವರ್ತಿಸುವ ನಮ್ಮಂಥಾ ಜನಗಳು. ಈ ವಿಷಯವು ಅರ್ಥಪಂಚಕವೆಂಬ ಗ್ರಂಥದಲ್ಲಿ ಸ್ಪಷ್ಟವಾಗುತ್ತದೆ.

ಪಂಚರಾತ್ರ

ಶ್ರೀಭರದ್ವಾಜಸಂಹಿತ.

ಸಮಸ್ತವಾದ ಋಷೀಶ್ವರರು ಭರದ್ವಾಜ ಮುನೀಶ್ವರರಿಂದ ಸಕಲ ಧರ್ಮಗಳನ್ನು ಕೇಳಿ ಮರಳಿ ಇಂತೆಂದರು. ಎಲ್ಲಿ ಭರದ್ವಾಜ ಋಷೀಶ್ವರನೇ! ಸಕಲ ಜನಗಳು ಈಭೂಲೋಕದಲ್ಲಿ ಯಾವ ಉಪಾಯದಿಂದ ಪಾಪಗಳೆಲ್ಲವನ್ನು ಹೋಗಲಾಡಿಸಿಕೊಂಡು ಉತ್ತಮವಾದ ಗತಿಯನ್ನು ಹೊಂದುವರು ಎಂದು ಕೇಳಲಾಗಿ ಭರದ್ವಾಜ ಋಷೀಶ್ವರರು ಹೇಳುತ್ತಾರೆ.

ವೇದಗಳಲ್ಲಿಯೂ, ವೇದಾಂತಗಳಲ್ಲಿಯೂ, ಧರ್ಮಶಾಸ್ತ್ರಗಳಲ್ಲಿಯೂ, ಪುರಾಣಗಳಲ್ಲಿಯೂ, ಪಂಚರಾತ್ರಮೊದಲಾದ ದಿವ್ಯಶಾಸ್ತ್ರಗಳಲ್ಲಿಯೂ ಹೇಳಿರುವ ಪ್ರಪತ್ತಿಶಾಸ್ತ್ರವನ್ನು, ಈ ಪ್ರಪತ್ತಿಯನ್ನು, ಈ ಪ್ರಪತ್ತಿಯ ಫಲವನ್ನು ನಾವು ತಿಳಿದಹಾಗೆ ಹೇಳುವವು. ಈ ಪ್ರಪತ್ತಿಯಿಂದ ಯೋಗಿಗಳಿಗೆ ಕಾರ್ಯಸಿದ್ಧಿ, ಅಜಿಲ್ಲದಿದ್ದರೆ ಕಾರ್ಯಸಿದ್ಧಿಯಿಲ್ಲ; ಆದ್ದರಿಂದ ಈ ಪ್ರಪತ್ತಿಯೇ ಉತ್ತಮವೆಂದು ಹೇಳುವರು. ಶ್ರಿಯಃಪತಿಯಾದ, ಪರಬ್ರಹ್ಮನಾಥ, ಅಪರಮಿತ ಜ್ಞಾನಶಕ್ತ್ಯಾದಿಕಲ್ಯಾಣಗುಣಸಮುದ್ರನಾದ, ಪುನರಾವರ್ತಿಯಿಲ್ಲದೆ ನಿತ್ಯಾನುಭವವಾದ ಶ್ರೀವೈಕುಂಠವನ್ನು ಕೊಡುವ, ಶ್ರೀಮನ್ನಾರಾಯಣನಲ್ಲಿ ಈ ಜೀವಾತ್ಮನು ನಿನ್ನದೆಂದು, ಆತ್ಮ ಸಮರ್ಪಣೆ ಮಾಡುವದು ಪ್ರಪತ್ತಿಯನ್ನಿಸಿಕೊಳ್ಳುವದು. ಈ ಆತ್ಮ ಸಮರ್ಪಣ ರೂಪವಾದ ಪ್ರಪತ್ತಿಯು ಸಕಲ ಫಲವನ್ನು ಕೊಡುವದು. ಸಕಲ ಜೀವಾತ್ಮರುಗಳಿಗೆ ಒಡೆಯನಾಥ ಪರಮಾತ್ಮನಿಗೆ, ಆತ್ಮಸಮರ್ಪಣ ದಿಂದಲೇ ಸಂತೋಷವುಂಟಾಗುವದರಿಂದ, "ಶ್ರೀಮನ್ನಾರಾಯಣ! ನಾನು ನಿನ್ನವನು" ಎಂದು ಒಮ್ಮುವೇಳೆ ಹೇಳಿವ ಪ್ರಪನ್ನನಿಗೆ ಲಕ್ಷ್ಮೀ

ಪತಿಯಾದ ನಾರಾಯಣನು ತಾನೇ ಅತ್ಯಂತ ಸಂತೋಷಯುಕ್ತನಾಗಿ,— ಅಂಜಬೇಡವೆಂದು ಅಭಯವನ್ನು ಕೊಡುವನು. ತನ್ನ ಪಾಪವು ಈಗಲೇ ಹೋಗಬೇಕೆಂದಾತನಿಯುಳ್ಳವರಿಗೆ, ಈ ಪ್ರಪತ್ತಿಯಿಂದಲ್ಲದೆ ಮತ್ತೊಂದರಿಂದ ಪಾಪಹೋಗದು. ಅಕಿಂಚನರಾದ ಜನರು ಉತ್ಕೃಷ್ಟವಾದ ಗತಿಯನ್ನೈದಬೇಕಾದರೆ, ಶ್ರೀಮನ್ನಾರಾಯಣನು ತನ್ನನ್ನು ರಕ್ಷಿಸುವನೆಂದು ದೃಢಭಕ್ತಿಯಿಂದಿರಬೇಕು.

ಶ್ಲೋ ॥ ನಜಾತಿಭೇದಂ ನಕುಲಂ ನಲಿಙ್ಗಂ ನಗುಣಕ್ರಿಯಾಃ ।
ನದೇಶಕಾಲೌ ನಾನಸ್ಥಾಂ ಯೋಗೋಹ್ಯಯಮಪೇಕ್ಷತೇ ॥
ಬ್ರಹ್ಮಕ್ಷತ್ರಿಯವಿಟ್ಶೂದ್ರಾಸ್ತ್ರಿಯಶ್ಚಾನ್ತ್ಯರಜಾಸ್ತಥಾ ।
ಸರ್ವಏವ ಪ್ರಪದ್ಯೇರನ್ ಸರ್ವದಾತಾರಮಚ್ಯುತಮ್ ॥

ಟೀಕು ॥ ಈ ಪ್ರಪತ್ತಿ ಮಾಡುವದಕ್ಕೆ, ಜಾತಿ ಭೇದವು, ಕುಲ ಭೇದವು, ಗುರುತುಗಳು, ಔದಾರ್ಯಾದಿ ಗುಣಗಳು, ನಡತೆಯು, ದೇಶಕಾಲಗಳು, ಚಿಕ್ಕವರು ದೊಡ್ಡವರು ಎಂಬ ವಿಚಾರವು ಅಪೇಕ್ಷಿತವಾದವುಗಳಲ್ಲ. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು, ಸ್ತ್ರೀಯರು ಮುಂತಾದ ಜನರುಗಳೆಲ್ಲರೂ ಸರ್ವಾಭೀಷ್ಟವನ್ನು ಕೊಡುವ ಸ್ವಾಮಿಯನ್ನು ರಕ್ಷಕನನ್ನಾಗಿ ಹೊಂದಬೇಕು.

ಒಳ್ಳೇ ನಡತೆಯಲ್ಲಿರುವದು, ದುರ್ನಡತೆಗಳ ಬಿಡುವದು, ರಕ್ಷಿಸುವನೆಂದು ವಿಶ್ವಾಸವುಳ್ಳವನಾಗಿರುವದು, ಸ್ವಾಮಿಾ! ನೀನೇ ನನಗೆ ಗತಿಯಂಬುವದು, ಈ ಆತ್ಮವು ನಿನ್ನದೆಂಬುವದು, ದೈನ್ಯವನ್ನವಲಂಬಿಸುವದು, ಇವುಗಳೆಲ್ಲಾ ಈ ಪ್ರಪತ್ತಿಗೆ ಅಂಗಗಳು. ಕೆಟ್ಟ ನಡತೆಗಳನ್ನು ಬಿಟ್ಟು, ಒಳ್ಳೇ ನಡತೆಯಲ್ಲಿದ್ದುಕೊಂಡು, ವಿಶ್ವಾಸವನ್ನೂ ದೈನ್ಯವನ್ನೂ ಹೊಂದಿ "ಸ್ವಾಮಿಾ! ನೀನಲ್ಲದೆ ನನಗೆ ರಕ್ಷಕರಿಲ್ಲ. ಸ್ವಾಮಿಾ! ನೀನು ಎನ್ನ ರಕ್ಷಿಸು" ಎಂದು ಶ್ರೀಮನ್ನಾರಯಣಸ್ವಾಮಿಯ ಪಾದಾರವಿಂದದಲ್ಲಿ ತನ್ನ ಆತ್ಮವನ್ನು ಇರಿಸಿ, ಪ್ರಪತ್ತಿಯನ್ನು ಮಾಡುವವನಿಗೆ ಆಕ್ಷಣದಲ್ಲಿಯೇ ಸಮಸ್ತ ಪಾಪಗಳು ತೊಲಗುವವು.

ಈ ಪ್ರಪತ್ತಿಯು, ಆರ್ತಪ್ರಪತ್ತಿಯುಂದೂ ದೃಪ್ತ ಪ್ರಪತ್ತಿಯಂದೂ ದ್ವಿವಿಧವಾಗಿ ಇರುವದು. ಫಲವನ್ನಪೇಕ್ಷಿಸಿ ಮಾಡುವ ಪ್ರಪತ್ತಿಯು ದೃಪ್ತಪ್ರಪತ್ತಿ; ಫಲವನ್ನು ಬಯಸದೇ ಮಾಡುವ ಪ್ರಪತ್ತಿಯು ಆರ್ತ ಪ್ರಪತ್ತಿ, ಈ ಪ್ರಪತ್ತಿಯಿಂದ ಮರಳಿ ಹುಟ್ಟೋಣವಿಲ್ಲ. ಈ ಪ್ರಪತ್ತಿಯು ಕಾಯಿಕವೆಂದೂ ವಾಚಿಕವೆಂದೂ ಮಾನಸಿಕವೆಂದೂ ಮೂರು ಬಗೆ. ಈ ಮೂರು ಬಗೆ ಪ್ರಪತ್ತಿಯು, ತಾಮಸವೆಂದೂ, ರಾಜಸವೆಂದೂ, ಸಾತ್ವಿಕವೆಂದೂ ಮೂರು ಪ್ರಕಾರವಾಗಿ ಇರುವದು. ಗುರುಗಳ ಉಪದೇಶದಿಂದ ಪ್ರಪನ್ನನಿಗೆ ಗುರುತಾಗಿರುವ ಶಙ್ಖಚಕ್ರ ಧಾರಣ, ದ್ವಾದಶೋರ್ಧ್ವಪುಂಡ್ರ, ಸ್ವಾಮಿಯ ಪೂಜೆಯನ್ನು ಮಾಡುವದು ಮುಂತಾದ್ದು ಕಾಯಿಕಪ್ರಪತ್ತಿ ಎಂಬುವದು. ಗುರುವಿಗೆ ಅಧೀನನಾಗಿ, ಸ್ವರೂಪವನ್ನು ತಿಳಿಯಬೇಕು ಎಂದು ಮುಂತೋಪದೇಶವನ್ನು ಮಾಡಿಕೊಳ್ಳುವದು, ವಾಚಕಪ್ರಪತ್ತಿಯು. ವೇದಾಂತ ಮುಂತಾದ ಸಕಲ ಶಾಸ್ತ್ರವನ್ನು ಬಲ್ಲಂಥ ಗುರುಗಳ ಸೇವೆಯನ್ನು ಮಾಡಿಕೊಂಡು, ಈ ಗುರುಗಳು ಉಪದೇಶ ಮಾಡಿದ ಮಂತ್ರವನ್ನೂ ಅದರ ಅರ್ಥವನ್ನೂ ಮನಸ್ಸಿನಲ್ಲಿಯೇ ಧ್ಯಾನವನ್ನು ಮಾಡಿ ಜ್ಞಾನವನ್ನುಂಟುಮಾಡಿಕೊಳ್ಳುವದು, ಮಾನಸಿಕಪ್ರಪತ್ತಿಯನ್ನುವದು. ಕ್ರೂರದುಷ್ಟನಡತೆಯಿಂದ ಸಕಲಪ್ರಾಣಿಗಳಲ್ಲಿಯೂ ದಯೆಯುಳ್ಳ ನಾರಾಯಣಸ್ವಾಮಿಯನ್ನು ಅಜ್ಞಾನಿಯು ಶೇರುವದು ತಾಮಸ ಪ್ರಪತ್ತಿಯಂತಲೂ; ತನ್ನನ್ನು ಏನೇನೂ ಕೇಳದೆ ಇರುವವರ ಕಂಡರೆ ಪ್ರಿಯನಾಗಿರುವ ನಾರಾಯಣಸ್ವಾಮಿಯಲ್ಲಿ "ನನಗೆ ಸ್ವರ್ಗಲೋಕಬೇಕು, ಕೈವಲ್ಯಬೇಕು, ವೈಕುಂಠಪ್ರಾಪ್ತಿಯಾಗಬೇಕು" ಎಂದು * ಕಾಮನೆಯಿಂದ ಮಾಡುವ ಪ್ರಪತ್ತಿಯು ರಾಜಸ ಪ್ರಪತ್ತಿಯಂತಲೂ; ಸಕಲವಾದ ವಸ್ತುಗಳು ಸ್ವರ್ಗ ಮೊದಲಾದ ಲೋಕಗಳು ಎಲ್ಲವೂ ವ್ಯರ್ಥವೆಂದು ತಿಳಿದು, ಶ್ರೀಮನ್ನಾರಾಯಣನ ಸೇವೆಯಲ್ಲಿಯೇ ಪ್ರೀತಿಯುಳ್ಳವನಾಗಿ, ಏಕಭಕ್ತಿಯುಳ್ಳವನಾಗಿ, ಜೀವಾತ್ಮರಗೊಡೆಯ

ಸ ಬಲಿರೂಪವಾದ ಪ್ರಾಣಿಹಿಂಸನಕೃತ್ಯಗಳುಜ * ಫಲವನ್ನುಕೇಳುತ

ನಾದ ಸ್ವಾಮಿಯನ್ನೇ ಇದುವ ಪ್ರಪತ್ತ್ಯಯು ಸಾತ್ವಿಕಪ್ರಪತ್ತ್ಯಯಂತಲೂ, ಎನ್ನಿಸಿಕೊಳ್ಳುವದು.

ತಾಮಸ ಪ್ರಪತ್ತ್ಯಯನ್ನು ರಾಜಸಪ್ರಪತ್ತ್ಯಯನ್ನು ಮಾಡುವದು ಯೋಗ್ಯವಲ್ಲ. ಮುಖ್ಯವಾದ ಸಾತ್ವಿಕ ಪ್ರಪತ್ತ್ಯಯೇ ಮಾಡುವದಕ್ಕೆ ಯೋಗ್ಯವು. ಗುರು ಮುಖದಿಂದ ಮಂತ್ರಾರ್ಥವನ್ನು ತಿಳಿದು, ಜ್ಞಾನಿಯಾಗಿ, ಭೋಗ್ಯ ಭಾಗ್ಯಮುಂತಾದ ಫಲವನ್ನೂ ಬಯಸದೆ ಸಕಲ ಫಲವೂ ಶ್ರೀಮನ್ನಾರಾಯಣನೇ ಎಂದು ಅವನಲ್ಲಿ ತನ್ನ ಆತ್ಮವನ್ನು ಸಮರ್ಪಣೆ ಮಾಡುವದು ಸಾತ್ವಿಕಪ್ರಪತ್ತ್ಯಯಂಬುವದು. ಈ ಸಾತ್ವಿಕ ಪ್ರಪತ್ತ್ಯಿಂದಲೇ ತಿರಿಗಿ ಹುಟ್ಟಲ್ಲದೆ ಇರುವ ಮೋಕ್ಷವನ್ನು ಪಡೆದು, ನಿತ್ಯರಾಗಿ, ಶ್ರಿಯಃಪತಿಯಾದ ನಾರಾಯಣಸ್ವಾಮಿಯ ಸೇವೆಯನ್ನು ಮಾಡುತ ಸುಖದಲ್ಲಿ ಮುಕ್ತರಾಗಿರುವರು.

॥ ಶ್ಲೋ ॥ ಬಾಲಮೂಕ ಜಡಾಂಧಾಶ್ಚ ಪಂಕವೋಭಧಿರಾಸ್ತಥಾ।
ಸದಾಚಾರ್ಯೈಃ ಸಂದೃಷ್ಟಾಃ ಪ್ರಾಪ್ನುವಂತಿಪರಾಂಗತಿಮ್॥

ಟೀಕು— ಚಿಕ್ಕವರು, ಮೂಗರು, ಅಜ್ಞಾನಿಗಳು, ಕುರುಡರು, ಕಿವುಡರು ಮುಂತಾದವರು ಪ್ರಪತ್ತ್ಯಯನ್ನು ಮಾಡುವದಕ್ಕೆ ಅಶಕ್ತರಾದರೂ, ಸದಾಚಾರ್ಯ ಸಮಾಶ್ರಯಣದಿಂದ ಮುಕ್ತಿಯನ್ನೈದುವರು. ಗುರುವಿನಲ್ಲಿ ಯಾವನು ಭಕ್ತ್ಯಯನ್ನು ಮಾಡುತ್ತಲಿದಾನೊ, ಶಿಷ್ಯನಲ್ಲಿ ಯಾವ ಗುರುವು ದಯವಾಡುತ್ತಲಿದಾನೊ, ಅವರಿಬ್ಬರೂ ಮುಕ್ತ್ಯಯನ್ನೈದುವರು. ಪ್ರಪತ್ತ್ಯಯಿಲ್ಲದೆ ದಾನ ಧರ್ಮಗಳಿಂದ ಫಲವಿಲ್ಲ. ಗುರುಗಳಿಂದ ಉಪದೇಶ ಹೊರತಾಗಿ, ಯಾರಿಂದಲಾದರೂ ಕಲಿತುಕೊಂಡ ಮಂತ್ರದಿಂದಲೂ, ಆಚಾರದಿಂದಲೂ ಫಲವಿಲ್ಲ.

ಗುರುಗಳು ಹ್ಯಾಗಿರಬೇಕೆಂದರೆ:— ಪ್ರಪತ್ತ್ಯಯ ಸ್ವರೂಪವನ್ನು ಬಲ್ಲವರಾಗಿ, ಮಂತ್ರವನ್ನು ಸದಾ ಜಪಮಾಡಿಕೊಂಡಿರುವವರಾಗಿ, ಸಕಲ ಶಾಸ್ತ್ರವನ್ನು ಬಲ್ಲವರಾಗಿ, ಸಕಲಪ್ರಾಣಿಗಳಲ್ಲಿ

ಯುಾ ದಯೆಯುಳ್ಳವರಾಗಿ, ಆಚಾರನಂಪನ್ನರಾಗಿ, ಕೋಪವಿಲ್ಲದವರಾಗಿ, ನಿಯಮದ ನಡತೆಯುಳ್ಳವರಾಗಿ, ಏಳು ತಲದಿಂದಲೂ ಪ್ರಭಕ್ತಿಯುಳ್ಳವರಾಗಿ, ಪರಿಶುದ್ಧವಾದ ಕುಲದಲ್ಲಿ ಹುಟ್ಟಿದವರಾಗಿ, ಸದ್ಗುಣಗಳುಳ್ಳವರಾಗಿ, ಭಕ್ತಿಯುಳ್ಳವರಾಗಿ, ಜ್ಞಾನಪುಂಟಾಗಿ ವೈರಾಗ್ಯವುಳ್ಳವರಾಗಿ, ತನ್ನ ಕುಲಾಚಾರದಲ್ಲಿಯೇ ನಡೆವವರಾಗಿರಬೇಕು. ಇಂಥಾ ಆಚಾರ್ಯರಿಂದಲೇ ಸಕಲವನ್ನು ತಿಳಿಯಬೇಕು. ಒಳ್ಳೇ ಸತ್ಕುಲದಲ್ಲಿ ಹುಟ್ಟಿದ್ದರೂ ಜ್ಞಾನ ಭಕ್ತಿ ಇಲ್ಲದೆ ಇರುವವನನ್ನು, ತನಗಿಂತಲೂ ಹೀನಜಾತಿಯವನನ್ನೂ, ವಯಸ್ಸಿನಲ್ಲಿ ಚಿಕ್ಕವನಾದವನನ್ನೂ ಗುರುವ ಮಾಡಿಕೊಳ್ಳಲಾಗದು.

॥ ಶ್ಲೋ ॥ ನಜಾತು ಮನ್ತ್ರಿದಾವಾರೀ ನಶೂದ್ರೋವಾನ್ತರೋದ್ಭವಃ।
ನಾಭಿಶಸ್ತೋ ನವತಿತಃ ಕಾಮುಕಾಮೋಪ್ಯಕಾಮಿನಃ ॥
ಸ್ತ್ರಿಯಶ್ಶೂದ್ರಾದಯಶ್ಚೈವ ಬೋಧಯೇಯುರ್ಹಿತಾಹಿತಮ್।
ಯಥಾರ್ಹಂ ಮಾನನೀಯಾಶ್ಚ ನಾರ್ಹಂತ್ಯಾಚಾರ್ಯತಾಂಕ್ವಚಿತ್ ॥

ಟುಕು— ಸ್ತ್ರೀಯರು, ಶೂದ್ರರು, ನೀಚಜಾತಿಯಲ್ಲಿ ಹುಟ್ಟಿದವರು, ನಿಂದೆಯನ್ನುಳ್ಳವರು, ಪತಿತರು, ಕಾಮುಕರು, ಇವರೆಲ್ಲರಿಂದಲೂ ಮಂತ್ರವನ್ನು ತಿಳಿಯಲಾಗದು. ಸ್ತ್ರೀಶೂದ್ರ ಮುಂತಾದವರು ಹಿತೋಪದೇಶವನ್ನು ಮಾಡಿದರೂ, ದೊಡ್ಡನೆಂದು ತಿಳಿಯತಕ್ಕವರೇಹೊರತು, ಅವರಲ್ಲಿ ಗುರುಭಕ್ತಿಯನ್ನು ಮಾಡಲಾಗದು. ಯೋಗಿಗಳಾದವರು ಯಾವ ಕುಲದಲ್ಲಿ ಹುಟ್ಟಿದ್ದರೂ, ಅವರು ಜ್ಞಾನಿಗಳು; ಅವರ ಕುಲವು ಇಂಥಾದ್ದೆಂದು ವಿಚಾರಿಸಿ ನಿಂದಿಸಲಾಗದು.

ಕೋಪವಿಲ್ಲದವನಾಗಿ, ಅಸೂಯೆ ಇಲ್ಲದವನಾಗಿ, ಈಶ್ವರೇ ರವೂ ಈ ನನ್ನ ಒಡೆವೆಯುಾ ಗುರುವಿನದು ಎಂದು ನೆನೆಹುಳ್ಳವನಾಗಿಯುಾ, ಶುಚಿಯಾಗಿಯುಾ, ಪ್ರೀತಿಯುಳ್ಳವನಾಗಿಯುಾ, ಇಂದ್ರಿಯನಿಗ್ರಹವುಳ್ಳವನಾಗಿಯುಾ, ಒಳ್ಳೇ ಬುದ್ಧಿಯುಳ್ಳವನಾಗಿಯುಾ ಇರುವವನೇ ಶಿಷ್ಯನು; ಇವನು ಪ್ರಭತ್ತಿಗೆ ಯೋಗ್ಯನು. ಜ್ಞಾನವಿಲ್ಲದೇ ಇರುವವನು, ಪತಿತನು, ಹುಚ್ಚನು, ದೂರುಹೊ

ತ್ತವನು, ಕ್ರೂರನು, ಗುರು ದೇವತೆಗಳಲ್ಲಿ ವಿಶ್ವಾಸವಿಲ್ಲದವನು, ತನಗೆ ಮಂತ್ರೋಪದೇಶವಾಗಬೇಕೆಂದು ಆಶೆಯಿಲ್ಲದವನು ಇವರೆಲ್ಲರೂ ಮಂತ್ರೋಪದೇಶಕ್ಕೆ ಯೋಗ್ಯರಲ್ಲ.

ವೇದಮಂತ್ರಗಳೆಂದೂ, ಪುರಾಣ ಮಂತ್ರಗಳೆಂದೂ, ಭಾಷಾರೂಪವಾದ ಲೌಕಿಕ ಮಂತ್ರಗಳೆಂದೂ, ಬಹು ಬಗೆಯಾದ ಮಂತ್ರಗಳುಂಟು. ವೇದ ಮಂತ್ರ ಪುರಾಣ ಮಂತ್ರಗಳು ಬ್ರಾಹ್ಮಣರಿಗೆ ಸರಿ. ಸ್ತ್ರೀ ಶೂದ್ರ ಮುಂತಾದವರಿಗೆ ತಾಂತ್ರಿಕ ಮಂತ್ರವೇ ಸರಿ; ವೇದಮಂತ್ರಗಳನ್ನು ಹೇಳಿಕೊಳ್ಳಲಾಗದು. ಪ್ರಪತ್ಯರ್ಥವನ್ನು ಹೇಳುವಂಥ ತಾಂತ್ರಿಕ ಮಂತ್ರಗಳನ್ನೇ ಹೇಳಿಕೊಂಡರೆ ಸಕಲ ಫಲವ್ರ ಉಂಟು. ಯಾವ ಬ್ರಾಹ್ಮಣನು ವೇದ ಮಂತ್ರಗಳನ್ನು ಹೀನಜಾತಿಯವನಿಗೆ ಉಪದೇಶ ಮಾಡುತ್ತಲಿದಾನೊ; ಆಬ್ರಾಹ್ಮಣನು, ಮಂತ್ರೋಪದೇಶ ಮಾಡಿಕೊಂಡ ಹೀನಜಾತಿಯವನು, ಇವರಿಬ್ಬರೂ ನರಕಕ್ಕೆ ಹೋಗುವರು. ಆದ್ದರಿಂದ ತಮ್ಮ ಕುಲಕ್ಕೆ ಉಚಿತವಾದ ಮಂತ್ರಗಳನ್ನೇ ಉಪದೇಶಮಾಡಿಕೊಳ್ಳಬೇಕು.

ಆಚಾರ್ಯನು ಪುಣ್ಯಕಾಲದಲ್ಲಿ ಪುಣ್ಯವಾದ ದಿನದಲ್ಲಿ ಸ್ನಾನವನ್ನು ಮಾಡಿ, ಶಿಷ್ಯನಿಗೂ ಸ್ನಾನ ಮಾಡಿಸಿ, ಶುಚಿಯಾಗಿ ಭಕ್ತಿಯಿಂದ ಭಗವದಾರಾಧನೆಯನ್ನು ಮಾಡಿ, ಸ್ವಾಮಿಯ ಸನ್ನಿಧಿಗೆ ಈ ಭಕ್ತನಾಗಿರುವ ಶಿಷ್ಯನನ್ನು ಕರೆದುಕೊಂಡು ಹೋಗಿ, "ಈ ಆತ್ಮನು ಸ್ವಾಮಿ! ನಿನ್ನದು. ನೀನು ರಕ್ಷಿಸಿಕೊ" ಎಂದು ಹೇಳಿ, ಈ ಆತ್ಮನನ್ನು ಸ್ವಾಮಿಯ ಪಾದಾರವಿಂದಕ್ಕೆ ಸಮರ್ಪಣೆಯನ್ನು ಮಾಡುವದು— ಇದೀಗ ಪ್ರಪತ್ತಿಯನ್ನುವಮ. ಈ ಪ್ರಪತ್ತಿಯನ್ನು ಈಪ್ರಕಾರದಲ್ಲಿ ನಿಯಮದಿಂದಲೂ ಉತ್ತಮ ವಿಶ್ವಾಸದಿಂದಲೂ ಉಪದೇಶಮಾಡಿಕೊಳ್ಳಬೇಕು. ನಿಯಮವಿಲ್ಲದೆ ವಿಶ್ವಾಸವಿಲ್ಲದೆ ಇರುವ ಸ್ತ್ರೀಯರುಗಳು, ಶೂದ್ರರು, ಸಂಕೀರ್ಣಜಾತಿಯವರು ಪತಿತರು— ಇವರುಮುಂತಾದ ವಿಶ್ವಾಸವಿಲ್ಲದವರಿಗೆ ಉಪದೇಶವನ್ನು ಮಾಡಿದವನು ನರಕಕ್ಕೆ ಹೋಗುವನು.

ನೋಟೀಸು.

ಈ ಪುಸ್ತಕವನ್ನು ಅಪೇಕ್ಷಿಸುವ ಮಹಾಜನಗಳು, ಕೆಳಗಿನ ವಿಳಾಸದಾರರಿಗೆ ಪೋಸ್ಟೇಜ್ ಸ್ಟಾಂಪು ಮನಿಯಾರ್ಡರ್ ರೀತಿ ಸ್ಟಾಂಪು ಮೂಲಕವಾಗಿ ಮುಂಗಡವಾಗಿ ಚಂದಾಮೊಬಲಗು ರವಾನಿಸಬೇಕು. ಒಟ್ಟಾಗಿ ೫೦ ಪ್ರತಿಗಳಿಗೆ ಮೊಬಲಗು ಕಳುಹಿಸಿದವರಿಗೆ ೧ ಪ್ರತಿಯು ಜಾಸ್ತಿಯಾಗಿ ಕಳುಹಿಸಲ್ಪಡುವದು. ಪ್ರತಿಯೊಂದಕ್ಕೆ ವರುಷ ೧ಕ್ಕೆ ಚಂದಾಮೊಬಲಗು ರೂ॥೧—, ೫— ೦. ಪೋಸ್ಟೇಜು ಭಾರ್ಜ್ಜು. ೦—೬—೦ ಮತ್ತು ಅರ್ಧ ಆಣೆಗೆ ೪ ಕಾಪಿ ಕಳುಹಿಸಬಹುದು. ಬಿಡಸಂಚಿಕೆಗಳು ಕೊಡುವದಕ್ಕಾಗುವದಿಲ್ಲ. ಹಣವಿಲ್ಲದೆ ಬರುವ ಕಾಗದಗಳಿಗೆ ನಿಗೇವಾನಿ ಕೊಡುವದಿಲ್ಲ.

ಮುಂಡಯಂ॥ ಆಜೀ॥ ರಾಮಾನುಜೈಯ್ಯಂಗಾರ್
ಹೊಸಅಗ್ರಹಾರ
ಮೈಸೂರು.

N. B. Please return this copy after perusal if not required.

M. A. Ramanuja Iyengar
Hosa Agraharam
Mysore

1889 NEWS PAPER EXPITION
ಕರ್ನಾಟಕ ಭಕ್ತ ಮಂಡಲ DELHI - 57 524.
ಶಿವಮೊಗ್ಗೆ Dist, Karnataka State, IND

೧. ಕೀರ್ತನ ಮೊದಲಾದವುಗಳಲ್ಲಿ ಮೂಲಕ ಧರ್ಮಜ್ಯೋತಿಯನ್ನು ಹರಡುವದು. ೨. ಅಂಥ ಗ್ರಂಥಗಳನ್ನೂ ಲೇಖನಗಳನ್ನೂ ಪ್ರಕಟಿಸುವದು. ೩. ಅಂಥ ಬೋಧಕರಿಗೂ ಲೇಖಕರಿಗೂ ಪ್ರೋತ್ಸಾಹವನ್ನು ತೋರಿಸುವದು. ೪. ಅಂಥವರನ್ನು ಸಿದ್ಧಗೊಳಿಸುವ ಶಿಕ್ಷಣಾಲಯವನ್ನು ಏರ್ಪಡಿಸುವದು. ೫. ಸಮ್ಮೇಲನವನ್ನು ನಡೆಸುವದು.

ಅ ಧಿ ಕಾ ರಿ ವ ರ್ಗ.

೧. ರಾಜಸಭಾಭೂಷಣ ಕವೀಶ್ವರ ಶ್ರೀನಿವಾಸರಾಯರು (ಅಧ್ಯಕ್ಷರು) ೨. ಶ್ರೀಯುತ ವಿ. ಬಿ. ಅಲೂರ, ಧಾರವಾಡ, (ಉಪಾಧ್ಯಕ್ಷರು) ೩. ಶ್ರೀಯುತ ಜಯರಾಮಾಚಾರ್ಯ ಕೊಪ್ಪಳ (ಕಾರ್ಯದರ್ಶಿ) ೪. ಶ್ರೀಯುತ ಎಚ್. ಚಿದಂಬರಯ್ಯ, ಕೋಶಾಧಿಕಾರಿ ಮತ್ತು ಸಂಪಾದಕ.

« ಭ ಕ್ತ ಬಂ ಧು. »

ಇದು ಭಕ್ತಿರಸಪ್ರವಾಹರೂಪವಾದ ಉಪನ್ಯಾಸಗಳ ಭಾಂಡಾರ; ಹರಿಕಥಾ (ಕೀರ್ತನ) ವಿಚಾರಗಳ ರಂಗಸ್ಥಳ; ಧರ್ಮವನ್ನು ಹಿಡಿಯುವದರಿಂದಲೇ ನಿಜವಾದ ಸಾರ್ವಜನಿಕಹಿತವಾಗುವದೆಂಬ ಅಭಿಪ್ರಾಯಗಳ ವಿಹಾರಸ್ಥಾನ; ಉದಾರಗಳಿಗೆ ಮೂಲವಾದ ವಿಚಾರಗಳ ನೆನಪುಗೊಡುತ್ತ ವಿದೇಶೀಯರ ಪದ್ಧತಿಗಳೊಡನೆ ತುಲನೆಮಾಡಿ ಭಾರತೀಯರ ಪದ್ಧತಿಯ ಗೌರವವನ್ನು ಮನಗಾಣಿಸುವಂತೆ ಬರೆದ ಪವಿತ್ರಚರಿತ್ರೆಗಳ ಸುಕ್ಷೇತ್ರ; ಮುಖ್ಯವಾಗಿ ಕರ್ನಾಟಕದಲ್ಲಿ ಸ್ವದೇಶಪ್ರೀತಿ, ಸ್ವಭಾಷಾಭಿಮಾನ, ಸ್ವಧರ್ಮಾನುರಾಗ, ನಿಸ್ವಾರ್ಥತ್ಯಾಗ—ಇವುಗಳನ್ನು ಎಚ್ಚರಗೊಳಿಸುವ ಅತ್ಯುತ್ತಮವಾದ ಉಪಕರಣ.

ಕರ್ನಾಟಕದಲ್ಲೆಲ್ಲಾ ಗುಡುಗಾಡುವ ಇದರಲ್ಲಿ ಪ್ರಕಟಿಸುವದಕ್ಕೆ

	೧ ವರ್ಷಕ್ಕೆ	೬ ತಿಂಗಳಿಗೆ	೩ ತಿಂಗಳಿಗೆ	೧ ತಿಂಗಳಿಗೆ
೧ ಪುಟಕ್ಕೆ	೩೬—೦—೦	೨೦—೦—೦	೧೦—೦—೦	೪—೦—೦.
ಅರ್ಧ ,,	೧೮—೦—೦	೧೦—೦—೦	೬—೦—೦	೨—೮—೦.
ಕಾಲು ,,	೯—೦—೦	೫—೦—೦	೩—೦—೦	೧—೮—೦.

ಪುರವಣಿಗಳನ್ನು ಹಂಚುವ ದರ ೧೦೦ಕ್ಕೆ ೦—೩—೦

ವ್ಯವಸ್ಥಾಪಕ, ಭಕ್ತಬಂಧು ಕಾರ್ಯಾಲಯ,
ಬೆಂಗಳೂರು ಸಿಟಿ.

KARNATAKA WAIBHAWA

ಕರ್ನಾಟಕ ವೈಭವ.

WORLD NEWS PAPER EXIBITION
ANAVALLI 577524
Shimoga Dist. Karnataka State, INDIA



1892

ಪ್ರಾಣಾ ನಿರ್ಗಮಃ ಸಾರ ಸಂಸಾರಿಣಿ ಸಂಸ್ಕೃತಃ ಪ್ರಕಾಶಃ ಪ್ರತಿಸ್ಪರ್ಧಿ ಕಮಾಯುರ್ವೇದಿಗಧ್ವನಿತಿಃ ಪ್ರತಿಧ್ವನಿ
ಗೀತಾಪ್ತವಿದ್ವಜ್ಜಿಹ್ವಿಡಿಂಡಿಮಃ ಪ್ರೌಢಾಂತಿಮಪ್ರತಿಮಿಡಿಂಡಿಮಃ ಪ್ರತ್ಯಾಶಾಸ್ತ್ರಸಮಾಪ್ತಿಡಾಮರಃ ಪ್ರತಿಭಟದ್ವಂದನಃ ॥೧॥

Published every Saturday

ವರ್ಷ ೧ ವಿಜಾಪೂರ ಶನಿವಾರ ತಾರೀಖು ೧೯ ಮೇಪ್ರೆ ಮಾರ್ಚ್ ಸನ್ನೆ ೧೮೯೨ ಅಂಕ ೩

ಚಂದಾ ನಿರ್ಣಯ.

ವರ್ಷ ವಂಜಕ್ಕೆ ಮುಂಗಡ. ೬ ರೂಪಾಯಿ.
,, ಒಂದಿನಿಂಗ ೩ ರೂಪಾಯಿ
ಒಂಟಿಯಾಗಿ ವಾಸಸ್ಥರಿಗೆ ೧॥ ಸಾಲಾಯಿ.
ವಿದ್ಯಾಲಯ ನಿವಾಸಿಗಳಿಗೆ ೧। ಸಾಯಿ.
ಪಡಿ ಪತ್ರಕ್ಕೆ ೨ ಅಣೆ.

ಟಪಾಲ ಹಾಸೆಲು ಚೀರೆ ಇಲ್ಲ.

ಪತ್ರಿಸುವು ಆರಂದಿನಿಂದ ಯರಡು ತಿಂಗಳ ವಳಗಾಗಿ ಚಂ
ದಾವರಕಮುಂಗಡರ ಮುಂಗಡವೆಂದು ತಿಳಿಯಲಾಗುವದು.

ನೋಟೀಸು ಭಾಷಿಸುವ ದರವು.

೧೦ ಒಂದು ಪಂಕ್ತಿಗಳಿಗೆ ೧ ರೂಪಾಯಿ
ಆ ಮೇಲೆ ವರವಂದು ವಂಕ್ತಿಗೆ ೧। ಆಣೆ.

ಒಪ್ಪಿಕೆ ಮುದ್ದತೀ ವರೆಗೆ ಇಲ್ಲವೆ ಕಾಯಂವಾಗಿ ಕೊಡುವವೋ
ನೋಟೀಸುಗಳಿಗೆ ಸೋಯೀ ದರವು ಗೊತ್ತು ಮಾವ್ವಡುವದು

THE LOVE OF ONE'S OWN COUNTRY.

Oh! Scorn him not! – the strength whereby
The patriot girds himself to die,
The unconquerable power that fills
The freeman battling on his hills,–
These have one fountain deep and clear
The same whence gushed that childlike tear!

ಮೇಲಿನ ಇಂಗ್ಲೀಷ ಪದ್ಯ ಕಂನಡಿಸಿದ್ದು.

ಜನ್ಮ ಭೂಮಿಯ ಅಕ್ಕರತೆಯು.

ರಾಗ---ನಾವೇರಿ, ತಾಳ ತ್ರಿವಿಡಿ.

ಬಾಮಿನಿ -- ಹಳಿಯ ಬೇಡಿರಿ, ಬೀಡಿರಯ್ಯಾ।
ತಳ್ಳಿದ ಭೂಜನನಿಯನು ಸೇವಕ।
ನಳಿಗಂಡದೆ ಸಿದ್ಧನಾಗುವ ಕಾಯುವದೆ ಕೆಲವು ॥

ಜಲವಿಂದೆಂತೊ ತಾಯಿಯಗಲಿದ ।
ರಿದ ಪಸು ಮಗು ವಿಜರ ತೆರದಿಂ ।
ಬಲವ ತೋರುವ ನುಂಟು ನಾವೇಕವಿದು ತಿಳಿ
ಯಂದ್ರು "೧॥ [ಕುಸುಮಾಂಜರಿ.]

(ನೆನೆಯಲ್ಲಿತ ತಕ್ಕ ಸಂಗತಿಗಳು)

ಕನತ ಮಾಡಿಸು ಬಗ್ಗೆ ಉದ್ಗಾರವು.

ಕಂನತ ಮಾಡಿಸು ಬಗ್ಗೆ ನಂಮ ಮನಸಿನೊಳಗೆ ಯಪಾವಾಗಲೂ ಕುಮಿಯುವ ಉದ್ಗಾರಗಳು ಏನು ಮಾಡಿದರೆ ಹೊರ ಬೀಳುವವೆ? ಎಂಬ ಪ್ರಶ್ನೆಗೆ ಕ್ರತ್ಯುತ್ತರವಾಗಿ ಹೀ ಗೆ ಹೇಳಿ ಬರೆಂದಲ್ಲಿ ಸಂಸಾರದ ತೊಂದರೆಗಳಲ್ಲಿ ವೀಸತ್ತು ಬಾಯಿಬಾರಿ ವೈರಾಗ್ಯವನು ಹುಡಕ ಹೊರಿದರೆ ನಾವ್ರಯಾವ ತರದ ವೈರಾಗ್ಯವನು ಸ್ವೀಕರಿಸ ಬೇಕೆಂಬುದು ನಮಗೆ ತಿಳಿಯುವದಿಲ್ಲ. ಅರಣ್ಯಕ್ಕೆ ಹೋಗಿ ಮನಸಂಯಮನ ಮಾಡಿ ಧ್ಯಾನಿಸುವ ದಿನವಾನಗಳಂತೂ ಕೋಗೇ ಹೋದವು. ಆದ್ದರಿಂದ ಈಗಿನ ದಿನವಾನದ ಮೇರಿಗೆ ಲೋಕ ಹಿತದ ಮೂಲ ತತ್ವವನು ವೈವಹಾರ ದೃಷ್ಟಿಯಿಂದ ನೋಡುವದೂ, ಸ್ವಹಿತ, ಸ್ವಾಭಿಮಾನಗಳನು ಪುರ್ಯಸುವವರ ಕಡಿಗೆ ಹಾತೋರಿಸದೇ ಇರುವದೂ, ಇವೇ ನಿಜವಾದ ವೈರಾಗ್ಯದ ಚಿನ್ಹಗಳಿರುವದರಿಂದ ಂಥ ವೈರಾಗ್ಯವಿನ್ನರೆ ಪತ್ರಿಕ ಉದ್ಗಾರಗಳು ತಾವಿಂದ ತಾವೇ ಹೊರ ಬೀಳುವವು

* * *

ತಂಮ ತಂಮ ಗೌರವವನು ಕಾಲೀನರು ಹ್ಯಾಗೆ ಇಟ್ಟುಕೊಳ್ಳಬೇಕು.

ನುವ್ರು ಬೇಕಾದಷ್ಟು ಸಂಸಾರದ ವ್ಯಾಪಿನಲ್ಲಿ ತೊಡಗಿದಾಗ್ಯೂ ನಂಮ ಮನೆತನದ್ದಾಗಲೀ ನಂಮ ಜನ್ಮ ಭೂಮಿಯದಾಗಲೀ ಇಲ್ಲವೆ ನಂಮ ದೇಶದ್ದಾಗಲೀ ಸದ್ಯಕ್ಕೆ ವ್ರಂಟಾದ ದೀನಸ್ಥಿತಿಯ ಬಗ್ಗೆ ನಾವ್ರು ಯಾವಾಗಲೂ ಹಳಹಳಿಸುತ್ತಿರಬೇಕು. ಮತ್ತು ಇಂಥೆ ಉದ್ಗಾರಗಳನು ಧರಿಸು



ಮೂಸ ಮಾಸಗಳ್ಳೆ ಪ್ರಕಟವಾಗುವದು.

ಸಳ್ಳಂ ವಸಾತಾ ವೀಹಾ ಜ್ಞಾನೇಂ ಧರ್ಮೇ ಧ್ಯಾಸಾ ದಯೂಂ ಪವಿತ್ರಾ
ಶಾಂತಿ ಪತ್ಸೀ ಕ್ಷಮಾ ಸೂಸು ಪಡ್ಲೆತ ಮುಸು ಜಾಂಧವಾ ಪ್ರಭಾವಪಣ್ಣಿ

ಸಂಚಿಕೆ X ಅಂಕ ೭	ಫೇಬ್ರುವರಿ ೧೯೦೬.	ವರುಷ ೧ ಕ್ಕೆ ೧ ರೂ. ೪ ೮

(1906)

ಅನುಕ್ರಮಣಿಕೆ

	ಪುಟ.
ಸ್ವಾರ್ಥತೆ...	145
ಆರ್ಯಧರ್ಮ	150
ಮಂಗಳ ನಾಗಳ ಸಂಭಾಷಣೆ	155
ವಿವಿಧ ವಿಷಯ ಮಂಜರಿ...	161
ಲೋಕ ವ್ಯವಹಾರ ಬೋಧಿನಿ (ಭೂಖಾನಾ ಮೋದನವು) ...	165
ವಿಚಿತ್ರಕಥಾವಳಿ	166
ದಿವ್ಯ ಮಾತುಗಳು	167

UDIPI.

PRINTED AND PUBLISHED AT THE HINDU PRESS,
1906

K. S. Narasimha Murthy
Land Broker & Patel,
KUTHAMUTTUR, (NAGAMANGALA TALUK)

ಸುದರ್ಶನ

"ಸತ್ಯಂ ಮಾತಾ ಪಿತಾ ಜ್ಞಾನಂ ಧರ್ಮೋ ಭ್ರಾತಾ ದಯಾ ಸಖಾ॥
ಶಾಂತಿಃ ಪತ್ನೀ ಕ್ಷಮಾ ಸೂನುಃ ಷಡೈತೆ ಮಮ ಬಾಂಧವಾಃ॥ಭಾರತ

ಸಂಚಿಕೆ X ಅಂಕ ೭ | ಫೇಬ್ರವರಿ ೧೯೨೬ | ವರುಷ ೧೫ಕ್ಕೆ ರೂ ೧ ೮ ೮

ಸ್ವಾರ್ಥವು

"ಸ್ವಾರ್ಥ" ವೆಂಬ ಶಬ್ದದ ಮೂಲಾರ್ಥವು (ಸ್ವ + ಅರ್ಥ) ಅಂದರೆ ತನ್ನ ಧನ ವೆಂತಲೂ, ಪ್ರಯೋಜನವೆಂತಲೂ ಆಯಿತು. ತನ್ನ ಪ್ರಯೋಜನದ ಸಂಗತಿ ಯಾವದುಂಟೋ ಅದೇ ಸ್ವಾರ್ಥವೆಂತಾಯಿತು. ಈ ಪ್ರಪಂಚದಲ್ಲಿ 'ಸ್ವ' ಮತ್ತು 'ಪರ' ವೆಂಬ ಭೇದ ದ್ವಯಗಳುಂಟಾಗಿ ಜನರನ್ನ ಬಹಳ ಪೀಡಿಸುತ್ತವೆ. ಪ್ರತಿ ಒಬ್ಬನು ತನ್ನ ಹಿತವನ್ನು ಬಯಸುತ್ತಾನೆ ಹೊರತು ಪರಹಿತಕ್ಕೆ ಉದ್ಯುಕ್ತನಾದವನು ಕಾಣುವದಿಲ್ಲ. ಯಾವದೇ ಆಗಲಿ ತನ್ನ ಮನೆ, ತನ್ನ ಒಡವೆ, ವಸ್ತು ಮುಂತಾದವುಗಳನ್ನು ಪ್ರೀತಿಸುತ್ತಾರಲ್ಲದೆ ಪರರ ಕುರಿತು ಆಲೋಚಿಸುವದಿಲ್ಲ. ಆದರೆ ಸೃಷ್ಟಿಕರ್ತನೂ ಪ್ರಪಂಚ ರಚಿಸಿದವನಾದ ಈಶ್ವರನು ಸ್ವ ಪರ ಭೇದಗಳನ್ನು ಮಾಡಿ ಹಾಕಿದರೂ ಇವುಗಳನ್ನು ಒಂದಕ್ಕೊಂದು ಜೊತೆಗೊಳಿಸಿದ್ದಾರೆ. ಅದು ಹ್ಯಾಗಂದರೆ, ಒಬ್ಬನು ತನ್ನಹಿತ ಸಾಧಿಸ ಬೇಕಾದರೆ ಪರಹಿತದ ಕಡೆಗೆ ಲಕ್ಷ್ಯ ಕೊಡದೆ ಅಸಾಧ್ಯವಾಗುತ್ತದೆ. ಆ ಸಂಗತಿ ಗೊತ್ತಿದ್ದು

ಅನೇಕರು ಜೂತಯಾಗಿದ್ದ 'ಸ್ವಪರ' ಸೌಖ್ಯಗಳನ್ನು ಆಲೋಚಿಸದೆ ದೇಶಕ್ಕೆ ಪಾತ್ರರಾಗುತ್ತಾರೆ. ಪರಹಿತವಿಲ್ಲದೆ ಸ್ವಹಿತವಾಗುವದಿಲ್ಲ. ನಾವು ಪ್ರಪಂಚದಲ್ಲಿ ನಡಿಸುವ ಯಾವ ಕಾರ್ಯಗಳಿಗೆ ಪರರ ಸಹಾಯವಿಲ್ಲದೆ ಸಾಧ್ಯವಾದೀತು ? ಐಶ್ವರ್ಯವಂತರಾದರೂ ತಮ್ಮ ಸ್ವಹಿತಕ್ಕಾಗಿ ಮಾಡುವ ಅನೇಕ ಕಾರ್ಯಗಳ ಜೊಕೆ ಭೋಜನದ ಕುರಿತು ಆಲೋಚಿಸುವಾಗ್ಗೆ ಒಬ್ಬನು ಅನೇಕ ಜನರೀಗೆ ಒಂದು ದೊಡ್ಡ ಊಟ ಕೊಡಬೇಕೆಂದು ಇಚ್ಛಿಸಿದರೆ ಆ ಕಾರ್ಯಕ್ಕೆ ತಕ್ಕ ಹಾಗೆ ಅನೇಕ ಮಂದಿ ಜನರು ಅಗತ್ಯವಿರುತ್ತಾರೆ. ಅವರನ್ನು ಊಟಕ್ಕೆ ಕರೆದು ಅವರ ತೃಪ್ತಿಯನ್ನು ಮಾಡಿ ತನ್ನ ಹಿತ ಸಾಧಿಸುವದೇ ಅತನ ಕರ್ತುತ್ವವು.

ಈ ವ್ಯವಹಾರದಲ್ಲಿ ಈರ್ವರಿಗೂ ಇರುವ ಪರಸ್ಪರ ಭೇದವು ಅವರವರು ಮಾಡತಕ್ಕ ಕಾರ್ಯವ್ಯಾಪದಂತ ನೋಡಿದರೆ ಊಟ ಕೊಟ್ಟವನು ಏನೋ ಒಂದು ಅಭೀಷ್ಟಸಿದ್ಧಿಗೋಸ್ಕರ ಅನೇಕ ಮಂದಿ ಜನರಿಗೆ ಊಟ ಕೊಟ್ಟು ತೃಪ್ತಿ ಮಾಡಿಸ ಬೇಕಾಯಿತು. ಆ ಸಲುವಾಗಿ ಬಂದವರು ಊಟ ಮಾಡಿ ಹೋಗುವವರಾದರೂ ತನ್ನ ಹಿತದಗೋಸ್ಕರಬಂದವರೆಂತ ಈತನು ತಿಳುಕೊಂಡು ಅವರಿಗೆತಕ್ಕ ಉಪಚಾರಗಳೂ ಮಾಡಿ ಸಂತೋಷ ಪಡಿಸಿ ಕಳುಹಿಸ ಬೇಕು. ಊಟಕ್ಕೆ ಬಂದವರು ಕೂಡಾ ತಾವು ಊಟಾ ಮಾಡುವದು ಪರಹಿತಕ್ಕಿಂತ ಆಲೋಚಿಸದೆ ತನ್ನ ಹಿತದ ಕೆಲಸವೆಂತ ತಿಳುಕೊಂಡು ಅಮಂತ್ರಣವಾದ ಕೂಡಲೇ ಆ ಮಂತ್ರಿಕನ ಅಪೇಕ್ಷೆ ಸಿದ್ಧಿಸ ಬೇಕು. ಪ್ರತಿಯೊಬ್ಬನು ಪರಹಿತವನ್ನೇ ಆಲೋಚಿಸ ತಕ್ಕದ್ದೇ ಹೊರತು ತನ್ನ ಹಿತವನ್ನೇ ಬಯಸುವವರಾದರೆ ಉಪಯೋಗವಿಲ್ಲ. ಕೆಲವರು ಪರಹಿತವನ್ನು ಬಯಸುತ್ತೇವೆಂತ ಕಾಣಿಸಿಕೊಂಡು ಅಂತರಂಗದಲ್ಲಿ ತನ್ನ ಹಿತವನ್ನು ಆಲೋಚಿಸಿ ಮೂರ್ಖತನದಿಂದ ಸ್ವಹಿತ ತಪ್ಪಿ ಪೋದಿತೆಂತ ತಿಳುಕೊಂಡು ದ್ರೋಹನೆಣಿಸುವರು ಅದರಿಂದ ತಾವೇ ಹಾನಿಯಾಗಿ ಹೋಗುವರು. ಪ್ರತಿಯೊಬ್ಬನೂ ತಾನು ಮಾಡುವ ಕೆಲಸ ಪರಹಿತಕ್ಕಿಂತ ತಿಳಿಯುವೆ ಪರ್ಯವಸಾನದಲ್ಲಿ ತನ್ನ ಅಭಿಷ್ಟವೇ ಎಂತ ಗ್ರಹಿಸಿ ಕಾರ್ಯ ಸಾಧನೆ ಮಾಡ ಬೇಕು.

ಮೇಲೆ ಹೇಳಿದ ಸಂಗತಿಯಲ್ಲಿ ಆಮಂತ್ರಿಕನೂ ಆಮಂತ್ರಣಸ್ವೀಕಾರಿಯು ಈರ್ವರಲ್ಲಿ ಯಾರ್ಯಾರು ಹ್ಯಾಗೆ ತಿಳುಕೊಳ್ಳ ಬೇಕು. ಆಮಂತ್ರಿಕನು ಊಟ ಕೊಡುವದು ತನ್ನ ಸ್ವಹಿತಕ್ಕೆಂತಲೇ ನೆನಸ ಬೇಕು. ಮತ್ತು ಸ್ವೀಕಾರಿಗೆ ಸ್ವೀಕಾರದ ಬದಲಾಗಿ ವಂದನೆ ಮಾಡಿ ಆತಿಥ ಸತ್ಕಾರ ಗೈಯು ಬೇಕು. ಸ್ವೀಕಾರಿಯು ಆಮಂತ್ರಿಕನು ತನ್ನ ಹಿತಕ್ಕೆನೇ ಆಮಂತ್ರಿಸಿದ್ದು ಎಂತ ತಿಳುಕೊಳ್ಳದೇ ಸ್ವೀಕಾರಿಯ ಹಿತಕ್ಕೆಂತ ತಿಳುಕೊಂಡಲ್ಲಿ ಈರ್ವರಲ್ಲಿಯೂ ಇರುವ ಪರಸ್ಪರ ಸ್ನೇಹ ಸಂಬ್ಮಂಧಗಳು ವೃದ್ಧಿಯಾಗುತ್ತವೆ. ಮತ್ತು ಹೀಗೆ ಆಗುತ್ತಾ ಆಗುತ್ತಾ ಇಡೀ ಲೋಕದ ಹಿತ ನಡಿಯುತ್ತದೆ. ಆದರೆ ಜನರು ಈ ಮಹ ಸಂಗತಿಯನ್ನು ವಿಚಾರ ಮಾಡದೆ ಮರೆತು ಬಿಡುತ್ತಾರೆ. ಮತ್ತು ಈ 'ಸ್ವಾರ್ಥ' ಗುಣವು ಬೇರೆಯಾವ ಜನಾಂಗದವರಲ್ಲಿರುವದಕ್ಕಿಂತ ಹಿಂದುಗಳೆಂತ ಕರೆಯವಲ್ಪಡುವ ನಮ್ಮಗಳಲ್ಲಿ ಪಾರಬಲ್ಯವಾಗಿ ಆಬೆ. ಈ ಗುಣವು ಪೂರ್ವದಾರಭ್ಯ ನಮ್ಮ ಪೂರ್ವಜರಲ್ಲಯೂ ಇರುತಿದ್ದರೆ ಹಿಂದುಗಳೆಂಬ ಜನಾಂಗವು ಸೂರ್ಯ ಪ್ರಕಾಶಕ್ಕೆ ಮುಂಬೀಳುತ್ತಿದ್ದಿಲ್ಲ. ಸ್ವಾರ್ಥ, ಅಸೂಯಾ ಮುಂತಾದ ಗುಣಗಳಿಂದ ನಮ್ಮ ಪೂರ್ವಜರಾದ ಆರ್ಯರು ಅಲಂಕೃತವಾಗಿದ್ದರೆ ಅವರು ಅಷ್ಟು ಅಭಿವೃದ್ಧಿಯನ್ನು ಹೊಂದಿ ಪೂರ್ವದಲ್ಲಿ ರಾಜ್ಯ ಮಾಡುತ್ತಿದ್ದಿಲ್ಲ. ನಮ್ಮಗಳಿಗೆ ಈ ರೀತಿಯಲ್ಲಿ ಜನ್ಮವೇ ಇರುತ್ತಿದ್ದಿಲ್ಲ. ಅವರು ಆ ಗುಣಗಳನ್ನು ರಿಪು ಪಾರ್ಶ್ವವಾಗಿ ತಿಳಕೊಂಡು ಅಲ್ಲಲ್ಲಿ ಅಣಗಿಸುತ್ತಿದ್ದರು. ಈಗ ನಮ್ಮ ಜನರು ಅವುಗಳನ್ನು ಲಕ್ಷಿಸದೇ ಸ್ವಾರ್ಥ ಸಾಧಿಸ ಬೇಕೆಂಬ ಆಶೆಯಿಂದ ಅದಕ್ಕೆ ಬೇಕಾದ ಸಾಧನೆಗಳು ಮಾಡದೇ ದುಃಖ ಸಂತಾಪಗಳೆಂಬ ಸಾಗರದಲ್ಲಿ ಮುಳುಗುತ್ತಾರೆ.

ಪ್ರತಿ ಒಬ್ಬಗೂ ತನ್ನ ಸ್ವಾರ್ಥವೆಂಬವದು ದೊಡ್ಡದು. ಅದನ್ನು ಸಾಧಿಸಲಿಕ್ಕೆ ಅವನು ಅದಷ್ಟು ಪರಿಶ್ರಮ ಮಾಡುವದು ಸಹಜವೇ. ಆದರೆ ಅದಕ್ಕೆ ತಕ್ಕ ಮಾರ್ಗಗಳು ಇರುತ್ತವೆ. ಮುಖ್ಯ ಮಾರ್ಗ ಯಾವದಂದರೆ— ಪರಹಿತದ ಮೇಲೆ ದೃಷ್ಟಿ ಇಟ್ಟು ಒದ್ದಾಡಿದರೆ ತನ್ನ ಹಿತವು ತನ್ನಷ್ಟಕ್ಕೆ ಕೈಯೆಲ್ಲಿ ಬರುವದು. ಅದನ್ನು ತನ್ನದೇ ಮುಖ್ಯವೆಂತ

ತಿಳುಕೊಂಡರೆ ಕೇಡಿಗ ಪಾತ್ರನಾಗುತ್ತಾನೆ. ಆದು ಹ್ಯಾಗಂದರ: ಬೆಳೆ ಪ್ಪ ಬುದ್ಧಿಯು ತನ್ನ ಹಿತವನ್ನೆ ಬಯಸಿ ಕಡೆಗೆ ಸಂಕಷ್ಟ ಪಟ್ಟನು. ಚಂದ್ರಹಾಸನೀಗೆ ಆತನು ಒಳ್ಳಿತನ್ನು ಬಯಸಿರುತ್ತಿದ್ದರೆ ಆತನು ಸಹಜವಾಗಿ ಕುಂತಳ ದೇಶದ ಧೊರೆಯಾಗಿ ಈತನ ಕುಮಾರಿಯಧವನಾಗಿ ಈತನಂ ನು ಸಂತೋಷ ಪಡಿಸುತ್ತಿದ್ದನು. ಚಂದ್ರಹಾಸನ ಮೇಲಿನ ಅಸೂಯೆ ಯಿಂದ ಮತ್ತು ತನ್ನ ಸ್ವಾರ್ಥವೆಂತಲೇ ತಿಳುಕೊಂಡು ನಡಿಸಿದ ದ್ರೋಹ ಕೃತ್ಯಗಳಿಂದ ಆತನ ಗತಿ ನೋಡಿರಿ!

ಸ್ವಾರ್ಥವನ್ನು ಸಾಧಿಸುವ ಕ್ರಮಗಳು ನಮ್ಮ ವಿಲಾಯತಿ ಧೊರೆಗ ಳಲ್ಲಿ ಸೊಗಸಾಗಿ ಇವೆ. ಇವರು ನಾಗರೀಕ ತನದ ಶಿಖರಕ್ಕೆ ಮುಟ್ಟಿ ದ್ದು ರೆಲ್ವೆ ತಂತಿ ಟಪಾಲು ಮುಂತಾದ ಅನೇಕ ಪ್ರಪಂಚಿಕ ಸಾಧನೆ ಳನ್ನು ಹುಡುಕಿ ತೆಗದದ್ದು ಮೇಲೆ ಹೇಳಿದ ಕ್ರಮಗಳಿಂದಲೇ ಆಗಿರುತ್ತದೆ. ಇವರು ಪೂರ್ವದ ಹಿಂದುಗಳಂತೆಯೇ (Selfisness) ಯೆಂಬ ಅಸೂ ಯಾ ಗುಣ ಭರಿತವಾದ ಸ್ವಾರ್ಥವನ್ನು ಹೋಮ ಮಾಡಿ ಲೋಕೊದ್ಧಾ ರದ ಕಡೆಗೇ ದೃಷ್ಟಿಯಿಟ್ಟು ಕೆಲಸ ಮಾಡಿದ್ದರಿಂದ ಇಷ್ಟು ಅಭಿವೃದ್ಧಿಯ ನ್ನು ಹೊಂದಿ ನಿಜವಾಗಿ ಸುಖಿಗಳಾಗಿರುತ್ತಾರೆ.

ಈಗ ಮುಂಬ್ಯಾ ಬಂದರದ ಐಶ್ವರ್ಯದ ಕುರಿತು ಯೋಚಿಸಿದರೆ ಅ ದು ಇಂದ್ರಭವನದ ಹಾಗೆ ಕಾಣುತ್ತದೆ. ಹಾಗಾದರೆ ಅದರ ಐಶ್ವರ್ಯ ಯಾವದರಲ್ಲಿ ಉಂಟು ? (Coal) ಎಂಬ ಕಲ್ಲಿದ್ದಲಿನ ಹೊಗೆಯಲ್ಲಿದೆ ಎಂ ತ ಹೇಳಿದರೆ ಸಮಾಧಾನವಾದೀತೇ ? ನಾಲು ನಾಲಾಗಿ ದೊಡ್ಡ ಪರ್ವ ತಗಳ ಹಾಗೂ ಅನೆಗಳ ಹಾಗೂ ನಾನಾ ತರದ ಆವಾಜುಗಳನ್ನು ಮಾಡು ವ ಉಬ್ಬಿ ಹಡಗಗಳು ವಾರ ವಾರಕ್ಕೆ ಮುಂಬಾಯಿಗೆ ತಂದು ಹಾಕುವ ಜೀನ್ಸುಗಳೂ ಅವುಗಳು ಮುಂಬಾಯಿಂದ ತಿರಿಗಿ ಹೋಗುವಾಗ್ಯೆ ಬಾಚಿ ಕೊಂಡು ಹೋಗುವ ಜೀನ್ಸು ಲೆಖ್ಖ ಮಾಡಿರಿ. ಇದರಲ್ಲಿಯೇ ನಮ್ಮ ಸ ರಕಾರಗಳು ವಾರಾಟವಾಗಿ ನಮ್ಮದು ನಮಗೂ ಅವರದು ಅವರಿಗೂ ಶಿಕ್ಕು ತ್ತದೆ. ಮಲ್‌ಮಲ್ ಮತ್ತು ನೇಮಸೂತೆ ವಿಲಾಯತಿಯಿಂದ ಬರುತ್ತವೆ. ಮಿಂಚೆಸ್ಟರ ಪಟ್ಣದ ಸಾಹುಕಾರರು ಇಚ್ಛಿಸಿದರೆ ಆದು ನಮಗೆ ಶಿಕ್ಕದ ಹಾ

ಗೆ ಮಾಡಿ ಬಹುದು. ಆಗ್ಯೆ ನವುಗೆ ಇಷ್ಟು ಯೋಗ್ಯವಾದ ಉಡಿಗೆ ಶಿಕ್ಷಣೆ ನವ್ಮ ದೇಶೆಯ ಉಡಿಗೆಗಳಿಂದ ತೃಪ್ತಿಹೊಂದ. ಬೇಕಾಗುತ್ತದೆ. ಬಳ್ಳಾರಿ, ಕಡಪಿ, ಹುಬ್ಬಳ್ಳಿ ಮುಂತಾದ ಪ್ರಾಂತ್ಯೆಗಳಲ್ಲಿ ಇರುವ ಬಡ ಬಗ್ಗರು ಅರಳೆಯ ಬೆಳಿ ಮೂಡದೆ ಇದ್ದರೆ ಮೆಂಚೆಸ್ಟರ ಪಟ್ಟಣದ ಸಾಹುಕಾರರು ದಿವಾಳಿ ತೆಗಿಯ ಬೇಕಾದೀತು. ಈ ಗುಟ್ಟು ನವ್ಮ ಇಂಗ್ಲಿಷ ಜನರಿಗೆ ತಿಳಿದು ಸುಖ ಸಂತೋಷಗಳನ್ನು ಅನುಭವಿಸುತ್ತಾರೆ.

ನವ್ಮ ಹಿಂದುಗಳು ಇಷ್ಟು ಹೀನ ಸ್ಥಿತಿಗೆ ಬಂದದ್ದು ಇತ್ತಲಾಗಿನ ನವ್ಮಗಳ ವ ಹಿಂದಿನ ಪೂರ್ವಜರ ಸ್ವಾರ್ಥಗುಣಗಳಿಂದಲೇ ಹೊರತು ಬೇರೆ ವಿಧವಲ್ಲ. ಪರಹಿತ ತನ್ನ ಹಿತವೆಂದು ನೆನಸಿದವರು ಜಯಶಾಲಿಗಳಾದರು. ತನ್ನ ಹಿತವನ್ನು ಮೊದಲು ಸಾಧಿಸಿಕೊಂಡು ಪರಹಿತ ಅನಂತರ ನೋಡುವಾ ಎಂತಾ ತಿಳುಕೊಂಡರೆ ಅದೇ ಆತ್ಮಹತ್ಯೆ. ಇದಕ್ಕೆ ದುಷ್ಟ ಬುದ್ಧಿಯ ದೃಷ್ಟಾಂತ; ಹಿಂದುಗಳ ರಾಜ್ಯ ಮುರಿದು ಹೋಗಲಿಕ್ಕೆ ಕಾರಣವೇನೆಂತ ಇತಿಹಾಸದ ಕಡೆಗೆ ಅವಲೋಕಿಸಿದರೆ ಪೂರ್ವದಲ್ಲಿ ಸುಮಾರು ೯೦೦ ವರುಷಗಳ ಹಿಂದೆ ಕಾಬೂಲ ಪ್ರಾಂತ್ಯದಿಂದ ಮುಸಲಮಾನರ ಒಂದು ಪಡೆಯು ಮಹಂಮದ ಘೋರ ಎಂಬ ಅಸುರನ ಕೆಳಗೆ ಹಿಂದುಸ್ಥಾನದ ಮೇಲೆ ದೌಡು ಎತ್ತಿಕೊಂಡು ಬಂದಾಗ್ಯೆ ಹಿಂದುಸ್ಥಾನದಲ್ಲಿ ಅನೇಕ ಹಿಂದು ರಾಜರೂ ಇರುತ್ತಿದ್ದರು. ಮಹಂಮ್ಮದ ಘೋರನು ಹಿಂದುಸ್ಥಾನದೊಳಗೆ ನುಗ್ಗಿದ ಕೂಡಲೇ ಡಿಲ್ಲಿ ಪಟ್ಟಣದ ಅರಸನಾಗಿರುತ್ತಿದ್ದ ಕ್ಷತ್ರಿಯ ವಂಶದ ಪೃಥ್ವಿಯಂಬಾತನ ಮೇಲೆ ಬಿದ್ದು ಘೋರವಾದ ಯುದ್ಧ ಮಾಡಿ, ಪೃಥವು ಸಲ ಸೋತು ಹೋದನು. ೩ ವರುಷಗಳ ನಂತರ ಪುನಹ ಒಂದು ಸಲ ಅದೇ ರಾಜನ ಮೇಲೆ ಬಿದ್ದಾಗ ಪಾಂಚಾಲ ದೇಶಾಧಿಪತಿಯಾಗ ಜಯಕಂದನೆಂಬವನು ಆ ಸಮಯದಲ್ಲಿ ಹಿಂದು ರಾಜನಿಗೆ ಸಹಾಯ ಮಾಡಿದ್ದೇ ಆಗಿದ್ದರೆ ಹಿಂದುಸ್ಥಾನವು ಇಂದಿನ ದಿವಸದ ವರೇಗೆ ಹಿಂದುಗಳಿಂದಲೇ ತುಂಬಿ ಇದ್ದು ನವ್ಮ ಬಂಧುಗಳು ಬರ್ಮಾ ಮುಂತಾದ ದೇಶಗಳಿಗೆ ಆಹಾರ ಹುಡುಕಿಕೊಂಡು ಹೋಗುವದು ಅಗತ್ಯವಿರಲಿಲ್ಲ. ಘೋರವಾಗಿ ಕಾದಾಡುವ ಪೃಥ್ವಿಯು ಜಯಕಂದನಿಗೆ ಸಹಾಯಕ್ಕೆ ಕರದಾಗ ತನ್ನ

ಮೇಲೆ ಬಾರದೆ ಇದ್ದದರಿಂದ ತಾನು ಯಾತಕ್ಕೆ ಅತನಿಗೆ ಸಹಾಯ ಮಾಡ ಬೇಕೆಂದು ಎಣಿಸಿ ಹೋಗದೆ ಕಡೆಯಲ್ಲಿ ಪೃಥ್ವಿಯು ಮರಣಿಸಿದಾಗ ಘೋರನು ಕ್ರಮೇಣ ರಾಜ್ಯವನ್ನು ತನ್ನ ಸ್ವಾಧೀನ ಮಾಡಿಕೊಂಡು ಜಯಚಂದನ ರಾಜ್ಯವನ್ನು ಅಪಹರಿಸಿ ಬಿಟ್ಟನು. ನೋಡಿ! ಇದೇ ಹಿಂದುಗಳ ಸ್ವಾರ್ಥ ಧರ್ಮ. ಆದ್ದರಿಂದ ಇನ್ನಾದರೂ ನಾವು 'ಸ್ವಾರ್ಥ' ಎಂಬ ಕತ್ತಲನ್ನು ಕೊಂದು 'ಸ್ವಾರ್ಥಧರ್ಮ' ವೆಂಬದನ್ನು ಅಂಗೀಕರಿಸಿ ಪರಹಿತವೇ ತನ್ನ ಹಿತವೆಂತ ತಿಳುಕೊಂಡು ನಡದರೆ ನಮಗೆ ಶುಭವಾದೀತು. (United we stand and divided we fall) ಎಂಬ ನಾಮತಿಗೆ ಸರಿಯಾಗಿ "ಒಕ್ಕಟ್ಟಾಗಿದ್ದರೆ ನಿಲ್ಲ ಕೂಡುವೆವು. ಪ್ರತ್ಯೇಕವಾದರೆ ನಿಲ್ಲಲಾರದೆ ಬೀಳುವೆವು." ಇದನ್ನು ನೆನಪು ಮಾಡಿ ನಮ್ಮ ಧರ್ಮಗಳನ್ನು ಆಚರಿಸುವಾ.

(ಎಡಿಟರ್)

ಆರ್ಯಧರ್ಮ

(ಕಳದ ೬ನೇ ಅಂಕದಿಂದ ಮುಂದೆ ನಾಗಿದ್ದು).

ಅಂಥಾ ನಾಧುಗಳಲ್ಲಿ ವಿಶ್ವಾಸವಿಟ್ಟು ಅವರನ್ನು ಪ್ರೇಮದಿಂದ ಸೇವೆ ಮಾಡಿದರೆ ಅನೇಕರು ಸಹ ಮೋಕ್ಷ ಹೊಂದ ಬಹುದು. ಈ ಕಾಲದಲ್ಲಿ ನಮ್ಮ ಜನಗಳಲ್ಲಿ ಅನೇಕರು ಅನೇಕ ಮತೆಗಳನ್ನು ಅವಲಂಬಿಸಿ ಅವುಗಳಲ್ಲಿ ಏನೂ ತೋರದೆ ಸಗುಣ ಉಪಾಸನೆ ಇನ್ನು ಯಾಗ ಯಜ್ಞಾ ಮುಂತಾದವುಗಳು ಮಾಡುವದಕ್ಕೆ ಈಗಿನ ಕಾಲವು ಸರಿಯಲ್ಲ, ಮ್ಲೇಚ್ಛ ರಾಜ್ಯವು ಅಸಾಧ್ಯವೆಂತ ತಿಳುಕೊಂಡು ಕತ್ತಲೆಯಲ್ಲಿರುತ್ತಾರೆ. ಅಂಥವರು ನಾವು ಮುಂದೆ ಪ್ರಕಟಿಸಿದ ಗೋಪ್ಯವಾದ ರಹಸ್ಯಗಳನ್ನು ಕಥಾ ರೂ

ಅಷ್ಟಕ ಕೊಟ್ಟಂಥಾದ್ದನ್ನು ಓದಿಕೊಂಡು ಅದರಲ್ಲಿ ಹೇಳುವ ವಿಧಗಳನ್ನು ಗ್ರಹಿಸಿಕೊಂಡು ಅದರಲ್ಲಿರುವ ಸಾಧನೆಗಳನ್ನು ಅದರ ಕ್ರಮಗಳನ್ನು ಗುರು ಮುಖದಿಂದ ಅರಿತುಕೊಳ್ಳುವದರಿಂದ ಅವರ ಕತ್ತೆಲೆಯು ಮಾಯುತ್ತವಾಗಿ ಹೋಗಿ ಸಾವಿರಾರು ಸೂರ್ಯರು ಏಕ ಪ್ರಕಾರವಾಗಿ ಅವರ ಮುಂದೆ ದಿವಾ ರಾತ್ರಿ ಕುಣಿದಾಡುವದನ್ನು ಅವರು ನೋಡ ಬಹುದು. ಇದು ಸತ್ಯವು; ಸುಳ್ಳು ಎಂತ ಗ್ರಹಿಸಿದರೆ ಇನ್ನಷ್ಟು ಕತ್ತಲೆಯಲ್ಲಿ ಬೀಳುವದಾಗುತ್ತದೆ. ಇದಕ್ಕೇನೂ ಸಂಶಯವಿಲ್ಲ.

ಮೇಲೆ ಬ್ರಹ್ಮಜ್ಞಾನವನ್ನು ಗುರುಮುಖದಿಂದ ಅರಿತುಕೊಳ್ಳಬೇಕೆಂತ ಹೇಳಿದೆಯಷ್ಟೇ? ಆ ರೀತಿಯಲ್ಲಿ ಪಡಿಯುವದು ಗುರುವಿನಿಂದ ಹೊರತು ಬೇರೆ ಸ್ಥಳದಲ್ಲಿ ಅಸಾಧ್ಯ. ಗುರುವೆಂದರೆ ಏನು? ಗುರು ಯಾರು? ಎಲ್ಲಿ ಶಿಕ್ಕುತ್ತಾನೆಂಬದು ಇಲ್ಲಿಯೆ ಕೆಲವ್ರು ವಿವರಿಸುವದು ಅಗತ್ಯವೆಂದು ತೋರುತ್ತದೆ. ಹಾಗಾದರೆ ಗುರು ಅಂದರೆ ಗುರು ಗೀತೆಯಲ್ಲಿ ಈಶ್ವರನು ಪಾರ್ವತಿಗೆ ಈ ರೀತಿಯಲ್ಲಿ ಭೋಧಿಸುತ್ತಾನೆ. "ಗುಕಾರ ಸ್ವಂಧಕಾರಸ್ಯ, ರುಕಾರತೆದ್ವಿನಾಶಕೃತ್", 'ಗು' ಅಂದರೆ ಅಂಧಕಾರವೆಂತಲೂ ಅದನ್ನು 'ರು' ಅಂದರೆ ನಾಶಮಾಡುವಂಥವನೇ ಗುರು ಅಂಧಕಾರವೆಂಬುವದು ಯಾವದು? ನಾನು ಯಾರು? ಎಲ್ಲವೂ ಯಾರು ಎಂತ ತಿಳಿಯದೆ ಇರುವ ಸ್ಥಿತಿಯು ಅಜ್ಞಾನವೆಂದು ಕರೆಯಲ್ಪಡುತ್ತದೆ. ಅಂಥಾ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸುವಂಥಾ ಕಿರಣಗಳುಳ್ಳ ಸೂರ್ಯನೇ ಗುರುವೆಂದು ಸದ್ಗುರುವೆಂದು ತಿಳುಕೊಳ್ಳು ಎಂತ ಈಶ್ವರನು ಆ ಪಾರ್ವತಾದೇವಿಗೆ ಹೇಳುತ್ತಾನೆ. ಗುರು ದೇವತೆಯಷ್ಟು ದೊಡ್ಡದು ಯಾವದೂ ಇಲ್ಲ. ಅಂಥಾ ಗುರು ಯಾರು? ಹ್ಯಾಗೆ ಶಿಕ್ಕುತ್ತಾನೆ? ಮನುಷ್ಯನಿಗೆ ತಾಯಿತಂದೆಗಳೇ ಉತ್ತಮ ಗುರು, ನಂತರ ಜಾತಿಯ ಕುಲ ಗುರು, ಇನ್ನು ಅನೇಕ ವಿದ್ಯೆಗಳನ್ನು ಕಲಿಸುವಂಥವರು ಕೂಡಾ ಗುರುಗಳೇ ಆದರೆ ಇವರಲ್ಲಿ ಗುರು ಭಾವ ಹುಟ್ಟುವದು ಸುಲಭವಲ್ಲ. ಹಾಗಾದರೆ ಬ್ರಹ್ಮಜ್ಞಾನವನ್ನು ಉಪದೇಶಿಸುವ ಗುರುವು ಅಣುರೇಣು ತೃಣಕಾಷ್ಟಗಳಲ್ಲಿಯೂ ಪರ ಬ್ರಂಹ್ಮವಸ್ತುನೇ ಆಗಿ ಸ್ವೂರಿಸುತ್ತಾ ಇರುತ್ತಾನೆ. ಅಂಥಾ

ಗುರುವು ತನಗೆ ಶಿಕ್ಷ ಬೇಕಂತ ಮನುಷ್ಯನು ಅಪೇಕ್ಷಿಸಿದ ಕೂಡಲೇ ಆತನು ಶಿಕ್ಷುವದಲ್ಲದೆ ಆ ಗುರು ಸ್ಮರಣೆ ಮಾಡಿದ ಮಾತ್ರದಿಂದಲೇ (ಯಸ್ಯ ಸ್ಮರಣ ಮಾತ್ರೇಣ ಜ್ಞಾನ ಮುತ್ಪದ್ಯತೇ ಸ್ವಯಂ) ಜ್ಞಾನವು ತನ್ನಷ್ಟಕ್ಕೆ ತಾನು ಉತ್ಪತಿಯಾಗುತ್ತದೆಂತ ಈಶ್ವರನು ಗೌರಿದೇವಿಗೆ ಹೇಳುತ್ತಾನೆ. ಕಾಶಿ ರಾಮೇಶ್ವರಕ್ಕೆ ಹೋಗಿ ಗುರುವನ್ನು ಹುಡುಕಿದರೂ ಆತನು ಶಿಕ್ಷಲಾರನು. ಮನಸ್ಸಿನಲ್ಲಿ ಭಾವವಿದ್ದು ಗುರು ಶಿಕ್ಷ ಬೇಕೆಂತ ಇಚ್ಛಿಸಿದರೆ ಸರ್ವವ್ಯಾಪಿಯೂದ ಆತನು ಯಾವ ಮುಖದಿಂದ ಆದರೂ ಶಿಷ್ಯನ ಮೇಲೆ ಅನುಗ್ರಹ ಮಾಡುತ್ತಾನೆ. ಹಿಂದೆ ಅನೇಕ ಋಷಿಗಳು, ಅನೇಕ ಶಿಷ್ಯ ಮಂಡಲಿಕರನ್ನು ಇಟ್ಟುಕೊಂಡು ಇರುತ್ತಿದ್ದರು. ಆ ಶಿಷ್ಯರೀಗೆ ಗುರುಗಳ ದರ್ಶನವು ಹ್ಯಾಗೆ ಆಗುತಿತ್ತು? ಸದಾ ಅರಣ್ಯಚಾರಿಯಾಗಿದ್ದು ಋಷಿಗಳು ಹ್ಯಾಗೆ ಮನುಜರಿಗೆ ಶಿಕ್ಷುವರು. ಆ ಶಿಷ್ಯರಿಗೆ ಮನಸ್ಸಿನಲ್ಲಿ ಅನುತಾಪ ಹುಟ್ಟಿದ ಕೂಡಲೇ ಪರ ಬ್ರಹ್ಮನೇ ಆಯಾಯ ಸ್ಥಳಗಳಲ್ಲಿ ಇರುವ ಆಯಾಯ ಮುನೀಂದ್ರಗಳ ಮುಖದಿಂದ ಗುರುವಾಗಿ ಶಿಷ್ಯರೀಗೆ ಉದ್ಧಾರ ಮಾಡಿದರು. ಅಂಥಾ ಭಾವವು ಈಗ ಸಹ ಹೊಂದಿ ಗುರು ಸ್ಮರಣೆ ಮಾಡಿದರೆ ಗುರುವು ತನ್ನಷ್ಟಕ್ಕೆ ಶಿಕ್ಷುತ್ತಾನೆ. ನಮ್ಮ ಹಿಂದುಗಳಲ್ಲಿ ಪ್ರತಿ ಒಂದು ಜಾತಿ ಕುಲಕ್ಕೆ ಒಬ್ಬೊಬ್ಬ ಗುರುಗಳು ಇರುತ್ತಾ ಇರುವಾಗ್ಯೆ ಅಂಥಾ ಗುರುಕ್ಕಿಂತ ಇನ್ನೇನು ಉತ್ಕೃಷ್ಟವಿರುತ್ತದೆ. ಥೇವದಾನವರು ಎಲ್ಲರೂ ಕುಲಗುರುಗಳಿಂದ ಉಪದೇಶಿಸಲ್ಪಟ್ಟರೂ ಅವರಲ್ಲಿ ಕೆಲವರು ಕುಲಗುರುವೇ ಎಂತ ನೋಡದೆ ಬೇರೆ ಗುರುಗಳಿಂದ ಅನುಗ್ರಹಿಲ್ಪಟ್ಟದ್ದಾರೆ. ಅದು ಹ್ಯಾಗಂದರೆ— ಆಯಾಯ ಜನರಿಗೆ ಎಲ್ಯಲ್ಲಿ ಅನುತಾಪವ್ರೋ, ಗುರು ಶಿಕ್ಷ ಬೇಕೆಂಬ ಇಚ್ಛೆಯೂ ಉಂಟಾಯಿತೋ ಆ ಸ್ಥಳದಲ್ಲಿ ಗುರು ಪ್ರಕಟವಾದನು. ಪಾಂಡವರಲ್ಲಿ ಮೂರನೆಯವನು ನರನೆಂದೆನ್ನಿಸಿಕೊಂಬುವ ಅರ್ಜುನನಿಗೆ ಬ್ರಹ್ಮತತ್ವವನ್ನು ಅರಿಯ ಬೇಕೆಂತ ಇಚ್ಛೆ ಆಗುತ್ತಲೇ ಗುರುವು ಹತ್ತರವೇ ಶಿಕ್ಕಿದನು. ಒಂದು ದಿವಸ ಆ ಪಾರ್ಥನು ಕೃಷ್ಣನಿಗೆ ನೋಡಿ ಏನಾದರೂ ಮುಕ್ತೆಮಾರ್ಗ ತೋರಿಸುವ ಪುಣ್ಯ ಚರಿತ್ರೆಯನ್ನು ಹೇಳೆಂದು ಅಪೇಕ್ಷಿಸಿದನು. ಅದರ ಮುಂಚೆ ಕೃಷ್ಣನು

ಭಗವಂತನೂ ಅಥವಾ ಗುರುವಾಗಿ ತನಗೆ ಉಪದೇಶ ಹೇಳತಕ್ಕವನೂ ಎಂತ ಆತನು ಗ್ರಹಿಸಲಿಲ್ಲವಾದರೂ ಆತನಿಗೆ ಅನುತಾಪ ಹುಟ್ಟಿದಾಕ್ಷಣವೇ ಗುರುವು ನೆಂಟನಾಗಿಯೂ ಸ್ನೇಹಿತನಾಗಿಯೂ ಇದ್ದು ಹತ್ತರವೇ ಇದ್ದ ಭಗವಂತನೇ ಗುರುವಾಗಿ ಯೋಗಗಳನ್ನು ಸಾಧನೆ ಮಾಡಿ ಬ್ರಹ್ಮವನ್ನು ತಿಳಿದು, ಸಂಸಾರದಲ್ಲಿ ಸಕಲ ಭೋಗಗಳನ್ನು ಅಶಾಶ್ವತವೇ ಎಂದು ತಿಳಿದು, ಅವುಗಳನ್ನು ಸಹ ಗುರು ಆಜ್ಞೆಯಿಂದ ಅನುಭವಿಸಿದಂಥಾ ಹನ್ನೆರಡು ಮಹ ಅರಸುಗಳ ಪಾವನ ಚರಿತೆಯನ್ನು ಹೇಳುತ್ತಾನೆ.

ಬ್ರಹ್ಮತತ್ವವನ್ನು ತಿಳಿದ ಮೇಲೆ ಈ ಸಂಸಾರದಲ್ಲಿಯ ಸುಖದುಃಖಗಳನ್ನು ಅನುಭವಿಸುವದು ಹ್ಯಾಗೆ ? ಸಂಸಾರ ಭೋಗಗಳಿಗೆ ಇಚ್ಛೆಯು ಹ್ಯಾಗೆ ಹುಟ್ಟುತ್ತದೆ ? ಈ ಲೋಕದಲ್ಲಿ ಹುಟ್ಟುವದು ಪ್ರಾರಬ್ಧ ಕರ್ಮದಿಂದ ಆಗಿರುತ್ತದೆ. ಪೂರ್ವ ಜನ್ಮದಲ್ಲಿ ತಿಳಿದು ಅಥವಾ ತಿಳಿಯದೆ ಮಾಡಿದ ಪಾಪ ಪುಣ್ಯಗಳ ಫಲವನ್ನು ಅನುಭವಿಸಲಿಕ್ಕೆ ತಿರಿಗಿ ಜನ್ಮಿಸುವದು. ಹುಟ್ಟಿದ ನಂತರ ಆಯಾಯ ಕರ್ಮಗಳನ್ನು ಮಾಡಿ ಅವುಗಳ ಫಲವನ್ನು ಹೊಂದುವಂಥಾದ್ದು ಈ ಜನ್ಮದಲ್ಲಿ ಬ್ರಹ್ಮಜ್ಞಾನವು ಪ್ರಾಪ್ತಿಸಿಕೊಂಡವನಿಗೆ ಅವನ ಯೋಗ್ಯತಾನುಸಾರವಾಗಿ ಪ್ರಾಪ್ತಿಯಾಗುತ್ತದೆ. ಆತನು ಹಿಂದೆ ಪಾಪಕರ್ಮಗಳನ್ನು ಮಾಡಿದ್ದರೆ, ಬ್ರಹ್ಮ ತಿಳಿಯುವ ವರೆಗೂ ಅದರ ಫಲಗಳನ್ನು ಅನುಭವಿಸುತ್ತಾ ಇದ್ದು ಇನ್ನೂ ಅನೇಕ ಪಾಪಗಳನ್ನು ಮಾಡುತ್ತಾ ಇರುತ್ತಾನೆ. ಬ್ರಹ್ಮ ಪ್ರಕಾಶವಾದ ಮೇಲೆ ಆತನು ಪಾಪಗಳನ್ನು ಮಾಡದೆ ಸಂಸಾರದಲ್ಲಿ ಇದ್ದರೂ ಇಲ್ಲದವನ ಹಾಗೆ ಇರುತ್ತಾನೆ. ಆತನು ಸೌಖ್ಯವನ್ನು ಅನುಭವಿಸುವಂಥವನಾಗಲೀ ಕಷ್ಟ ಪಡುವವನಾಗಲೀ ಬ್ರಹ್ಮನನ್ನು ತಿಳಿದು ಇದ್ದವನು ಸುಖವನ್ನು ಸುಖವೆಂತಲೂ ಕಷ್ಟವನ್ನು ಕಷ್ಟವೆಂತಲೂ ತಿಳುಕೊಳ್ಳುವದಿಲ್ಲ. ಸಂಸಾರದಲ್ಲಿ ಬ್ರಹ್ಮಜ್ಞಾನಿಯು ಇರವು ಹ್ಯಾಗಂದರೆ— ಒಂದು ನಾಟಕದಲ್ಲಿ ಈರ್ವರು ಶೂರರು ಒಬ್ಬನೊಬ್ಬನ ಹತ್ತರ ಒಬ್ಬ ಕಾದಾಡಿಕೊಳ್ಳುವಾಗೆ ಬಲಿಷ್ಟನಾದವನು ಬಲಹೀನನಿಗೆ ಕೆಡವಿ ಹಾಕುತ್ತಾನೆ. ಹಾಗೆ ಕೆಡವಿದ ನಂತರ ಗೆದ್ದವನು ಪಡುವ ಆನಂದದ ಹಾಗೂ, ಸೋತವನು ಅನುಭ್ಯ

ವಿಸುವ ದುಃಖದ ಹಾಗೂ, ಬ್ರಹ್ಮಜ್ಞಾನಿಯು ನಾನಾ ತರದ ಅವಸ್ಥೆಗಳಲ್ಲಿ ಇರುವನು. ಸುಖವಾದರೂ ದುಃಖವಾದರೂ ಕ್ಷಣೀಕವೆಂತಲೂ, ನಾನೇ ಉಂಟು ಮಾಡಿದ್ದು, ನಾನೇ ಬೆಳಿಸಿದ್ದು, ನಾನೇ ನಾಶ ಮಾಡುವಂಥವನು ಎಂತ ತಿಳುಕೊಳ್ಳುತ್ತಾನೆ. ಅಜ್ಞಾನಿಗಳು ಸುಖವು ತನ್ನಿಂದ ಉಂಟಾಗುವದು ತಾನೇ ಅನುಭವಿಸುತ್ತೇನೆಂದು, ದುಃಖವು ಪರರಿಂದ ಉಂಟು ಆದ್ದು ತಾನು ದೀರ್ಘಕಾಲ ಅನುಭವಿಸುತ್ತೇನೆ. ಇಷ್ಟು ಅನುಭವಿಸಲಿಕ್ಕೆ ತಾನು ಅರ್ಹನಲ್ಲವೆಂತಲೂ ತಿಳುಕೊಳ್ಳುತ್ತಾನೆ. ಜ್ಞಾನಿಗೂ ಅಜ್ಞಾನಿಗೂ ಇರುವ ಭೇದಗಳು. ಇವುಗಳಲ್ಲಿ ಜ್ಞಾನಿಯು ಎಲ್ಲವನು ತಾನೇ ಮಾಡುವದು ತಾನೇ ಮೋಕ್ಷ ಕೊಡುವವನು, ಅನುಭವಿಸುವವನು ತಾನೇ, ಎಲ್ಲವು ತಾನೇ, ತಾನೇ ಬ್ರಹ್ಮನು ಎಂತ ತಿಳುಕೊಂಡು ಭವರೋಗದ ಸೊಂಕುಗಳು ಆಗದೆ ಸ್ವಸ್ಥವಾಗಿರುತ್ತಾನೆ. ಅಜ್ಞಾನಿಯು, ಒಳ್ಳೇದು ಮಾತ್ರ ತಾನು ಮಾಡಿಕೊಂಡು, ಕೆಟ್ಟದ್ದು ಮಾಡುವವನು ಬೇರೆಯವನೆಂತಾ ತಿಳುಕೊಳ್ಳುತ್ತಾನೆ. ಇದೇ ಜ್ಞಾನಿಗೂ ಅಜ್ಞಾನಿಗೂ ಇರುವ ಭೇದ. ಈ ಭೇದವನ್ನು ಅಜ್ಞಾನಿಯು ಬಿಟ್ಟು ಬಿಟ್ಟರೆ ಆತನು ಅಕ್ಷಣವೇ ಮುಕ್ತನಾದನು. ಒಂದೇ ಎಲ್ಲವನ್ನು ಮಾಡುವದೂ, ನೋಡುವದೂ, ಅನುಭವಿಸುವದೂ, ತಾನೇ ಎಂದು ತಿಳುಕೊಳ್ಳಬೇಕು. ಇಲ್ಲವಾದರೆ ಇದೆಲ್ಲಾ ತನಗೆ ಅಲ್ಲಾ, ತಾನು ಅಲ್ಲಾ, ಎಂತ ಪರನ್ಯಾಧೀನ ಮಾಡಿದರೆ, ಆ ಕೂಡಲೇ ಅಹಂಕಾರವು ನಾಶವಾಗಿ ಅಂಧಕಾರವು ಸ್ವಯಂ ಪ್ರಕಾಶಕ್ಕೆ ಗ್ರಾಸವಾಗುತ್ತದೆ.

ಶ್ರೀಕೃಷ್ಣನು ಅರ್ಜುನನಿಗೆ ಭಗವದ್ಗೀತೆಯಲ್ಲಿ ಏನು ಹೇಳುತ್ತಾನೆ? ಮಾಡುವದೂ ನೋಡುವದೂ ಎಲ್ಲಾ ತಾನು ಎಂದು ತಿಳಿ, ಎಂತಾ ಹೇಳಿ, ತಾನು ಮಾಡುತ್ತೇನೆಂಬ ಅರ್ಜುನನ ಅಹಂಕಾರವನ್ನು ಹೋಗಲಾಡಿಸಿ ಆತನಿಗೆ ಬ್ರಹ್ಮೋಪದೇಶವನ್ನು ಮಾಡುವ ಮುಂಚೆಯೇ ಮುಂದೆ ಬರುವ ರಮ್ಯವಾದ ಕಥೆಗಳನ್ನು ಬೋಧಿಸಿ ಪಾವನ ಮಾಡಿದ್ದೆಂಬ ಆ ಕಥೆಗಳು ಮೂಲದಲ್ಲಿ ಸಂಸ್ಕೃತ ಭಾಷೆಯಲ್ಲಿದ್ದರೂ ಸುಲಭವಾದ ಕನ್ನಡ ನುಡಿಯಲ್ಲಿ ಹೇಳಿಯದೆ. (ಎಡಿಟರ್).

ಮುಂಗೂ ನಾಗೂ ಸಂಭಾಷಣವು.

ಮುಂಗವ್ಮನು ೪ ವರುಷ ಕಾಲ ಸ್ಕೂಲಿನಲ್ಲಿ ಓದಿ ತಕ್ಕ ಪುಟ್ಟಿಗೆ ಪಂಡಿತಳಾಗಿದ್ದಳು. ನಾಗವ್ಮನು ವಿದ್ಯಾ ವಿಹೀನಳಾಗಿ, ಯಾರಿಗೂ ವಿಧೇಯಳಾಗದೆ ಏನೋ ಬಂದು ಬಗೆಯು ಮೂರ್ಖಳಾಗಿದ್ದಳು. ಈ ಇಬ್ಬರೂ ತೌರು ಮನಿಗೆ ಬಂದು ಮೂರು ತಿಂಗಳ ಕಾಲ ಒಂದೇ ಕಡೆ ವಾಸವಾಗಿದ್ದಾಗ ನಡದ ಮಾತುಗಳಲ್ಲಿ ಕೆಲವನ್ನು ಇಲ್ಲಿ ಬರೆದು ತಮ್ಮಲ್ಲಿಗೆ ಕಳುಹಿಸಲಾಯಿತು. ಅಂಗೀಕರಿಸ ಬೇಕು ಸ್ವಾಮೀ!

ಮುಂಗು— ಏನವ್ಮಾ ನಾಗೂ ನಿನ್ನ ಗಂಡನ ಮನೆಯಲ್ಲಿ ನಿನಗೆ ಸುಖವ್ತುಂಟೋ ? ವಿನಾದರೂ ಕಾಟೆಗಳುಂಟೋ ?

ನಾಗು— ಅಕ್ಕಾ ನನಗೇನೇನೂ ಸುಖವಿಲ್ಲವಮ್ಮ ಆದರೆ ನಾನು ಯಾಕನ್ನೂ ಲಕ್ಷ್ಯಮಾಡದವಳಾದ್ದರಿಂದ ಇಷ್ಟ ಮಾತ್ರವಿದ್ದೇನೆ. ನಿನ್ನಂಥವಳಾದರೆ ಒಂದು ವಾರವಾದರೂ ನಿರ್ವಹಿಸಿಕೊಂಡಿರಲಾರೆ ನೋಡಿದ್ಯೋ ?

ಮುಂಗು. ಅದೇನು ನಿನ್ನ ಚರಿತ್ರೆಯಲ್ಲಾ ವಿವರವಾಗಿ ಹೇಳವ್ಮಾ ಏನಂದರೆ ಇಲ್ಲದ ಸುಳ್ಳುಗಳನ್ನು ಹೇಳಬೇಡ.

ನಾಗು. ಅಕ್ಕಾ ನಾನು ಸುಳ್ಳೂ ತಟವಟಗಳಲ್ಲಿ ಘಟಕಳು ನಿಜವೇ ಸರಿ. ಆದರೆ ನಿನ್ನಲ್ಲಿ ನಾನು ಸುಳ್ಳು ಹೇಳಿದರೆ ನನಗೇನೂ ಊರಟೆ ಇಲ್ಲವು; ಆದಕಾರಣ ನಿಜವಾಗಿದ್ದ ಮಾತುಗಳನ್ನೇ ಹೇಳುವೆನು ಕೇಳವ್ಮಾ.

ಮುಂಗು. ನಿನಗೆ ಓದಲು ಬರಿಯಲು ಸ್ವಲ್ಪ ತಿಳಿದ್ತಲ್ಲಾ ಅದನ್ನೆಲ್ಲಾ ಮರೆತು ಬಿಟ್ಯೋ ?

ನಾಗು. ನನ್ನ ಓದಿಗೆ ಜಿಂಕಿ ಹಚ್ಚಲಿ. ಬಿಡಕ್ಕಾ ಓದಿದಷ್ಟೂ ಹೇಡಿತನವೇ ಬರುವದು ನಿಶ್ಚಯ.

ಮುಂಗು. ನೀನಾಡಿದ ಮಾತು ಬಹು ಚೆನ್ನಾಗಿದೆ. ಇರಲಿ— ನಿನ್ನ ಚರಿತ್ರೆಯನ್ನು ಮೊದಲು ಹೇಳು ಕೇಳುವ.

ನಾಗು. ನನ್ನ ಚರಿತ್ರೆಯಲ್ಲಿ ಮುಖ್ಯವಾದ ಸಂಗತಿ ಏನೆಂದರೆ— ಏನಾದರೂ ಹರ ಪ್ರಯತ್ನ ಮಾಡಿ ನನ್ನ ಗಂಡನನ್ನ ಕೊಲ್ಲ ಬೇಕು, ಇದಕ್ಕೋಸ್ಕರ ಇಲ್ಲಿ ಕೆಲವರು ನೀಚ ಜಾತಿಯ ಸ್ತ್ರೀಯರಲ್ಲಿ ಕೆಲವು ಔಷಧಗಳನ್ನು ಕಲಿಯ ಬಂದಿಧ್ದೇನೆ, ಪಾಪಗೀಪ ಅಂತಾ ಬಾಳಿದಷ್ಟು ಕಷ್ಟ ವೇ ಸರಿ.

ಮುಂಗು. ಶಿವ ಶಿವ, ಹರಿ ಹರಿ, ಇದೇನೇ ನಾಗು ಇಷ್ಟು ದೊಡ್ಡ ಅಕೃತ್ಯಕ್ಕೆ ಸಿದ್ಧಳಾಗಿದ್ದೀ ಅಯ್ಯೋ ಹೆತ್ತ ತಂದೆ ತಾಯಿಗಳನ್ನು ಸಹ ದುರ್ಗತಿಗೆ ದೊಬ್ಬುತ್ತೀಯಲ್ಲಾ! ಇನ್ನೇನು, ಇದರಿಂದ ಊರಟೆಯೇನು, ಕಾರಣವೇನು, ಎಲ್ಲಾ ಚೆನ್ನಾಗಿ ನಿರ್ವಂಚನೆಯಿಂದ ಹೇಳಮ್ಮಾ.

ನಾಗು. ಅಕ್ಕಾ ನನ್ನ ಮಾತುಗಳೆಲ್ಲಾ ನಿನಗೆ ಕರ್ಣ ಕಠೋರವಾಗಿವೆ ಯೆಂದು ಈಗಲೇ ನಾನು ತಿಳಿದ್ದಾಯಿತು. ಇನ್ನೂ ಮುಂದಣ ಪ್ರಸ್ತಾಪಗಳಿಂದ ನಿನಗೂ ನನಗೂ ಮುನಸ್ತಾಪಗಳುಂಟಾಗುವದರಿಂದ ಇಲ್ಲಿಗೆ ನಾಕೆಮ್ಮಾ.

ಮುಂಗು. ಹಾಗೆಂದಿಗೂ ನೀನು ತಿಳಿಯ ಬೇಡ. ನನಗೆ ಮುಖ್ಯವಾಗಿ ಸ್ನೇಹ ಬೇಕೇ ಹೊರತು ಜಗಳ, ಗುದ್ದಾಟ, ಬೈಗಳು, ಬೇಕಿಲ್ಲ. ನೀನು ಶಿಟ್ಟು ಮಾಡಿಕೊಂಡಾಗ್ಯೂ ನಾನು ಸಮಾಧಾನದಿಂದಲೇ ಇರುವೆನು. ಆ ಭಯ ನಿನಗೇನೂ ಬೇಡ, ನಿನ್ನ ಮನೋಭಿಪ್ರಾಯವೆಲ್ಲಾ ಹೇಳಿ ಬಿಡು.

ನಾಗು. ನನ್ನ ಗಂಡ ಗೊಲ್ಲಕವಳೊಬ್ಬಳನ್ನು ತಗಲಿಕೊಂಡು ನನ್ನ ಹಾಸಿಗೆಯನ್ನೇ ತುಳಿಯದೇ ಇರುತ್ತಾನೆ. ನಾನು ನಿತ್ಯವೂ ಹಾಸಿಗೆಯನ್ನು ಹಾಕಿ ದೀಪವನ್ನು ಇಟ್ಟು ಕೊಂಡು ಅರ್ಧ ರಾತ್ರಿಯವರೆಗೂ ಕಾದಿರುತ್ತಾ ಇದ್ದು, ರೋಸಿ ಈಗ ಅದೆಲ್ಲಾ ಬಿಟ್ಟು ಈ ಉಪಾಯವೇ ಇದಕ್ಕೆ ತಕ್ಕದ್ದೆಂದು ನಿಶ್ಚಯಿಸಿದ್ದೇನೆ. ಪಾಪವೋ ಅನ್ಯಾಯವೋ ಹೇಳಮ್ಮಾ.

ಮುಂಗು. ಗಂಡನನ್ನ ಕೊಂದ ಮೇಲೆ ನೀನು ಏನೇನು ಭೋಗಭಾಗ್ಯಗಳನ್ನನುಭವಿಸುತ್ತಿಯೋ ಅವುಗಳು ಎಂಥಾವು ಎನ್ನುವದನ್ನು ತೀ

ಬೆ ಕೊಂಡಿದ್ದಿಯೋ?

ನಾಗು. ಹಣೆಯ ಬರಹವಿದ್ದಂತೆ ಆಗುತ್ತೆ. ಮುಖ್ಯ ಫಲದಕ್ಕಾತ್ತೂ ಅಷ್ಟೇ ಸಾಕು.

ಮುಂಗು. ಹಾಗಲ್ಲಮ್ಮಾ, ಯಾವಕಾರ್ಯ ಮಾಡಿ ಬೇಕಾದಾಗ್ಲೂ ಮುಂದಾಗಿ ಚೆನ್ನಾಗಿ ಆಲೋಚಿಸ ಬೇಕು. ಹೆಂಣು ಮಗಳಿಗೆ ಸೈರಣೆ ಯೇ ಮುಖ್ಯಾಭರಣ, ಅತುರ ಪಡ ಬಾರದು. ನಾಗೂ, ಈ ನಿನ್ನ ಕೆಟ್ಟ ಪ್ರಯತ್ನವನ್ನು ನನ್ನಾಣೆ ನಿಲ್ಲಿಸಿ ಬಿಡು, ಇದು ಮಹಾ ಪಾಪಕೃತ್ಯವು.

ನಾಗು. ಹಾಗಾದರೆ ನಮ್ಮೂರಲ್ಲಿರುವ ವೈಶ್ಯರ ಸೊಸೆಯಂತೆ ಜೀವಶ್ರವವಾಗಿ ಜೀವಿಸ ಬೇಕು. ಅದ್ಯಾಪಾದ ಜೀತಮ್ಮಾ, ನಮ್ಮನಮ್ಮಾ ನನ್ನ ಕೈಲಾಗದು.

ಮುಂಗು. ವೈಶ್ಯರ ಸೊಸೆಯ ಬಾಳು ಅಷ್ಟು ಕಾಣವಾಗಿದಯ ಅದೇನು ಸ್ವಲ್ಪ ಹೇಳು ಕೇಳುವ.

ನಾಗು. ಅಕ್ಕಾ ಆ ಹುಡುಗಿಯ ಸೈರಣೆಯಂನು ವರ್ಣಿಸಲಶಕ್ಯ ಅಶಿಷ್ಟೂ, ಹಾಗೆ ನಾಯಿಯಂತೆ ಬಿದ್ದಿರುವದು ನಂನಿಂದ ಒಂದು ದಿನವಾದರೂ ಆಗಲಾರದು. ಈ ಕೋಮಟಿ ಹುಡುಗಿ ಸ್ವಲ್ಪ ಕಪ್ಪಾದಾಗ್ಲೂ ಕಣ್ಣು ಮೂಗು ನ್ಯಾರವಾಗಿ ಚಲುವೆಯಾಗಿದ್ದಾಳೆ. ಇಪಳ ಗಂಡನು ಯೌವನ ರೂಪಲಾವಣ್ಯ ಸಂಪಂನನೇ ಹೌದು, ಆದರೆ ಮನೆಯಲ್ಲಿ ಹೆಂಗಸರೂ ಗಂಡಸರೂ ಸಣಾ ಹೆಂಡತಿಯಲ್ಲಿ ಸ್ನೇಹವಾಗಿರಲು ಅಸ್ಪದ ಕೊಡರು. ನಾನಾ ವಿಧಗಳಿಂದಲೂ ಸೊಸೆಯಂನು ಹಿಂಸೆ ಪಡಿಸುತ್ತಾ ಹೆಚ್ಚು ಕಷ್ಟ ಕೆಲಸಗಳಂನು ಮಾಡಿಸುತ್ತಾ ದಾಸಿಯಂತೆ ಆಳುತ್ತಾರೆ. ಆ ಹುಡುಗಿ ಬಹು ಸಾಭ್ಯಳು, ಬೈಗಳನ್ನೂ, ಬಡತನಗಳನ್ನೂ, ಗದರಿಕೆಗಳನ್ನೂ ಸದಾ ತಾಳಿ ಕೊಂಡು ಮೂರು ವರುಷಗಳಿಂದಲೂ ಕಾಲಹರಣೆ ಮಾಡುತ್ತಾಳೆ. ಇಂಥಾ ಬಾಯಿ ಸತ್ತ ಹೆಂಣಿನಂನ ನಾನಿನ್ನೆಲ್ಲಿಯೂ ನೋಡಲಿಲ್ಲ.

ಮುಂಗು. ನೆರೆಮನೆಯಲ್ಲಿ ಹೇಳಿಕೊಂಡು ಅಳುವದೂ, ಮನೆಯವರಂನ ಶಪಿಸುವದೂ, ಬೀದಿಯಲ್ಲಿ ಬಂದು ರಂಪು ಮಾಡುವದೂ ಇಂಥಾ ಗುಣಗಳಾಹುಡುಗಿಯಲ್ಲಿ ಇರುವವೋ ಇಲ್ಲವೋ ಇದನ್ನು ಸ್ವಲ್ಪ ಹೇಳಮ್ಮಾ.

ನಾಗು. ಅಕ್ಕಾ, ಅಂಥಾ ದುಡುಕಿನ ಕೆಲಸವ್ಯೊಂದಾದರೂ ಆ ಹೆ

ಣ್ಣಿಗೆ ತಿಳಿಯಲೇ ತಿಳಿಯದು. ಸಾನೂ ಆಕೆ ಕೆಲವು ವೇಳೆ ಕೆರೆಗೆ ಹೋ
ದಾಗ ಮಾತುಗಳಾಡುತ್ತಿದ್ದೆವು. ಆಗ ಯಾಕೆ ನೀನು ಹೀಗೆ ಸತ್ತ ಹೆಣ
ದಂತೆ ಬಿದ್ದಿದ್ದಿ, ಛುಟ್ಟಿ ಮಾತಾಡು, ಮನೆಯವರ ಮಾತುಗಳಿಗೆ ಬದಲಾಡು
ಈ ಕಾಲದಲ್ಲಿ ಹೆದರಿದಷ್ಟು ಪಾತಾಳಕ್ಕೆ ತುಳಿಯುತ್ತಾರೇ ಹೊರತು ಅವ
ರಿಗೆ ದಯ ಬಾರದು, ನೀನು ಅಂದರೆ ನಿಪ್ಪಾಪ್ಪಾ ಅನ್ನಬೇಕು. ಅದೇ
ನು ಹೀಗೆ ನಾಯಿ ಚಾಕರಿ ಮಾಡಿಕೊಂಡು ಯಾವ ಸುಖವನ್ನೂ ಕಾಣ
ದೆ ಬಾಳಿದರೆ ನಾಳೆ ನಿನಗೆ ದೊಡ್ಡ ಕಿರೀಟ ಬರುವದೋ ? ಅಯ್ಯೋ!
ನಿನ್ನ ಹೇಡಿತನ ಸುಡಲಿ; ನಾನು ನೋಡು, ಗಂಡ ಮಾವ ಮುಂತಾದವರ
ಮಾತುಗಳಿಗೆ ಭಯವಿಲ್ಲದೇ ಬದಲಾಡುವದೂ, ಹೊಡಿಯು ಬಂದಲ್ಲಿ ಬೀದಿಗೆ
ಬಂದು ರಗಳೆ ಮಾಡುವದೂ ಕಲಿತುಕೊಂಡ ಮೇಲೆ ನಮ್ಮ ಮನೆಯ ಜನರು
ಸ್ವಲ್ಪ ತಗ್ಗಿದರು. ತಾಹಿ ತಾಹಿ ಅಂದಷ್ಟೂ ನಾನಾ ಶಬ್ದಗಳೇ ಬರು
ವವು. ತಾಯಿ ಮನೆಯವರು ಎರಡು ಸಾರಿ ಕರೆಯ ಬಂದಿದ್ದಾಗಲೂ ಕ
ಳುಹಿಸದೇ ಹೋದರಲ್ಲಾ, ನೀನು ಹೇಳಬೆ ತಾಯಿಯೂರಿಗೆ ಹೋಗಲು ಅಡ್ಡಿ
ಏನು ? ಇತ್ಯಾದಿ ಮಾತುಗಳನ್ನೆಲ್ಲಾ ಹೇಳಿ ಕೊಟ್ಟೆ, ಆದರೇನು ಕೆ
ವುಡಗೆ ಕಿನಡಿ ಬಾರಿಸಿದಂತೆಯೇ. ಈ ಹುಡುಗಿಯ ಸ್ವಭಾವವಿನ್ನೇನಿರ
ಬಹುದೇ ಅಕ್ಕಾ ಆಶ್ಚರ್ಯವಾಗುತ್ತೆ. ಓದೂ ಇಲ್ಲಾ, ಬರಹವೂ ಇಲ್ಲಾ,
ಒಬ್ಬರು ಹೇಳಿ ಕಲಿಸಿದ್ದಿಲ್ಲಾ, ಇದೇನಿದ್ದೀತು ಹೇಳಮ್ಮಾ.

ಮಂಗು. ಅವ್ವಾಣ್ಣಿ ನಾಗೂ, ನೀನು ಅಂಥಾ ಹುಡುಗಿಯ ಜೊ
ತೆಯಲ್ಲಿ ಮೂರು ವರುಷಗಳಿಂದ ಇರುತ್ತಾ, ಇದ್ದೂ ಆಕೆಯ ಸದ್ಗುಣಾ
ಭರಣಗಳಲ್ಲಿ ಒಂದನ್ನಾದರೂ ಪಡಿಯಲಿಲ್ಲವಲ್ಲಾ, ಅಯ್ಯೋ! ನಿನ್ನ ಬುದ್ಧಿ
ಮಾಂದ್ಯಕ್ಕೆ ಎಷ್ಟು ಅತ್ತರೂ ತೀರದು. ॥ಸ್ವಭಾವಂ ನೈವಮುಂಚತಿ॥ ಅಂ
ದಂತೆ ನಿನ್ನ ಬಾಳು ದುರ್ಜನ ಪಡುವದೇ ಆಗಿ' ಹೋಯಿತು. ಈಗಲಾ
ದರೂ ಆ ವೈಶ್ಯರಾಕೆಯಂತೆ ಇರಲು ಪ್ರಯತ್ನ ಪಡಮ್ಮಾ.

ನಾಗು. ಆಹಾ, ಏನು ಚನ್ನಾಯಿತಕ್ಕಾ, ಆ ಕೋಪ್ಪಟಿಗಿತ್ತಿಯುಂ
ತೂ ಬಾಯಿ ಸತ್ತ ಗೂಬೆ ನಾನಾ ಶಬ್ದಗಳನ್ನು ಅನುಭವಿಸಿ ತೊಂಡು
ನಾಯಿಯಂತೆ ಬಿದ್ದಿದ್ದಾಳೆ. ನನ್ನನ್ನೂ ಹಾಗೆ ಬಿದ್ದಿರು ಅಂತಾ ಹೇಳು
ತ್ತಿಯೋ? ಹಾಗೆ ಬಿದ್ದಿದ್ದು ನಾಳೆ ಸಂಪಾದಿಸುವ ಬಿರುದು ಬಹುಮಾನಗಳೇ

ನನಗೆ ಬೇಡ, ನನ್ನದೆಲ್ಲಾ ಖಡಾ ಖಂಡಿತ, ಒಬ್ಬರಿಗೆ ಹೆದರಿ ಬಿದ್ದಿರುವ ಮಾತೇ ನನಗೆ ಹೇಳ ಬೇಡ. ಆದಾಗ್ಯೂ ನಿನ್ನ ಮಾತಿನ ಮೇರಿಗೆ ಈ ಸಾರಿ ನಾಲ್ಕು ವಿನ ಗಂಡನಿಗೆ ವಿಧೇಯಳಾಗಿರುತ್ತೇನೆ. ಹಾಗೂ ಆತನ ದುರ್ವ್ಯವಹಾರವನ್ನು ಬಿಡದಿದ್ದರೆ ಉಪಾಯದಿಂದ ಪುಡ್ವಿಟ್ಟು ಕೊಲ್ಲುವದೇ ನಿಜ. ಆ ನಂತರ ಆ ಊರಲ್ಲೇ ಇರುವ ಸ್ಕೂಲ್ ಮಾಸ್ಟರು ರೂಪ, ಯೌವನ, ಧನ ಸಂಪನ್ನನಾಗಿರುತ್ತಾನೆ. ಆತನನ್ನು ವರಿಸಿ ಯಾವದಾದರೂ ನಗರಕ್ಕೆ ಹೊರಡುವದೋ, ಅಥವಾ ಇದ್ದ ಊರಲ್ಲಿಯೇ ಇರುವನೋ, ಮಾಡುವದೇ ನಿಜ. ನಂಟರಿಷ್ಟರ ಭಯಕ್ಕೂ, ಹಿರಿಯರ ಮುತ್ತು ಪಾಪ ಗೀಪಗಳ ಭಯಕ್ಕೂ ನಾನು ವಿಧೇಯಳಾಗೆನು. ನಾಯಿ ಬಾಳು ಬಾಳಿ ಕೊಂಡು ಪೂರ್ಣ ಯುವಾಗಿರುವದಕ್ಕಿಂತ ಸ್ವತಂತ್ರವಾಗಿ, ಧೈರ್ಯವಾಗಿ, ಸುಖವಾಗಿ ಕೆಲವು ಕಾಲ ಬಾಳಿದ್ದೇ ಸಾಕು. "ಸತ್ತ ಮೇಲೆ ಪುಟ್ಟ ಯತ್ತಲೋ" ಎಂಬ ಗಾದೆ ಯಂತೆ ನಾಳ್ಯಾರೋ, ನಾವ್ಯಾರೋ, ಹೌದೋ, ಅಲ್ಲವೋ ಹೇಳಕ್ಕಾ.

ಮಂಗು. ನಾನೇನ ಹೇಳಲಿ! ನಾಗು ದಾಕ್ಷಿಣ್ಯಕ್ಕೆ ಹೂಂ ಹೂಂ ಅನ್ನ ಬೇಕೇ ಹೊರತು ನನ್ನ ಮನಸ್ಸಿಗೆ ನಿನ್ನ ಮಾತುಗಳು ಬಹು ಕಹಿಯಾಗಿವೆ. ನಿನಗೆ ವಯಸ್ಸು ಇಪ್ಪತ್ತಕ್ಕೆ ಬಂತು. ಬರ ಬರ ಬುದ್ಧಿ ಈ ರೀತಿ ಆಗಲು ಕಾರಣವೇನೋ ದೇವರೇ ಬಲ್ಲ. ನಮ್ಮ ಹಿರಿಯರು ವಿದ್ಯಾ ಧನ ಸಂಪನ್ನರಾಗಿ ಜನಗಳಲ್ಲಿ ಗೌರವದಿಂದ ಸುಖ ಜೀವನ ಮಾಡಿಕೊಂಡು ಜನಗಳ ದುರ್ಜನಕ್ಕೆ ಒಳಗಾಗದೆ ಸಂಪನ್ನರೆನ್ನಿಸಿಕೊಂಡು ಬಾಳಿದರು. ನಾವು ಮಕ್ಕಳು ಹುಟ್ಟಿ ಅವರ ಮಾನ ಮರ್ಯಾದೆ ಗೌರವ ಸಾಭ್ಯತನಗಳನ್ನೆಲ್ಲಾ ಮಣ್ಣು ಪಾಲು ಮಾಡಲಿಕ್ಕೆ ಸಿದ್ಧರಾಗಿವೆವು. ಇದೇನು, ಅವರ ಗ್ರಹಚಾರವೋ ನಮ್ಮ ದುಷ್ಕೃತ್ಯವೋ ಹೇಳಲಶಕ್ಯವಾಗಿದೆ. ಇನ್ನೂ ನಿನ್ನ ಮನೋಭಿಪ್ರಾಯವನ್ನೆಲ್ಲಾ ಹೇಳಮ್ಮಾ.

ನಾಗು. ನಿನ್ನ ಮನಸ್ಸಿಗೆ ಬೇವಿನ ಕಾಯಿಗಳಂತಿರುವ ನನ್ನ ಮಾತುಗಳನ್ನು ಇನ್ನೂ ಯಾಕೆ ಕೇಳಲಪೇಕ್ಷಿಸುತ್ತಿಯೇ? ಅಕ್ಕಾ, ನನಗೆ ಹೇಳಲುತ್ಸಾಹವಿಲ್ಲವಮ್ಮಾ.

ಮಂಗು. ಎಂಥಾ ವಿಷವಾದ ಮಾತುಗಳೇ ಆಗಲೀ ಸಹಿಸಿ ಕೊಂಡು ಕೇ

ಳುತ್ತೇನೆ. ದಯವಿಟ್ಟು ವಂಚನೆ ಇಲ್ಲದೆ ನಿನ್ನ ಮನೋಭಿಪ್ರಾಯವನ್ನೆಲ್ಲಾ ಹೇಳಿ ಬಿಡು.

ನಾಗು. ಓದಿ ಬುದ್ಧಿವಂತರಾಗಿರುವ ಹೆಂಗಸರನ್ನು ನಾನು ಬಹಳವಾಗಿ ನೋಡಿದ್ದೇನೆ. ಅವರಿಗೂ ನಿನಗೂ ಕ್ಯಾನೆ ಹೆಚ್ಚು ಕಡಿಮೆಯುಂಟು. ಇದ್ಯಾಕೆಕ್ಕಾ.

ಮುಂಗು. ಈ ಮಾತು ನಿಜವಮ್ಮಾ. ಈ ಕಾಲದಲ್ಲಿ ಅನೇಕ ಜನ ಹೆಂಗಸರು ಓದಿ, ಮಣ್ಣು ಹೊಯಿಕೊಂಡು ಪ್ರವೀಣರಾಗಿ ಗಂಡಸರಂತೆ ತಾವು ಸ್ವತಂತ್ರವಾಗಿರ ಬೇಕೆಂದು ಸಭೆಗಳಿಗೆ ಹೋಗುವದೂ, ಮೂರ್ಕಟುಗಳಿಗೆ ಹೋಗುವದೂ, ಪರ ಪುರುಷರ ಕೈ ಹಿಡಿದು ರಾಜ ಬೀದಿಯಲ್ಲಿ ನಾಚಿಕೆ, ಭಯ, ಇಲ್ಲದೆ ವ್ಹೂತುಗಳಾಡುತ್ತಾ ಸಂಚರಿಸುವದೂ, ಮುದುಷೆಯಾದ ಗಂಡನು ತನಗಿಂತ ಕಡಿಮೆಯಾದ ವಿದ್ಯಾವಂತನಾದರೆ ಅಥವಾ ತನ್ನ ಮನಸ್ಸಿಗೆ ಅಸಮರ್ಪಕವಾದಂಥವನಾದರೆ ಅವನ ಕೂಡಾ ಸಂಭಾಷಣೆಯನ್ನು ಸಹಾ ಬಿಟ್ಟು ಯಾರ ಭಯವೂ ಇಲ್ಲದೆ ಕುಲದಲ್ಲಿ ನೆರೆಹೊರೆಯವರಲ್ಲಿ ದುರ್ಜನ ಬಂದೀತೆಲ್ಲಾ ಎಂಬ ದೂರದೃಷ್ಟಿಯೂ ಇಲ್ಲದೆ 'ತನ್ನ ಚರಿತನಿಗಾನಂದ' ಅಂದಂತೆ ನಡೆಸುತ್ತಾರೆ. ಆ ಚರ್ಯೆಗಳೆಲ್ಲಾ ನನಗೆ ಬಹಳ ಅಸಹ್ಯವಾಗಿರುತ್ತವೆ. ಅದರಿಂದ ಊರಟೆಯಿಲ್ಲ. ವ್ಯರ್ಥಾ ಮೆರೆಯು ಬಾರದು. ನಮ್ಮ ಭರತಖಂಡದಲ್ಲಿ ಪೂರ್ವಕ್ಕೆ ಎಂಥೆಂಥಾ ಪತಿವ್ರತಾ ಸ್ತ್ರೀಯರು ಇದ್ದು, ಅವರ ಪ್ರಾಣ ಕಾಂತರಿಗೆ ಮಹಾ ಕಷ್ಟಗಳು ಸಂಪ್ರಾಪ್ತವಾದಾಗಲೂ ಸಹಾ ಪತಿಯೇ ದೇವರು, ಪತಿಯಿಂದಲೇ ಹೆಂಗಸಿಗೆ ಗತಿ ವ ಮೋಕ್ಷ ಎಂದು ತಿಳದು ಪತಿಗಳು ಪಡುತ್ತಿರುವ ಶ್ರಮಗಳನ್ನು ತಾವು ಸಹಾ ಅನುಭವಿಸುತ್ತಾ ಎಂಥಾ ನಿರ್ಬಂಧಗಳು ಬಂದಾಗ್ಯೂ ಸತ್ಯವನ್ನೂ ಪಾತಿವ್ರತ್ಯವನ್ನೂ ಬಿಡದೇ ಕಷ್ಟ ಹೆಚ್ಚಿದ ಹಾಗೆಲ್ಲಾ ಸೈರಣೆಯುಂನು ಸಂಪಾದಿಸಿಕೊಂಡು ಕಡೆಗೂ ಜಯವೇ ಪಡದು ಕೀರ್ತಿಯುಂನು ಹೊಂದಿರುವಂಥಾದ್ದು ನಮ್ಮ ಪುರಾಣ ಪುಣ್ಯ ಕಥೆಗಳಲ್ಲಿ ಉಂಟಲ್ಲಾ ಅದನ್ನಾ ಕೇಳಿದ್ದಿಯೋ ಇಲ್ಲವೋ ?

(ಮುಂದೆ ನಾಗುವದು).

ವಿವಿಧ ವಿಷಯಸಂಗ್ರಹ

ಮುಂಬಾಯಿ ಖಾತೆಗೆ ಸೇರಿದ ವಿದ್ಯಾ ಇಲಾಖೆಯ ರಿಪ್ಪೋರ್ಟು ಆಫೀಸಿಯಲ್ಲಿ ಬರುವಿದ ಮುಂಜಿಯೇ ಡಿರಕ್ಟರವರು ಸರಕಾರದವರಿಗೆ ಅರಿಕೆ ಮಾಡಿಕೊಂಡಿದ್ದಾರೆ. ಆ ರಿಪ್ಪೋರ್ಟು ನಮ್ಮಲ್ಲಿ ಯಥಾ ಬಂದಿದೆ. ಅದನ್ನು ಸರಿಯೊಗಿ ನಮ್ಮ ಪತ್ರಿಕೆಯಲ್ಲಿ ಬರೆದು ವಾಚಕರಿಗೆ ತೋರಿಸಲಿಕ್ಕೆ ನಾವು ಈ ಸಲ ಅಂಜಿಕೊಳ್ಳುತ್ತೇವೆ. ಇಂಥಾ ರಿಪ್ಪೋರ್ಟುಗಳು ತಿಳಿದು ವಿದ್ಯಾ ವಿಷಯದಲ್ಲಿ ಇರುವ ಕೊರತೆಗಳೂ, ಅಭಿವೃದ್ಧಿಗಳೂ, ಯಾವ್ಯಾವೇದು ನಮ್ಮ ವಾಚಕರಿಗೆ ತಿಳಿಸುವೆವು. ಆದರೆ ಅದು ವಾಚಕರಿಗೆ ಸೇವನೀಯವಾದೀತೋ ಇಲ್ಲವೋ ಎಂಬ ಸಂಶಯವನ್ನು ಇಲ್ಲಿ ಹೊರವಡಿಸಿ ಈಸಲ ಸಂಕ್ಷೇಪವಾಗಿ ಹೇಳುವೆವು. ಇದೀ ಮುಂಬಾಯಿ ಖಾತೆಯಲ್ಲಿಗತಕ್ಕ ನಾನಾ ವಿಧದ ವಿದ್ಯಾಶಾಲೆಗಳ ಬಟ್ಟು ಸಂಖ್ಯೆ 8,636 ಆಗಿರುತ್ತದೆ. ಈ ವಿದ್ಯಾಲಯಗಳಲ್ಲಿ ಓದತಕ್ಕವರು 5,07,666 ವಿದ್ಯಾರ್ಥಿಗಳಾಗಿರುತ್ತಾರೆ. ಈ ಅಭಿವೃದ್ಧಿಯ ಕೀರ್ತಿ ಅಲ್ಲಿಯ ಡಿರಕ್ಟರರಾದ ಮಿ. ಕೆ. ಮ. ಚೆಟ್ ಫೀಲ್ಡ್ ಸಾಹೇಬರ ಮೇಲೆ ಹೊಳೆಯುತ್ತದೆಂದು ಸರಕಾರದವರು ಅಭಿಪ್ರಾಯ ಪಡುತ್ತಾರೆ.

ನಮ್ಮಲ್ಲಿ ಡಿರೆಕ್ಟರರಾಗಿದ್ದು ನ್ಯೂನಿತರಾದ ಡಾಕ್ಟರ್ ಡುಂಕನ್ ಎಂಬವರು 4–5 ವರುಷಗಳಿಂದ ಈ ಪದವಿಯಲ್ಲಿದ್ದರೂ ಹೆಚ್ಚಿನ ವೃದ್ಧಿ ವ ಉಪಯೋಗವೇನೂ ಮಾಡಿ ತೋರಿಸಲಿಲ್ಲ ಎಂತಲ್ಲ. ಇತ್ತಲಾಗೆ ತೊಕ ಪ್ರೀತಿಗೆ ಅಪಾತ್ರರಾಗಿದ್ದಾರೆಂದು ಕೇಳಲಿಕ್ಕೆ ನಾವು ವಿಷಾದಿಸುತ್ತೇವೆ.

ಮುಂಬಾಯಿ ಸರ್ವ ವಿದ್ಯಾಶಾಲೆಗೆ ತಾ ಕೆಳಿಗೆ ಹೆಸರುಕಾಣಿಸಿದ ಸ್ನಹಸ್ಥರನ್ನು ಮೆಂಬರರಾಗಿಯೂ "Fellows ಎಂಬ ಬಿರುದಿಗೆ ಸೇರಿಸಿಕೊಂಡಿದ್ದಾರೆ:— "ಮಿಷ್ಟರ್ ಓ. ಟಿ. ಬೆರೋ ಐ. ಸಿ ಎಸ್ (ಎಕೌಂಟಾಂಟ್ ಜನರಲ್) ಮಿ॥ ಟಿ. ಜೆ. ಬೆನ್ನೆಟ್ (ಟ್ರಾಮ್ಸ್ ಆಪ್ ಇಂಡಿಯ" ಪತ್ರಿಕೆಯ) ಮಿ. ಮಾಣಕಜಿ ಕಿರಾಯಿಜಿ ಬಾರುಚಾ ಎಲ್. ಸಿ. ಯು. ಕಾವಸಹಬ್ಜಿ ಅಲುವ್ವಾಲ್ ಶ್ರೀಕಮದಾಸ್ ಭಗವಾನಿ ಬಿ. ಎ. ಸರ್ಜನ್ ಕರ್ನೆಲ್ ಕುಕ ಎವಿ. ಡಿ. ಮಿ ಜಡುಂಗರ್ ಇ. ಡಾವರ್— ರಾವ್ ಸಾಹೆಬ್ ಮಾಧವಲಾಲ್ ಪರಿತಾಲಾಲ್

ಜೋಸಾಯಿ. ಪುರುಷೋತ್ತಮ ಬಾಂಧ್ಯೋಪಾಧ್ಯಾಯ. ಕೆನರೆಂಟ್ ಎಜ್. ಕೆಂಪೌ. ಇನ್ನೂ ಕೆಲವರು.

ಸ್ತ್ರೀ ವಿದ್ಯಾ ಕುರಿತು ನಮ್ಮ ಜಿಲ್ಲೆಯಲ್ಲಿ ತಕ್ಕಮಟ್ಟಿಗೆ ಅಲಕ್ಷ್ಯ ಕೊಡೋಣಾಗುತ್ತದೆ. ಕೆಲವು ವರುಷಗಳ ಮುಂಚೆ ಮಂಗ್ಳೂರ ಬಿಬ್ಬಿಟ್ಟಿ ಕೋರ್ಟು ವಕೀಲರಾದ ಮಿ॥ ಮಂಗ್ಲೂರ ಸುಬ್ರಾಯರ ದ್ವಿತೀಯ ಪುತ್ರಿ ಶ್ರೀಮತಿ ಪಾರ್ವತಿಬಾಯಿ ಎಂಬವಳು ಮಿಡ್ಲ್ ಸ್ಕೂಲ್ ಎಂಬ ಪರೀಕ್ಷೆಯಲ್ಲಿ ಇಂಗ್ಲಿಸಿನಲ್ಲಿ ಪಾಸಾದಳು. ಅವಳು ಇನ್ನು ಮುಂದೆ ಮೆಟ್ರಿಕ್ಯುಲೇಷನ್ ಮುಂತಾದ ಪರೀಕ್ಷೆಗಳಲ್ಲಿ ಪಾಸಾಗಿ ಇನ್ನೂ ವಿದ್ಯಾಲಂಕೃತಳಾಗಿ ಬಹುದಿತ್ತು. ಈಗ ಪ್ರಾಯಮುಂಟಿ ದಾಂಪತ್ಯ ಸ್ನೇಹದಿಂದ ಗಂಡನ ಕೂಡೆ ಇರಬೇಕಾದ್ದರಿಂದೂ ಅವಳ ಗಂಡನು ಬಬ್ಬ ಐಶ್ವರ್ಯವಂತ ಜಮೀನ್ದಾರನಾದ್ದರಿಂದ ಮನೆಯಲ್ಲಿಯೇ ಉಳಿಯಬೇಕಾಯಿತು.

ಮತ್ತೊಬ್ಬ ಹುಡುಗಿಯು ಕೆನಾರಾ ಕ್ರಿಶ್ಚಿಯನ್ ಬ್ರಾಹ್ಮಣರ ಜಾತಿಗೆ ಸೇರಿದವಳು. 10ನೇ ವರುಷ ಪ್ರಾಯದಲ್ಲಿ ಪತಿ ವಿಯೋಗದಿಂದ ವೈಧವ್ಯ ದುಃಖ ಪ್ರಾಪ್ತವಾಯಿತು. ಆಹುಡುಗಿಯು ಕಾನರಗೋಡ ಮಿಶ್ಶನ್ ಶಾಲೆಗೆ ಹೋಗಿ ಕೆಲವು ಕಾಲ ಅಲ್ಲಿ ಕಲಿತುಕೊಂಡು ಕಲಿಕೊಟ್ಟು ನೋರ್ಮಲ್ ಶಾಲೆಗೆ ಸೇರಿ ಅಭ್ಯಾಸಿಸಿ ಈಗ ಮಂಗ್ಳೂರು ಕ್ಯಾಥರೀನ್ ಪೈಕಿ "ಕೆನರಾ ಗರ್ಲ್ಸ್ ಸ್ಕೂಲ್" ಎಂಬ ಹುಡುಗಿಯರ ವಿದ್ಯಾಲಯಕ್ಕೆ ಉಪಾಧ್ಯಾಯನಿಯಾಗಿ ನೇಮಕ ವಟ್ಟಿರುತ್ತಾಳೆಂತ ಕೇಳಿ ಬಹಳ ಸಂತೋಷವಾಯಿತು.

ಇಂಥಾ ಇನ್ನು ಕೆಲವ ಸ್ತ್ರೀವಿದ್ಯಾಕಚೆಗೆ ಲಕ್ಷ್ಯವಿಟ್ಟರೆ ನಮ್ಮ ಭಗಿನಿಯರ ಭಾಗ್ಯಕ್ಕೆ ಎಣೆಯಿಲ್ಲ. ವಿಷಯೆ, ರುಕ್ಮಿಣಿ, ಮತ್ತು ಲೀಲಾವತಿ ಮುಂತಾದವರೆ ಹಾಗೆ ಇನ್ನೂ ಅನೇಕ ತರುಣಿಯರು ಶೋಭಿಸಿದರೆ, ಹಿಂದೂ ದೇಶದ ಪುನರುತ್ಥಾನ, ಇಲ್ಲವೆ "Aryan regeneration" ಪ್ರಾಪ್ತವಾಗುವದು.

ಸ್ತ್ರೀಯರಿಗೆ ವಿದ್ಯಾಭೂಷಣ ಅಗತ್ಯ ವಿಲ್ಲವೆಂಬಹಾಗೆ ಅನೇಕರ ಅಭಿಪ್ರಾಯವಿರುತ್ತದೆ. ಸ್ತ್ರೀಯರು ವಿದ್ಯಾವತಿಯರಾದರೆ ದುರ್ಮಾರ್ಗಾಮಾಡುವರೆಂದು ತಿಳುಕೊಳ್ಳುತ್ತಾರೆ. ಈ ಅಭಿ

ಪ್ರಾಯಶಃ ಕೆಲವು ಜನರು, ಹುಡುಗರು ಇಂಗ್ಲಿಷು ಅಭ್ಯಾಸ ಮಾಡಿದರೆ ಹೆಂಚಕೆಲಸಕ್ಕೆ ಕಾಗದ ಅನ್ವೇಷಿಸಬಹುದೆಂದು ಸಾರಿ. ಯಾರಾದರೂ ಒಬ್ಬರಿಬ್ಬರು ಇಂಗ್ಲಿಷ್ ಕಲಿತುಕೊಂಡವರಲ್ಲಿ ಹೆಂಚ ಯಾ ಮದ್ಯಪಾನ ಮಾಡಿರಬಹುದು. ಅವರು ಇಂಗಿಷ್ ಕಲಿತಿದ್ದಾರೆಂಬದರಿಂದಲಿ ಅಭ್ಯಾಸ ಮಾಡಿದ್ದಾರೆಂತ ತಿಳಿಯ ಕೂಡದು.

ಅವರು ಇಂಗ್ಲಿಷ್ ಕಲಿಯದೆ ಇರುತ್ತಿದ್ದರೇನು ಹೆಂಚದ ರುಚಿ ನೋಡದೆ ಬಿಡುತ್ತಿದ್ದಿಲ್ಲ. ಇಂಗ್ಲಿಷ್ ವಿದ್ಯಾ ಫಲವನ್ನು ನಿಜವಾಗಿ ಪಡೆದವರು ದುರ್ಗುಣಗಳನ್ನು ಹೋಮ ಮಾಡಿಬಿಟ್ಟು ವಿದ್ಯಾಲಂಕಾರದಿಂದಲೂ ಸದ್ಗುಣ ಭರಿತರಾಗಿಯೂ ತೋಳಕದಲ್ಲಿ ಕಂಗೊಳಿಸುತ್ತಿದ್ದಾರೆ. ಅವರ ಉದಾಹರಣೆ ಪರೀಕ್ಷಿಸಿ ಇಂಗ್ಲಿಷ್ ವಿದ್ಯೆಯಿಂದಾಗಲೀ ಯಾವ ವಿದ್ಯೆಯಿಂದಾಗಲೀ ಉದಯೋಗ ಎರವ್ಯವೆಂತ ಎಲ್ಲರೂ ಪಡಬೇಕು.

ಇದೇ ಮೇರಿಗೆ ಸ್ತ್ರೀಯರಿಗೆ ವಿದ್ಯಾಲಂಕಾರ ಶ್ರೇಷ್ಠವಾದ್ದ ಭೂಷಣವೂ, ಆಭರಣವಾಗಿಯೂ ಇದೆ. ವಿದ್ಯೆಗಳಲ್ಲಿ ಸ್ತ್ರೀಯರಿಗೆ ಯೋಗ್ಯವಾದದ್ದು ಯಾವದಂದರೆ; —"ಅನೇಕ ಗ್ರಂಥಗಳ ಸಮೂಹದಿಂದ ಕೂಡಿರುವ ಭಾಷೆಗಳ ವೈಕಿ ಯಾವದಾದರೂ ಒಂದು ಭಾಷೆ ಕಲಿಯತಕ್ಕದ್ದು" ಸಂಸ್ಕೃತ; ಇದು ಅಶ್ಯರಾದ ನಮ್ಮ ಮಾತೃಭಾಷೆ. ಮರಾಠಿ, ಕನ್ನಡ, ಗುಜರಾತಿ, ತೆಲುಗು, ತಮಿಳು, ಮಲೆಯಾಳ, ಮುಂತಾದ ಭಾಷೆಗಳ ಅಮೂಲ್ಯವಾದ ಅನೇಕ ಗ್ರಂಥಗಳಿರುತ್ತವೆ. ಇವುಗಳಲ್ಲಿ ಯಾವದಾದರೂ ಒಂದನ್ನು ಹಿಡುಕೊಂಡು ಸ್ತ್ರೀಯರು ಅಭ್ಯಾಸಿಸಿ ಅದರಲ್ಲಿರುವ ಕಾವ್ಯರಚನೆ, ಗಾನರಸ, ಅರ್ಥಾತಿಶಯಗಳನ್ನು ಚನ್ನಾಗಿ ಗ್ರಹಿಸಿಕೊಂಡರೆ ಸ್ತ್ರೀಯರು ಈ ವಿದ್ಯಾವ್ಯಾಸಂಗದಿಂದ ಬುಡಿಯಬೇಕೆಂಬ ಅಗತ್ಯ ಇಲ್ಲದಿದ್ದರೂ ತೋಕವ್ಯವಹಾರದಲ್ಲಿ ಈ ವಿದ್ಯಾವತಿಯರಾದ ಸ್ತ್ರೀಯರು ಪುರುಷರಿಗೆ ಅತ್ಯಂತ ಸುಖಕಾರಿಗಳಾಗಿರಬಹುದು.

ಸ್ತ್ರೀಯರ ಮೂಳಕನವ ಸಲುವಾಗಿ ನಮ್ಮಲ್ಲಿರುವ ಅನೇಕ ಪೌರ್ವಾತ್ಯ ವಿದ್ಯಾಮಾರುತ ಸೋಂಕಿದ ಪೌರರು ಪಹಾರಾರ್ಥವಾಗಿ ತಮ್ಮ ಮನೆಗಳಲ್ಲಿ ಸಖಿಕಾರಿಗಳಾದ ಕುಲಿನ ಸ್ತ್ರೀಯರನ್ನು ಕಾಣದೆ, ಅವರ ಕೂಡೆ ಉತ್ತಮವಾದ ಭಾಷಣ ಮಾಡಲೊಲ್ಲದೆ, ನಯ

ವಾದ ಮಾತು ಇಂಪಾದ ಧ್ವನಿ ಕೇಳಲೊಲ್ಲ ಮಾರಿಗಳ ಬೊಬ್ಬೆಗಳ ಜಾಗೆ ಕೆನ್ನೆ ಕೆಂಪೇ ವಾದ ಗುಲ್ಲನ್ನು ಕೇಳಿ ಕಿವಿಗಳ ಮದ್ದಲೆಗಳ ಮೇಲಿನ ಬಡದಾಟದಿಂದ ಮನೆಬಿಟ್ಟು ಯಿಂದಾ ಬೆರೂ ಬರಲೆಲ್ಲಿ ಹೋಗಿ ಅಂಥಾ ವಿನೋದಗಳನ್ನು ಹುಡುಕುತ್ತಾರೆ. ಈ ಸಂಗತಿಯಿಂದ ಇಂಥಾ ತರುಣರ ನೀತಿ ದೋಷ ಎಣಿಸುವದು ತಪ್ಪು. ಸ್ತ್ರೀಯರು ವಿದ್ಯಾಲಂಕೃತೆ ಯಾದ ತೆ ಅವರಿಗೂ ಅವರ ಬಡಪುಟ್ಟಿದವರಿಗೂ ಒಡಯರತಕ್ಕವರಿಗೂ ಆನಂದಕರ ಮತ್ತು ಶ್ರೇ ಯಸ್ಕರ. ಈ ಮಾತಿಗೆ ವಿರೋಧವಾಗಿ ಕನ್ನಡದಲ್ಲಿ ಬಂದು ಉಪನ್ಯಾಸವನ್ನು ತಯ್ಯಾರಿ ಸಿ ಕಳುಹಿಸಿದವರಿಗೆ ಬರುವ ಎಪ್ರೀಲ್ ತಿಂಗಳಲ್ಲಿ ೨೦ ರೂಪಾಯಿ ಉಚಿತವಾಗಿ ನಾವು ಕಳುಹಿ ಸಿ ಕೊಡುವೆವು. ಸ್ತ್ರೀಯರು ವಿದ್ಯೆ ಕಲಿಯಲಿಕ್ಕೆ ಏನೂ ಯೋಗ್ಯರಲ್ಲವೆಂತ ಕಾರಣಗಳೂ ಉದಾಹರಣೆಗಳೂ ಕೊಟ್ಟು ತೋರಿಸಬೇಕು. ಉಪನ್ಯಾಸ ಬರೆದು ಕಳುಹಿಸುವವನು ತಾನೇ ಬರೆದದ್ದೆಂಬದಕ್ಕೆ ಬಂದು ಸಾಕ್ಷಿ ತೋರಿಸಿ ಕಳುಹಿಸಿದಲ್ಲಿ ರೂಪಾಯಿ ಕಿಕ್ಕೀತು.

ಮೈಸೂರ ಮಹಾರಾಜ ಕೃಷ್ಣರಾಜ ಒಡೆಯರವರಿಗೆ ಉಪನಯನವು ಏಪ್ರೀಲ್ ೨೬ಕ್ಕೆ ಆಗುತ್ತದೆ. ಮತ್ತು ಮೊದಲನೇ ರಾಜ ಕುಮಾರತೆಯನ್ನು ಮಹಾರಾಜ ಅರಸಿನವರಿಗೆ ಕೊಟ್ಟು ಮದುವೆಯೂ ನಡಿಯುತ್ತದೆ; ಇದಕ್ಕಾಗಿ ದಿವಾನ್‌ರವರು ಬೇಕಾ ದ ಏರ್ಪಾಡುಗಳನ್ನೆಲ್ಲಾ ಮಾಡುತ್ತಿದ್ದಾರೆ. ಆದ್ದರಿಂದ ಮಹಾರಾಣಿ ರೀಜಂಟರವರು ಈ ಸಲ ನೀಲಗಿರಿ ಬೆಟ್ಟಗಳಿಗೆ ಪ್ರಯಾಣ ಮಾಡುವದನ್ನೂ ಮುನ್ನಾ ಹೂಡಿರುವಂತೆ ಕೇ ಳುತ್ತೇವೆ.

ಅಮೃತಸರ ಪಟ್ಟಣದಲ್ಲಿ ಮೂವರು ಪೋಲಿಸಿನವರು ಬಬ್ಬ ಖೈದಿಗೆವನ ಕಾಲಕೆಳ ಗೆ ಕೈಗಳನ್ನು ನುಗ್ಗಿಸಿ ಕಿವಿಗಳನ್ನು ಹಿಡಿಸಿ ಹಿಂಸೆ ಪಡಿಸಿದ್ದಲ್ಲದೆ ಅವನ ಕೈಲಿ ಸುಮ್ಮನೆ ಉಟಿ ಬೈಸುಗಳನ್ನೂ ಮಾಡಿಸಿದರು ಅವನು ಈ ಹಿಂಸೆಯನ್ನು ತಡೆಯಲಾರದೆ ಜಾವ ಯಲ್ಲಿ ಬಿದ್ದು ಪ್ರಾಣ ಬಿಟ್ಟನು. ಸರ್ಕಾರದವರು ಆ ಪೋಲಿಸಿನವರಿಗೆ ಸಜಾ ಶಿಕ್ಷೆಯನ್ನು ಮಾಡಿಸಿದರು.

ಲೋಕ ವ್ಯವಹಾರಿಕ ಬೋಧಿನಿ

ಈ ಗ್ರಂಥವು ಮಂಗಳೂರಲ್ಲಿಯ ಬಾಸೆಲ್ ಮಿಶನ್ ಹ್ಯಾಸ್ಪ್ಟಿಲಿನ ಅಶಿಸ್ಟ್ಯಾಂಟೆ ಮಾಸ್ಟರರಾದ ಟಿ ಜಿ ಮಾಜೆನ್‌ರಿಂದ ರಚಿಸಲ್ಪಟ್ಟು ಎಂಟು ಪಾನುಗಳುಳ್ಳ ಚಿಕ್ಕ ಪುಸ್ತಕವಾದರೂ 'ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದೆಂಬಂತೆ' ಸಂಣದ್ದಾದರಿಂದ ಗ್ರಂಥವು ೮ ಭಾಗಗಳಾಗಿ ವಿಭಾಗಿಸಲ್ಪಟ್ಟು ಎನೇ ಭಾಗದಲ್ಲಿ ಸ್ಟ್ಯಾಂಪ್ ಮತ್ತು ರಿಜಿಸ್ಟ್ರೇಶನ್ ಆಕ್ಟುಗಳ ಮಾಹಿತಿಯು ಎನೇ ಭಾಗದಲ್ಲಿ ದಸ್ತಾವೇಜು ಮೊದಲಾದವುಗಳ ವಿವರಣೆಗಳೂ ಎನೇ ಭಾಗದಲ್ಲಿ ಕಾಗದ ಪತ್ರಗಳನ್ನು ಬರಿಯುವ ನಮೂನೆಗಳೂ ಹೇಳಲ್ಪಟ್ಟಿವೆ. ಲೌಕಿಕ ವ್ಯವಹಾರಕ ಸಮ್ಮಂಧ ಪಟ್ಟ ದಸ್ತೈವಜು ಮೊದಲಾದ ಬರಹದ ಕೆಲಸಗಳು ಭಾಷಾಜ್ಞಾನದ ಮೇಲೆ ಮಾತ್ರವೇ ಹೊಂದಿರಬೇ ಕ್ಲಪ್ತ ವಿಧಿಗಳಿಗೆ ಅನುಸರಿಸಿ ಮಾಡಲ್ಪಡುವಂಥವುಗಳಾಗಿವೆ. ಹೀಗಿರುತ್ತಾ ಅಲ್ಪವಾದ ಒಂದು ಗೇಣಿಚೀಟನ್ನು ಬರಿಯಬೇಕಾದರೆ ನೋದ ಬರಹ ಅರಿಯದವರು ಪಂಡಿತರು ಸಾಮಾನ್ಯವಾಗಿ ಇಂಥಾ ಕೆಲಸಗಳ ಮಾಹಿತಿ ಇರುವವರ ಸಮಯವನ್ನು ಕಾದು, ಅವರಿಂದ ಮಾಡಿಸ ಬೇಕಾಗುತಿತ್ತು. ಇನ್ನು ಮುಂದೆ ಈ ಗ್ರಂಥದ ಸಹಾಯದಿಂದ ಜನರು ತಮಗೆ ಅಗತ್ಯವಿದ್ದ ಎಲ್ಲಾ ಬರಹದ ಕೆಲಸವನ್ನು ತಾವೇ ಮಾಡ ಬಹುದು. ಆದ್ದರಿಂದ ಎಲ್ಲರೂ ಈ ಗ್ರಂಥದ ಪ್ರಯೋಜನವನ್ನು ಪಡಕೊಂಡು ಗ್ರಂಥಕರ್ತರಿಗೆ ಉತ್ತೇಜನ ಕೊಡುವದಾಗಿ ನಂಬುತ್ತೇವೆ.

ಮದ್ರಾಸ ಮಾಜಿ ಗವರ್ನರರಾದ ಲಾರ್ಡ್ ವೆನಲೋಕರವರು ಪ್ರಜೆಗಳು ಅವರನ್ನ ಸ್ಮರಿಸತಕ್ಕ ಅನೇಕ ಕಾರ್ಯಗಳನ್ನು ಮಾಡಿದರು. ಈ ಕಾರ್ಯಗಳ ಪೈಕಿ ಹಿಂದು ಜನರು ಕೃತಜ್ಞರಾಗಿರಬೇಕಾದದ್ದು ಯಾವದಂದರೆ: ಒಬ್ಬ ಹಿಂದು ಗೃಹಸ್ತರಿಗೆ ಪೋಲಿಸ ಸುಪರಿಂಟೆಂಡೆಂಟು ಎಂಬ ಜಿಲ್ಲಾ ಪೋಲಿಸ ಪ್ರಧಾನಾಧಿಕಾರಿ ಕೆಲಸ ಕೊಟ್ಟವರಾದರು. ಕಪ್ಪು ಜನರಿಗೆ ಕಲೆಕ್ಟರಿ, ಜಿಲ್ಲಾ ಜಡ್ಜಿ ಹಾಗೂ ಕೋರ್ಟ ಜಡ್ಜಿ ಕೆಲಸ ಮುಂತಾದ ದೊಡ್ಡ ದೊಡ್ಡ ಅಧಿಕಾರಿಗಳನ್ನು ಸರಕಾರದವರಿಗೆ ಕೊಡುತ್ತಿದ್ದರಾದರೂ ಪೋಲಿಸ ಖಾತೆಯಲ್ಲಿ ಇನ್ಸಪೆಕ್ಟರಿ ಕೆಲಸದಕ್ಕಿಂತ ಹೆಚ್ಚಿನ ಕೆಲಸ ಕೊಡುತ್ತಿದ್ದಿಲ್ಲ. ಬಳೀ ಜನರೇ ಗುತ್ತೆದಾರಿಕೊಂಡಿರುತ್ತಿದ್ದರು ಲಾರ್ಡ ವೆನಲೋಕ ಪ್ರಭುಗಳು ಸ್ಮರಣೆಗೆ ಪಾತ್ರ ಮಾಡಿ ಕೊಂಡರು.

ಸೋವೆ ದಂಗೆ ಕುರಿತು ನಾವು ಪುಂಗಳಿಗೊಮ್ಮೆ ಬರಿಯು ಬೇಕಾಗಿಯುಬೆ. ದಂಗೆ ಇನ್ನೂ ಶಾಂತವಾಗೆ ಬರಲಿಲ್ಲ. ದಂಗೆ ಪೋರರೆಂಬ ಜನರು ಗುಡ್ಡ ಪ್ರಾಂತ್ಯಗಳಲ್ಲಿ ವಾಸಮಾಡಿರುತ್ತಾರೆ. ಅವರು ಹೆಚ್ಚಾಗಿ ಕ್ರಿಸ್ತನ ಜನರು ಊರು ಪಳ್ಳಿಗಳಲ್ಲಿ ಲೂಟಿ ಮಾಡಿ ಹೇರಳ ಹಾನಿಯನ್ನುಂಟುಮಾಡಿದರು. ಆದರೂ ಸರಕಾರದಪರಿಂದ ಇದರ ವ್ಯವಸ್ಥೆ ಪಡಿಸಲಿಕ್ಕೆ ಇನ್ನೂ ಆಗಲಿಲ್ಲ. ಪ್ರಜಾರಕ್ಷಣೆ ಮಾಡಲೊಲ್ಲದ ಸರಕಾರದವರು ಇನ್ನೇನು ಮಾಡ್ಯಾರು ?

ಅಮೇರಿಕದಲ್ಲಿ ನೀರಿನ ಮೇಲೆ ನಡಿಯುವ ಬಾಯಿಸಿಕಲ್ ಎಂಬ ಜಲ ಯಾನವನ್ನು ಒಬ್ಬ ಸರದಾರನು ಹುಡುಕಿ ತೆಗಧ್ದು ಉಪಯೋಗಿಸುತ್ತಾನೆಂತ ಒಂದು ಪತ್ರದಲ್ಲಿ ಕಾಣಬರುತ್ತದೆ. ನೀರಿನ ಮೇಲೆ ಈ ಯಂತ್ರವನ್ನು ತೇಲುವ ಹಾಗೆ ಮಾಡಿದ್ದು ಜಲಸ್ತಂಬವೆಂಬ ಶಲ್ಯ ತಂತ್ರದ ಪ್ರಯೋಗವು ಕಲಿಯುಗದಲ್ಲಿ ಆದ ಹಾಗೆ ಆಯಿತು.

ವಿಚಿತ್ರರತ್ನಾವಳಿ

ಕಳದ ಒಗಟಿನ ಉತ್ತರಗಳು—

4. ಮಹಾಭಾರತ. 5. ಭೇದವಿಲ್ಲ. 6. ತಾರಕಬ್ರಹ್ಮ.
7. ಪರಬ್ರಹ್ಮನೆ ಥಾಯೆ.

ಹೊಸ ಒಗಟುಗಳು—

8. ಪಂಚಾಕ್ಷರೀ ಹೆಸರಿನವನಾದ ನಾನು ಗುರುವಿನಿಕಂತ ಹೆಚ್ಚಿನ ಸ್ಥಾನವನ್ನು ತೋರಿಸಿದೆ. ಅಯೋನಿ ಜನ್ಮನಾದೆ. 1ನೇ ಅಕ್ಷರವು ಮುಸಲ್ಮಾನರ ಹಿಂಸೆಗೆ ಪಾತ್ರವಾದ ಪಶುವೆಂತಲೂ, 2—3ನೇಗೆ ಜೋಪಾಸನೆನೆಂತಲೂ, 4—5ನೇಗೆ ಪತಿಯಾ ಒಡೆಯನೆಂತಲೂ ಅರ್ಥವಾಗುತ್ತದೆ. ನಾನ್ಯಾರು ?

9. ಶಿವನ ತ್ರಿಶೂಲದ ಮೇಲೆ ಇರುತ್ತದೆಂದು ಕರೆಯಲ್ಪಡುವ ಪುರವಿದೆ. ಅದರ 1—2ನೇ ಅಕ್ಷರಗಳಿಗೆ ಹಪ್ಪೆಯೆಂತಲೂ, 1—4ನೇಗೆ ಗುಣವೆಂತಲೂ ಅರ್ಥವಾಗುತ್ತದೆ. ಸಪ್ತ ಕ್ಷೇತ್ರಗಳಲ್ಲಿ ಬಂದಾದ ನಾನು ಯಾರು ?

ಲೋಕದಲ್ಲಿ ಪುತ್ರನೆಂಬ ಹೆಸರಿನಿಂದ ಮೆರೆದೆನು. ಹೆಂಗಸರಿಗೆ ಅಂಜಿಗುಳಿಯಲ್ಲಿ ಕೂತೆನು. ಸೃಷ್ಟಿ ಕರ್ತನ ತಲೆ ಕಚ್ಚಿ ವೈದ ಜಿ ಹೆಡೆಯು ನೀಲ ಕೊರಳಿನ ಸರ್ಪನು ನನ್ನ ತಂದೆಯಂತೆ ನಾನ್ಯಾರು ?

ಪದ್ಮಮಾಲಿಕಾ

[ರಾಗ ಕೆಜ್ಜುಪ್ಪಿ ಝುಂಪೆತಾಳ]

ಜಕಲವಿಲ್ಲವು ಶಿವನಲಿಂಗದೊಳಗಡಗಿದುದು । ಲಿಂಗವೇ ಮಾಲಿಂಗವಾಗಿ ತೋರುತಿ
ದು ॥ಪಲ್ಲ॥ ಭಕುತಿಕರದ ಮುಮತೆಯೊಳು ಸ್ಥಾಪಿಸಿಯೆ ಅರ್ಚಿಸಲು । ಸುಕೈಲ ಫಲವನು ಅ
ಳವಕೊಳ್ಳಗವನು ಕಾಣೆ ॥ಅನು॥ ಆ ಮಹಾನಹಸ್ಪತಿಮೊಳಗತ್ಯಧಿಕ ॥ ಸೋಮೇಶನೆಂ
ಬೆಂಬ ಸ್ವಾಮಿಯನು ಕಂಡು ॥ ಸೋಮವಾರದ ದಿವಸ ಸೋಮರುದ್ರವ ಜಪಿಸಿ ॥ ನೇಮ
ದಿಂ ಪೂಜಿಸಲು ಕಾಮಿತಪದ ಫಲವು ॥೧॥ ಇನ್ನೇನವನಿಪಾಸುವೆ ಯೀಶನಿನ್ನಯನುಹಿವೆ ।
ಉನ್ನಂತವಾಗಿ ಜಗದೊಳು ಚರಿಸಿತು ॥ ಪನ್ನಗೇಶನಬಲದಚ್ಚಿನುತ ಚೆಕಿಯೋಳ್ । ಪ್ರಸ
ನ್ನವಾದನು ಸೋಮನಾಥನೆಂದೆನುತ ॥೨॥ ಸ್ವಾಮಿನಿನ್ನಯಪಾದ ಪ್ರತ್ಯಕ್ಷವಾಗಿಯೆ ॥
ಸೋಮೇಶನೆಂದೀಗ ತಾಮರದದು ॥ ಭೂಮಿಯೋಜನರಿಗೆ ಭುಕ್ತಿಮುಕ್ತಿಯ ನಿತ್ತು। ಪ್ರೇಮ
ದಿಂ ಸಲಹುತ್ರ ಕಾಮಿತಾರ್ಥವನೀವ ॥೩॥ ತೋರೋಪಕಾರಕ್ಕೆ ಸೋಮೇಶ ನೀಬಂದೆ ।
ಗೋಕರ್ಣಾಧೀಶ್ವರ ಕಾಶಿರಾಮೇಶ್ವರವು ॥ ಬೇಕೆಂಬದಿಲ್ಲಿನ್ನುಯೆನ್ನ ಭೀತಿಯ ಗಿರಿಯು । ನೂ
ಕುವತಿಶಯಕುಮತಿ ನೀನುಜಗದೀಶ ॥೪॥ ಜೀವಾಕೆಯೊಳು ಮನದೊಳಗೆ ಅಡಗಿಸಿಯೆ ಭಜಿಸಿ
ದರೆ । ಕಾಕೆಂಗುಧರತನ್ನ ಪದವನೀವ ॥ ಯೋಕೆಮನದೊಳು ಬಿಡುವೆ ಶಿವನಾಮವನು ನೀ
ನು । ಯೋಕೆ ಕಜೆಯೆಲಿ ಕೆಡುವೆ ವ್ಯರುಥ ಜೀವನವೆ ॥೫॥ ಸಡಗರದಿ ಸರ್ವವು ನಿನ್ನಲ್ಲಿ ಅ
ದು । ಜಡೆಯೊಳಗೆ ಅಡಗಿದುದು ಪೊಡವಿಗುತ್ತಮ ಪದಿಯು ॥ ಉಡುಪತಿಯು ಅಡ
ವೊಳ್ವಾಫಣಿಯೊಳಗೆ । ಪಿಡಿಯೊಳಗೆ ಅಡಗಿದದು ವೇದವ್ಯಾಸರೂಪಾಗಿ ॥೬॥ ಕಿ
ಡಗಿತು ಅವನ ಅಚ್ಚಹಣೆ ಗಂಣಿನೊಳಗು । ಮುಚ್ಚಿತೆರವಕ್ಷಿಯೊಳು ಮೂಜಗದಬೆ
ಬಚ್ಚಿಟ್ಟ ವಿಷಕಂತನುಗ್ರನೊಳು ತೋರಿವನು । ಯುಚ್ಚರಿಪ ಮಂತ್ರಗಳು ಪಾ
ನಿದುದು ॥೭॥ ಶುದ್ಧಸ್ಫಟಿಕತರದ ಕಾಯಕಾಂತಿಗಳಾಳ್ಕ । ಬದ್ಧಗೆಯಡಾರದಂದ
ನೊಪ್ಪುಗಳು ॥ ಉದ್ದಿಶ್ಯನಾಗಿ ಭಜಿಸಿದ ಭಕ್ತರುಂತಗಳು । ಶಿದ್ದಿಟ್ಟಲಿಭವಣ ತಿರಿ
ವಣ ॥೮॥ ಪುಲಿಕರಿಯಪ್ಪೋಪುಗಳು ನಳನಳಿವವರನಗಳು । ಹೊಳ್ಳವಸುಮುತೇಜಗ
ನನೀತ)ಗಳು ॥ ನಲಿವಗುಣಕೋಟಿಗಳ ಮುಖ್ಯಬೊಳು ಕೈಲಾಸ । ವಿಳಿದು ಬಂದ
ನಮ್ಮಬಳಿಗೆಸೋಮೇಶ ॥೯॥ ನಾಸಿಕದಿಕೌಮಾರಿಗವಧಿಯಾಗಿಹ ಸ್ಥಳ ವಿ। ಶೇಷವಾಗಿ
ಕುಬ್ಜರೌಪ್ಯ ಪುರದೊಳಗೆ ॥ ಭೂನುತೋತ್ಪತ್ತಿಯುಗೊಂದು ಭೂರಿಭಾಗ್ಯವನಳ್ದು । ವಾಸ
ವೆಯೋಜಗದೀಶ ಸೋಮೇಶ ॥೧೦॥ ಬಾಣೇತ್ರವೆ ನಿಲ್ಕಂತಶೂಲಾಸ್ತಿಧರ । ಕಾಲರುದ್ರ
ಳ್ಳಿಭೂಪಸವೆಕಾಶ ॥ ಲೀಲಿನ್ನಿಬಿನ್ನಪ ಪಾಲಿಸೆನ್ನನುಬೇಗ । ಬಾಲಕನಲ್ಲನೀ ಭಕ್ತ
ರಧೇನು ೧೧॥ ಸಂಜನೋಡಿರೂ ಮು ಗನು ನೀಬೀಗ । ಧಾರುಣಿಯೊಳ್ಳೊಂದು

ಪದ್ಯ ಮಾಲಿಕಾ

ಶಿವಲಿಂಗವನು ಬೇಗ । ಮೇರುವಿಗೆ ಸ್ಥಮವಾದ ಪ್ರೇಮವನು ವಿಪ್ರರಿಗೆ । ಧಾರಪೂರ್ವಕವಾಗಿ ಯಿತ್ತ ಫಲವೊದಗುವದು ॥೧॥ ಶಿವನ ಪೂಜೆಯೆ ಭಕ್ತಿ ಶಿವನ ಪೂಜೆಯೆ ಯುಕ್ತಿ । ಶಿವನ ಮಂತ್ರವೆ ಶಕ್ತಿ ಶಿವನೆ ಪರಶಕ್ತಿ ॥ ಶಿವನಲ್ಲದವನು ಭಜಿಸ ಸಿರಿಯ ಪದವನು ಹರಿಯು । ಶಿವನ ಮರೆಯದೆ ಭಜಿಸು ಯಿಂಪುಪರವ ಸೃಜಿಸು ॥೨॥ ನಿನ್ನನೇನಂಬಿದೆನು ವೆನ್ನತಾನಂತೇಶ ವಂನಿಸಿದಯಬೇಕು ಚಂದ್ರಮೌಳೀಶ । ಇಷ್ಟುಭಯವಿಲ್ಲೆನಗೆ ಪರಗನ್ನ ನೋಮೇಶ । ಎನ್ನೊಡೆಯ ಶ್ರೀಕೃಷ್ಣ ವರಹತಿಮ್ಮಪ್ಪ ॥೩॥

॥ ರಾಗ ಸೌರಾಷ್ಟ್ರ) ಆದಿತಾಳ ॥

ಮಂಗಳಂ ಜಯಮಂಗಳಂ । ಲಿಂಗಾಕಾರದ ವರಶಿವಗೆ ॥ಪಲ್ಲ॥ ರಜತಾದ್ರಿಯು ನಿಂದವಗೆ । ಭಜಕರ ಸಲಹಲು ಬಂದವಗೆ॥ ನಿಜಸುರಸೇವಿತ ಗಜಚರ್ಮಾಂಗವಂದಿತನಾದ ವರಶಿವಗೆ ॥೧॥ ಬಾಣನಬಾಗಿಲ ಕಾದವಗೆ । ತ್ರಾಣದಿ ತ್ರಿಪುರಗೆ ॥ ಕಾಣದೆ ಅಸುರಗೆ ಪಾಣಲಿಂಗವನಿತ್ತ । ಪ್ರಾಣದೆ ಭಕ್ತರ ಸಲಹುವಯ ಜಡೆಯೊಳು ಧರಿಸಿದವಗೆ । ಸಿಂಗಿಯ ಕೊರಳೊಳು ನುಂಗಿದವಗೆ ॥ ಕಿ ಅಂಗಭಸ್ಮಾಂಗದಿ । ಕಂಗಳು ಮೂರುಳ್ಳ ಕೃಪಾಂಗನಿಗೆ ॥೩॥ ಅಸ್ತಿಯ ದವಗೆ । ಹಸ್ತದಿ ಶೂಲವಪಿಡಿದವಗೆ ॥ ವಿಸ್ತರವಾಗಿಯೆ ಭಸ್ಮಗುವಾಸಿಗೆ । ತ್ವವಗೆ ॥೪॥ ಅಂಬಿಕಪತಿಯೆಂಬನಿಸಿದವಗೆ ತ್ರಿ । ಯಂಬಕ ಮಂತ್ರದಿ ನೇಸುರರಿಗೆ ಬೆಂಬಲವಾಗಿಯೆ । ಯಿಂಬಾದಪದವಿಯ ತೋರ್ದವಗೆ ॥೫॥ ವೈಲಿದವಗೆ । ಪಂಚಮಕರದೊಳು ಮೆರೆವವಗೆ ॥ ಪಂಚಮಪ್ರಾತಕ ಕಳಿಸಿಭಕ್ತರ ವಾಂಛಿತವೀವಗೆ ॥೬॥ ಪಾಶುಪತವನರ ನಿತ್ತವಗೆ । ಶೇಕಾಕಿಗಧಿಕವಾಗಿ ಕೈವಲ್ಯವಿತ್ತು ವಿ । ಶೇಷದಿ ಜನರನು ಸಲಹುವವಂದಿತವಗೆ । ದಕ್ಷನಮುಖವನು ಕದಿಸಿದವಗೆ ॥ ಕುಕ್ಷಿಯೊಳೀರೇಳು ಜಗವನುದ್ಧರಿಸಿಕೊಂಬಂತ ದೀಕ್ಷಿತಗೆ ॥೮॥ ಕಾಮಿತಫಲಗಳ ಕೊಡುವವನಿಗೆ । ಪ್ರೇಮದಿ ಪಾಹುವಗೆ ॥ ಭೂಮಿಗೆ ವರಹತಿಮ್ಮಪ್ಪನ ದಾಸರ । ನ್ಯಾಮಿಯೆಂದೆನಿಸುವ ಈಶನಿಗೆ

ಲಂಡನ್ ಮುಟ್ಟಿ ಬೆಂಕಿಗಾದಮೇಲೆ ಅಂದುಸ್ಥಾದ ವಿಮೆಯ ಸಂಕ್ಷಿಪ್ತ.

(೧೯೦೦ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿದ್ದು)

ವಿಮೆಗಳು ಭದ್ರವಾದ ಮತ್ತು ಸದರಿ ಜಮ್ಮತೆಯಾದ ರೀತಿ
ಯನ್ನನುಸರಿಸಿ ಅಳಿಸಲ್ಪಡುತ್ತವೆ.

ಸದರಿ ೧೯೦೯ನೇ ಇಸವಿ ಡಿಸೆಂಬರ ತಾರೀಖಿನ ಪ್ರಕಾರ ಸರಿಯಾದ ಳೆದ ೧೧ ವರುಷಗಳಲ್ಲಿ ಈ ಸಂಸ್ಥೆಯ ಆದ ಅದಾಯದ ಅಂದಾಜು ಪಟ್ಟಿ.

ವರುಷ.	ಹೊಸ ವಿಮೆಗಳು.	ಏನೂ ವಿಮೆ ಮೊಬ್ಲಗು.	ಫಂಡ.
ರೂ.	ರೂ.	ರೂ.	ರೂ.
೧೮೯೯.	೬೭,೧೮೫.	೧೫,೪೫೦.	೫೯,೭೫೦.
೧೯೦೦.	೧೫,೧೧೦,೭೬೦.	೩೬,೬೬೦.	೧೫೮,೮೫೦.

ನೋಡಿದ ಪಟ್ಟಿಯಿಂದ ಕೂಡಲೆ ಬರುವದೇನಂದರೆ— ವಿಮೆಯು ಕೆಲವು ಜನರಲ್ಲಿ (ಅಲ್ಪ ಕಾಲ ಕಳೆದು) ಕಳೆದ ಇನ್ನೊಂದು ವರುಷಗಳಲ್ಲಿ ಇಮ್ಮಡಿಯಾಗಿದೆ. ಮತ್ತು ಭವಿಷ್ಯದಲ್ಲಿ ಸಹ ಅದಕ್ಕಿಂತ ಹೆಚ್ಚಿನ ದಾಪಾಟೆ ನೋಡಿಗೆ ವೃದ್ಧಿಯಾಗಿದೆ. ಇದು ಸಂಸ್ಥೆಯ ಕೆಲಸ ಗಳಲ್ಲಿ ಒಳ್ಳೇ ರಾಜಕೀಯ ಕಟ್ಟಳೆಯಂದು ನಡಿಸಲ್ಪಡುತ್ತವೆಂಬದೂ, ಭವಿಷ್ಯತ್ ಕಾಲದಲ್ಲಿ ಜನಸ್ತೋಮ ಒಳ್ಳೇ ರೀತಿಯಿಂದ ನಡಿಯುವದೆಂಬದೂ ಸ್ಪಷ್ಟ ಮಾಡುತ್ತದೆ.

ಸುಲಭ ಕೆಲಸಗಳು—ಅಕಂಪನೀಯವಾದ ಭದ್ರತೆ.

ಹಿಂದುಸ್ಥಾನದೊಳಗಿನ ಫಂಡನ್ನು ಹಿಂದುಸ್ಥಾನದಲ್ಲಿಯೇ ಸಲ್ಲಾಸುಂಡು ಹೆಚ್ಚಿಸಿ ಲಂಡನ್ನಿನಲ್ಲಿ ಮುನಸಿಪಲ್ ಮೊದಲಾದ, ಬ್ರಿಟೀಷ್ ಸರಕಾರದ ಸಾಲಪತ್ರಗಳು ಇರಿಸಿಟ್ಟಿದೆ.

ಮರಣದ ಬಹುವಾಸು ಕೊಟ್ಟ ಕೂಡಲೇ ಮುಂಬಯಿಯಲ್ಲಿ ಅಥವಾ ಕಲ್ಕತ್ತೆಯಲ್ಲಿ ಬಿಮೆಯ ಹಣವು ಕೊಡಲ್ಪಡುತ್ತದೆ.

ಫ್ರೀಮಿಸ್ಯಾಗಲು ಮತ್ತು ಜೋಕ್ಯರಲ್ಲಿ ಸೀ ತಂದನಿಯೆಯಂಬಂಥಲ್ಲಿ ಇಡಿಸಲ್ಪಡುತ್ತವೆ.

ಕಡಾಚಿತ ಪೊಲಿಸಿಗಳು, ಬದ್ರ ಮಾರಿಕಸುವ ಇಂಥ ತಿಂಗಳ ಒಳಗೆ ಕೊಡದ ಹಾಗೆ ಯಲ್ಲಿ ತಿರಸ್ಕಾರಗುತ್ತವೆ.

ಹಿಂದುಸ್ಥಾನದೊಳಗಿನ ವಿಜಂಗಡಿಯ.

ಮುಂಬಯಿ.	ಕಲ್ಕತ್ತಾ.	ರಂಗೂನ್.
ಕಬ್ಬೂ. ಎಂಡ ಎ.	ಗ್ರೇಷಾಮ ಮತ್ತು ಕಂಪನಿ.	ಟೊಸಾಲ್ಡ್.
ಗ್ರೇಷಾಮ ಮತ್ತು ಕಂಪನಿ.	ಪಿಟೀರ್.	ಗ್ರೇಷಾಮ ಮತ್ತು ಕಂಪನಿ.
ಪಡಾಮ್.	ಡೈಸ್ ಮತ್ತು ಕಂಪನಿ.	

ಈ ಕಂಪನಿಯಲ್ಲಿ ಏಜೆಂಟರಾಗಿ [illegible] ಬಯಸಿದವರು ಮೇಲಿನ ಅಡ್ರೆಸ್ಸಿಗೆ ಬರೆಯಿರಿ.

ಪಿ. [illegible]

[illegible]

ಜನ್ಮದ ಶಾಖವು.

ಪಚಾಂಗ ವಿಜೂರವು.

:○○:

ಬಲಾಢ್ಯೋಗ್ಯ ಪುಷ್ಟಿಗಳನ್ನು ಬೆಳಿಸತಕ್ಕ ಉತ್ಪತ್ತಿಯು.

ಅತ್ಯಾಶ್ಚರ್ಯಕರವಾದ, ಬೇರುಗಳಿಂದ ತಯಾರಿಸಿದ ಈ ಉತ್ಪತ್ತಿಗಳು ಕೊಂಕಣ ಪ್ರಾಂತ್ಯದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ಹುಷ್ಪದೊಳಗೆ ಬಾಗಿಸಿ, ಒಳ್ಳೇ ಜೆಚ್ಚಿನ ತರಗತಿಯ ಸಕ್ಕರೆಯು ಪಾಕದಲ್ಲಿ ಸಿಕ್ಕ ಮೂಡಿದು ತ್ತೇವೆ. ಈ ಉತ್ಪತ್ತಿಗಳು ಮಹೌಷಧಗಳಿದ್ದು ಒಳ್ಳೇ ರುಚಿಯುಳ್ಳವು. ಅವುಗಳ ಸೇವನೆಯಿಂದ ಶಕ್ತಿ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ಯಾವತ್ತೂ ಬಗೆಯ ವ್ಯಾಧಿಗಳು ಹೋಗುತ್ತವೆ. ೬೦ ವರ್ಷಗಳ ಪ್ರಾಯದವರೆಗೆ ಮುದುಕರಿಗೆ ಶಾಮ ವಿಕಾರವಾದರೂ ಇರಿಯದ ಗಂಡಸರಂತೆ ಸ್ವಜ್ವಲಿತವಾಗುತ್ತದೆ. ಜನನೇಂದ್ರಿಯದಲ್ಲಿ ಬಲವುಂಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ. ಲಘ್ವಿಯ ಮುಂಚೆ ಆಹಾರಾ ಹಿಂಚೆ ಹರಿಯು ಹೋಗುವ ಧಾತು ನಿಲ್ಲುತ್ತದೆ. ಸ್ವಭ್ಯಾವಸ್ಥೆಯಾಗುವದಿಲ್ಲ. ವೀರ್ಯವು ಬೆಳಸು ವೈ ಒಂಣವು ಸುಧಾರಿಸುತ್ತದೆ. ಪರಮಾ ಹಾಗೂ ಉಷ್ಣ ಸಂಬಂಧಿಕ ಬೇನೆಗಳ ಕಸರು ಇಲ್ಲದಂತಾಗಿ ಧಾತು ಪುಷ್ಟಿಯಾಗುತ್ತದೆ. ಮೂರು ಹೊತ್ತುಂಡರೂ ಅನ್ನವು ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವ ಮೊಂದೇ ತಿಡ, ಕೂಡಲೇ ಸ್ವಚ್ಛ ಸೌಚಕ್ಕಾಗುತ್ತದೆ. ಕ್ಷಯ, ಉದರ್ಕ ಪಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದವ್ಗಿ ೧೦ ದಿವಸಗಳವರಿಗೆ ಸಾಲುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮುಕ್ಕು ಪಳೆ ಬಹ್ಮಳ್ಳಿ ೨೦ ದಿನಗಳ ಮೇಲೆ ಗುಣ ಬಂದೀತು. ೧೦ ದಿನಗಳವರಿಗೆ ಸಾಲತಕ್ಕ ೧ ಡಬ್ಬಿಗೆ ೧೫-೦ ರೂ. ಒಂದೇ ವ್ಯಾಳ್ಯಕ್ಕೆ ೩ ಡಬ್ಬಿಗಳು ತಕ್ಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಪತ್ತಿಯಿಂದ ಹೆಂಗಸರು ಸಫೋಜರಾಗುತ್ತಾರೆ. ಕದಗಿನ ಹಾಗೂ ಬಾಣಂತಿ ಬೇನೆಗಳು ವಾಸಿಯಾಗುತ್ತವೆ. ಎಲ್ಲರಷ್ಟೆ ಸರಿಯಾಗಿ ಬೇನೆ ಇಲ್ಲದವರನ್ನಾಗಿ ಮಾಡಿ, ಬಲಾಢ್ಯೋಗ್ಯ ಪುಷ್ಟಿಗಳನ್ನು ಬೆಳಿಸುತ್ತವೆ. ಈ ಔಷಧವು ಈ ಕಂಪನಿಯು ಹೊರತು ಬೇರೆ ಸ್ಥಳದಲ್ಲಿ ಆಗುವದಿಲ್ಲ. ದೂರವಣ್ಣ ದೇಶಗಳಲ್ಲಿಯ ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತವೆ. ಬರೆಯು ಬಂಡವಾಡಲಿಚ್ಛಿಸುವ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಈ ಔಷಧವು ಉಪಯೋಗ ಮ್ಯಾಲ್ಯ ಬೇಲು ಪೆಟ್ಟಿ ಬೇರೆ ಕೊಡ ಬೇಕು. ಉಚಿತ ಪುಸ್ತಿ ಇದರಲ್ಲಿ ಮಾತುಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಲ್ಲಿ ಎಲ್ಲಾ ವಿಜೂರವು ಜೊತೆಯಾಗಿ ಇಡಲಾಗಿರುವವು. ಈಗೆ ಕಳುಹಿಸಿದರೆ ಪಿಡಾಲ ಖರ್ಚು ತಡವೆ ಬೀಳುವದು

ಮೇಲ್ಕಾಣಿಸಿದ ಎಲ್. ಪಿ. ಬ್ರದರ್ಸ್ ಮತ್ತು ಕಂಪನಿಯ

ಸೇಲಾಡ್ ಇಂಗ್ಲಿಷ ವ್ಯಾಪಾರಿ ಆಫೀಸು ಬೆಳಗಾವಿ.

ಪೋಸ್ಟ ಬೆಳಗಾಮ್. Post BELGAUM.

1896

WORLD NEWS PAPER EXIBITION
Shimoga Dist Karnataka State INDIA

K. S. Narasimha Murthy,
Land Hold & Patel,
H. MUTTEL (TIPTUR HALLI TALUK)

ಮೈತ್ರಾಂತ ಚಿಂತಾಮಣಿ

ಪ್ರತಿ ಬುಧವಾರ ವೂ ಪ್ರಕಟಿಸಲ್ಪಡುವುದು.

ಈಷಾ ದಿಂದುರಸೌ ಧಿನೋತಿ ಜಗತೀಂ ಪಿಯೂಷಗರ್ಭೈಃ ಕರೈಃ ಕಸ್ಮಾದ್ವಾ ಜಲಧಾರಯೈಷ ಧರಣೀಂ ಧಾರಾಧರಸ್ಸಿಂಚತಿ ॥
ಭ್ರಾನುಂಭ್ರಾಮಯಂಚ ನಂದಯತಿ ವಾ ಕಸ್ಮಾತ್ತ್ರಿಲೋಕೀಂ ರವಿಃ ಸಾಧೂನಾಂ ಹಿ ಪರೋಪಕಾರಕರಣೇ ನೋಪೇತ್ಯುಪೇಕ್ಷಾಂ ಮನುಃ॥

೧೦ ಸಂಪುಟ] ಮೈಸೂರು :—ಸ್ ೧೮೯೬ನೇ ಡಿಸೆಂಬರ್ ತಾ ॥ ೩೦ ನೇ ಬುಧವಾರ. [ಸಂಚಿಕೆ ೩೪

ಪ್ರಕಟನೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯುವಡಿಸುವದೇನಂದರೆ.

ಸ್ವಾಮಿಗಳ ವಿಶ್ವೇಶ್ವರಾನಂದಸರಸ್ವತಿಯವರು ಅನಾಥಾಲಯಕ್ಕೆ ಒಪ್ಪಿಸಿ ಇರತಕ್ಕ ಮನೆಗಳಲ್ಲಿ ಕೆಲವು ಖಾಲೀ ಇರುತ್ತವೆ, ಇನ್ನು ಬ್ರಾಹ್ಮಣರಿಗೆ ವಸತಿಯಾಗಿಯೂ ವಾಸಕ್ಕೆ ಯೋಗ್ಯವಾಗಿಯೂ ಇವೆ ಬೇಕಾದವರು ಅನಾಥಾಲಯದ ಜನರಲ್ ಸೆಕ್ರಟರಿಯವರಾದ ಹೆಚ್. ಕೃಷ್ಣರಾಯರಲ್ಲಿ ಬಾಡಿಗೆ ಪಡಿಯಬಹುದು.

ಹೆಚ್. ಕೃಷ್ಣರಾವ್.
ಆನರೆರಿ ಸೆಕ್ರಟರಿ
ಅನಾಥಾಲಯ ಮೈಸೂರು.
೯—೧೧—೯೬
ಮೈಸೂರು.

ಪ್ರಕಟನೆ.

ಚೂರ್ಣಕಾಂತ ತಿಲೆಯು ಅತ್ಯತ್ತುಮ ಕನ್ನಡಕಗಳು. ದೃಷ್ಟಿಯಿಲ್ಲದೆ ಪ್ರಸಂಚದಿಂ ಬೇನುಪ್ರಯೋಜನ!!!

ನೋಟೀಸು.

ಇದರಿಂದ ತಿಳಿಯವಡಿಸುವ ದೇನಂದರೆ.—ಸ್ ೧೮೯೬ನೇ ಇಸ್ವಿಯಲ್ಲಿ ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕಿನಲ್ಲಿರುವ ಮೇಲ್ಹಳ್ಳಿತ್ತಿ ಎಂಬ ಗ್ರಾಮದಲ್ಲಿರುವ ವಿಲ್ಸನ್ ಎಸ್ಟೇಟ್ ಎಂಬ ಕಾಫಿಯಸ್ಟೇಟು ಒಂದು, ಮತ್ತು ಮೇಲ್ಹಳ್ಳಿತ್ತಿ ಗ್ರಾಮದಲ್ಲಿ ಸ್ವಲ್ಪ ದತ್ತಾತ್ರಿ ಪೇಟೆಗ್ರಾಮದಲ್ಲಿ ಸ್ವಲ್ಪ ಇರುವ ಮೆಣಸ್ಸಿಂಗುಂಡಿ ಎಂಬ ಪುಸ್ಟೇಟು ಒಂದು, ಕೆಟ್ಟುನಾಮನಿ ಗ್ರಾಮದಲ್ಲಿರುವ ಬಾಬಾಬುಡನ್ ಸಿಸ್ಟೆನ್ ವ್ಯಾಲಿಯಸ್ಟೇಟು ಒಂದು, ಈ ಮೂರುಕಾಫಿ ಯಸ್ಟೇಟುಗಳು ಗತಿಸಿದ ಬಿ. ಎ. ಬ್ರಿಟೋ ಮತ್ತು ಎ. ಪಿ. ಬ್ರಿಟೊ ಎಂಬುವರುಗಳಿಂದ ಜೊಂಬಾಯಿಯಲ್ಲಿರುವ ಡಾಕ್ಟರ್ ಸಿಸ್ಟೆಸ್ಮಿತ್ ಎಂಬುವರಿಗೆ ನ್ಯಾಯವಾಗಿ ಒತ್ತೆ ಮಾರ್ಕ್ಪಟ್ಟರ್‌ವಾದ್ದರಿಂದ, ಸದರಿ ಡಾಕ್ಟರ್ ಸಿಸ್ಟೆಸ್ಮಿತ್ ಎಂಬುವರು ಸದರಿ ಬಿ. ಎ. [illegible]

ಪ್ರಪಂಚದಲ್ಲಿ ಅಗಾಧ ತೆವುವಾದ ಒಂದು ರಂಧ್ರವು ಸಿಲಿಸಿರುವಲ್ಲಿ ಮಾತಲ್ಪಟ್ಟಿದೆ ಇದರ ಆಳವು ೬೫೦೦ ಅಡಿಗಳುಳ್ಳದ್ದಾಗಿದೆ.

ನಾತಿಂಡಿಯಾ ರೈಲ್ವೆ ಕಂಪೆನಿಯವರು ಎನೇ ತರಗತಿಯ ಪ್ರಯಾಣಿಕರಿಂದ ಮೈಲಿ ಒಕ್ಕೆ ೪ ಪೈ ಪ್ರಕಾರ ಭಾರ್ಜ್ ವಸೂಲ್ಮಾಡುವದನ್ನು ತಪ್ಪಿಸಿ ೩ ಪೈ ಹಾಕಬೇಕೆಂದು ಯೋಚಿಸಿ ಇದಕ್ಕೆ ಡೈರೆಕ್ಟರುಗಳ ಸಮ್ಮತಿಯನ್ನು ಕೇಳಿರುವರು.

ಬಡೋದಾ ಸಂಸ್ಥಾನದ ಗಾಯಕವಾಡಿ ಮಹಾರಾಜರು ತಮ್ಮ ಸಂಸ್ಥಾನದಲ್ಲೆಲ್ಲಾ ಸರ್ಕೀಟು ಮಾಡಿ ಪ್ರಜೆಗಳ ಕಷ್ಟ ಸುಖಗಳನ್ನು ಸ್ವತಃ ನೋಡಿಕೊಂಡು ಬರಬೇಕೆಂತಲೂ, ಪ್ರಜಾಪ್ರತಿನಿಧಿಗಳಾದವರನ್ನೂ ಇಲ್ಲದವನ್ನೂ ಕಣ್ಣಾರ ನೋಡಬೇಕೆಂತಲೂ ತೀರ್ಮಾನಿಸಿರುವರು.

ಹೊಸದಾಗಿ ಹುಟ್ಟಿದ ಹೆಣ್ಣುಮಗುಸಳನ್ನು ನಾಶಮಾಡುವ ಪದ್ಧತಿಯು ಸರ್ಕಾರದವರು ಇದನ್ನು ತಪ್ಪಿಸಬೇಕೆಂದು ಎಷ್ಟು ಪ್ರಯತ್ನ ಪಟ್ಟರೂ, ವಾಯವ್ಯ ಸಂಸ್ಥಾನಗಳ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಈಗಲು ಇದೆಯಂತ ತಿಳಿದು ಬರುತ್ತಿದೆ.

ಕಲ್ಕತ್ತಾ ಹೈಕೋರ್ಟ್‌ನಲ್ಲಿ ಒಬ್ಬ ವಿಧವೆಯು ತನ್ನ ಮೊಗನ ವಯಸ್ಸನ್ನು ಗೊತ್ತು ಮಾಡುವದಕ್ಕೆ ಬೆಕ್ಕಂದಿರಿಂದಲೂ ಒಂದು ದಾರವನ್ನು ಇಟ್ಟುಕ್ಕೊಂಡಿದ್ದು ಪ್ರತಿ ವರುಷಕ್ಕೆ ಇದರಲ್ಲಿ ಒಂದೊಂದು ಗಂಟು ಹಾಕುತ್ತಾ ಬಂದಿದ್ದೇನೆಂತೆಲೂ ಆದ್ದರಿಂದ ತನ್ನ ಮಗನಿಗೆ ಈಗ ೧೪ ವರುಷ ತುಂಬಿರುತ್ತವೆಂತಲೂ, ಅವನ ಅಸ್ತಿಯನ್ನೆಲ್ಲಾ ಅವನಿಗೆ ಕೊಡಿಸಿ ಬಿಡಬೇಕೆಂತಲೂ ಕೈಫಿಯತ್ತು ಕೊಟ್ಟಳು. ಜಡ್ಜಿಯರು ಅವಳ ಬುದ್ಧಿಗೆ ಆಶ್ಚರ್ಯಪಟ್ಟು ಒಕೆದ್ದಮೆಯನ್ನು ಆ ಪ್ರಕಾರವೇ ತೀರ್ಮಾನ ಮಾಡಿದರಂತೆ.

ಬೊಂಬಾಯಿನಲ್ಲಿ ಬ್ಯೂಬೇನಿಕ್ ಪ್ಲೇಗ್ ಎಂಬ ಪದ್ಧವು ಕನವಾಗಿಲ್ಲ. ದಿನೇ ದಿನೇ ಹೆಚ್ಚುತ್ತಲೆ ಇದೆ ದಿನ ೧ಕ್ಕೆ ೩೦—೪೦—೪೦ ಜನರಿಗೆ ಹೊಸದಾಗಿ ತಗಲುತ್ತಲೂ, ದಿನ ೧ಕ್ಕೆ ೩೦—೪೦—೪೦ ಜನರ ವರಿಗೆ ಸಾಯುತ್ತಲೂ ಇದ್ದಾರಂತೆ ಈ ರೋಗಕ್ಕೆ ಹೆದರಿಕ್ಕೊಂಡು ಪ್ರಜೆಗಳು ಎಲ್ಲಾ ಪಂಗಡವರೂ ಲೈಲು ಹತ್ತಿ ಗ್ರಾಮಾಂತರಗಳಿಗೆ ಹೋಗುತ್ತಿದ್ದಾರೆ ಇದುವರಿಗೆ ೭೦—೫೫ ಸಹಸ್ರ ಪ್ರಜೆಗಳು ಹೀಗೆ ಹೊರಟು ಹೋದರೆಂತಲೂ ಅಲ್ಲಿನ ಕಾರ್ಖಾನೆಗಳವರಿಗೆ ಕೆಲಸ ಮಾಡುವವರಿಲ್ಲದೆ ಬಹುವಾಟ್ಟಿಗೆ ಕೆಲ

ಹಿಟ್ಟಿಸಿದ್ದೇ ಇರುವರು ಮುಕ್ತ ಓಡಿ ಬರಿಯತೆ
ಪ್ರವಗುರ್ಣ ಪ್ರತ್ಯಕ್ಷವಾಗಿಯುಪಯೋಗಿಸಬೇಕು.

ಉಪಾಧ್ಯ ಅನೇಕಜನ ಡಾಕ್ಟರು ವನ್ಯೇರಿಗೆ ನಮ್ಮೈ
ಮಾಡಿದ ವಿ. ಜೆ ಪ್ರೋಲ್ ಅಂಡ್‌ಕೋಯವರ
ಪ್ರಸಿದ್ಧನಾದ ಚಂದ್ರಕಾಂತ ಶಿಲೆಯ ಕನ್ನಡಕಗಳ
ನ್ನೂ ಅವರವರ ದೃಷ್ಟಿಗಳಿಗೆ ಅನುಕೂಲವಾದ್ದ
ನ್ನು ತರಿಸಿ ಕೊಡುವಂತೆ ಕಡೂರು ಟವರ್‌ನಲ್ಲಿ
ಸ್ಪಿಟಲ್ ಅಸಿಸ್ಟೆಂಟ್ ಪಿ. ಯಸ್ ರಾಮಚಂ
ಅಯ್ಯರ್‌ರವರು ನಮ್ಮಿಂದ ನೇಮಿಸಲ್ಪಟ್ಟಿದ್ದಾರೆ
ಹಿಂದೂಸ್ಥಾನದ ಎಲ್ಲಾ ಭಾಗಗಳಿಂದಲೂ ಬ
ಪ್ರದೇಶದಿಂದಲೂ ಸ್ಲಘ್ಯತರವಾದ ಯೋ ಸ್ಯ
ಪತ್ರಿಕೆಗಳು ಅನೇಕವಾಗಿವೆ.

ವಿ. ಜೆ ಪ್ರೋಲ್ ಅಂಡ್‌ಕೋಯವರ ಚಂದ್ರ
ತ ಶಿಲೆಯ ಈ ಕನ್ನಡಕಗಳು ಇವುಗಳ ನಿ
ರ್ಮಾಲತ್ವಕ್ಕೂ ದೃಷ್ಟಿಗೆ ತಂಪನ್ನು ಕೊಡುವ
ಕಾಪಾಡುವದಕ್ಕೂ ಕಣ್ಣಿನಲ್ಲಿ ನೀರು ಸುರಿಯು
ವದೂ, ಕಣ್ಣು ಉರಿಯುವದೂ, ತಲೆ ನೋವ
ಮುಂತಾದ ನಾನಾವಿಧವಾದ ತೊಂದರೆಗಳನ್ನು ನಿ
ವಾರಿಸುವದಕ್ಕೂ ಬಹಳ ಪ್ರಸಿದ್ಧಿಯನ್ನು ಪಡೆ
ದು ಮೊದಲಿನ ಇನಾಮನ್ನೂ ಭಂಗಾರದ ಮೆಡಲ
ನ್ನೂ ಸಹಾ ಹೊಂದಿರುತ್ತವೆ.

ಎಚ್ಚರಿಕೆ.

ದೃಷ್ಟಿಗಳನ್ನು ಪರಿಹರಿಸಿಕೊಳ್ಳಿಲ್ಪಡುವದೇ
ಸಾಧಾರಣವಾಗಿ ಮಾರುವನರಿಂದಲೂ, ಇತರ
ಪಾಪುಗಳಿಂದಲೂ ಪಡೆಯುವ ಕನ್ನಡಕಗಳಿಂದ
ಕೆಲವು ದಿನಸುಗಳಮೇಲೇ ದೃಷ್ಟಿ ಮಾಂಧ್ಯವನ್ನು
ಕಣ್ಣಿಗೆ ನಾನಾವಿಧವಾದ ಬಾಧೆಯನ್ನುಂಟುಮಾ
ಡಿದಾಗ್ಯೂ ಜನರು ಇದನ್ನು ವಯಸ್ಸಿನಿಂದ ಪ್ರತಿ
ದೆವೆಂದು ಯೋಚಿಸುತ್ತಾ ಇರುತ್ತಾರೆ ನ್ಯೂನತೆ
ಯು ಪರೀಕ್ಷಿಸಲ್ಪಡದೇ ಉಪಯೋಗಿಸುವ ಇತ
ರ ಕನ್ನಡಕಗಳ ಫಲವಾಗಿರುತ್ತದೆ.

ಇದರ ಸಂಬಂಧವಾದ ಕ್ರಯದ ಪಟ್ಟಿ ವಗೈ
ಯನ್ನು ಕಳಿಕೊಂಡವನಿಗೆ ಭಾರ್ಜು ಇಲ್ಲದೆ
ಕಳುಹಿಸಲ್ಪಡುವದು

ಪಿ. ಎಸ್. ರಾಮಚಂದ್ರಯ್ಯಂಗಾರ್
ಪೆಡಿಕಲ್ ಆಫೀಸರ್, ಕಡೂರು

ಮತ್ತು ದಕ್ಷಿಣ ಕನಡಾವಲ್ಲಿ
ರುವ ಮಂಗಳೂರು ಮಿಸ್ಸಿನ್. ಇ. ನರೋನೆಯ
ಬುವರುಗಳಿಗೆ ವಿರೋಧವಾಗಿ ಸದರಿ ಕಾಫಿಯ
ಸ್ಟೇಟುಗಳ ಖರೀದಿ ಅದವಾ ಬಿಡುಗಡೆ ಮೊದಲಾ
ದ ಕೆಲವು ಸಹಾಯಗಳಗೋಸ್ಕರ ಮೈಸೂರು
ದೇಶದ ನಗರಡಿವಿಜನ್ ಡಿಸ್ಟ್ರಿಕ್ಟ್ ಕೋರ್ಟ್
ರುವ ಶಿವಮೊಗ್ಗೆಯಲ್ಲಿ ಸರ್ಕಾರ್‌ನೀ ಇಸ್ವಿರು
ಒಟ್ಟಿನೆ ಸಂಬರು ದಾವೆಯನ್ನು ದಾಖಲು ಮಾ
ಡಿದ್ದಾರೆ. ಈ ದಾವೆಯು ಸದರಿ ಶಿವಮೊಗ್ಗೆ
ಕೋರ್ಟ್‌ನಲ್ಲಿ ಇನ್ನೂ ನಡೆಯುತ್ತಾಲಿದೆ.

ಈ ನೋಲೆ ಕೋಳಿರುವ ಜನಗಳ ಜೊತೆ
ಯಲ್ಲಾಗಲಿ ಅವರಾ ಅವರಲ್ಲಾಯೊಬ್ಬರ ಜೊತೆ
ಯಲ್ಲಾಗಲಿ ಅಥವಾ ಅವರ ಮತ್ತು ಅವರಪ
ಕ್ಕುದಾರರುಗಳ ಅಥವಾ ವಕೀಲರುಗಳ ಜೊತೆ
ಯಲ್ಲಾಗಲಿ ಯಾರಾವರು ಮೇಲೆ ಹೇಳಿರುವ
ಮೂರು ಕಾಫಿಯ ಸ್ಟೇಟುಗಳ ಖರೀದಿ, ಒತ್ತೆ,
ಅಥವ ಇನ್ನಾವರೀತಿಯಾದ ವರಬಾರೆ ಮಾಡೋ
ಣ ಇವೇ ಮುಂತಾದ ಕೆಲ್ಸಗಳಲ್ಲಿ ಪ್ರವೇಶಿಸಿರೆ
ಅವರು ತಮಗಾಗುವ ನಷ್ಟ ಹಾನಿಗಳಗೆ ತಾವೇ
ಗುರಿಯಾಗುತ್ತಾರೆ. ಮತ್ತೂ ಅಂಥಾ ಖರೀದಿ
ಒತ್ತೆ ಅಥವಾ ಇತರ ವರೆಬಾರೆ ಮಾಡೋಣ್ಣ
ಸದರಿ ಡಾಕ್ಟರ್ ಸಿಡ್ನೆಸ್ಮಿತ್ ಎಂಬುವರ ಹಕ್ಕೇ
ಒಳಪಟ್ಟಿರುತ್ತದೆ.

ಸರ್ಕಾರ್‌ನೀ ಇಸ್ವಿ ಡಿಸಂಬರು ತಾರೀಖು ೪.

ಡಾಕ್ಟರ್ ಸಿಡ್ನೆಸ್ಮಿತ್ ಎಂಬುವರಿಂದ
ನೇಮಿ ಲ್ಪಟ್ಟ ಅಟ್ಟರ್ನಿಯಾದ
ವಿನಾಯಕ್ ಆನಂದರಾ

ವಿವಿಧ ವೃತ್ತಾಂತಗಳು.

ಒಬ್ಬ ಜರ್ಮನಿಯವರು ಕಲ್ಕತ್ತೆಯಲ್ಲಿ ಪ್ರತಿಜ್ಞಾ
ತರಹವಾದ ಮನೆಗು ಗಾಜಿನ ಹೆಂಚುಗಳನ್ನು ಉಪಯೋ
ಸುವದಕ್ಕೆ ಗುತ್ತಿಗೆಯು ಸನದನ್ನು ಪಡೆದಿರುತ್ತಾರೆ.

ಮದರಾಸಿನಲ್ಲಿ ೩೦ ಲಕ್ಷ ರೂಪಾಯಿ ಖರ್ಚ
ವರ್ತಿ ಸ್ಯಾನಿಸಿಪಾಲಿಟಿಯವರು ಒಂದು ಭಾರಿ ಮಾ
ಟ್ಟನ್ನು ಕಟ್ಟಿಬೇಕೆಂದು ತೀರ್ಮಾನಿಸಿರುತ್ತಾರೆ.

ಇಂಡಿಯಾದಲ್ಲಿ ಫ್ರೆಂಚ್‌ತಲ್ಲಿ ಕ್ಷಾಲ
ವನಿವಾರಣೆ ಖರ್ಚು ವಸ್ಸಿರೆಗಾಗಿ ೩ ಕೋಟಿ ರೂಪಾಯಿ
ಗಳ ನೋಟುಗಳನ್ನು ಜಾರಿಗೆ ತರಲು ಕಳೆದ ೧೯೧೯ ತಾ
ರೀಖಿನಲ್ಲಿ ಹುಕುಂ ಆಯಿತು ಗಾನ್ಷವೆಂಟಿನವರಿಗೆ ಇದು
ಒಂದು ಸಾಲವೆಂದು ಎಣಿಸಿದವರ್ಗ್ಯೂ ತಾತ್ಕಾಲದಲ್ಲಿ ಬಹಳ
ಪ್ರಯೋಜನವಾಗುವದು.

ಜರ್ಮನಿಗೆ ಸೇರಿದ ವಾಲ್ಟೆಕ್ ಎಂಬ ಸಂಸ್ಥಾನದಲ್ಲಿ
ಮದ್ಯಕರಾನ ಮಾಡುವ ಪದ್ಧತಿಯುಳ್ಳವರಿಗೆ ಮದುವೆ ಅಪ್ಪ
ಣೆಯನ್ನು ಕೊಡಕೂಡದೆಂದು ತೀರ್ಮಾನಿಸಿರುತ್ತಾರೆ ಇಂ
ಥವರು ವಿವಾಹಕ್ಕೆ ಅಪ್ಪಣೆಯನ್ನು ಪಡೆಯಬೇಕಾದರೆ ಪುನಃ
ಈ ಪದ್ಧತಿಯನ್ನ ತಸರಿಸುವದಿಲ್ಲವೆಂಬ ಪ್ರಮಾಣವನ್ನು
ಕೊಡಬೇಕು.

ಕೆಲವದಲ್ಲಿ ಒಂದು ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ
ಇಬ್ಬರು ಲಾಯರುಗಳು ವೈಕಕ್ತಮೆಯನ್ನು ನಡೆಸುತ್ತಿ
ರುವಾಗ್ಗೆ ಪರಸ್ಪರವಿವಾದ ನಡೆದು ಕೊನೆಗೆ ಅವರಿಬ್ಬರೂ
ಕೋರ್ಟಿನ ಹೊರಗಡೆ ಹೋಗಿ ಗುದ್ದಾಡಿಕೊಂತಲೂ, ಒ
ಬ್ಬನಿಗೆ ಸ್ವಲ್ಪ ರಕ್ತ ಕಾಣಿಸಿತೆಂತಲೂ, ಅಲ್ಲಿನ ಪ ಭಾವ
ಪಿ ಎಂಬ ತೆಲಸು ವರ್ತಮಾನ ಪತ್ರಿಕೆಯು ಪ್ರಕಟಿ
ಸುತ್ತದೆ ವಕೀಲರು ತಮ್ಮ ಕಕ್ಷಿಗಾರರಿಗೋಸ್ಕರ ಹೀಗೂ
ಹೊಡೆದಾಡುವದಂಟಿ!

ಉತ್ತರ ಅಮೇರಿಕಕ್ಕೆ ಸೇರಿದ ಅಂಟೇರಿಯೋ ದಿ
ಸ್ಟ್ರಿಕ್ಟ್‌ನಲ್ಲಿರುವ ಅನೇಕ ಪಟ್ಟಣಗಳಲ್ಲೂ ಊರುಗಳಲ್ಲೂ
ಒಂದು ಹೊಸ ಕಾನೂನನ್ನು ಜಾರಿಯಲ್ಲಿ ತಂದಿರುತ್ತಾರೆ
೧೫ ವರುಷ ವಯಸ್ಸಿನೊಳಗಿರುವ ಹುಡುಗರು ಮತ್ತು ಹು
ಡಗಿಯರು ರಾತ್ರಿ ೯ ಘಂಟೆ ಆದನಂತರ ಒಬ್ಬುಂಟಿಗರಾ
ಗಿ ಬೀದಿಗಳಲ್ಲಿ ಸಂಚರಿಸುತ್ತಿದ್ದರೆ ಅಂಥವರನ್ನು ಸರ್ಕಾರ
ದವರು ಹಿಡಿದು ಶಿಕ್ಷೆ ಮಾಡುವರು. ಈ ಕಾನೂನನ್ನು ಆ
ಸೀಮೆಯ ಇತರ ಕಡೆಗಳಲ್ಲೂ ಜಾರಿಯಲ್ಲಿ ಬರುವ ಹಾಗಿದೆ
ಎಂದು ಹೇಳುತ್ತಾರೆ.

ಹಿಂದುಗಳಲ್ಲಿ ಮದುವೆ ಪ್ರಸ್ತ ಮುಂತಾದ ಕಾಲ
ಗಳಲ್ಲಿ ವಿಪರೀತ ಹಣವನ್ನ ವ್ಯರ್ಥವಾಗಿ ಖರ್ಚು ಮಾಡ
ವದರಿಂದ ಅವರು ನಿರ್ಗತಿಕರಾಗುತ್ತಿರುತಲೂ, ಇದನ್ನು
ತಪ್ಪಿಸುವದಕ್ಕೆ ಉಪಾಯಗಳನ್ನು ಕಂಡುಹಿಡಿದು ಎಲ್ಲಾ
ಹಿಂದುಗಳಿಗೂ ತಿಳಿಯಪಡಿಸಬೇಕೆಂತಲೂ, ಕಲ್ಕತ್ತೆಯ
ಹಿಂದೂ ವಿವಾಹಸಂಘದ ಕಾರ್ಯದರ್ಶಿಗಳು ಬೊಂಬಾಯಿ
ಹೈಕೋರ್ಟ್ ಜಡ್ಜಿಗಳಾದ ಮೆ॥ರಾನಡೆಯವರಿಗೆ ಬರೆದರು.
ಅವರು ಈ ತಿಂಗಳ ಅಂತ್ಯದಲ್ಲಿ ನಡೆಸುವ ಹಿಂದೂ ಸಂಘ
ಪರಿಷ್ಕರಣದ ಸಮಾಜದಲ್ಲಿ ಈ ವಿಷಯವನ್ನು ಚರ್ಚೆಗೆ
ತರುತ್ತೇನೆಂದು ತಿಳಿಸಿರುವರು.

ಆಫ್ರಿಕಾ ಖಂಡಕ್ಕೆ ಸೇರಿದ ಸುವಾರ್ಕಿ ಪ್ರಾಂತ್ಯದ
ತಹಬಂದಿಗಾಗಿ ಸರ್ಕಾರದವರು ಹಿಂದುಸ್ಥಾನದಿಂದ ಸೈನ್ಯ
ವನ್ನೂ ಕಳುಹಿಸಿ ಕೊಟ್ಟದ್ದಾರಷ್ಟೆ ಈ ಸೈನ್ಯದಲ್ಲಿ ಒಂ
ದು ಬಂಗವನ್ನು ಕಳೆದ ವಾರ ಜಹಜಿನಲ್ಲಿ ಹಿಂದೂಸ್ಥಾನಕ್ಕೆ
ಕಳುಹಿಸಿಬಿಟ್ಟರು. ಇಬ್ಬರು ನೇಟಿವ್ ಶಿಪಾಯಿಗಳು ಇಬ್ಬ
ರುನೋಮಲಿ ಹೆಂಗಸರನ್ನು ಕ್ಷೌತನದಿಂದ ಹಿಂದೂಸ್ಥಾನಕ್ಕೆ
ಕರೆದುಕೊಂಡು ಬರಬೇಕೆಂದು ಪ್ರಯತ್ನ ಮಾಡಿ ಆ ಹೆಂಗ
ಸರನ್ನು ತಮ್ಮ ಜಾಸಿಗೆಗಳಲ್ಲಿ ಮಲಗಿಸಿ ಸುತ್ತಿ ಕಟ್ಟಿ ತ
ಮ್ಮ ಇತರ ಹಾವಾನುನೆಳ ಜೊತೆಯಲ್ಲಿ ಹಾತಿದರು. ಜಹ
ಜು ಸಮುದ್ರದ ಮೇಲೆ ಬರುತ್ತಿದ್ದಾಗ ಅಕಸ್ಮಾತ್ತಾಗಿ ಜ
ಹಜಿನ ಅಧಿಕಾರಿಗೆ ಈ ಸಂಗತಿ ತಿಳಿಯಿತು ಅವರು ಈ
ಹೆಂಗಸರನ್ನು ಬಿಡಿಸಿ ಅವರನ್ನು ಕರೆದುಕೊಂಡು ಬಂದಿದ್ದ
ಸಿಪಾಯಿಗಳನ್ನು ಹಿಡಿದು ದರ್ಬಾಸ್ತು ಮಾಡಿ ಅಲ್ಲಿ ಛಿಡಿ
ಏಜುಗಳನ್ನು ಹೊಡೆಸಿದರು ಆ ಹೆಂಗಸರನ್ನು ಪುನಹಾ ಅ
ವರ ತೌಮೆಗೆ ಕಳುಹಿಸಿ ಕೊಡುವಂತೆ ಅಪ್ಪಣೆ ಕೊಟ್ಟಿ
ರುವರು.

ಹಿಂದುಸ್ಥಾನದಲ್ಲಿ ಕುಷ್ಟರೋಗ ತೊನ್ನು ರೋಗಗ
ಳಿಂದ ಪೀಡಿತರಾದವರು ಹಾವಿನಿಂದ ಕಚ್ಚಿಸಿಕ್ಕೊಂಡರೆ
ಆ ರೋಗಗಳು ವಾಸಿಯಾಗುತ್ತವೆಂದು ಜನರು ತಿಳುಕೊಂ
ಡಿದ್ದಾರೆ. ಈ ವಿಷಯದಲ್ಲಿ ಗುಂಜಿಕಾಂತ ಎಂಬೊಬ್ಬ ತಾಕ್ಟ
ರರು ಬರೆಯುವದೇನಂದರೆ ಬಸವ್ವ ಎಂಬೊಬ್ಬ ತಿಂಗಾಯಿ
ತರವನು ತೊನ್ನು ರೋಗದಿಂದ ಬಹಳ ಕಷ್ಟವನ್ನು ಅನು
ಭವಿಸುತ್ತಿದ್ದನು. ಅವನಿಗೆ ಯಾರೋ ಮೇಲ್ಕಂಡ ಔಷಧ
ಯನ್ನು ಹೇಳಿದರು. ಅವನು ಹಾವಿನ ಕೈಯಿಂದ ಕಡಿಸಿ
ಕ್ಕೊಳ್ಳಬೇಕೆಂದು ಎಲ್ಲೆಲ್ಲಿ ಹುಡಿಕಿಕ್ಕೊಂಡು ಹೋದರೂ
ಹಾವು ಸಿಕ್ಕದೆ ತಪ್ಪಿಸಿಕೊಂಡು ಹೋಗುತ್ತಿತ್ತು. ಕೆಲವು
ವೇಳೆ ಅವನು ಹಿಡಿದ ಹಾವುಗಳು ಜೆರಿಕೆಯಿಂದ ತಪ್ಪಿಸಿ
ತ್ಕೊಂಡು ಓಡಿಹೋದವು ಆಗ ಕುಷ್ಟರೋಗಿಗಳನ್ನು ಹಾ
ವು ಸಹ ಕಡಿಯುವದಿಲ್ಲವೆಂದು ಜನರು ಹೇಳಲಾರಂಭಿಸಿದ
ರು. ಕೊನೆಗೆ ಬಲಾತ್ಕಾರವಾಗಿ ಒಂದು ಹಾವನ್ನು ಹಿಡಿದು
ಕಚ್ಚಿಸಿಕ್ಕೊಂಡನು! ಪ್ರಯೋಜನವೇನಾಯಿತೆನ್ನತ್ತಿರಿ?
ಅವನಿಗೆ ಹಾವಿನ ವಿಷ ವಿ ಸ್ವಲ್ಪ ಹೆಚ್ಚಾಗಿ ಸ
ತ್ತುಹೋದನು! ಹಾವಿನ ಕೈಯಿಂದ ಕಡಿಸಿಕ್ಕೊಳ್ಳುವದರಿಂ
ದ ಸಾವು ಹ್ಯಾಗೆ ವಾಸಿಯಾಯಿತು ನೋಡಿದಿರಾ! ಜನ
ರು ಹೀಗೂ ಮೂಢರಾಗಿ ಕೆಲರ ಮಾತುವದುಂಟೇ! ಇ
ನ್ನುಮೇಲಾದರೂ ಜನರು ಅಂಥಾ ದುರಭಿಪ್ರಾಯವನ್ನು
ಬಿಟ್ಟುಬಿಡಬೇಕು.



— ಸಿವಪೊಗಳ್ದಿದಲ್ಲಿ ಮಾನವುತಾನೆ ಪ್ರಕಟವಾಗುವದು

ಜ್ಞಾನೋದಯ ಪತ್ರಿಕೆಯಂ;

ಪೂರ್ವಪಶ್ಚಿಮಾನನ್ನ ಚಮಂಬು ಪ್ರಕಾಶಂಗಯಿನಲ್ಲಿ॥

ಭಾನುಡೇವು ಸಾರಾಮುಲು

ಜ್ಞಾನಾಂಬುನಿಧಿಯು ವಗಾಹ್ಯವು ಪರಮಪುಣ್ಯಂ॥

ಬುಕ್ 1 ಜೂಲಾಯಿ 1897 ಪಟ್ಟಿ 1ನೆ

ನಂಬರ್ 1ಳ 1 ರೂ 8 ಆಣೆ

ವಿಷಯಮುಲು ಕ್ರಮಮುಲು				ಪುಟಲು
ಚಂದಾ ದಾರುಲಕು	--	-	--	೨೦೯
గ్రంథసాంక్షిప్తములక్షణి	..			೨೨೦
రసికమనోరంజనీకథ	..			೨೨೦
ವಿದ್ಯಾಪಾಲನ	..	.	..	೨೨೭
ಕಾನೆಲಪೆಚೆಸ್	..	..	..	೨೩೯
ವಿಮರ್ಶನ ವಿಚಾರಮಾನ		..	..	೨೪೦
ಪಿಪಿಲಿಂಗಾ ವೆರ್ತಮಾನ		..	..	೨೪೫

* ಪಿದಾನಂನ ಕಳ್ಪನಪ್ರಕಟಿಮಂಪಿನ 1897 *

KARNATAKA NEWSPAPERS EXHIBITION
1971

1897

ಕಿಸಾನ ಪತ್ರಿಕೆ

— ಕಿವಮೊಗ್ಗಾಪಟ್ಟಿ ಮಾಸ ಮಾಸಸ್ಕಿ ಸ್ಕಟವಾಗುವದು —

ಪ್ರಾನೋಪಯೋಗವುಳ್ಳ ಪತ್ರಿಕೆಯೂ।

ಪೂರಾಸಿತ ಮಾನವು ಗಡಂಬ ಪುಗಳಂ ಪಶಿಸಲ್।

ಭಾನೂಪಯೋಗವು ಸಾರವಾಮಲು!

ಪ್ರಾನಾಂಬ ನಿಧಿಯು ಮಗಾಹಿತೆಯು ಪಡೆಪಪುದ್ಯೆ ॥೦॥

ವರ್ಷ ೨	ಜುಲೈ,	ವರ್ಷ 1 ಕ್ಕೆ
ಸಂಚಿಕೆ 12	1898	1 ರೂ. 8 ಆಣೆ

— ವಿಷಯಾನುಕ್ರಮಣಿಕೆ —

ಭಕ್ತ ವಿಜಯ.

ಸುಭಾಷಿತ.

ವೈದ್ಯಕೀಯವಿಧಿ.

ರಂಜಕ ಮನೋರಂಜನಿ ಕಥೆ.

ವಿವಿಧ ವರ್ತಮಾನ.

—: ○ :—

Chidanand Tawa Press Shimoga. 1898

ನಮ್ಮ ಪುದಾರ್ ಚಂದಾದಾರರವರಿಗೆ ಪತ್ರಿಕೆಯಲ್ಲಿ ಈಗೊಂದ
ಟಿ ಚಂದಾಮೊಬಲಗು ರವಾನಿಸುವ ಉದ್ದೇಶ್ಯವಾಗಿ ಅನೇಕಾವರ್ತಿ ಸೂ
ಚಿಸಿದರು ಮನಸ್ಸಿನಮೇಲೆ ತೆಗೆದು ಕೊಳ್ಳದಿರುವದನ್ನು ನೋಡಿದರಿಂದ
ವಲ ಅಲ್ಪ ಬೆಲೆಯಾದ್ದರಿಂದ ಉದಾಸೀನ ಮಾಡಬಹುದಾಗಿ ಯೋಚಿಸಿ
ಬೇಕಾಗಿಧೆ ಆದರೆ ಪ್ರತಿವಬ್ಬರೂ ಇದರಂತೆ ಯೋಚಿಸುತ್ತಾ ಹೋದ
ರೆ ನಮ್ಮ ಕಾರ್ಯ ಜಗ ಹದು ಹ್ಯಾಗೆಂಬುವದನ್ನು ಮನಸ್ಸಿನಲ್ಲಿ ತಂ
ದು ಈಪತ್ರಿಕೆ ತಪ್ಪದೆ ವಡನೆಯೇ ರವಾನಿಸ ಬೇಕೆಂದು ಪ್ರಾರ್ಥಿಸು
ತ್ತೇವೆ.

ಮತ್ತು ಕೆಲವು ಮಹಾನುಭಾವರುಗಳು ವರ್ಷ ತೊರ್ಸಿನುವ
ವರಿಗೆ ಪತ್ರಿಕೆಯನ್ನು ತೆಗೆದುಕೊಂಡು ಈಗ ಮೊಬಲಗು ರವಾನಿಸಬೇ
ಕೆಂದು ಅರಿಕೆ ಮಾಡಿ ಕೊಂಡರೆ ಈವರಿಗೂ ನಿಮ್ಮ ಪತ್ರಿಕೆಯೇ ಕಳ್ಸ
ಲಿಲ್ಲವೆಂದು ಜವಾಬು ಬರಿಯಿಸುತ್ತಾರೆ ಇದು ನಿಜವೋ ಹ್ಯಾಗೆ ಖಂಡಿತ
ವಾಗಿ ಜವಾಬುಕೊಟ್ಟವನ್ನಿ ಮೊದಲಿನವರಿಗೆ ಕೇಳುತ್ತೇವೆ. ಅದ್ದರಿಂದ
ಜವಾಬು ಕೊಡಬೇಕೆಂದು ಒರವರೆ ಅದಕ್ಕೆ ಪ್ರತಿ ಜವಾಬವೇಇಲ್ಲಾ
ಕೇವಲ ಇಂಥಾ ಕಿಲ್ಲ ಮೊಬಲಗನ್ನ ಕೊಡ್ಸಿರಿ ಈರೀತಿ ಮಾಡುವದೆಂ
ದರೆ ತಮ್ಮಂಥವರಿಗೆ ಭೂಷಣವೋ ಹ್ಯಾಗೆಂಬುವದನ್ನು ಯೋಚಿಸಿ ಇ
ನ್ನಾದರೂ ಸಮಸ್ತರು ಬೇಗನೆ ಮೊಬಲಗು ರವಾನಿಸುವರಳಿಗೆ ನಂಬಿ
ದ್ದೇವೆ ಈವಿಷಯದಲಿ ಅನೇಕರಿಗೆ ಕಾರ್ಡ ಮುಖಾಲಕ ಬರಿಸಿ ಮಾಡಿಕೊಂ
ಡಪ್ಪದ್ದಕ್ಕೆ ಜವಾಬೂ ಇಲ್ಲ ಮೊಬಲಗೂ ರವಾನಿಸಲಿಲ್ಲಾ ಕೆಲವರು ದಯ ಮಾ
ಡಿ ನಮ್ಮ ಅರಿಕೆ ಬೇರಿಗೆಮೊಬಲಗನ್ನು ರವಾನಿಸಿದ್ದಾರೆ. ಬಾಕಿಯುಳ್ಳ
ವರೆಲ್ಲರೂ ಯಿನ್ನಾದರೂ ಕೂಡಲೆಯೆ ಮೊಬಲಗನ್ನು ರವಾನಿಸಬೇಕೆಂದು ಪ್ರಾರ್ಥನೆ

ಪತ್ರಿಕೆಯ

ತೊಡಿಸುವುದೇ ಕೊಡುಕೊಳ್ಳಬೇಕೆಂದು ಅಭಿಸಿದ್ದಕ್ಕೆ ನಾಕರಹಿ
ವಾದ ಸ್ಥಾನವನ್ನೂ ಕರಣಾಗತನಾದ ವಿಭೀಷಣನಿಗೆ ಸುವರ್ಣಮಯ
ವಾದ ಲಂಕಾದ್ವೀಪವನ್ನು, ಹೀಗೆಕೊಟ್ಟಂಥಾ ಉದಾರನಾದ ನಿನ
ಕೈಗೆ ಭಂಗಾರದ ಪಾತ್ರೆಗಳನ್ನು ವ್ಯಾಯ್ಯಬಾರದೆಂಬ ಕೃಪಣತ್ವವಾ
ಕಬಂತೆಂದುಹೇಳಿ 'ನಂತರ ತುಳಸೀದಾಸನು ಅಕ್ಬರ್ನಿಗೆ ಹೇಳುತ್ತಾ
ನೆ:— ನೀಫ್ರುವಳಗೆಬನ್ನಿರಿ ಎಂದುಕರೆದು ಈಗನಿಮಗೆ ಯಾವಪದ
ರ್ಥ ಯಾವಪಾತ್ರೆಗಳು ಬೇಕೊ ಅವುಗಳನ್ನು ನಿನೊಂದುಸಂದೇಹ
ವಿಲ್ಲದೆ ತೆಗೆದುಕೊಂಡು ಹೋಗರಿ ನೋಡುವ ಯಾರು ಅಡ್ಡಿಪಡಿಸು
ತ್ತಾರೆ ನಾನುನಿಮ್ಮಹಪ್ಪಾರದಲ್ಲೇಇರುತ್ತೇನೆ. ಎಂದುಹೇಳಲು ಅದ
ಕ್ಕೆ ಕಳ್ಳರು ಹೇಳಿದ್ದೇನೆಂದರೆ :— ಎಲೈಸ್ವಾಮಿಯೇ ನಾವುಮಹಾ
ಪಾಪಿಗಳು ಅಜ್ಞಾನತ್ವವೆಂಬ ಅಂಧಕಾರ ಮುಸಿಕಿದ್ದರಿಂದ ಈವರಿಗೂ
ಇಂಥ ದುಷ್ಕೃತ್ಯಗಳನ್ನು ನಡಾಡುತ್ತಾಬಿಜ್ಜಿಪ್ರು ಈಗ ಮಹಾನುಭಾ
ವರುಗಳಾದ ತಮ್ಮಿದರುಕನವಾದ ಜ್ಞಾನನಯನಿಯೇ ಬಾಗಲನ್ನು ಕಾಪಂ
ಥವರು ಶ್ರೀರಾಮಲಕ್ಷ್ಮಣರಿಂದ ಉಳುರಿದಾವಭ್ಯ ನಮ್ಮ ಅಜ್ಞಾನತ್ವವೆಲ್ಲ
ದೂರಾಗಿ ಈ ಕೆಟ್ಟ ಹೃದಯದಲ್ಲಿ ವಾಸವಾಗಿದ್ದ ದುರ್ಬುದ್ಧಿಗಳೆಲ್ಲ
ಪೈಲಾದವು ಅದ್ದರಿಂದ ಕೃಪೆಮಾಡಿ ಕರಸ್ಸನಲ್ಲಿ ಅಭಯ ಹಸ್ತವನ್ನಿಡ
ಬೇಕೆಂದು ಸಾಷ್ಟಾಂಗ ನಮಸ್ಕಾರಮಾಡಿ ಚರಣದ್ವಯಗಳನ್ನು ಪಟ್ಟ
ಯಾಗಿಹಿಡಿದು ಪ್ರಾರ್ಥಿಸಿದರು ಆಗತುಳಸೀದಾಸನು ಹೇಳುತ್ತಾನೆ—
ಎಲ್ಲೀಪ್ಯಾಗುಳಿರಾ ಪರಿ ನಾನುಹೇಳುವದನ್ನು ಚಿತ್ತವಿಟ್ಟು ಕೇ
ಳಿರಿ:— ಬೆಕಾಸಿಯೊಪ್ಪಿಗೆ ಹೋದಾಗ್ಗೆ ಅಮ್ಮತಪಳಿ ಸಿಕ್ಕಹಾಗೂ
ಅಂಗಾಣದಕಲ್ಲು ಅರಿಸುವಾಗ್ಗೆ ಸ್ವರ್ಣಮಣಿ ಸಿಕ್ಕಿಹಾಗೂ, ಮನೆಮನೆ
ಯಿಗೆತಿರಗುವಾಗ್ಗೆ ಅಮೃತಸಿ ಸಿಕ್ಕಹಾಗೂ, ದೀಪಕ್ಕೆ ಎಣ್ಣೆ ಸಿಡು
ವಷ್ಟಾತ್ ಸುಖಯಿನೇ ಸಿಕ್ಕಹಾಗೂ, ಕೋಕ ಕ್ಯಾಸ್ತ್ರವ

ಜ್ಞಾನೋದಯ

ಮೌಳಿ, ನೀಲಕಂಠ, ಪಟ್ಟಾಂಗಧಾರಿ, ಮೃಡಾನಿವರ, ತ್ರಿಪುರಾರಿ ಅತಿದಾರುಣವಾದ ಮಹಾವಿಷವನ್ನು ಪಾನಮಾಡಿ ದೇಹವೆ ಜ್ವಾಲೆಯಾಗಿ ದಹಿಸುವಕಾಲದಲ್ಲಿ ನೀನು ರಾಮುಎಂಬಎರಡು ಅಕ್ಷರಗಳನ್ನು ಜಪಿಸುತ್ತಲೆ ನಿನ್ನಜ್ವಾಲೆಯು ಶಾಂತವಾದಪಕ್ಷಕ್ಕೆ ನಂದಿಯು ಈನೈಯ್ವೈದ್ಯವನ್ನು ತಿನ್ನಲಿಎಂದುತನ್ನೆಚ್ಚರಿಸುವಿಯುಎದ್ದುಕ್ಯಾಸಬಿಡುತ್ತ ಎದ್ದುನಿಂತು ಈ ನೈಯ್ವೈದ್ಯವನ್ನು ಪತಾ ವಳಿಸಮೀಕ್ಷವಾಗಿ ಭಕ್ಷಣ ಮಾಡಿ ಯಥಾಪ್ರಕಾರ ಪೂರ್ವದಂತೆ ತನ್ನ ಸ್ಥಾನದಲ್ಲಿ ವಿಶ್ರಮಿಸಿದ ನಂದಿಯನ್ನುಕಂಡು ಸಮಸ್ತರು ಒಕ್ಕುರ್ಮ್ಯಗೊಂಡು ಆಗತು ಳಿತಿದಾಸನಿಗೆ ಸಾಷ್ಟಾಂಗ ನಮಸ್ಕಾರಮಾಡಿ ಹೇಳಿದ್ದೇನೆಂದರೆ:—ಮು ಕ್ತಿಗಳಲ್ಲಿ ಸೈನಲ್ಯಾನುಕ್ತಿ, ಪಂಡಿತರಲ್ಲಿ ವೇದಾಂತಿ ಹ್ಯಾಗೆ ಶ್ರೇಷ್ಠವೊ ತಪೋಪ್ರಾವಿಯಲ್ಲಿ ಎಲ್ಲಿಸ್ವಾಮಿಯೋ ಭಕ್ತರಲ್ಲಿ ನಿನ್ನ ಸಮಾನರುಯಿಲ್ಲಾ ಎಂದುಸೊತ್ರವಮಾಡಿ ಎದ್ದುರು ಆಮಶಕ್ಕೆಬಂದು ಆ ಬ್ರಹ್ಮಹತ್ಯ ಮಾಡಿದ ಬ್ರಾಹ್ಮಣನನ್ನು ಪಂಗ್ತಿಯಲ್ಲಿ ಕುಳ್ಳರಿಸಿಕೊಂಡು ಭೋಜನಮಾಡಿ ಯೋಚಿಸುತ್ತಾರೆ:— ಭಕ್ತರ ಮಹಿಮೆಯೇ ಅದ್ಭುತವಾದ್ದು ಶ್ರುತಿಶಾಸ್ತ್ರಕ್ಕೂ ಸಹ ಅವರ ಅಂತ್ಯತಿಳಿಯದು. ಆಗ ಆಕಾಶವಾಸಿಗಳೆಲ್ಲಾ ದೇಹಾಭಿಮಾನವನ್ನು ಬಿಟ್ಟು ಶ್ರವಣಕೀರ್ತನಾದಿಗಳನ್ನು ವಸಾಹಲಕರಂಸಿದರು.

ಅನಂತರ ಒಂದಾನೊಂದುದಿವಸ ಜೈತಪಾಳನೆಂಬ ಸಾವಕಾರನು ಮೃತಪಟ್ಟಿದ್ದರಿಂದ ಅತನ ಪತ್ನಿಯುಸಹಗಮನ ಮಾಡುವದಕ್ಕೋಸ್ಕರ ಸೌಭಾಗ್ಯದ್ರವ್ಯಗಳನ್ನುದಾನಕೊಟ್ಟು ಶ್ರವಣಸಂಗಡಲೇ ಸ್ಮಶಾನಕ್ಕೆ ಹೋಗುವಾಗ ಪುಳಿಚಿದಾಸನ ಮಹಿಮೆಯನ್ನುಕಂಡು ಆತನಿಗೆ ನಮಸ್ಕಾರಮಾಡಿ ಮುಂಡೆಹೋಗಬೇಕೆಂದು ತೋರಿದ್ದರಿಂದ ಎಲ್ಲರನ್ನೂ ಕೊರಗಿಬಿಟ್ಟು ತಾನುಒಬ್ಬಳೆ ಒಳಕ್ಕೆಹೋಗಿ ಸಾಷ್ಟಾಂಗ ನಮಸ್ಕಾ

ರವಾಗಿದ್ದಳು. ಆಕೆಯಲ್ಲಿ ತುಳಸಿದಾಸರು ಭಗವಂತನ ನಾಮಸ್ಮರಣೆಯನ್ನು ಮಾಡುವಂತಾಗಿರಲು ಅವಳಿಗೆ ಅಷ್ಟಪುತ್ರವತಿ ಭವವೆಂದು ಆಶೀರ್ವಚನವಾಗಿದ್ದರು. ಈ ವಾಣಿಯನ್ನು ಕೇಳಿ ಈ ಸ್ತ್ರೀಯು ಳುತನ್ನ ಸವಾಚಾರವನ್ನೆಲ್ಲಾ ತಿಳಿಸಿ ತಮ್ಮಾವಚನವು ಸುಳ್ಳಾಯಿತೆಂದು ನುಡಿದಳು. ಆಗ ತುಳಸಿದಾಸನು:— ನಾನುತಿಳಿಯದೆ ಆಕೀರ್ವಾದವನಾಡಿದೆನು ಆದರೆ ಅಭಿನವಾನವಿದ್ದಕೆ ಶ್ರೀರಾಮನು ನನ್ನವಾಕ್ಯವನ್ನು ಸತ್ಯವೇವಾಡುವನು ಎಂದುಬೇಳುತ್ತಲೆ ಅವಳು ಪುನಹ ನಮಸ್ಕಾರವಾಣಿ ಹೇಳಿದಳು. ಅಲ್ಲಿಯೋಗಿ ನೋಡುವಷ್ಟರಲ್ಲಿ ಆಶ್ವವವು ಜೀವಂತವಾಗಿ ಎದ್ದೆದ್ದನ್ನು ಕಂಡಳು ಆಗಆದನ್ನು ನೋಡಿದ ಎಲ್ಲರುಸಂತೋಷಪಟ್ಟರು ಆಗ್ಗಇವಳುಪತಿಯಪಾಯ್ಗಳನ್ನುಹಿಡಿದುಕೊಂಡು ಆಗಾಗುಭಯತರು ತುಳಿಸಿದಾಸನನ್ನಿಬ್ಬಂದು ನಾವ್ಯಾಂಗಪೆರಿಗೆ ನಮಸ್ಕಾರಮಾಡಿದರು ಈತುಳಸಿದಾಸರು ನಂದಿಗೆಭೋಜನವಾಡಿಸಿದ್ದ ಕ್ರವವನ್ನು ಪುನಃ ಜೀವಂತಮಾಡಿದ್ದು ಈ ಎರಡು ಸಮಾಚಾರಗಳನ್ನು ಹಸ್ತಿನಾಪುರದ ಅಕಬರ ಬಾದ್ಷಹನು ಕೇಳಿ ಈತುಳಸಿದಾಸರನ್ನು ನೋಡಬೇಕೆಂದು ಅಪೇಕ್ಷಿಸಿ ಅವರನ್ನು ಕರತರುವದಕ್ಕೆ ಜನಗಳನ್ನಾ ಕಳುಹಿಸಿದನು. ಅವರು ಬಂದು ತುಳಸಿದಾಸನನ್ನು ಕರೆಯಲು ಆಗತುಳಸಿದಾಸರು ಒಂದೇಸ್ಥಳದಲ್ಲಿ ಕೂತುಕೊಳ್ಳಬಾರದು ಅನೇಕಬೇಕಗಳನ್ನು ಸಂಚಾರಮಾಡಿ ಅಜ್ಞಾನಿಜನಗಳನ್ನು ಭಕ್ತಿಮಾರ್ಗಕ್ಕೆ ಹಚ್ಚಬೇಕೆಂದು ಮನಸ್ಸಿನಲ್ಲಿ ಯೋಚಿಸಿ ರಾಜನಕಡೆತ್ತರಹೊಗುವಎಂದು ಹೊರಟರು ಶ್ರೀಭಗವಂತನ ನಾಮಸ್ಮರಣೆಯನ್ನುಮಾಡುತ್ತಾ ಹಸ್ತಿನಾಪುರಿಗೆಬಂದು ತಲ್ಪಿದರು ಆಗಘೋಷೆಯು ಈತುಳಸಿದಾಸರನ್ನು ಎದುರುಗೊಂಡು ಕರತಂದು ತಿಂಹಾಸನದಲ್ಲಿ ಕುಳ್ಳರಿಸಿ ಪೂಜೆನಮಸ್ಕಾರಾದಿಗಳನ್ನು ಮಾಡಿ ಎಲ್ಲಿಮಹಾತ್ಮರೇ ತಮ್ಮಮಹಿಮೆ

ಜ್ಞಾನೋದಯ

ಯು ಬಹುಜೋಕ್ಕದು ತಾವುಸಾಕ್ಷಾತ್ ಎಲಡಸೇ ಪರಮೇಶ್ವರನೇ ಎಂದು ಹೇಳತಕ್ಕದ್ದೆಂದು ಕ್ಷಾಶಿನವಾಡಲು ಅದಕ್ಕೆ ತುಳಸಿದಾಸರು : — ಈಕಾಯವಿಲ್ಲಿ ಶ್ರೀರಾಮನದೇಯೆಂಗಿದೆ. ಮುಖ್ಯ ಆತನ ನಾಮವಂದಿದ್ದರೆ ನನಗೆ ಸಾಕಾಗಿಫೆ. ಎಂದರು ಅದಕ್ಕೆ ಅಕ್ಬರ ತಬಾದಪಹನು : — ಹಾಗಾದರೆ ಶರೀರವನೆಲ್ಲಿರುವನು? ಆತನನು ತೋರಿಸಬೇಕು ತೋರಿಸದಿದ್ದರೆ ತಮ್ಮನ್ನೆ ಇನ್ನಿಂದ ಬಿಡುವದಿಲ್ಲ ಎಂದುಹೇಳಿ ಶೇವಕರಿಗೆ ಅವರನ್ನು ಒಲ್ಲೀದ ಬಿಡಬೇಡಿರೆಂದು ಹೇಳಿ ಧೊರಿಯು ಅಂತಃಪುರವನ್ನು ಕೇರಿದನು ನಂತರ ತುಳಸಿದಾಸನು ಹನುಮಂತನನ್ನು ಧ್ಯಾನಿಸಲು ಹನುಮಂತನುಬಲು ಈ ಅರಿವ್ಯವನ್ನು ಪರಾಭವಮಾಡಿ ನಾಮಮಹಿಮೆಯನ್ನು ಪ್ರಚೂರ ಮಾಡಬೇಕೆಂದು ಹೇಳಲು ಆಗಹನುಮಂತನು ತನ್ನಮಹಬ್ಬಲವನ್ನು ಸ್ಮರಿಸುತ್ತಲೆ ಹತ್ತುಸಾವಿರಕಪಿಗಳು ಆ ಕ್ಷಣದಲ್ಲಿಯೇ ಉತ್ಪನ್ನವಾದವು.

ಆಗ್ಯೆ ಹನುಮಂತನು ತನ್ನ ಕಪಿಸೈನ್ಯವನ್ನು ಕರದು ಆ ಜ್ಞಾಸಿಸಿದ್ದೇನಂದರೆ — ನಿಮ್ಮಜಾತಿ ಧರ್ಮದಂತೆ ನಿಂದು ಕೆಲಸಕ್ಕೆ ಪ್ರಾರಂಭಿಸಿರೆಂದು ತಪ್ಪಣೆ ಕೊಟ್ಟನು. ಆಗ ಕೆಲವು ಕಪಿಗಳುಮನೆಗಳ ಮೇಲೆ ಹತ್ತಿ ಕಿತ್ತು ಹಾಕಲಾರಂಭಿಸಿದವು. ಕೆಲವು ಪಾಷಾಣಗಳನ್ನು ವೃಕ್ಷಗಳನ್ನು ಕಿತ್ತುತಂದು ಹಾಕಲಾರಂಭಿಸಿದವು. ಕೆಲವು ಬೀದಿಗಳಲ್ಲಿ ತಿರುಗುವ ಜನಗಳ ಕಿವಿಮೂಗು ಬಟ್ಟೆ ಮುಂತಾದವುಗಳನ್ನು ಹರಿಯಲಾರಂಭಿಸಿದವು. ಕೆಲವು ಕಪಿಗಳು ನವೀಗೆ ಡೊಡ್ಡದಸ್ತ್ರೀಯರ ಬಟ್ಟೆಗಳನ್ನು ಕಳದು ಆಭರಣಗಳನ್ನು ಕಿತ್ತು ನದಿ ಪ್ರವಾಹದಲ್ಲಿ ಬಿಟ್ಟು ಸಮುದ್ರರನ್ನು ದಿಗಂಬರರಾಗಿ ಮಾಡಿದವು.

ಮತ್ತು ಅಂತಃಪುರದಲ್ಲಿ ಯೋಷಾಟಕೆ ಶಾಲೆಯನ್ನಿಸಿಯೂ ಕುಳಿತಿರ್ಪ ಬಾದಶಹನ ಸಂಗಡ ಜನಪತ್ನಿಯರಿಗೂಕ್ಷಾಭೆಯಿಡಿದು ಅವರವರ

ಭಕ್ತಿವಿಜಯ

ವಸ್ತ್ರಾಭರಣಗಳನ್ನೆಲ್ಲಾ ತೆಗೆದು ಕೊಂಡು ಹೊಸಲಿಗೆ ಕೇವಲದಾದ್ರಾದ ಸುಶೀಲೆಗೆ ಕೊಡುತ್ತಾ ದುಷ್ಟರಾದ ಶ್ರೀಮಂತರ ಮನೆಯಲ್ಲಿರುವಸ ಮಸ್ತ ಭಾಂಡಾರ ವಸ್ತ್ರಾಭರಣಗಳನ್ನು ತಂದು ಸತ್ಪುರುಷರಾದ ದರಿದ್ರರ ಮನೆಯನ್ನು ತುಂಬಿದವು ದರಿದ್ರರನ್ನು ಶ್ರೀಮಂತರಾಗಿಯೂ ಶ್ರೀಮಂತರನ್ನು ದರಿದ್ರರಾಗಿಯೂ, ಮಾಡಿದವು.

ಈ ಸಮಾಚಾರವು ಅಕಬರ ಬಾದಸಹನಿಗೆ ತಿಳಿಯಿತು. ಆಗ ಅಲ್ಲಿರುವವರು ತುಳಸಿದಾಸನಿಗೆ ಪ್ರೋಭೆ ಪಡಿಸ ಬಾರದು. ಆತನಿಗೆನಿ ಬಂಧ ಪಡಿಸಿದ್ದರಿಂದಲೇ ಈ ರೀತಿ ಯೊಗಲಿಕ್ಕೆ ಕಾರಣ ಪಾಯಿ ತು ಎಂದು ಹೇಳಲು ಆಗ ಅಕಬರನಿಗೆ ಪಶ್ಚಾತ್ತಾಪ ಹುಟ್ಟಿ ತುಳ ಸಿದಾಸನ ಹತ್ತಿರ ಬಂದು ಸ್ವಲ್ಪ ಜಿಜ್ಞಾಸಿಸಿ ತೆಗೆದು ದೀನನಾಗಿ ಎಲ್ಲಿ ಮಹಸಾಧ್ವಿಯೇ ಅಂಬಲೆಯಿಗೆ ಕಾಪಕೊಟ್ಟಂಥ ದುರ್ವಾಸನು ದ್ರೌ ಪದಿಯನ್ನ ಪೀಡಿಸಿದ ದುರ್ಯೋಧನನು ಹ್ಯಾಗೆ ತಂದಪ್ಪಕ್ಕೆ ತಾ ವೇ ಅಪವಾನ ಹೊಂದಿದನೋ ತದ್ರೀತಿಯಲ್ಲಿ ನನಗೂ ಹಾಗೆ ಪಶ್ಚಾಯಕ್ಕೆತ್ತ ವಾಯಿತು. ಅದ್ದರಿಂದ ಎಲ್ಲಿ ಮಹಶ್ಯಾಕೆ ಈ ದೀನ ವಿಧೇಯನ ತಪ್ಪನ್ನೆಸ್ಸಿ ಕ್ಷಮಿಸಿ ಈ ಸಂಕಟದಿಂದ ಪಾರುಮಾಡು ಎಂ ದು ಪ್ರಾರ್ಥಿಸುವ ಧೋರಣೆಯ ವಚನವನ್ನು ಕೇಳಿ ತುಳಸಿದಾಸರು ಹೇಳುತ್ತಾರೆ -- ಶ್ರವಣಕ್ಕೆ ಮೊದಲು ಉಪೇಕ್ಷೆ, ಮನನಕ್ಕೆ ಮೊದ ಲು ಶ್ರವಣ ; ಭಕ್ತಿ ಸಕ್ಷಾತ್ಕಾರಕ್ಕೆ ಮೊದಲು ನಿದಿಧ್ಯಾಸ್ಸೆ ಹೇಗೆ ಉಂಟಾಗ ಬೇಕೋ ಹಾಗೆ ಭಕ್ತಿ ಹುಟ್ಟಿ ಫೊರೆ ಬರಬೇಕಾದರೆ ಮೊದಲು ಆತನ ಸೈನ್ಯಾಬೆಳಿಗ್ಗೆ ಬಂದು ನಂತರ ಫೊರೆ ಹ್ಯಾಗೆ ಬರುವನೋ ಆದರಂತೆ ಈಗ ಶ್ರೀರಾಮನ ಸೈನ್ಯವು ಒರಲಾರಂಭಿಸಿತು ಆತನ ಎಲ್ಲಾ ಸೈನ್ಯ ವೂ ಬಂದ ನಂತರ ಶ್ರೀರಾಮಚಂದ್ರನು ದುಷ್ಟವಾಹಿನುವನು ನೀನು ಪುಣ್ಯವಂತನು ಬಿಸನ ಪಡಬೇಡ ಸ್ವಲ್ಪ ತಾಳು ಎನ್ನುತ್ತಲೇ ಎಲ್ಲಿ

ಜ್ಞಾನೋದಯ

ಸ್ವಾಮಿಯೇ ಈಗ ೧೦ ಸಾವಿರ ಕಪಿಗಳು ಬಂದ ಮಾತ್ರ ದಿಂದಲೆ ಈ ಪಟ್ಟಣವೆಲ್ಲಾ ಹಾಳಾಯಿತು. ಅವ್ಯಕ್ತಿಂದಲೇ ನಾನು ಕೃಷ್ಣನಾ ಬೆನು ಕೃಪೆ ಮಾಡಿ ಪ್ರಸನ್ನನಿಸಿ ಇಷ್ಟಕ್ಕೆ ತಪತ್ರ ಪ್ರತಾಪವನ್ನು ನಿಲ್ಲಿ ಸಿದಲ್ಲಿ ಮಹಪ್ರಸಕಾರವಾಗುವದು ಇದಕ್ಕು ಬೆಚ್ಚಾಗಿ ಕಪಿಗಳುಬಂ ದರೆ ನನ್ನ ಬೀಕಬೆಲ್ಲಾ ಹಾಳಾಗುವದು ನನಗೆ ರಾವು ದಯಪಿಸವಾದಂತೆ ಯೇ ಆಯಿತು ಸ್ವಾಮಿ ನಿನ್ನಿಂದ ಬಹು ಅಪರಾಧ ವಾಯಿತು. ಕೃಪೆ ಮಾಡಿ ಸರ್ವಸ್ವವನ್ನು ಪ್ರಸನ್ನಿಸಿ ಈ ದೀನ ದಾಸನನ್ನು ಉಳಿಸಿದರೆ ಮಾತ್ರ ಬೀಕು. ಎಂದು ತುಳಸಿದಾಸನ ಚರಣ ಸ್ವಯಂಗಳನ್ನು ಘಟ್ಟಿ ಯಾಗಿ ಹಿಡಿದು ಸಾಷ್ಟಾಂಗ ಪೆರಗಲು ತಳಸಿದಾಸನಿಗೆ ಅಂತಃಕರ ಣ ಹುಟ್ಟಲು ವಿಷ್ಣು ಕಪಿಗಳೆಲ್ಲಾ ಆದ್ಯರ್ಶ್ಯವಾದವು.

ಆಗ ಬಾದಷಹನು ಎಂದು ಪರಿಸಿದವರಿಗೆ ತುಳಸಿ ದಾಸನನ್ನು ಅತ್ಯಾದರದಿಂದ ಇಟ್ಟು ಕೊಂಡಿರಲು ಅವ್ಯರಲ್ಲಿ ಅಜ್ಞಾನಿತಕ್ಕಂಥಾ ಜಡ, ಮೂಢರಾದ ಅಜ್ಞಾನಿಗಳು ಅನೇಕ ಜನರು ಈ ತುಳಸಿ ದಾಸ ನ ಸಹವಾಸದಿಂದ ಸುಜ್ಞಾನಿಗಳಾದರು. ನಂತರ ತುಳಸಿ ದಾಸನು ಅ ಲ್ಲಿಂದ ಹೊರಟ್ಟು ಗೋಕುಲ ವೃಂದಾವನ ಮಥುರಾಕ್ಕೆ ಬಂದು ಸ್ವಾಮಿಯ ಪದಾರವಿಂದವನ್ನು ತಗೆದುಕೊಂಡು ಅಲ್ಲಿ ಅದ್ದ ಪ್ರೀಯ ದಾಸನು ಸಂತಚರಿತ್ರೆಯನು ಸಂಸ್ಕೃತದಲ್ಲಿ ಮಾಡಿದ್ದಾನೆಂದು ತಿ ಳಿದ್ದರಿಂದ ಆ ಪ್ರೀಯ ದಾಸನನ್ನು ಕಂಡು ಅವರಿಗೆ ತುಳಸಿ ದಾಸರು ಹೇಳುತ್ತಾರೆ — ನೀವು ಮಾಡಿದ ಸಂತ ಚರಿತ್ರೆಯನ್ನು ಕೇಳಲಿಲ್ಲಾ ಅದನ್ನು ತಂದು ತೋರಿಸಿ ಬೇಕೆಂದು ಹೇಳಲು ಅದಕ್ಕೆ ಅವರು — ನಾಲ್ಕು ವರ್ಣದ ಭಕ್ತರ ಚರಿತ್ರೆಗಳನ್ನು ರಚಿಸಿದೆ. ಆದರೆ ತುಳ ಸಿದಾಸನ ಚರಿತ್ರೆಯನ್ನು ಮಾತ್ರ ರಚಿಸಲಿಲ್ಲ. ಎಂದು ಪ್ರೀಯ ದಾಸನು ಚಿಂತಾ ಕ್ರಾಂತನಾಗುತ್ತಲೆ ಆಗ ಈತನಿಗೆ ತಿಳಿಯದಹಾಗೆ

ಸುಭಾಷಿತ

ಭಾನುಃ ಸಕ್ಕೈದ್ಯುಕ್ತ ತುರಂಗ ವಿವರಾತ್ರಿದಿವಂಗಂಧ
ವಹಃಪ್ರಯಾತಿ॥ ಕೇವಲಮೈವಾ ಹಿತಭೂಮಿಭಾರಃ ಷ
ಷ್ಠಾಂಶ ವೃತ್ತೇರ ಪಿಧೇರ್ನ ವಿಷೇಃ॥

ತಾ॥ ಸೂರ್ಯನು ಒಂದಾಪರ್ತಿಕ ಬದುಕಿಯನ್ನು ರಥಕ್ಕೆಕ ಟ್ಟಿಸನ್ನದ್ಧನಾಗುವನು ಆದುವರಿವಿಗೂ ವಿಶ್ರಮಿಸಿ ಕೊಳ್ಳಲಿಲ್ಲ, ವಾಯುವು ಅಹೋರಾತ್ರಿಯೆಲ್ಲಿಯೂ ಸಂಚರಿಸುತ್ತಿದೆ, ಆದಿಶೇಷನು ಸರ್ವದಾ ಭೂಭಾರವನ್ನು ಹೊಂದಿರುವ ಇವರುಗಳು ಹೇಗೆ ಕೇವಲ ಪವ್ರಣಿ ಸ ಖವನ್ನೇ ಅಪೇಕ್ಷಿಸುವರೊ ಹಾಗೆಯೆ ಷಷ್ಠಾಂಶ ಭಾಗಿಯೊವ ರಾಜನು ಕೂಡ ಅಪೇಕ್ಷಿತವಾದುದನ್ನೇ ಆಶ್ರಯಿಸಿರುವನು॥

ಔತ್ಸುಕ್ಯಮಾತ್ರಮವಲಂಬಾದ ಯತಿ ಪ್ರತಿಷ್ಠಾಕ್ಲೃಪ್ತಿ
ತಿಲಬ್ಧ ಫಲಿಪಾಲನಾ ವೃತ್ತಿಕೇವಂ॥ ನಾತಿ ಕ್ರಮಾ
ಪನಯನಾಯನ ಚಕ್ರಮಾಗು ರಾಜ್ಯಂ ಸ್ವಹಸ್ತೈಧೃತ
ದಂಡ ವಿಜಾತಪತ್ರಂ॥

ತಾ॥ ರಾಜ್ಯಲಾಭವು ಆ ಆ ಪದಾರ್ಥಗಳ ಆಶೆಯನ್ನು ಮಾತ್ರ ನಾಶವಾಡುತ್ತಿದೆ. ಹೊಂದಲ್ಪಟ್ಟ ರಾಜ್ಯವನ್ನು ವಿನಯೋಪಾಯ ರಕ್ಷಣಾ ದಿಗಳಿಂದ ಪಾಲನ ಮಾಡುವ ವೃತ್ತಿಯೊಪಾದರೂ ಬಹು ದುಃಖವನ್ನು ಉಂಟುಮಾಡುತ್ತಿದೆ. ಆದರೆ ಸುಖವಿಲ್ಲದಿದ್ದರೆ ಸರ್ವರೂ ರಾಜ್ಯವನ್ನು ಏಕೆ ಆಪೇಕ್ಷಿಸುತ್ತಾರೆ ಅಂದರೆ ಬಿಸಿಲು ಮಳೆಗಳ ಬಾಧೆಯಾಗಿ ಬಾರ ಬೆಂಬು ಸ್ವಹಸ್ತದಲ್ಲಿ ಧರಿಸಿದ ಛತ್ರಿಯು ಜನಕ್ಕೆ ಭಾರವಾಗುತ್ತಿದೆ ಈ ಛತ್ರಿಯು ಕ್ರಮವನ್ನು ನಾಶವಾಡುವದು ಇಲ್ಲ ಕ್ರಮವನ್ನು ಕೊಡುವದೂ ಇಲ್ಲ ಹೀಗೆಯೇ ರಾಜ್ಯ ಪ್ರಾಪ್ತಿಯೂ

ಸಿಂಹಾದೇಕಂಬಕಾದೇಕಮಬುಕುನಸಿ ಪ್ರಾಣಿಗರ್ದಬಾತ್
ನಾಯಕ ಸಾಧ್ಯ ಚಕ್ರಾಕಾಕ್ಷಿಪ್ತೆಪತ್ರಾಧಿಕುಕ್ಕುಟಾದಪಿ॥

ಸುಭಾಷಿತ

ತಾ॥ ಪ್ರತಿಯೊಬ್ಬ ಮನುಷ್ಯನೂ ಸಿಂಹನಿಂದ ಒಂದನ್ನೂ ಬಕಪಕ್ಷಿಯಿಂದ ಹಿಂದುವಿಷಯವನ್ನೂ, ನಾಯಿಯಿಂದ ಆರು ವಿಷಯಗಳನ್ನೂ, ಕತ್ತೆಯಿಂದ ಮೂರನ್ನೂ, ಕಾಗೆಯಿಂದಲೂ, ಕೋಳಿಯಿಂದಲೂ, ನಾಲ್ಕುನಾಲ್ಕು ವಿಷಯಗಳನ್ನು ಕಲಿಯಬೇಕು.

ಆವಿಷಯಗಳು ಯಾವುದೆಂದರೆ—

ಪ್ರಭೂತಮಪ್ಯಕಾರ್ಯಂ ವಾಯೋನರಃಕರ್ತುಮಿಚ್ಛತಿ। ಸರ್ವಾರಂಭೇಣತತ್ಕುರ್ಯಾತ್ ಸಿಂಹಾದೇಕಂಪ್ರಕೀರ್ತಿತಂ॥

ತಾ॥ ಯಾರು ಮಹತ್ಕಾರ್ಯವನ್ನೇ ಆಗಲಿ ಅಲ್ಪಕಾರ್ಯವನ್ನೇ ಆಗಲಿ ಮಾಡಬೇಕೆಂದು ಅಪೇಕ್ಷಿಸುವರೋ, ಅವರು ಆಕಾರ್ಯವನ್ನು ಚನ್ನಾಗಿ ಪ್ರಯತ್ನಪಟ್ಟು ಮಾಡಬೇಕು. ಇದೇಸಿಂಹನಿಂದ ಕಲಿಯುವ ಒಂದು ವಿಷಯವು,

ಸರ್ವೇಂದ್ರಿಯಾಣಿಸಂಯಮ್ಯ ಬಕವತ್ಪ್ರತಿ ಕೋಜನಃ॥ ಕಾಲ ದೇಶೋಪಪನ್ನಾಸಿ ಸರ್ವ ಕಾರ್ಯಾಣಿ ಸಾಧಯೇತ್॥

ತಾ॥ ಮನುಷ್ಯನು ತನ್ನ ಇಂದ್ರಿಯಗಳನ್ನು ಸ್ವಾಧೀನವಾಡಿಕೊಂಡು ಬೇಕ ಕಾಲಾನುಸಾರವಾಗಿ ಎಲ್ಲಾ ಕಾರ್ಯಗಳನ್ನೂ ಸಾಧಿಸಬೇಕು. ಇದೇಬಕನಿಂದ ಕಲಿಯತಕ್ಕ ವಿಷಯವು. ಬಕಪಕ್ಷಿಯುಹ್ಯಾಗೆ ಯೋಗ್ಯಸ್ಥಾನದಲ್ಲಿ ಸುಮ್ಮನೆ ಬಿದ್ದುಕೊಂಡು ಅನಾಯಾಸದಿಂದ ಮತ್ಸ್ಯಾದಿಗಳನ್ನು ಹಿಡಿದು ತಿನ್ನುತ್ತದೆಯೋ ಹಾಗೆಯೇ ಮನುಷ್ಯನು ಕಾಲದೇಶವನ್ನು ಯೋಚಿಸಿ ಕಾರ್ಯವನ್ನು ಸಾಧಿಸಬೇಕು.

ಬಹ್ವಾಶೀ ಸ್ವಲ್ಪಸಂತುಷ್ಟಃಸುನಿದ್ರಾಶಿಘ್ರಚೇತನಃ। ಪ್ರಭುಭಕ್ತಶ್ಚಶೂರಶ್ಚಷಡ್ಗುಣಾ ವ್ಯಾನಟ್ ಶುನೋಗುಣಾಃ॥

ಸುಭಾಷಿತ

ತಾ॥ ಯಜಮಾನನಿಗೆ ಹೆಚ್ಚಾಗಿ ಆಶಾ ಉಂಟುಮಾಡುವಿಕ್ಕೆ, ಸ್ವಲ್ಪ ಕೊಡುವದರಿಂದಲೇ ಸಂತೋಷ ಪಡುವಿಕೆ, ಸುಖವಾದನಿದ್ರೆ, ಕೂಡಲೆ ಎಚ್ಚರಾತ್ತು ಕೊಳ್ಳುವಿಕೆ, ಸ್ವಾಮಿಯಲ್ಲಿಅನುರಾಗ, ಶೌರ್ಯ, ಈ ಆರುಗುಣಗಳನ್ನು ನಾಯಿಯಿಂದಕಲಿತು ಕೊಳ್ಳಬೇಕು

ಅವಿಶ್ವಾಮಂವಹೇದ್ಭಾರಂಕೀ ತೋಷ್ಣಂಚ ನವಿಂದತಿ॥
ಸಸಂತೋಷಸ್ತ್ವಧಾನಿತ್ಯಂ ತ್ರೀಣಿ ಶಿಕ್ಷೇತಗರ್ದಭಾತ್॥

ತಾ॥ ವಿಶ್ವಾಸವು ವಿಲ್ಲದೆ ಕಾರ್ಯ ಮಾಡೋಣ ಭಾರವನ್ನು ಹೊರೋಣ ಕೀತೋಷ್ಣಗಳನ್ನು ಸಹಿಸೋಣ ಸತತ ಸಂತೋಷ ಈ ವಾರ್ತೆಯನ್ನ ಗರ್ದಭದಿಂದ ಕಲಿಯಬೇಕು.

ಗೂಢ ಮೈಥುನ ಧರ್ಮಂಚಕಾಲೆ ಕಾಲೆಚೆಸಂಗಹಂ ಅ॥
ಪ್ರಮಾದವನಾಲ ಸ್ಯಂಚ ತ್ರಿಶ್ವಿಕ್ಷೇತ್ರ ವಾಯಸಾತ್॥

ತಾ॥ ಗೂಢವಾದ ಸುರತ ವ್ಯಾಪಾರವು ಆಳಕಾಲದಲ್ಲಿ ಸೊಗ್ಗಹವು ಅಪ್ರಮಾದವು, ಆಲಸ್ಯವಿಲ್ಲದಿರೋಣವು, ಈನಾಲ್ಕನ್ನ ಕಾಗೆಯಿಂದ ಕಲಿಯಬೇಕು

ಯುದ್ಧಂಚಸಂಪ್ರತಿರುತ್ಥಾನಂ ಭೋಜ್ಯಸಂಗಹಬಂಧುಷು
ಸ್ತ್ರಿಯವಾಪದ್ಗತಾಂ ರಕ್ಷೇಚ್ಛತುಃಶಿಕ್ಷೇತ್ಕುಕ್ಕುಟಾತ್॥

ತಾ॥ ಯುದ್ಧವನ್ನು ಪ್ರತಿತಃ ಕಾಲದಲ್ಲಿ ಏಳುವದೂ, ಬಂಧುಗಳೊಡನೆಭೋಜನವು, ವಿಪದ್ಗ್ರಸ್ತಳಾದಸ್ತ್ರೀರಕ್ಷಣ, ಈನಾಲ್ಕನ್ನು ಕೋಳಿಯಿಂದ ಕಲಿಯಬೇಕು.

ಘೃತಕುಂಭಸಮಾನಾಕ್ತವಿಶ್ವಾಂಗಾರಸದುಃ ಪುಮಾನ್
ತಸ್ಮಾತ್ತ್ಯಘೃತಕುಂಭವಹ್ನಿಂಚಸ್ಯೈಕತ್ರಸ್ಥಾಪಯೇದ್ಬುಧಃ॥

ತಾ॥ ಸ್ತ್ರೀಯಾತ್ತುಪ್ಪದ ಕೂಡದಂತೆಯೂ, ಪುರುಷನು ಬೆಂಕಿಯ್ಯೊಂಡದಂತೆಯೂ ಇರುತ್ತಾರೆ, ಆದ್ದರಿಂದ ಪಂಡಿತನು ತುಪ್ಪವ

ಸುಭಾಷಿತ

ಸನ್ನಿ ಬೆಂಕೆಯೆನ್ನು ಬಂದುಸ್ಥಳದಲ್ಲಿ ಇಡಬಾರದು

ಬ್ರಹ್ಮಹಾಪಿನಃ ಪೂಜ್ಯೋಯಸ್ಯಾಸ್ತಿ ವಿಪುಲಂಧನಂ।
ಕಪಿತಸ್ತ್ಯವಂಚೋಪಿ ನಿರ್ಧನಃ ಪರಿಭೂಯತೆ॥

ತಾ॥ ಯಾವನಿಗೆವಿಚ್ಚಾಗಿ ಐಶ್ವರ್ಯವಿರುವದೊ ಆ ಮನುಷ್ಯನು ಬ್ರಹ್ಮಘಾತಿಯಾದರೂ ಪೂಜ್ಯನಾಗುವನು, ಚಂಡಾಲನಿಗೆ ಸಮಾನವಾದ ವಂಶಭ್ರಷ್ಟನಾದರೂ ದ್ರವ್ಯವಿಲ್ಲದಿದ್ದರೆ ತಿರಸ್ಕರಿಸಲ್ಪಡುವನು.

ಯಸ್ಯಾಕ್ಷೇತ್ರಂ ನದೀತೀರೆ ಭಾರ್ಯಾಚಾಪಿಪರಪಿಂಡದಾ॥
ಪುತ್ರಸ್ಯವಿನಯೋನಾಸ್ತಿ ಮೃತ್ಯುಕ್ಷೇವನ ಸಂಶಯಃ॥

ತಾ॥ ಯಾವಮನುಷ್ಯನಿಗೆ ನದೀತೀರದಲ್ಲಿ ಭೂಮಿಯಿಲ್ಲ ನ್ಯಾಯವುಳ್ಳಂಥ ಹೆಂಡತಿಯೂ, ವಿನಯವಿಲ್ಲದ ಮಗನೂ ಇರುವದೊ ಅವನಿಗೆ ಮೃತ್ಯುವೇನೂ ಸಂದೇಹವಿಲ್ಲವು

ಕೂದ್ಯಸ್ಯದ್ವಿಜಶುಕ್ರೂಷಾಪರಃ ಶೋಭನಮಾಯುಶ್ಚಾಶ್ನುತೆ॥
ಅನ್ಯಥಾ ಕುರುತೇಕಿಂಚಿತ್ ತತ್ರಭವೇತ ಸ್ಯ ನಿಷ್ಫಲಂ।

ತಾ॥ ಕೂದ್ರನಿಗೆದ್ವಿಜಶುಕ್ರೂಷೆಯು ಉತ್ತಮವಾದಫಲವನ್ನು ಯತ್ನಿಂಚಿತ್ತಾದರೂ ದ್ವಿಜಶುಶ್ರೂಷೆಯಿಲ್ಲದೆ ಯಾವಚಲನವಲನಾದಿಯರೂ ದು ಅವನಿಗೆ ನಿಷ್ಫಲವಾಗುವದು

ವಿಕರ್ಮಕುರುತೆ ಕೂದಾದ್ವಿಜಶುಕ್ರೂಷೆಯೋ ಜ್ಯಾಯಾ॥
ಭವಂತ್ಯಲ್ಪಾಯುಷಸ್ತೇಚ್ಯೆವಯಮುಂಪ್ರಾಂತ್ಯ ಸಂಕಯಂ॥

ತಾ॥ ಕೂದ್ರನು ದ್ವಿಜಸೇವೆಯುಳ್ಳವನೆ ಬೇರೆ ಕರ್ಮವನ್ನು ಮಾಡಿದರೆ ಅವರು ಅಲ್ಪಾಯುಷ್ಯರಾಗುವರಲ್ಲದೆ ಸಂದೇಹವಿಲ್ಲದೆ ನರಕವನ್ನು ಹೊಂದುವರು

ನೇದಂ ಮುಖಂಮೃಗ ವಿಮುಕ್ತ ಕಳಂಕಬಿಂಬಂನೇವಾಸ್ಯನಾ
ವನ್ಯತರಪೂರಿತಹೇಮಕುಂಭೌ॥ ನ್ಯೆವತಲಕಾವಳಿಯಮಾಮ

ವೈದ್ಯಕಲಾನಿಧಿ

ದಿಯಿಂತಲೂ ಅತ್ಯಂತ ಸೂಕ್ಷ್ಮವಾಗಿಯೂ ನಕಸಿದಂತೆಯೂ ...ಹುಳು ಪುಸಾರಿಸ್ಥನಚ್ಯುತಿಸೂತ್ರ ತಲೂ ಅನೇಕಾವರ್ತ ಬೆರಳುಗಳಲ್ಲಿಯೂ ಹೀಗೆ ಅನೇಕವಿಧವಾಗಿ ನಡಿಯುವದು.

ಅತಿವೇಗವಾಗಿ ಹಾರುತ್ತಲೂ ಬಹಳ ಸ್ಥಿರವಾಗಿಯೂ ಮಾಂಸದಲ್ಲಿ ಸಂಚರಿಸುತ್ತಲೂ ಅತಿಸೂಕ್ಷ್ಮವಾಗಿಯೂ ಅತಿ ವಕ್ರವಾಗಿಯೂ ಇರುವನಾಡಿಯು ಅಸಾಧ್ಯಜ್ಞಾಂಜುತಿಳಿಯಬೇಕು.

ಯೋಗವಹನನಾಡಿಯು ಉಷ್ಣವಾಗಿರುವಾಗಲತಿಶೀತಳವಾಗಿಯು ಶೀತಳವಾಗಿರುವಾಗ ಅತಿತಾಪವಾಗಿಯೂ ಇರುವದೇಅಲ್ಲದೆ ನಾನಾವಿಧ ವಾದ ಗತಿಯುಳ್ಳದ್ದಾಗಿರುವದೋ ಅವನಿಗೆ ಸಂಶಯವಿಲ್ಲದೆ ವೈದ್ಯ ಪ್ರಾಂಟಾಗುವದು

ನಾಡಿಯು ಸರ್ವದಾತ್ರಿ ಜೋಷದಲ್ಲಿ ಚಲಿಸುತ್ತಲೂ ವೈದ್ಯಕಾಲವುಲ್ಲಸನೀಪಸಿದಾಗ ವಿಕ್ಷಣವನಾಗಿಯೂ ಇರುವದು ಇಂಥಾಬೇಧಗಳನ್ನು ಯೆಲ್ಲಾ ಸನ್ನಿಪಾತಕಗಳಲ್ಲಿಯೂ ತಿಳಿಯತಕ್ಕದ್ದು

ಗಾಲಿಯೆಮೆಲೆ ಕುಳಿತ್ತು ಕೊಂಡವನು ಸಂಚರಿಸುವಂತೆ ನಾಡಿಯುಮೊದಲು ಪಿತ್ತಗತಿಯೂ ತರುವಾಯವಾತಗತಿಯೂ ಕಡೇಲಿ ಶ್ಲೇಷ್ಮಗತಿಯೂ ಪ್ರತ್ಯೇಕವಾಗಿ ಸಂಚರಿಸುತ್ತ ಸ್ವಲ್ಪಹೊತ್ತು ಅತಿತೀವ್ರವಾಗಿಯೂ ಸರ್ಪಗತಿಯುಳ್ಳದ್ದಾಗಿಯೂ ಸ್ವಲ್ಪಕಾಲ ಸೂಕ್ಷ್ಮವಾಗಿಯೂ ಚಲಿಸುತ್ತಿದ್ದರೆ ಅಂಥವಾನಾಡಿಯು ಸಾಧ್ಯನಾಡಿಯೆಂದು ನಾಡಿಜ್ಞಾನವನ್ನರಿತವರು ಹೇಳುವರು

ಶರೀರದಲ್ಲಿ ಸರ್ವಾಕಾರವಾದ ಭೂಲತೆಯುಂಬನಾಡಿಯು ಸಂಕ್ಷಯದಿಂದ ಕಿಶಿಲವಾಗಿದ್ದರು ಜೀರ್ಣವಾಗಿದ್ದರು ಅಂಥವನು ಮಾಸವಾಂತರದೊಳು ಮೃತ್ಯುವಶನಾಗುವನು

ಶರೀರವು ಕೋಪವಿಲ್ಲದೆ ವಿರುವಾಗಲೇನಾಡಿಯು ತನ್ನಗತಿ

ತಪ್ಪಿ ಸ್ವಲ್ಪಹೊತ್ತು ತೀವ್ರವಾಗಿಯೂ ಸ್ವಲ್ಪಹೊತ್ತು ಕಾಂಕ್ಷವಾಗಿಯೂ ನಡಿಯುತ್ತಿದ್ದರೆ ಅಂಥಾನಾಡಿಯುಳ್ಳವರು ಏಳುದಿನಗಳಲ್ಲಿಔಷಧಕಾಲಯವವೊಕ್ಕಲಾಗುವರು.

ಬಲಗಾಲಿನತಳ್ಳಿಂದು ನಾಡಿಯು ಬಹುತೀವ್ರವಾಗಿ ನಡಿಯುವದೇಅಲ್ಲದೆ ಮುಖದಲ್ಲಿಯುಕಾನಾಡಿಯು ನಡಿಯುತ್ತಿದ್ದರೆ ಅಂಥವನೆನಾಲ್ಕನೇದಿನದಲ್ಲಿ ಮೃತ್ಯುವಶನಾಗುವನು.

ಬಹಳ ಕ್ರೂರವಾದ ಜ್ವರವುಂಟಾಗಿರುವಾಗ ನಾಡಿಯು ಮುಂಜೆನಗಡ್ಡೆಯಂತ್ತ ಕೀಳಳವಾಗಿ ಇರುವದೇ ಅಲ್ಲದೆ ತಿವಿದೋವಪ್ಪರ್ನ ಸಂಬಂಧವೂ ಗುಂಟಾಗಿದ್ದರೆ ಅಂಥವನು ಮೂರನೇದಿನದಲ್ಲಿ ಯಮಾಲಯಂ ಪೊಕ್ಕುವನು

ನಾಡಿಯು ಹೆಣ್ಣುಮಿಂಡಭೆ ಮರದಂತೆಓಡುತ್ತಲೂ ಭುಜಗಳೊಳಗೂ ತಿಂಗುಳಗಳೊಳಗೂ ಜೆಲಿಸುತ್ತಲೂ ಯಾರಿಗೆಯಿರುತ್ತದೋ ಅಂಥವರು ಹನ್ನೆರಡು ಘಂಟೆಗಳಲ್ಲಿ ಯಮಾಲಯವನ್ನು ಪ್ರವೇಶಿಸುವರು

ಮೊಳಗಾಲದಲ್ಲಿ ಮಿಂಚುಹೊಳೆಯುವಂತೆ ಮುಖದಲ್ಲಿ ನಾಡಿಯು ನಿಂತುನಿಂತು ಬಹಳತೀವ್ರಗತಿ ಯುಂಟಾದ್ದಾಗಿದ್ದರೆ ಅಂಥವನು ಒಂದುದಿನ ಜೀವಂತನಾಗಿದ್ದು ಮೂರನೇದಿನೆ ಮೃತ್ಯುವಶನಾಗುವನು.

ಕರಮೂಲದಲ್ಲಿ ನಾಡಿಗಳು ಸ್ವಸ್ಥಾನದಲಿಟ್ಟ ಬೇರೆವೊಂದು ಸ್ಥಳದಲ್ಲಿ ನಾಡಿಯು ಸಂಚರಿಸುತ್ತಲೂ ಸಂಚರಿಸದೇಲೂ ಇರುವದಲ್ಲದೆ ಹೃದಯದಲ್ಲಿ ತೀವ್ರವಾಗಿ ಉರಿಂಲೂ ಪುಂಟಾಗಿದ್ದರೆ ಅಂಥವನುಪ್ಪರಿಯು ನಿಮ್ಮವನರಿಗೂ ಜೀವಂತನಾಗಿದ್ದು ತರುವಾಯ ಕೃತಾಂತನಾಲಯವಂಪ್ರೋಗುವನು

ಅಂಗುಷ್ಟಮೂಲದಲ್ಲಿರುವ ನಾಡಿಗಳು ಅಸ್ಥಾನಗಳನ್ನು ಬಿಟ್ಟು ಎರಡಂಗುಳ ಗಳಳಗಳಿಗೆ ಮುಖ್ಯಮಾನಾವಿಳಗಳಲ್ಲಿ ನಡಿಯುತ್ತಿದ್ದರೆ

ಅಂಥವನು ಅರ್ಧರೋಗವದಲ್ಲಿ ಮೃತ್ಯುವಶನಾಗುವನು.

ಅಂಗುಷ್ಟಮೂಲದಲ್ಲಿರುವ ನಾಡಿಗಳು ಅನ್ನಾನವನ್ನು ಬಿಟ್ಟಿಟ್ಟು ಎರಡೂವರೆ ಅಂಗುಳಗಳಷ್ಟಿಗೆ ಅನಾವಿಕೆಯೆನಿಸಿ ದೊಂದಿಗೆ ಸೇರಿಸಿ ನಿಯುಕ್ತಿದ್ದರೆ ಅಂಥವನು ಆರ್ಧರೋಗವದಲ್ಲಿ ಮೃತ್ಯುವಶನಾಗುವನೆಂದು ಕೆಲವರನ್ನುವರು

ನಾಡಿಯು ತರ್ಜನೀ ಮಧ್ಯಮಾಂಗುಳಿಗಳನ್ನು ಬಿಟ್ಟು ಅನಾವಿಕದ ಸ್ಥಾನಾತ್ ಸಂಚರಿಸುತ್ತ ಆದಕ್ಕೆ ಕೆಳಗಾಗಿ ಸ್ಪೃಶಿಸುತ್ತಿದ್ದರೆ ಅಂಥವನು ಯುಕ್ತವನು ಒಂದೂವರೆಜಾವದೊಳಗೆ ಮೃತ್ಯುವಶನಾಗುವನು.

ಅಂಗುಷ್ಠಮೂಲದಲ್ಲಿರುವ ನಾಡಿಗಳೆರಡನ್ನೂ ಮಧ್ಯಮಾಂಗುಳಿಯು ನುದಲ್ಲಿ ಸೇರಿಸಿ ಕ್ಷಿಪ್ರವಾಗಿ ಚಲಿಸುತ್ತಿದ್ದರೆ ಅಂಥವನು ಆರುರೋಗವಗಳಲ್ಲಿ ಮೃತ್ಯುವಶನಾಗುವನು.

ಯಾವುದೇ ಪಾದಾಂಗುಳಿಯಲ್ಲಿ ನಾಡಿಗಳು ಒಕ್ಕುಚೆಂಚಲವಾಗಿ ನಡಿಯುತ್ತಿರುವಲ್ಲಿ ಅಂಥವನು ಮೂರುದಿನಗಳಲ್ಲಿ ಮೃತ್ಯುವಿನ ವಾಲಾಗುವನು

ಯಾವುದೇ ಪಾದಾಂಗುಳಿಗಳು ಪಾದಾಂಗುಳಿ ಗತವಾಗಿ ಸ್ವಲ್ಪಮುಷ್ಟಿ ದಿಂಬಿಯಾಕಾರವಾಗಿ ವೇಗವಾಗಿ ನಡಿಯುತ್ತಿರುವಲ್ಲಿ ಅಂಥವನು ನಾಲ್ಕುದಿನಗಳಲ್ಲಿ ಮೃತಿಯನ್ನು ಹೊಂದುವನು

ಪಾದಾಂಗುಳಿಗತವಾದ ನಾಡಿಯು ಮಂದವಾಗಿನಡಿಯುತ್ತಿದ್ದರೆ ಅಂಥವನು ಐದುದಿನಗಳಲ್ಲಿ ಲೋಕಾಂತರಕ್ಕೆ ಹೋಗುವನು

ಹೀಗೆ ನಾಡೀಗತಜ್ಞಾನವನ್ನು ವಿಚಕ್ಷಣರ ಮನಾಲಕವಾಗಿ ತಿಳಿಯಬೇಕು ತ್ರಿಕ್ಕದ್ದು ಸಂಖ್ಯಾದಿ ಭೇದವಿಂದ ಇದುನ್ಯಾಗದಲ್ಲಿ ಹೇಳಿಯದಿರುವುದರಿಂದ ಇದನ್ನು ಬಹಳ ಗೋಪ್ಯವಾಗಿಡತಕ್ಕದ್ದು.

ವೈದ್ಯಕೀಯಾಧಿ

ಭಾವಿಸಿಕೊಳ್ಳುವದು ಪ್ರವಾಹವನ್ನು ನೋಡಿ ಬೆಚ್ಚಿಬೀಳುವದು ತೂಕ ಕ್ಷೀಣಿಸುವದು ಭಯಪಡುವದು ಪುಳಕಿತವಾಗುವದು ಈ ಮೊದಲಾದ ಕಾರ್ಯಗಳನ್ನು ಮಾಡುವದರಿಂದ ನಾಡಿಯು ಬಹಳ ಗಾಢವಾಗಿಯೂ ಸ್ಪಷ್ಟವಾಗಿಯೂ ಇರುವದು ಆಬರಿ ಅಂಥಾನಾಡೀಗತಿಯುಳ್ಳವನು ಜೀವಂತನಾಗಿರುವನು

ವೈಷ್ಣವಿ ಭಿನ್ನತರ ಪದಾರ್ಥಗಳಿಂದ ಕೆಳಗೆಬಿದ್ದವನು ಅಸಾಧ್ಯದಿಗಳಿಂದ ಪರ್ವತಭೇದಿಸಲ್ಪಟ್ಟವನು ಕೊಲ್ಲಲಪ್ಪವಾದವನು ಅಂಥವರಿಗೆ ನಾಡಿಯು ಮೃತ್ಯು ಸಮೀಪಿಸಿದವರಿಗೆ ನೆರೆಯುವ ನಾಡಿಯಂತೆ ನಡಿಯುತ್ತಿರುವದು ಆಬರಿ ಅಂಥಾನಾಡಿಯುಳ್ಳವನಿಗೆ ಪ್ರಾಣಭೀತಿಯಿಲ್ಲ

ಭೂತಾಭಿಷಂಗಪುರುಷನ ನಾಡಿಯು ತ್ರಿದೋಷನಾಡಿಯಂತೆವೆ ತಪಿತ್ತ ಸ್ಲೇಷ್ಮಗಳು ಸಂಕಲಿತವಾಗಿ ಸಮಾಕಾರವಾಗಿ ನಡಿಯುತ್ತಿರುವದು

ರೋಗರಹಿತವಾಗಿರುವಾಗ ಅಪಮೃತ್ಯು ವಶನಾಗುವವನ ನಾಡಿಯು ಸನ್ನಿಪಾತನಾಡಿಯಂತೆ ನಡಿಯುತ್ತಿರುವದು

ವ್ಯಸನಗಳನ್ನು ಹೊಂದಿದವನು ಮಂಚಿನಲ್ಲಿ ಸಂಚರಿಸುವನು ಇವರನಾಡಿಯು ಸ್ವಸ್ಥಾನದಿಂದ ಚ್ಯುತಿಯಾಗಿ ನಿಶ್ಚಲವಾಗಿರುವದು. ಎಚ್ಚರಿಗಿದ್ದರೂ ಅವನಿಗೆ ಬೇಸಿಕೆಯುಟ್ಟಿಸುವದು

ದುಷ್ಟಪಿತ್ತದೋಷದಿಂದ ಪಾಶಸ್ಲೇಷ್ಮನಾಡಿಗಳು ಬಹಳ ಅಲ್ಪಗಳಿಗಾಗುವವು ಪಿತ್ತನಾಡಿಯು ದಾಹರೂಪವಾಗಿಯೂ ನಡಿಯುತ್ತಿರುವದು ಆದ್ದರಿಂದ ಇವನ ತಿಳಿದುಕೊಂಡು ವೈದ್ಯನು ಚಿಕಿತ್ಸೆಯಂ ಮಾಡಬೇಕು

ಸ್ವಸ್ಥಾನದಿಂದ ನಾಡಿಯು ಚ್ಯುತಿಪಾಗದೆ ಯಿರುವವನ ರೋಗಸಾಧ್ಯವೆಂತಲೂ ನಾಡಿಗೆ ಸ್ವಸ್ಥಾನಚ್ಯುತಿಯುಂಟಾದರೆ ಅಸಾಧ್ಯ

